BROWEN BOOK ONLY

**THE BOOK WAS DRENCHED**

**TEXT FLY WITHIN THE BOOK ONLY**

**TEXT PROBLEM WITHIN THE BOOK ONLY**

UNIVERSAL
LIBRARY
OU_198378
UNIVERSAL
LIBRARY



ಶ್ರೀಗುರುಕಥಾಕಲ್ಪತರುವೆಂಬ

# ಶ್ರೀಗುರು ಚರಿತ್ರೆ

## ಉತ್ತರಾರ್ಧ.


ಭಾಷಾಂತರಕರ್ತ:-

**ಕೆ. ಲಕ್ಷ್ಮೀನಾರಾಯಣ ಭಟ್ಟ,**

ರಿಟೈರ್ಡ್ ಸ್ಕೂಲ್ಮಾಸ್ಟರ್,

**ತೀರ್ಥಹಳ್ಳಿ,**

ಶಿವಮೊಗ್ಗಾ ಡಿಸ್ಟ್ರಿಕ್ಟ್, ಮೈಸೂರು ಸಂಸ್ಥಾನ.



ಪ್ರತಿಗಳು ೧೦೦೦

ತೀರ್ಥಹಳ್ಳಿ

ಶ್ರೀನಿವಾಸ ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು.



ಕಾಪಿರೈಟ್ ರಿಜಿಸ್ಟರ್ಡ್.



ರೂ. ಆ. ಪೈ.

**1929.** **ಬೆಲೆ: 1—4—0.**

SREENIVASA PRINTING PRESS.
TIRTHAHALLI.

# ಪೀಠಿಕೆ.

ಈ ಪ್ರಪಂಚದಲ್ಲಿ ಆಸ್ತಿಕ ಮಹನೀಯರು ಕಡಿಮೆಯಾಗಿ ಪುರಾಣೇತಿಹಾಸಗಳನ್ನೋದುವವರು ವಿರಳರಾಗಿರುವರು. ಕನ್ನಡದಲ್ಲಿಲ್ಲದ ಈ ಗುರುಚರಿತ್ರೆಯು ಕನ್ನಡಿಸಲ್ಪಟ್ಟು ಬಹು ಕಷ್ಟದಿಂದ ಮುದ್ರಿತವಾಯಿತು. ಆಸ್ತಿಕರಿಂದ ದ್ರವ್ಯಸಹಾಯವು ದೊರೆಯದೆಯೂ, ಪೂರ್ವಾರ್ಧವು ಹೆಚ್ಚಾಗಿ ಖರ್ಚಾಗದೇ ಇದ್ದುದರಿಂದಲೂ, ಉತ್ತರಾರ್ಧವು ಮುದ್ರಿಸಲ್ಪಡಲು ಸಾವಕಾಶವಾಯಿತು. ದತ್ತಭಕ್ತರ ಭಜನೆಗೆ ಉಪಯುಕ್ತವಾದ ಭಜನಾವಳಿಯನ್ನು ಇದರಂತ್ಯದಲ್ಲಿ ಸೇರಿಸಲಾಗಿದೆ.

೪೨ನೇ ಅಧ್ಯಾಯದಲ್ಲಿರುವ ಸ್ತೋತ್ರವು ಛಂದೋಬದ್ಧವಾಗಿಲ್ಲದುದರಿಂದ ಇದಕ್ಕೆ ಬದಲಾಗಿ ತೀರ್ಥಹಳ್ಳಿ ಹೈಸ್ಕೂಲ್ ಸಂಸ್ಕೃತ ಪಂಡಿತರಾದ ವೇ॥ ಬ್ರಹ್ಮಶ್ರೀ ರಾಮಾಶಾಸ್ತ್ರಿಗಳವರಿಂದ ರಚಿತವಾದ ಸ್ತೋತ್ರವನ್ನು ಅಂತ್ಯದಲ್ಲಿ ಸೇರಿಸಿದೆ.

ಈ ಗುರುಚರಿತ್ರೆಯ ಪೂರ್ವಾರ್ಧ ಉತ್ತರಾರ್ಧಗಳ ವಿಷಯಾನುಕ್ರಮಣಿಕೆಯನ್ನು ಭಕ್ತರು ನಿತ್ಯವೂ ಪಠಿಸಿದರೆ ಗುರುಚರಿತ್ರೆಯ ಕಥೆಯು ಹೃದ್ಗತವಾದೀತು. ಈ ಚರಿತ್ರೆಯು ಶ್ರೀಗುರು ಕೃಪೆಯಿಂದ ಈ ರೀತಿಯಿಂದ ಸಂಪೂರ್ಣವಾದುದಕ್ಕಾಗಿ ಶ್ರೀ ದತ್ತಾತ್ರೇಯ ಗುರುವರ್ಯರ ಚರಣಕಮಲಗಳಲ್ಲಿ ಭಕ್ತಿಯಿಂದೆರಗಿ ಪ್ರಾರ್ಥಿಸಿ ಕೊಳ್ಳುತ್ತೇನೆ.

ತಾ. 5—4—1929.

**ಕೆ. ಲಕ್ಷ್ಮೀನಾರಾಯಣ ಭಟ್ಟ,**
ಭಾಷಾಂತರಕರ್ತ,
ರಿಟೈರ್ಡ್ ಸ್ಕೂಲ್‌ಮಾಸ್ಟರ್,
**ತೀರ್ಥಹಳ್ಳಿ,** ಶಿವಮೊಗ್ಗಾ ಡಿಸ್ಟ್ರಿಕ್ಟ್.

# ಗುರುಕಥಾಕಲ್ಪತರುವಿನ ಉತ್ತರಾರ್ಧದ

# ವಿಷಯಾನುಕ್ರಮಣಿಕೆ.


| ಅಧ್ಯಾಯ. | ವಿಷಯ. | ಪುಟ. |
|---|---|---|
| ೩೪ | ರುದ್ರಾಧ್ಯಾಯ ಮಹಿಮೆ—ಭದ್ರಸೇನರಾಜ ಕಥಾ | ೧ |
| ೩೫ | ಕಚ—ದೇವಯಾನೆಯ ಕಥೆ—ಸೀಮಂತಿನೀ ಕಥಾ | ೬ |
| ೩೬ | ಪರಾನ್ನ ನಿಯಮವುಳ್ಳ ವಿಪ್ರನ ಕಥೆ—ಪರಾನ್ನ ಸೇವನೆಯು ನಿಷೇಧ | ೨೬ |
| | ಆಚಾರಧರ್ಮಗಳು | ೩೩ |
| | ಸಂಧ್ಯಾವಂದನೆ—ತರ್ಪಣ | ೪೧ |
| ೩೭ | (೧)ದೇವಪೂಜಾ (೨)ವೈಶ್ವದೇವ (೩) ಭೋಜನಕ್ರಮ (೪) ಶಯನಕ್ರಮ | ೫೬ |
| ೩೮ | ಭಾಸ್ಕರವಿಪ್ರನು ನಾಲ್ಕು ಸಾವಿರ ಬ್ರಾಹ್ಮಣರಿಗೆ ಸಮಾರಾಧನೆಮಾಡಿಸಿದುದು | ೭೨ |
| ೩೯ | ೬೦ ವರ್ಷ ವಯಸ್ಸಿನ ಗಂಗಾ ಯುವತಿಗೆ ಪುತ್ರರಾಗುವಿಕೆ | ೭೬ |
| ೪೦ | ನರಹರಿ ವಿಪ್ರನು ಕುಷ್ಠರೋಗಪೀಡಿತನಾಗಿ ಗುರುದರ್ಶನಕ್ಕೆ ಬಂದುದು ಒಣಗಿದ ಅತ್ತಿಯ ಕಟ್ಟಿಗೆಯು ಚಿಗುರಿದುದು—ಗುರುಸ್ತುತಿ | ೮೫ |
| ೪೧ | ಸಾಯಂದೇವನ ಕಥೆ—ಗುರುಭಕ್ತಿಯ ಮಹಿಮೆ—ಕಾಶೀಯಾತ್ರಾವಿವರಣೆ | ೯೫ |
| ೪೨ | ಕಾಶೀಯಾತ್ರಾವಿವರಣೆ—ಗುರುಸ್ತುತಿ | ೧೦೮ |
| ೪೩ | ಅನಂತವ್ರತ ಕಥೆ | ೧೨೦ |
| ೪೪ | ನೇಯಿಗೆಯವನ ಕಥೆ—ವಿಮರ್ಷಣರಾಜನ ಕಥೆ | ೧೨೯ |
| ೪೫ | ನಂದಿ ಎಂಬ ವಿಪ್ರನ ಕಥೆ | ೧೩೫ |
| ೪೬ | ನರಕೇಸರಿಯ ಕಥೆ *(ಭಿಕ್ಷೆಗೆ ಹೋದುದು) | ೧೪೩ |
| ೪೭ | ದೀಪಾವಳಿಯಲ್ಲಿ ಶಿಷ್ಯರೆಲ್ಲರ ಮನೆಗೂ ಏಕಕಾಲದಲ್ಲಿ ಗುರುಗಳು* | ೧೪೫ |
| ೪೮ | ಬಡರೈತನು ಗುರುವಂ ಸೇವಿಸಿದುದು—ಗುರುವಾಕ್ಯದಂತೆ ಹೊಲದಲ್ಲಿ ಬೆಳೆದ ಜೋಳದ ಪೈರನ್ನು ಕತ್ತರಿಸುವುದು—ಗುರುಮಹಿಮೆಯಿಂದ ಮತ್ತೆ ಜೋಳದ ಪೈರು ಹೆಚ್ಚಾಗಿ ಬೆಳೆದುದು | ೧೪೮ |
| ೪೯ | ಅಮರಜಾ ಸಂಗಮ ಮಹಿಮೆ—ರತ್ನಾಯಿಯ ಕಥೆ | ೧೫೧ |
| ೫೦ | ರಜಕನು ವೈದೂರೀ ನಗರಿಯಲ್ಲಿ ಮ್ಲೇಂಛರಾಜನಾಗಿ ಹುಟ್ಟಿ ಗುರುವಂ ಪೂಜಿಸಿದುದು—ಪಿಂಗಳೆಯ ಕಥೆ—ಭದ್ರಾಯು ಕಥೆ | ೧೫೭ |
| ೫೧ | ಗುರುಗಳು ಶ್ರೀಶೈಲ ಯಾತ್ರೆಗೆ ಹೊರಟುದು | ೧೭೦ |
| ೫೨ | ಶ್ರೀಗುರು ಸಮಾಧಿಗಮನ | ೧೭೦ |
| | ಶೇಷಸಂಗ್ರಹ—ದತ್ತಾತ್ರೇಯ ಭಜನಾವಳಿ—ಕೀರ್ತನೆಗಳು | ೧೮೨ |


॥ ಶ್ರೀ ದತ್ತಾತ್ರೇಯಾರ್ಪಣಮಸ್ತು ॥

# ಗುರು ಚರಿತ್ರೆ.

## ಭಾಗ II.

### ೩೪ ನೇ ಅಧ್ಯಾಯ.

ಬಳಿಕ ರಾಜನು ಸ್ವಾಮಿಾ, ರುದ್ರಾಕ್ಷಿಧಾರಣೆಯಿಂದ ಈ ಪುತ್ರರಿಗೆ ಪುಣ್ಯವುಂಟಾಯಿತು ಎಂದು ಹೇಳಿದಿರಿ. ಪೂರ್ವಜನ್ಮದಲ್ಲಿ ವೇಶ್ಯೆಯು ಅಜ್ಞಾನದಿಂದ ರುದ್ರಾಕ್ಷಿಯನ್ನು ಕಟ್ಟಲು ಆ ಪುಣ್ಯದಿಂದ ಉತ್ತಮ ಜನ್ಮವು ಬಂದಿತು. ಜ್ಞಾನಿಗಳಾದ ಈ ಪುತ್ರರು ಮುಂದೆ ಏನಾಗುವರು? ನೀವು ಭೂತಭವಿಷ್ಯತ್ಫಲವನ್ನು ಬಲ್ಲ ತ್ರಿಕಾಲಜ್ಞರಾಗಿದ್ದೀರಿ. ನನ್ನ ಪುತ್ರನ ಮತ್ತು ಮಂತ್ರಿ ಪುತ್ರನ ಮುಂದಿನ ಸಂಗತಿಯನ್ನು ನಿರೂಪಿಸಿರೆಂದು ಕೇಳಿದನು. ಆಗ ಪರಾಶರರು ಹೇಳುವರು. ರಾಜನೇ, ಸೋಜಿಗವನ್ನು ಕೇಳು. ನಿನ್ನ ಮಗನಿಗೆ ಹನ್ನೆರಡು ವರ್ಷಗಳ ಆಯುಷ್ಯವಿದೆ. ಹನ್ನೆರಡು ವರ್ಷಗಳಿಗೆ ಏಳೆಂಟು ದಿನಗಳು ಮುಂಚಿತವಾಗಿಯೇ ಮೃತ್ಯುವುಂಟಾದೀತು, ಎಂದರು. ಈ ಮಾತನ್ನು ಕೇಳಿ ದುಃಖದಿಂದ ರಾಜನು ಮೂರ್ಛಿತನಾದನು; ಎಚ್ಚತ್ತು ಆ ಮುನಿವರ್ಯರಿಗೆ ವಂದಿಸಿ, ಸ್ವಾಮಿಾ, ಶರಣಾಗತನಾದ ನನ್ನನ್ನು ರಕ್ಷಿಸಿರಿ, ಎಂದು ತನ್ನ ಸತಿಯೊಡನೆ ಬೇಡಿಕೊಂಡನು. ಆಗ ಪರಾಶರರು ರಾಜನೇ ಕೇಳು. ಉಮೇಶನಾದ ಶಂಕರನನ್ನು ಧ್ಯಾನಿಸು. ಅವನು ಸಲಹುವನು. ಕಾಲವನ್ನು ಗೆಲ್ಲುವ ದಾರಿಯನ್ನು ಕೇಳು. ವ್ಯೋಮಕೇಶನು ನಿಷ್ಕಳಂಕನಾಗಿಯೂ, ಚಿದಾನಂದನಾಗಿಯೂ ಇರುವನು. ಈಶ್ವರನು ಆದಿಯಲ್ಲಿ ವೇದಗಳನ್ನೂ, ಉಪನಿಷತ್ತುಗಳನ್ನೂ, ರುದ್ರಾಧ್ಯಾಯವನ್ನೂ ನಿರ್ಮಿಸಿ ಬ್ರಹ್ಮನಿಗೆ ಕೊಟ್ಟನು. ಅಸದೃಶವಾದ ರುದ್ರಾಧ್ಯಾಯವು ಮಹಿಮೆಯುಳ್ಳದ್ದಾಗಿದೆ. ಬ್ರಹ್ಮನ ಚತುರ್ಮುಖಗಳಿಂದ ನಾಲ್ಕು ವೇದಗಳು ಹೊರಟವು. ರುದ್ರಾ-

ಧ್ಯಾಯವು ಯಜುರ್ವೇದದಲ್ಲಿ ಉಕ್ತವಾಗಿದೆ. ಬ್ರಹ್ಮನು ಇದನ್ನು ಅನೇಕ ಋಷಿಗಳಿಗೆ ಉಪದೇಶಿಸಿದನು. ಈ ಋಷಿಗಳು ಅನೇಕ ಶಿಷ್ಯರಿಗೆ ಹೇಳಿದರು. ಈ ಶಿಷ್ಯರು ತಮ್ಮ ಶಿಷ್ಯರಿಗೆ ಹೇಳಿದರು. ಹೀಗೆ ಇದು ಪುತ್ರಪೌತ್ರಪರಂಪರೆಯಾಗಿ ಬಂದಿತು. ಇದಕ್ಕಿಂತ ಶ್ರೇಷ್ಠ ಮಂತ್ರವಿಲ್ಲ. ಈ ರುದ್ರಜಪದಿಂದ ಪಾಪಗಳೆಲ್ಲವೂ ಪರಿಹರಿಸು ವುವು. ಬ್ರಹ್ಮನು ವೇದತೀರ್ಥವೆನಿಸಿದ ಇದನ್ನು ನಿರ್ಮಿಸಿದನು. ಇದರಲ್ಲಿ ಎಲ್ಲರೂ ಸ್ನಾನಮಾಡಬೇಕು. ಇದರಿಂದ ಸಂಸಾರದ ನಿವೃತ್ತಿಯುಂಟಾಗುವುದು.

ಭವಸಾಗರವನ್ನು ಇದರಿಂದ ದಾಟಬಹುದು. ನಾವು ಮಾಡಿದ ಪುಣ್ಯಪಾಪಗಳಿಗೆ ತಕ್ಕ ಫಲವುಂಟಾಗುವುದು. ಧರ್ಮಾಧರ್ಮಗಳು ಬ್ರಹ್ಮನ ಎದೆಯಲ್ಲಿಯೂ, ಪೃಷ್ಠಭಾಗದಲ್ಲಿಯೂ ಹುಟ್ಟಿದುವು. ಧರ್ಮ ಮಾಡಿದವರು ಇಹಪರ ಸುಖಗಳನ್ನು ಹೊಂದುವರು. ಅಧರ್ಮ ದಿಂದಿರುವವರು ಪಾಪಿಗಳಾಗಿರುವರು. ಅರಿಷಡ್ವರ್ಗಗಳು ಅಧರ್ಮದ ಮಕ್ಕಳುಗಳಾಗಿಯೂ, ನರಕನಾಯಕಗಳಾಗಿಯೂ ಇವೆ. ಗುರು ತಲ್ಪಗಮನ—ಸುರಾಪಾನ ಮುಂತಾದ ಪಾಪಗಳನ್ನು ಮಾಡಿದರೆ ನರಕವುಂಟಾಗುವುದು. ಇದು ಕಾಮದ ಲಕ್ಷಣವು. ಮಾತಾ ಪಿತೃಗಳನ್ನು ವಧಿಸಿ ಕನ್ಯಾವಿಕ್ರಯ ಮಾಡುವುದು ಕ್ರೋಧಲಕ್ಷಣವು. ದೇವಸ್ವ ಬ್ರಹ್ಮಸ್ವಗಳನ್ನು ಅಪಹರಿಸಿ ಸುವರ್ಣತಸ್ಕರನಾಗುವುದು ಲೋಭಲಕ್ಷಣವು. ಯಮನು ಕಾಮ, ಕ್ರೋಧ, ಲೋಭಗಳೆಂಬ ಪುತ್ರರನ್ನು ಕರೆದು, ನೀವು ಭೂಲೋಕಕ್ಕೆ ಹೋಗಿ ಅಲ್ಲಿ ನಿಮ್ಮ ಗುಣ ಗಳನ್ನು ಹರಡಿ ಆಳುವವರಾಗಿರಿ; ನಿಮ್ಮ ಸಹಾಯಕ್ಕೆ ಉಪಪಾತಕ ರೆಂಬ ಭೃತ್ಯರನ್ನು ಕಳುಹಿಸುವೆನು; ನರರೆಲ್ಲರನ್ನೂ ಭೂಮಿಯಿಂದ ನರಕಕ್ಕೆ ಕಳುಹಿಸಿರಿ ಎಂದಾಜ್ಞಾಪಿಸಿದನು. ಯಮನ ಆಜ್ಞೆಯಿಂದ ಆ ಪಾತಕಗಳು ಭೂಮಿಗೆ ಬಂದುವು. ಭೂಮಿಯಲ್ಲಿ ರುದ್ರಜಪವನ್ನು ನೋಡಿ ಓಡಿ ಹೋಗಿ ಯಮನನ್ನು ಕುರಿತು ಸ್ವಾಮಿಾ, ನಾವು ನಿಮ್ಮ ಅನುಜ್ಞೆಯಂತೆ ಭೂಮಿಗೆ ಹೋದೆವು. ಅಲ್ಲಿ ರುದ್ರಜಪವನ್ನು ನೋಡಿ ಹೆದರಿ ಓಡಿಬಂದೆವು. ಸ್ವಾಮಿಾ, ಅಲ್ಲಿ ನಮಗೆ ಭಯವಾದುದು. ತ್ರಿಭುವನಗಳಲ್ಲಿ ನಾವು ಪ್ರಸಿ ದ್ಧ ಆ ರುದ್ರಜಪದಿಂದ

ಭೂಮಿಯಲ್ಲಿರಲು ಶಕ್ತಿಯಿಲ್ಲ. ನಾವು ಓಡಿಬಂದೆವು. ಭೂಮಿಯಲ್ಲಿ ನಗರ ಗ್ರಾಮಗಳಲ್ಲಿಯೂ, ದೇವಾಲಯಗಳಲ್ಲಿಯೂ, ಕ್ಷೇತ್ರಗಳಲ್ಲಿಯೂ ಬ್ರಾಹ್ಮಣರು ರುದ್ರಜಪ ಮಾಡುವರು. ಅಲ್ಲಿಗೆ ಹೋಗಲು ನಾವು ಶಕ್ತರಲ್ಲ. ನಾವು ಭೂಮಿಯಲ್ಲಿರುವ ನರರನೇಕರನ್ನು ಪಾಪಿಗಳನ್ನಾಗಿ ಮಾಡಿದರೂ, ಇಂಥಾ ಪಾಪಿಗಳಿಗೆ ಪ್ರಾಯಶ್ಚಿತ್ತರೂಪರಾದ ಅನೇಕ ಬ್ರಾಹ್ಮಣರು ಪುಣ್ಯವಂತರಾಗಿರುವರು. ಇವರು ಒಂದು ಬಾರಿ ರುದ್ರವನ್ನು ಜಪಿಸಲು ಅವರಿಗೆ ಪುಣ್ಯರಾಶಿಯುಂಟಾಗುವುದು. ಇದನ್ನು ನೋಡಿ ನಾವು ಹೆದರಿದೆವು. ನಮಗೆ ಆ ರುದ್ರಾಧ್ಯಾಯ ಜಪವು ಕಾಳಕೂಟ ವಿಷಕ್ಕೆ ಸಮವಾಗಿದೆ. ನಮಗೆ ಅಲ್ಲಿಗೆ ಹೋಗಲು ಶಕ್ತಿಯಿಲ್ಲ. ಈ ರುದ್ರಜಪವೆಂಬ ವಿಷವನ್ನು ಶಮನ ಮಾಡಲು ನೀವು ಶಕ್ತರಾಗಿದ್ದೀರಿ. ರಕ್ಷಿಸಿರಿ, ಎಂದು ಆ ಪಾತಕಗಳು ಯಮನಿಗೆ ವಿಜ್ಞಾಪಿಸಿದವು. ಈ ಮಾತನ್ನು ಕೇಳಿ ಯಮನು ತಲೆದೂಗಿ ಕೋಪಿಸಿ ಬ್ರಹ್ಮಲೋಕಕ್ಕೆ ಹೋಗಿ, ಜಯ ಕಮಲಜನ್ಮನೇ, ಸೃಷ್ಟಿಕರ್ತನೇ, ಚತುರ್ಮುಖನೇ ನಾವು ನಿಮ್ಮನ್ನು ಮರೆಹೊಕ್ಕೆವು. ನಿನ್ನ ಆಜ್ಞೆಯಂತೆ ಪಾಪಿಗಳನ್ನು ನರಕಕ್ಕೆ ಒಯ್ಯುವುದಕ್ಕಾಗಿ ನನ್ನ ಭೃತ್ಯರಾದ ಮಹಾಪಾತಕಗಳನ್ನು ಭೂಮಿಗೆ ಕಳುಹಿಸಿದೆನು. ಭೂಮಿಯಲ್ಲಿ ಪಾಪಿಗಳು ರುದ್ರಜಪದಿಂದ ಪುಣ್ಯವಂತರಾಗುತ್ತಿರುವರು. ಅತಿಪಾಪಿಗಳೂ ಇದರಿಂದ ಸ್ವರ್ಗಕ್ಕೆ ಹೋಗುತ್ತಾರೆ. ನರಕವು ಬರಿದಾಗಿ ನನ್ನ ರಾಜ್ಯವು ನಿಷ್ಫಲವಾಯಿತು. ಜನರೆಲ್ಲರೂ ಮುಕ್ತರಾದರು. ಉತ್ಪತ್ತಿಯು ನಿಂತಿತು. ದೇವದೇವನೆ ಇದಕ್ಕೊಂದುಪಾಯವನ್ನು ಮಾಡಬೇಕು. ಶಕ್ತನಾದ ನೀನು ನಮ್ಮನ್ನು ರಕ್ಷಿಸು. ರುದ್ರಾಧ್ಯಾಯವನ್ನು ನರರಿಗೆ ನೀವು ಕೊಟ್ಟಿರಿ. ಇದರಿಂದ ನರರಲ್ಲಿ ಪಾಪವು ಕಮ್ಮಿಯಾಯಿತು ಎಂದನು. ಆಗ ಬ್ರಹ್ಮದೇವನು, ಯಮನೇ ಕೇಳು. ಅಜ್ಞಾನಿಗಳಾಗಿಯೂ, ತಾಮಸಿಗಳಾಗಿಯೂ ಇರುವ ಜನರು ಭಕ್ತಿಯಿಲ್ಲದೆ ಮದದಿಂದ ನಿಂತುಕೊಂಡಾಗಲೀ, ಮಲಗಿಯಾಗಲೀ ರುದ್ರಜಪ ಮಾಡುವರು. ಇವರಿಗೆ ಅನೇಕ ಪಾಪಗಳುಂಟಾಗುವುವು. ಅವರನ್ನು ನೀನು ದಂಡಿಸು. ರುದ್ರದ ಭಾವಾರ್ಥವನ್ನು ಓದುವವರನ್ನು ಮಾತ್ರ ಬಿಟ್ಟುಬಿಡು. ಅವರನ್ನು ಬಾಧಿಸಬೇಡ.

ಭಕ್ತಿಯಿಂದ ರುದ್ರವನ್ನು ಜಪಿಸುವವರಿಗೆ ಅತಿಯಾದ ಪುಣ್ಯವುಂಟು. ಪೂರ್ವಜನ್ಮದಲ್ಲಿ ಪಾಪವನ್ನು ಮಾಡಿ ಅಲ್ಪಾಯುಷಿಗಳಾಗುವರು. ರುದ್ರವನ್ನು ಜಪಿಸಿದರೆ ಅಂಥವರು ಪೂರ್ಣಾಯುಷಿಗಳಾಗುವರು. ಮತ್ತೂ ಬಲವೂ, ಕಾಂತಿಯೂ, ಆರೋಗ್ಯವೂ, ಜ್ಞಾನವೂ, ಧನವೂ ವರ್ಧಿಸುವುವು. ರುದ್ರಜಪ ಮಂತ್ರದಿಂದ ಈಶ್ವರನಿಗೆ ಅಭಿಷೇಕ ಮಾಡಬೇಕು. ಈ ಅಭಿಷೇಕೋದಕದಿಂದ ಸ್ನಾನವನ್ನೂ, ಪಾನವನ್ನೂ ಮಾಡಬೇಕು. ಇಂಥವರಿಗೆ ಮೃತ್ಯುಭೀತಿಯಿಲ್ಲ. ರುದ್ರಜಪದಿಂದ ಪುಣ್ಯದೇಹಿಯಾಗಿ ಸ್ಥಿರಜೀವಿಯಾಗುವನು. ಅತಿರುದ್ರವನ್ನು ಜಪಿಸಿದ ಉದಕದಿಂದ ಸ್ನಾನಮಾಡಿದವರಿಗೆ ಮೃತ್ಯುಭೀತಿಯಿಲ್ಲ, ಮತ್ತೂ ಸಂಸಾರವನ್ನು ದಾಟುವರು. ಶಂಕರನಿಗೆ ಶತರುದ್ರದಿಂದ ಅಭಿಷೇಕಿಸಿ ಪೂಜಿಸಿದವರು ಶತಾಯುಷಿಗಳಾಗಿ ಪಾಪಗಳಿಂದ ಬಿಡಲ್ಪಟ್ಟವರಾಗುವರು. ರುದ್ರವನ್ನು ಜಪಿಸುವ ವಿಪ್ರರನ್ನು ಬಾಧಿಸಬಾರದು. ಈ ವಿಷಯಗಳನ್ನು ನಿನ್ನ ಕಿಂಕರರಿಗೆ ಹೇಳು, ಎಂದು ಬ್ರಹ್ಮನು ಯಮನಿಗೆ ಹೇಳಿದನು. ಯಮನು ತನ್ನ ಲೋಕಕ್ಕೆ ಹೋದನು. ರಾಜನೇ, ಹತ್ತು ಸಾವಿರ ರುದ್ರಜಪದಿಂದ ಶಿವನಿಗೆ ಅಭಿಷೇಕಮಾಡಿಸಿ ಆ ತೀರ್ಥದಿಂದ ನಿನ್ನ ಮಗನಿಗೆ ಸ್ನಾನಮಾಡಿಸು. ಇದರಿಂದ ನಿನ್ನ ಮಗನು ಹತ್ತು ಸಾವಿರ ವರ್ಷಗಳು ಇಂದ್ರನಂತೆ ಕೀರ್ತಿವಂತನಾಗಿ ರಾಜ್ಯವಾಳುವನು. ಆಗ ಆವನ ರಾಜ್ಯಶ್ರೀಗೆ ಅಪಾಯವಿಲ್ಲ. ಕಂಟಕವಿಲ್ಲದೆ ಆನಂದದಿಂದ ರಾಜ್ಯವಾಳುವನು. ನೂರು ಜನ ವಿಪ್ರರನ್ನು ಕರೆಯಿಸಿ ಈಗಲೇ ರುದ್ರಜಪದ ಅನುಷ್ಠಾನಕ್ಕೆ ಆರಂಭಿಸಿ, ಶಂಕರನಿಗೆ ಅಭಿಷೇಕ ಮಾಡಿಸು. ಇದರಿಂದ ನಿನ್ನ ಮಗನ ಆಯುಷ್ಯವು ಹೆಚ್ಚುವುದು. ಸದ್ಯದಲ್ಲಿ ಶ್ರೇಯಸ್ಸಾಗುವುದು, ಎಂದು ರಾಜನಿಗೆ ಹೇಳಿದರು. ಆ ರಾಜನು ಇವರ ಉಪದೇಶದಂತೆ ದ್ವಿಜವರ್ಯರನ್ನು ಕರೆಯಿಸಿ ಸಕಲ ಸಂಭಾರಗಳನ್ನೂ ಅಣಿಗೊಳಿಸಿದನು. ನೂರು ಕಲಶಗಳಿಂದ ವಿಧಿವಿಹಿತವಾಗಿ ಪುಣ್ಯವೃಕ್ಷದ ಮೂಲದಲ್ಲಿ ಶಿವನಿಗೆ ಅಭಿಷೇಕ ಮಾಡಿಸಿದನು. ಈ ತೀರ್ಥೋದಕದಿಂದ ಮಗನಿಗೆ ನಿತ್ಯವೂ ಸ್ನಾನಮಾಡಿಸಿದನು. ಈ ರೀತಿಯಿಂದ ಏಳು ದಿನಗಳಾದುವು. ಬಾಲಕನು ನಿಶ್ಚೇಷ್ಟಿತನಾಗಿ ಬಿದ್ದನು. ಪರಾಶರರು ಬೇಗ ಬಂದು

ತೀರ್ಥವನ್ನು ಎರಚಿದರು. ಕೋರದಾಡೆಯುಳ್ಳವನಾಗಿಯೂ, ದಂಡ ಧಾರಿಯಾಗಿಯೂ ಇರುವ ಯಮಕಿಂಕರನು ಬಂದನು. ವಿಪ್ರರು ರುದ್ರುವನ್ನು ಜಪಿಸುತ್ತಾ ಮಂತ್ರಾಕ್ಷತೆಯನ್ನು ಆ ರಾಜಪುತ್ರನ ಮೇಲೆ ಎರಚಿದರು.

ಇದನ್ನು ನೋಡಿ ಯಮದೂತನು ರಾಜಪುತ್ರನ ಹತ್ತಿರ ಹೋಗ ಲಾರದೇ ದೂರದಲ್ಲಿ ನಿಂತನು. ಕರದಲ್ಲಿ ಪಾಶವನ್ನು ಪಿಡಿದು ದಂಡ ದಿಂದ ಆ ಕುಮಾರನನ್ನು ಹೊಡೆಯಬೇಕೆಂದು ಬಂದು ಭೀತನಾಗಿ ಓಡಿಹೋದನು. ವೇದಪುರುಷನಾದ ಶಿವದೂತನು ಅವನ ಬೆನ್ನು ಹಿಡಿದನು. ಬ್ರಾಹ್ಮಣರು ಈ ರೀತಿಯಿಂದ ರಾಜಪುತ್ರನನ್ನು ಆಶೀ ರ್ವದಿಸಿ ರಕ್ಷಿಸಿದರು. ಬಳಿಕ ರಾಜಕುಮಾರನು ಸಾವಧಾನದಿಂದ ಸ್ಥಿರಮನಸ್ಸುಳ್ಳವನಾಗಿ ರಾಜನಿಗೆ ಆನಂದವನ್ನುಂಟುಮಾಡಿದನು. ರಾಜನು ಆ ವಿಪ್ರರಿಗೆ ದಿವ್ಯಭೋಜನವನ್ನು ಮಾಡಿಸಿ ತಾಂಬೂಲಾದಿ ದಕ್ಷಿಣೆಗಳಿಂದ ಸಂತೋಷಪಡಿಸಿದನು. ಆ ವಿಪ್ರರನ್ನು ಸಭೆಯಲ್ಲಿ ಕುಳ್ಳಿರಿಸಿ, ಪರಾಶರರನ್ನು ದಿವ್ಯ ಸಿಂಹಾಸನದಲ್ಲಿ ಕುಳ್ಳಿರಿಸಿ ತನ್ನ ರಾಣಿಯರೊಡನೆ ಸಾಷ್ಟಾಂಗ ನಮಸ್ಕಾರ ಮಾಡಿ ಆನಂದದಿಂದಿದ್ದನು. ಆಗ ಬ್ರಹ್ಮಪುತ್ರರಾದ ನಾರದರು ಅಲ್ಲಿಗೆ ಬಂದರು. ಆಗ ರಾಜನು ಓಡಿ ಬಂದು ಅವರ ಪಾದಂಗಳಿಗೆ ವಂದಿಸಿ ಸಿಂಹಾಸನದಲ್ಲಿ ಕುಳ್ಳಿರಿಸಿ ಪೂಜಿಸಿದನು. ಮತ್ತು ಮಹಾಸ್ವಾಮಿಾ, ಎಲ್ಲಿಂದ ದಯಮಾಡಿದಿರಿ? ತ್ರಿಭುವನಗಳಲ್ಲಿ ವಿಶೇಷ ಸಂಗತಿಗಳೇನು? ಎಂದು ಕೇಳಿದನು. ಆಗ ನಾರದರು ಎಲೈ ರಾಜನೇ, ನಾನು ಕೈಲಾಸಕ್ಕೆ ಹೋಗಿದ್ದೆನು. ದಾರಿಯಲ್ಲಿ ಮಹಾಮೃತ್ಯುವು ದೂತರೊಡನೆ ನಿನ್ನ ಪುತ್ರನನ್ನು ಕರೆದೊಯ್ಯಲು ಬಂದಿತ್ತು; ಆದರೆ ಶಿವದೂತರಿಂದ ಪರಾಜಯ ಹೊಂದಿತು. ಯಮದೂತರು ಯಮನ ಹತ್ತಿರಕ್ಕೆ ಹೋಗಿ ಶಿವ ದೂತರು ನಮ್ಮನ್ನು ಹೊಡೆದರೆಂದು ಹೇಳಿದರು. ಆಗ ಯಮನು ಕೋಪಿಸಿ ಹೊರಟು ಬಂದು ವೀರಭದ್ರನಂ ಕುರಿತು ನೀವು ನನ್ನ ದೂತರನ್ನು ಏಕೆ ಹೊಡೆದಿರಿ? ತನ್ನ ಕರ್ಮಾನುಸಾರವಾಗಿ ಈ ರಾಜ ಪುತ್ರನು ಗತಾಯುಷಿಯಾಗಿರಲು ಇವನನ್ನು ಕರೆತರಲು ಬಂದ ನನ್ನ ದೂತರನ್ನು ಹೊಡೆದುದೇಕೆ? ಎಂದು ಕೇಳಿದನು. ಆಗ ವೀರಭದ್ರನು

ಕೋಪಿಸಿ ಎಲೈ ಯಮನೇ, ಕೇಳು. ರುದ್ರಾಧ್ಯಾಯ ಜಪದಿಂದ ಹತ್ತು ಸಾವಿರ ವರ್ಷಗಳ ಆಯುಷ್ಯವು ಈ ರಾಜಪುತ್ರನಿಗೆ ಉಂಟಾಗಿದೆ. ಇದನ್ನು ವಿಚಾರಿಸದೆ ಚಿತ್ರಗುಪ್ತರು ದೂತರನ್ನು ಕಳುಹಿಸಿದರು. ಇದರಿಂದ ಶಿವದೂತರು ಆ ಕುಮಾರನ ಜೀವವನ್ನು ಬಿಡಿಸಿದರು, ಎನ್ನಲು ಯಮನು ಚಿತ್ರಗುಪ್ತರನ್ನು ಕರೆಯಿಸಿ ಕೇಳಿದನು. ಆಗ ಚಿತ್ರಗುಪ್ತನು ಲೆಕ್ಕವನ್ನು ನೋಡಲು ಆತನ ಆಯುಷ್ಯವು ಮೊದಲಿದ್ದ ಹನ್ನೆರಡು ವರ್ಷಗಳ ಆಯುಸ್ಸಿನ ಜೊತೆಗೆ ಹನ್ನೆರಡು ಸಾವಿರ ವರ್ಷಗಳ ಆಯುಷ್ಯವು ಬರೆದಿತ್ತು. ಇದನ್ನು ನೋಡಿ ಯಮನು ಸಂಶಯವುಳ್ಳವನಾಗಿ ತನ್ನದೇ ತಪ್ಪೆಂದೊಪ್ಪಿ ವೀರಭದ್ರನಂ ವಂದಿಸಿ ಸ್ವಸ್ಥಾನಕ್ಕೆ ಹೋದನು. ರುದ್ರಜಪ ಮಾಡಿದುದರಿಂದ ನಿನ್ನ ಪುತ್ರನ ಆಯುಷ್ಯವು ಅಭಿವೃದ್ಧಿಯಾಯಿತು. ನಿನ್ನ ಕುಮರನು ಈ ಪರಾಶರರ ಕೃಪೆಯಿಂದ ಮೃತ್ಯುವನ್ನು ಗೆದ್ದನು, ಎಂದು ಹೇಳಿ ಪರಾಶರರ ಮತ್ತು ರಾಜನ ಸಿರೂಪಪೊಂದಿ ನಾರದರು ಹೊರಟುಹೋದರು. ಆ ರಾಜನು ಪುತ್ರಪೌತ್ರರೊಂದಿಗೆ ಸುಖವಾಗಿ ರಾಜ್ಯವಾಳಿದನು. ರುದ್ರಾಧ್ಯಾಯದಿಂದ ಶ್ರೀ ಗುರುವನ್ನೂ, ಶಂಕರನನ್ನೂ ಪೂಜಿಸಬೇಕು. ಈ ರೀತಿಯಿಂದ ಪೂಜಿಸಿದವರಿಗೆ ಕಾಲನ ಭಯವಿಲ್ಲ, ಎಂದು ಶ್ರೀಗುರುಗಳು ಆ ದಂಪತಿಗಳಿಗೆ ಹೇಳಿದರು, ಎಂದು ಸಿದ್ಧರು ನಾಮಧಾರಕನಿಗೆ ಹೇಳಿದರು. ಶ್ರೀ ಗುರುಗಳಿಗೆ ರುದ್ರಾಧ್ಯಾಯದಲ್ಲಿ ಪ್ರೀತಿಯು ಹೆಚ್ಚು. ಇದರಿಂದ ಭಕ್ತಿಯಿಂದ ಪೂಜಿಸಬೇಕು, ಎಂದು ಸರಸ್ವತೀ ಗಂಗಾಧರನು ಗುರು ಚರಿತ್ರೆಯನ್ನು ವಿಸ್ತಾರವಾಗಿ ಹೇಳಿದನು. ಇದನ್ನು ಕೇಳಲು ಪುರುಷಾರ್ಥಗಳು ಸಿದ್ಧಿಸುವುವು, ಎಂಬಲ್ಲಿಗೆ ರುದ್ರಾಧ್ಯಾಯ ಮಹಿಮೆಯೆಂಬ ಮೂವತ್ತನಾಲ್ಕನೇ ಅಧ್ಯಾಯವು ಮುಗಿದುದು.

|| ಶ್ರೀ ಗಣೇಶಾಯ ನಮಃ ||

## ೩೫ ನೇ ಅಧ್ಯಾಯ.

ಸಿದ್ಧರು ನಾಮಧಾರಕನಿಗೆ ಹೇಳುವರು. ಶಿಷ್ಯನೇ ಕೇಳು. ಆ ಪತಿವ್ರತೆಯು ಗುರುಗಳನ್ನು ವಂದಿಸಿ ಸ್ವಾಮಿ, ನಮಗೆ ಮುಂದಿನ

ಗತಿಯೇನು? ನಾವು ಹೇಗಿರಬೇಕು? ನಾವು ಯಾವುದರಿಂದ ಸ್ಥಿರಜೀವಿಯಾಗುವೆವೋ ಅಂಥಾ ಮಂತ್ರವನ್ನು ನಮಗೆ ಉಪದೇಶಿಸಿರಿ, ಎಂದು ಬೇಡಿಕೊಂಡಳು. ಆಗ ಗುರುಗಳು ಆಕೆಯನ್ನು ಕುರಿತು ಎಲೌ ಪತಿವ್ರತೆಯೇ, ಸ್ತ್ರೀಯರಿಗೆ ಪತಿಭಕ್ತಿಯು ಹೊರತು ಇನ್ನು ಯಾವ ಮಂತ್ರವನ್ನೂ ಉಪದೇಶಿಸಬಾರದು. ಸ್ತ್ರೀಯರಿಗೆ ಮಂತ್ರೋಪದೇಶ ಮಾಡಿದರೆ ಆ ಮಂತ್ರಕ್ಕೆ ವಿಘ್ನವುಂಟಾದೀತು. ಪೂರ್ವದಲ್ಲಿ ಶುಕ್ರಾಚಾರ್ಯರಿಗೆ ಬಂದ ಗತಿಯಾದೀತು, ಎಂದರು. ಆಗ ಆಕೆಯು ಸ್ವಾಮಿಾ, ಸ್ತ್ರೀಯರಿಗೆ ಮಂತ್ರೋಪದೇಶವನ್ನೇಕೆ ಮಾಡಬಾರದು? ಶುಕ್ರಾಚಾರ್ಯರಿಗೇನಾಯಿತು? ನಿರೂಪಿಸಿರಿ, ಎಂದು ಕೇಳಿದಳು. ಆಗ ಶ್ರೀ ಗುರುಗಳು ಹೇಳತೊಡಗಿದರು.

ಪೂರ್ವದಲ್ಲಿ ದೇವದಾನವರಿಗೆ ಯುದ್ಧವಾಯಿತು. ಆಗ ದೈತ್ಯಬಲವು ಸಾಯಲು ಶುಕ್ರಾಚಾರ್ಯರು ಅಮೃತಸಂಜೀವಿನೀ ವಿದ್ಯೆಯಿಂದ ಮೃತವಾದ ಸೇನೆಯನ್ನು ಬದುಕಿಸಿದರು. ಈ ದೈತ್ಯಸೇನೆಯು ದೇವಸೇನೆಯೊಡನೆ ಕಾದುತ್ತಿದ್ದುದು. ಹೀಗಿರಲು ಇಂದ್ರನು ಕೈಲಾಸಕ್ಕೆ ಹೋಗಿ ಶಂಕರನಂ ವಂದಿಸಿ ಸ್ವಾಮಿಾ, ನಮ್ಮಿಂದ ಮೃತರಾದ ರಾಕ್ಷಸರನ್ನು ಶುಕ್ರಾಚಾರ್ಯರು ಅಮೃತಸಂಜೀವಿನಿಯಿಂದ ಬದುಕಿಸುವರು. ನಮ್ಮ ಗತಿಯೇನು? ಎಂದು ಬಿನ್ನವಿಸಿದನು. ಆಗ ಶಿವನು ನಂದಿಕೇಶ್ವರನನ್ನು ಕರೆದು ಶುಕ್ರಾಚಾರ್ಯನನ್ನು ಹಿಡಿದುಕೊಂಡು ಬಾ ಎಂದಾಜ್ಞಾಪಿಸಿದನು. ಇದರಂತೆ ಆತನು ಹೋಗಿ ತಪಸ್ಸನ್ನು ಮಾಡುತ್ತಿರುವ ಶುಕ್ರಾಚಾರ್ಯನನ್ನು ಹಿಡಿದು ತಂದು ಶಂಕರನ ಮುಂದೆ ಕೆಡಹಿದನು. ಆಗ ಶಿವನು ಅಗಸ್ತ್ಯರು ಸಮುದ್ರವನ್ನು ಕುಡಿದಂತೆ ಶುಕ್ರಾಚಾರ್ಯನನ್ನು ನುಂಗಿದನು. ಹೀಗೆ ಕೆಲವು ಕಾಲ ಕಳೆಯಲು ಶುಕ್ರನು ಶಿವನ ಉದರದಲ್ಲಿದ್ದು ಮೂತ್ರದ್ವಾರದಿಂದ ಹೊರಗೆ ಬಂದು ಬಿಟ್ಟನು. ಇದು ಶಂಕರನಿಗೆ ಮರೆತು ಹೋಯಿತು. ಇಲ್ಲಿಂದ ಮುಂದೆ ಶುಕ್ರಾಚಾರ್ಯನಿಗೆ ಭಾರ್ಗವನೆಂಬ ಹೆಸರಾಯಿತು. ಪುನಃ ಇವನು ಅಮೃತಸಂಜೀವಿನೀ ಮಂತ್ರವನ್ನು ಜಪಿಸುತ್ತಿದ್ದನು. ಇದನ್ನು ನೋಡಿ ಇಂದ್ರನು ಚಿಂತಿಸಿ ಬೃಹಸ್ಪತ್ಯಾಚಾರ್ಯರನ್ನು ಕರೆಯಿಸಿ ಸ್ವಾಮಿಾ ದೇವಗುರುಗಳೇ, ನೀವು ವಿವೇಕಿ

ಗಳು. ಆ ದೈತ್ಯರು ಅದೃಷ್ಟವಂತರು. ಅವರು ಸತ್ತರೂ ಬದುಕುವರು. ದೈತ್ಯರಿಗೆ ಶುಕ್ರಾಚಾರ್ಯರು ಒಳ್ಳೆಯ ಗುರುಗಳಾಗಿರುವರು. ನೀವು ಹಾಗಿಲ್ಲದೇ ನಮ್ಮನ್ನು ಉಪೇಕ್ಷಿಸುವಿರಿ. ದೈತ್ಯರು ಜೀವ ಭಯವಿಲ್ಲದೆ ಯುದ್ಧಕ್ಕೆ ಬರುವರು. ನೀವು ಈಗ ಬೇಗ ಆಲೋಚಿಸಿರಿ. ದೇವತೆಗಳಿಗೆ ನೀವು ಪೂಜ್ಯರಾಗಿದ್ದೀರಿ. ಶುಕ್ರಾಚಾರ್ಯರು ನಿಮಗೆ ಸರಿಯಾಗಲಾರರು, ಎಂದು ಉಪಚರಿಸಿದನು. ಆಗ ಗುರುವು ಇಂದ್ರನೇ, ನಾನು ಹೇಳುವ ಉಪಾಯವನ್ನು ಕೇಳು. ಸಂಜೀವಿನೀ ಮಂತ್ರವನ್ನು ಕಲಿಯಲು ಶುಕ್ರಾಚಾರ್ಯರ ಹತ್ತಿರಕ್ಕೆ ಕಳುಹಿಸಬೇಕು. ಇದಕ್ಕೆ ನನ್ನ ಮಗನಾದ ಕಚನನ್ನು ಕಳುಹಿಸೋಣ. ಅವನು ಮಂತ್ರವನ್ನು ಕಲಿತು ಬರುವನು, ಎಂದು ಹೇಳಿ ಕಚನನ್ನು ಕರೆದು ಅವನಿಗೆ ಬುದ್ಧಿವಾದವನ್ನು ಹೇಳಿದನು:—ಪುತ್ರನೇ, ನೀನು ಶುಕ್ರಾಚಾರ್ಯರಲ್ಲಿಗೆ ಹೋಗಿ ಶುದ್ಧ ಮನಸ್ಸಿನಿಂದ ಅವರನ್ನು ಸೇವಿಸಿ ಯಾವ ರೀತಿಯಿಂದಾದರೂ ಸಂಜೀವಿನೀ ಮಂತ್ರವನ್ನು ಕಲಿತು ಬಾ, ಎಂದನುಜ್ಞೆಯಿತ್ತನು. ಕಚನು ತಂದೆಯನ್ನೂ, ಇಂದ್ರಾದಿಗಳನ್ನೂ ವಂದಿಸಿ, ಆಜ್ಞೆಯಂತೆ ವಿದ್ಯಾರ್ಥಿ ರೂಪವನ್ನು ಹೊಂದಿ ಶುಕ್ರಾಚಾರ್ಯರ ಹತ್ತಿರ ಹೋಗಿ ವಂದಿಸಿದನು. ಆಗ ಶುಕ್ರಾಚಾರ್ಯರು ಎಲೈ ವಟುವೇ, ನೀನು ಯಾರು? ಏಕೆ ಬಂದೆ? ಎಂದು ಕೇಳಿದರು. ಆಗ ಕಚನು ಸ್ವಾಮಿಾ, ನಾನು ದ್ವಿಜಕುಮಾರನು. ನಿಮ್ಮ ಕೀರ್ತಿಯನ್ನು ಕೇಳಿ ನಿಮ್ಮಲ್ಲಿ ವಿದ್ಯೆಯನ್ನು ಕಲಿಯುವುದಕ್ಕಾಗಿ ಬಂದೆನು. ನಿಮ್ಮ ಚರಣಂಗಳನ್ನು ಸೇವಿಸುವೆನು. ಅನಾಥರಕ್ಷಕರೇ, ವಿದ್ಯೆಯನ್ನು ಕಲಿಸಿರಿ, ಎಂದು ಬೇಡಿಕೊಂಡನು. ಆಗ ಶುಕ್ರಾಚಾರ್ಯನ ಮಗಳಾದ ದೇವಯಾನೆಯು ತಂದೆಯೇ, ಈತನು ಒಳ್ಳೆಯವನಾಗಿರುವನು. ಇವನಿಗೆ ವಿದ್ಯೆಯನ್ನು ಕಲಿಯಿಸಿರಿ, ಎಂದು ಬೇಡಿಕೊಂಡಳು. (ಈಕೆಯು ಮನ್ಮಥನಂತಿರುವ ಈತನೇ ತನಗೆ ಪತಿಯಾಗಬೇಕೆಂದು ಯೋಚಿಸಿದಳು.) ಇದರಂತೆ ಶುಕ್ರಾಚಾರ್ಯನು ಈ ಕಚನಿಗೆ ವಿದ್ಯೆಯನ್ನು ಹೇಳುತ್ತಿದ್ದನು. ಹೀಗೆ ಈತನು ವಿದ್ಯೆಯನ್ನು ಕಲಿಯುತ್ತಿರಲು ರಾಕ್ಷಸರು ಇವನನ್ನು ನೋಡಿ, ಈತನು ದೇವತೆಗಳಲ್ಲೊಬ್ಬನಾಗಿರಬೇಕು. ಮೋಸದಿಂದ ವೇಷಾಂತರದಿಂದ ಬಂದು ವಿದ್ಯೆಯನ್ನು

ಕಲಿಯಬೇಕೆಂದು ಬಂದಿರಬೇಕು. ಇವನು ವಿದ್ಯೆಯನ್ನು ಕಲಿತು ಹೋಗಿ ದೇವತೆಗಳಿಗೆ ಹೇಳಿಕೊಡುವನು, ಎಂದು ಚಿಂತಿಸಿದರು. ಹೀಗಿರಲು ಒಂದು ದಿನ ಈ ಕಚನೂ ರಾಕ್ಷಸರೂ ಸಮಿತ್ತನ್ನು ತರಲು ಕಾಡಿಗೆ ಹೋದರು. ಆ ದೈತ್ಯರು ಕಾಡಿನಲ್ಲಿ ಈ ಕಚನನ್ನು ಕೊಂದು ಸಮಿತ್ತನ್ನು ತೆಗೆದುಕೊಂಡು ಮನೆಗೆ ಬಂದರು. ದೇವಯಾನೆಯು ತಂದೆಯೇ, ಕಚನು ಕಾಡಿನಿಂದ ಮನೆಗೆ ಬರಲಿಲ್ಲ. ಇವನು ಬಂದ ಹೊರತು ನಾನು ಊಟಮಾಡುವುದಿಲ್ಲವೆಂದು ಹೇಳಿದಳು. ಶುಕ್ರನು ಚಿಂತಿಸಿ ಜ್ಞಾನದೃಷ್ಟಿಯಿಂದ ನೋಡಿ ಕಚನು ಮೃತನಾದನೆಂದು ತಿಳಿದು ಸಂಜೀವಿನೀ ಮಂತ್ರದಿಂದ ಕಚನನ್ನು ಬದುಕಿಸಿದನು. ಕಚನು ಮನೆಗೆ ಬಂದನು. ಹೀಗೆ ಬಹು ದಿನಗಳಾದ ಬಳಿಕ ಮತ್ತೆ ದೈತ್ಯರು ಕಾಡಿಗೆ ಹೋದ ಕಚನನ್ನು ಕೊಂದು ಅವನ ದೇಹವನ್ನು ಚೂರ್ಣವಾಗಿ ಮಾಡಿ ಹತ್ತು ದಿಕ್ಕುಗಳಿಗೂ ಎರಚಿಬಿಟ್ಟು ಮನೆಗೆ ಬಂದರು. ಸೂರ್ಯಾಸ್ತವಾಯಿತು. ಪ್ರಾಣಸಖನಾದ ಕಚನು ಕಾಣುವುದಿಲ್ಲವೆಂದೂ, ಇವನು ಬಾರದಿರಲು ವಿಷಪಾನ ಮಾಡುವೆನು, ಕಚನ ಮುಖವನ್ನು ತೋರಿಸೆಂದೂ, ದೇವಯಾನೆಯು ತಂದೆಯಾದ ಶುಕ್ರಾಚಾರ್ಯರಿಗೆ ಹೇಳಿದಳು. ಶುಕ್ರಾಚಾರ್ಯರಿಗೆ ಮಗಳಲ್ಲಿ ಬಹು ಪ್ರೀತಿಯಿತ್ತು. ಇವರು ಜ್ಞಾನದೃಷ್ಟಿಯಿಂದ ನೋಡಿ ಕಚನನ್ನು ಕೊಂದು ಚೂರ್ಣಮಾಡಿ ಹಾಕಿರುವರೆಂದು ತಿಳಿದು ಸಂಜೀವಿನೀ ಮಂತ್ರವನ್ನು ಜಪಿಸಿದರು. ಮಂತ್ರಶಕ್ತಿಯಿಂದ ಕಚನು ಮನೆಗೆ ಬೇಗನೆ ಬಂದನು. ದೇವಯಾನೆಯು ಆನಂದದಿಂದ ತಂದೆಯನ್ನು ತಬ್ಬಿಕೊಂಡಳು. ಆಗ ದೈತ್ಯರು ಯೋಚಿಸಿ ನಾವು ಏನು ಮಾಡಿದರೂ ಇವನು ಸಾಯುವುದಿಲ್ಲ. ಗುರುವಿಗೆ ಮಗಳಲ್ಲಿರುವ ಪ್ರೀತಿಯಿಂದ ಕಚನನ್ನು ಬದುಕಿಸುವರು. ನಾಳೆ ಏಕಾದಶಿಯಾಗಿದೆ. ಉದಯ ಕಾಲದಲ್ಲಿ ಇವನನ್ನು ಕೊಂದು ಚೂರ್ಣಮಾಡಿ ಪಾನೀಯದಲ್ಲಿ ಗುರುವಿಗೆ ಕುಡಿಸಬೇಕು ಎಂದೆಣಿಸಿ, ಮಾರನೇ ದಿನ ಕಾಡಿಗೆ ಹೋದ ಕಚನನ್ನು ಕೊಂದು ಚೂರ್ಣಮಾಡಿ ಮದ್ಯದಲ್ಲಿ ಸೇರಿಸಿ ಬಹಳವಾಗಿ ತುಪ್ಪವನ್ನು ಬೆರೆಯಿಸಿ ಕುಡಿಸಿದರು. ದೇವಯಾನೆಯು ತಂದೆಯನ್ನು ಕುರಿತು ಕಚನು ಬರಲಿಲ್ಲ. ಇವನನ್ನು ಕರೆಯಿಸಿರಿ, ಎಂದು ಬಿನ್ನವಿಸಿ

ಆಕ್ರೋಶದಿಂದ ರೋದಿಸಿದಳು. ಶುಕ್ರಾಚಾರ್ಯರು ಜ್ಞಾನದೃಷ್ಟಿಯಿಂದ ನೋಡಲು ಕಚನು ತ್ರಿಭುವನಗಳಲ್ಲಿಯೂ ಕಾಣದೆ ದುಃಖಿಸುತ್ತಿದ್ದರು. ಕಚನು ತಮ್ಮ ದೇಹದಲ್ಲಿರುವುದನ್ನು ನೋಡಿ ಶುಕ್ರಾಚಾರ್ಯರು ಸಂದೇಹವುಳ್ಳವರಾದರು. ದೇವಯಾನಿಯನ್ನು ಕುರಿತು ಮಗಳೇ, ಕಚನು ನನ್ನ ದೇಹದಲ್ಲಿರುವನು. ಇವನನ್ನು ಹೇಗೆ ತೆಗೆಯಲಿ? ಇವನನ್ನು ದೇಹದಿಂದ ಆಚೆಗೆ ತೆಗೆದರೆ ನಾನು ಸಾಯುವೆನು. ಇದರಲ್ಲಿ ನಿನ್ನ ಇಷ್ಟವೇನು? ಎಂದು ಕೇಳಿದರು. ಆಗ ದೇವಯಾನಿಯು ತಂದೆಯೇ, ನಾನು ಮನಸ್ಸಿನಲ್ಲಿ ಕಚನನ್ನು ಪತಿಯೆಂದು ತಿಳಿದು ಇರುವೆನು. ಇವನು ನಿಮ್ಮ ದೇಹದಿಂದ ಹೊರಗೆ ಬಾರದಿರಲು ನಾನು ಪ್ರಾಣವನ್ನು ಬಿಡುವೆನು ಎಂದಳು. ಆಗ ಶುಕ್ರಾಚಾರ್ಯರು ಮಗಳೇ, ನಾನು ಕಚನನ್ನು ದೇಹದಿಂದ ಹೊರಗೆ ಹೊರಡಿಸಲು ನನಗೆ ಮರಣವುಂಟಾದೀತು, ಎಂದರು. ಆಗ ಆಕೆಯು ತಂದೆಯೇ, ಎಲ್ಲಿರನ್ನೂ ನೀನು ಬದುಕಿಸುತ್ತೀಯೆ. ಹೀಗಿದ್ದರೂ ನಿನ್ನ ಪ್ರಾಣವು ಹೋದೀತೆನ್ನುವಿ. ಇದು ಆಶ್ಚರ್ಯವು, ಎಂದಳು. ಆಗ ಶುಕ್ರನು ಮಗಳೇ, ನನ್ನ ಹೊರತು ಅನ್ಯರಿಗೆ ಸಂಜೀವನೀ ಮಂತ್ರವು ತಿಳಿಯದು. ಆದ್ದರಿಂದ ನಾನು ಮೃತನಾಗಲು ನನ್ನನ್ನು ಬದುಕಿಸುವವರ್ಯಾರು? ಯಾರಿಗೂ ಮಂತ್ರವನ್ನು ಹೇಳಬಾರದು. ಹೇಳಿದರೆ ಮಂತ್ರದ ಗುಣವು ಕಮ್ಮಿಯಾಗುವುದು. ಕಚನಿಗಾಗಿ ನನ್ನ ಪ್ರಾಣವೇ ಹೋಗುವುದು, ಎಂದರು. ಏನು ಹೇಳಿದರೂ ಮಗಳು ಕೇಳಲಿಲ್ಲ. ಆಕೆಯು ತಂದೆಯ ಚರಣಗಳನ್ನು ಹಿಡಿದು ಅಂಜಲಿಬದ್ಧಳಾಗಿ ಸ್ವಾಮೀ, ನನಗಾ ಸಂಜೀವನೀ ಮಂತ್ರವನ್ನುಪದೇಶಿಸಿರಿ. ನೀವು ಕಚನನ್ನು ಬದುಕಿಸಲು ನಿಮಗೆ ಮರಣವುಂಟಾದರೆ ನಾನು ಆ ಮಂತ್ರವನ್ನು ಜಪಿಸಿ ನಿಮ್ಮನ್ನು ಬದುಕಿಸುವೆನು, ಎಂದಳು. ಆಗ ಶುಕ್ರಾಚಾರ್ಯರು ಮಗಳೇ, ಸ್ತ್ರೀಯರಿಗೆ ಈ ಮಂತ್ರವನ್ನು ಹೇಳಬಾರದು. ಇದು ದೋಷಕರವು ಎಂದು ವೇದಶಾಸ್ತ್ರಗಳು ಹೇಳುವವು. ಸ್ತ್ರೀಯರಿಗೆ ಪತಿಭಕ್ತಿಯೇ ಮಂತ್ರವು. ಸ್ತ್ರೀಯರು ಮಂತ್ರವನ್ನು ಜಪಿಸಬಾರದು. ಮಂತ್ರವನ್ನು ಜಪಿಸಲು ಸ್ತ್ರೀಯರಿಗೆ ದೋಷವುಂಟಾದೀತು, ಮತ್ತೂ ಮಂತ್ರಸಾಮರ್ಥ್ಯವೂ ಹೋದೀತು, ಎಂದರು. ಆಗ ದೇವಯಾನಿಯು

ತಂದೆಯೇ, ನಿನ್ನ ಪ್ರಾಣವು ಹೋಗುವುದೆಂದು ತಿಳಿದು ಆ ಮಂತ್ರವನ್ನು ಜಪಿಸುತ್ತಾ ಸುಖವಾಗಿರು, ಎಂದು ಹೇಳಿ ಅತಿಯಾಗಿ ದುಃಖಿಸಿ ಮೂರ್ಛಾಗತಳಾಗಿ ಬಿದ್ದಳು. ಆಗ ಶುಕ್ರಾಚಾರ್ಯರು ಪ್ರೀತಿಯಿಂದ ಮಗಳನ್ನೆಬ್ಬಿಸಿ ತಬ್ಬಿಕೊಂಡು ಸಂಜೀವಿನೀ ಮಂತ್ರವನ್ನು ಆಕೆಗೆ ಉಪದೇಶಿಸಿದರು. ಆಗ ಕಚನು ಶುಕ್ರಾಚಾರ್ಯರ ಹೊಟ್ಟೆಯಲ್ಲಿದ್ದು ಆ ಮಂತ್ರವನ್ನು ಕೇಳುತ್ತಿದ್ದನು. ಈ ಮಂತ್ರವು ಷಟ್ಕರ್ಣಗಳಿಗೆ ಬಿದ್ದದು. ಶುಕ್ರಾಚಾರ್ಯರು ಮಂತ್ರವನ್ನು ಜಪಿಸಲು ಕಚನು ಅವರ ಉದರದಿಂದ ಹೊರಟನು.

ಶುಕ್ರಾಚಾರ್ಯರು ಹೊಟ್ಟೆಯೊಡೆದು ತಟ್ಟನೆ ಮೃತರಾದರು. ಆಗ ದೇವಯಾನೆಯು ಆ ಮಂತ್ರದಿಂದ ತಂದೆಯನ್ನು ಬದುಕಿಸಿದಳು. ಈ ಪರಿಯಿಂದ ಮೂರು ಬಾರಿ ಮಂತ್ರವನ್ನು ಜಪಿಸುವಾಗ ಕಚನು ಅದನ್ನು ಕೇಳಿ ಚೆನ್ನಾಗಿ ಪಾಠಮಾಡಿದನು. ಕಾರ್ಯಸಾಧನೆಯಾಯಿತೆಂದು ಸಂತೋಷಹೊಂದಿದನು. ಆಗ ಇವನು ಶುಕ್ರಾಚಾರ್ಯರನ್ನು ವಂದಿಸಿ ಸ್ವಾಮಿಾ, ತಮ್ಮಲ್ಲಿ ವಿದ್ಯೆಯನ್ನು ಪೂರ್ಣವಾಗಿ ಕಲಿತೆನು. ನನ್ನನ್ನು ದೈತ್ಯರು ಕೊಲ್ಲುತ್ತಿರುವರು. ನಾನು ಹೊರಟುಹೋಗಲು ಅನುಜ್ಞೆಯನ್ನು ಕೊಡೋಣಾಗಲಿ, ಎಂದು ವಂದಿಸಿದನು. ಆಗ ಶುಕ್ರಾಚಾರ್ಯರು ಅವನಿಗೆ ನಿರೂಪವನ್ನು ಕೊಟ್ಟರು. ಆಗ ದೇವಯಾನೆಯು ಆ ಕಚನ ಕರಗನ್ನು ಹಿಡಿದು ತನಗೆ ಪತಿಯಾಗೆಂದಳು. ಕಚನು ದೇವಯಾನೆಯೇ, ನಾನು ಮೂರು ಬಾರಿ ಕೊಲ್ಲಲ್ಪಟ್ಟರೂ ನೀನು ಬದುಕಿಸಿದೆ. ನೀನು ಗುರುಪುತ್ರಿಯಾದುದರಿಂದ ನನಗೆ ತಂಗಿಯೂ, ತಾಯಿಯೂ ಆಗಿದ್ದೀಯೆ. ನಿನ್ನನ್ನು ವರಿಸಲು ನನಗೆ ದೋಷವುಂಟಾದೀತು. ಋಷಿಗಳೆಲ್ಲರೂ ನನ್ನನ್ನು ನಿಂದಿಸುವರು. ತಂಗಿಯಾದ ನಿನ್ನನ್ನೆಂತು ವರಿಸಲಿ? ಎಂದನು. ಆಗ ದೇವಯಾನೆಯು ಕೋಪಿಸಿ, ಆ ಕ್ಷಣವೇ ಎಲೈ ಕಚನೇ, ನೀನು ನನ್ನ ಮಾತನ್ನು ಕೇಳದೇ ಇದ್ದುದರಿಂದ ನೀನು ಕಲಿತ ವಿದ್ಯೆಯು ವ್ಯರ್ಥವಾಗಿ ಮರೆತು ಹೋಗಲಿ! ನನ್ನ ಆಶೆಯು ನಿರಾಶೆಯುಳ್ಳದ್ದಾಯಿತು. ಆದುದರಿಂದ ನಿನಗೆ ವಿದ್ಯೆಯು ಲೇಶವೂ ಬಾರದಿರಲಿ, ಎಂದು ಶಪಿಸಿದಳು. ಆಗ ಕಚನು ದೇವಯಾನೆಯೇ, ನನಗೆ ವ್ಯರ್ಥವಾಗಿ ಶಾಪವನ್ನು ಕೊಟ್ಟೆ.

ನಿನ್ನ ತಂದೆಯು ಬ್ರಹ್ಮಜ್ಞಾನಿಯು. ಆತನು ನಿನಗೆ ಅಮೃತಸಂಜೀವಿನೀ ಮಂತ್ರವನ್ನು ಕಲಿಸಿದನು. ಆದರೆ ಈ ಮಂತ್ರವು ಮುಂದೆ ಫಲಿಸದಿರಲಿ! ಎಂದು ಶಾಪವಿತ್ತು ಕಚನು ಅಮರಾವತಿಗೆ ಹೊರಟುಹೋದನು. ಆಗ ದೈತ್ಯರು ನಾಶವಾದರು. ದೇವತೆಗಳು ಸಂತೋಷಿಸಿದರು. ಶುಕ್ರಾಚಾರ್ಯನ ಸಂಜೀವಿನೀ ಮಂತ್ರವು ಕೆಲಸಕ್ಕೆ ಬಾರದಂತಾಯಿತು. ಸ್ತ್ರೀಯರಿಗೆ ಮಂತ್ರವನ್ನು ಹೇಳಬಾರದು, ಎಂದು ಗುರುಗಳು ಆ ಪತಿವ್ರತೆಗೆ ಹೇಳಿದರು. ಸ್ತ್ರೀಯರಿಗೆ ಪತಿಸೇವೆಯೇ ಮುಖ್ಯವು. ಆದುದರಿಂದ ಇವರಿಗೆ ಮಂತ್ರವನ್ನು ಹೇಳಬಾರದು. ಸ್ತ್ರೀಯಳು ಗುರುವಿನ ಮತ್ತೂ ಪತಿಯ ಅಪ್ಪಣೆ ಹೊಂದಿ ವ್ರತೋಪವಾಸಾದಿಗಳನ್ನು ಮಾಡಬೇಕು, ಎಂದರು. ಆಗ ಆಕೆಯು ಗುರುವರ್ಯರೇ, ನಿಮ್ಮ ವಚನವೇ ನನಗೆ ವ್ರತವು. ಆದುದರಿಂದ ಒಂದು ವ್ರತವನ್ನು ನಿರೂಪಿಸಿರಿ. ನಿಮ್ಮಲ್ಲಿ ನನಗೆ ವಿಶ್ವಾಸವಿದೆ. ನಿಮ್ಮ ಪಾದಗಳಲ್ಲಿ ಭಕ್ತಿಯಿರುವಂತೆ ನಿರೂಪಕೊಡಿಸಿರಿ; ದಯೆಯಿಡಿರಿ ಎಂದು ವಂದಿಸಿದಳು. ಆಗ ಗುರುವು ಆಕೆಯನ್ನು ಕುರಿತು ಎಲೌ ಸ್ತ್ರೀಯಳೇ, ನಿನಗೊಂದು ವ್ರತವನ್ನು ಹೇಳುವೆನು ಕೇಳು. ನಿನ್ನ ಪತಿಯು ರಾಜ್ಯವನ್ನು ಹೊಂದಲಿ, ಎಂದಾಶೀರ್ವದಿಸಿದರು. ಆ ದಂಪತಿಗಳು ಶ್ರೀಗುರುಗಳನ್ನು ವಂದಿಸಿ ಸ್ವಾಮಿಾ, ನಿಮ್ಮ ವಾಕ್ಯವೇ ನಮಗೆ ಕಾರಣವು. ನೀವು ಹೇಳಿದಂತೆ ನಾವಿರುವೆವು. ಗುರುವಾಕ್ಯದಂತೆ ಯಾರು ನಡೆಯುವುದಿಲ್ಲವೋ ಅವರು ರೌರವ ನರಕವನ್ನು ಹೊಂದುವರು. ನಿಮ್ಮ ವಾಕ್ಯವು ನಮ್ಮ ತಲೆಯಲ್ಲಿರಲಿ, ಎಂದು ವಂದಿಸಿದರು. ಭಕ್ತವತ್ಸಲರಾದ ಗುರುಗಳು ಪ್ರೀತಿಯಿಂದ ಆ ಸತಿಗೊಂದು ವ್ರತವನ್ನು ಹೇಳುವರು. ಸ್ತ್ರೀಯಳೇ, ಕೇಳು. ನಿತ್ಯಾನಂದನಾಗಿಯೂ, ಶಾಂತನಾಗಿಯೂ, ನಿರ್ವಿಕಲ್ಪನಾಗಿಯೂ ಇರುವ ಈಶ್ವರನನ್ನು ಅರ್ಚಿಸಿದರೆ ಸಕಲೇಷ್ಟಗಳೂ ಸಿದ್ಧಿಸುವುವು. ವಿಷಯತತ್ಪರನಾದ ಸಂಸಾರಿಕನು ಶಿವನನ್ನರ್ಚಿಸಿದರೆ ಅವನಿಗೂ ಈಶ್ವರನು ಪ್ರಸನ್ನನಾಗುವನು. ವಿರಕ್ತನು ಪೂಜಿಸಿದರೆ ಪೂರ್ಣಭಕ್ತನಾಗುವನು. ಇವನಿಗೂ ಶಂಕರನು ಪ್ರಸನ್ನನಾಗುವನು. ಸ್ವರ್ಗಾಪವರ್ಗದ ಅಧಿಕಾರವೂ ಈಶ್ವರನಿಗಿರುವುದೆಂದು ವೇದಶಾಸ್ತ್ರಗಳು ಹೇಳುವುವು.

ಸೋಮವಾರ ವ್ರತವೆಂಬೊಂದು ವ್ರತವು ಪ್ರಸಿದ್ಧವಾಗಿದೆ. ಈ ದಿನ ಈಶ್ವರನನ್ನು ಪೂಜಿಸಿದರೆ ಸಕಲೇಷ್ಟಗಳುಂಟಾಗುವುವು. ಆ ದಿನ ನಕ್ತಭೋಜನ ಮಾಡಬೇಕು. ಜಿತೇಂದ್ರಿಯನಾಗಿರಬೇಕು. ಎಲ್ಲರೂ ಸೋಮವಾರ ವೈದಿಕ ತಾಂತ್ರಿಕ ವಿಧಿಯಿಂದ ಶಿವನನ್ನು ಪೂಜಿಸಬೇಕು. ಗೃಹಸ್ಥನೂ, ಬ್ರಹ್ಮಚಾರಿಯೂ, ಸುವಾಸಿನಿಯೂ, ಕನ್ಯೆಯೂ, ವಿಧವೆಯೂ ಈ ವ್ರತ ಮಾಡಬೇಕು. ಈ ವಿಷಯದಲ್ಲಿ ಸ್ಕಂದಪುರಾಣೋಕ್ತವಾದ ಒಂದು ಆಖ್ಯಾನವನ್ನು ಕೇಳು. ಪೂರ್ವದಲ್ಲಿ ಆರ್ಯಾವರ್ತದಲ್ಲಿ ಚಿತ್ರವರ್ಮನೆಂಬ ಧರ್ಮಿಷ್ಠನಾದ ರಾಜನಿದ್ದನು. ಈತನು ದುಷ್ಟರನ್ನು ಶಿಕ್ಷಿಸುತ್ತಾ ಸಮಸ್ತ ಪುಣ್ಯಗಳನ್ನು ಮಾಡಿ ಧನಿಕನಾಗಿದ್ದನು. ಶೌರ್ಯದಿಂದ ಭೂಮಿಯೆಲ್ಲವನ್ನೂ ಗೆದ್ದನು. ಈತನ ರಾಣಿಯು ಧರ್ಮಮಾಡುತ್ತಾ ಶಿವನನ್ನು ಕುರಿತು ಪುತ್ರಕಾಮಿಯಾಗಿ ಪೂಜಿಸಿದಳು. ಈಕೆಗೊಂದು ಹೆಣ್ಣು ಮಗಳು ಹುಟ್ಟಿದಳು. ಇವಳು ಅತಿ ಸುಂದರಿಯಾಗಿಯೂ, ಸುಲಕ್ಷಣೆಯಾಗಿಯೂ, ಸೂರ್ಯನಂತೆ ಹೊಳೆಯುವವಳಾಗಿಯೂ ಇದ್ದಳು. ರಾಜನು ಜೋಯಿಸರನ್ನು ಕರೆಯಿಸಿ ಜಾತಕವನ್ನು ಬರೆಯಿಸಿದನು. ಈ ಮಗಳಿಗೆ ಸೀಮಂತಿನಿಯೆಂದು ಹೆಸರಿಡಬೇಕು; ಈಕೆಯು ಉಮೆಯಂತೆ ಮಾಂಗಲ್ಯವುಳ್ಳವಳಾಗಿರುವಳು; ದಮಯಂತಿ, ಭಾಗೀರಥೀ, ಲಕ್ಷ್ಮೀದೇವಿ, ಸೀತಾದಿಗಳಂತೆ ಗುಣವೂ, ರೂಪವೂ, ಜ್ಞಾನವೂ ಉಳ್ಳವಳಾಗುವಳು; ಮತ್ತೂ ಪತಿವ್ರತೆಯಾಗಿಯೂ, ಸೂರ್ಯನಂತೆ ಕಾಂತಿಯುಳ್ಳವಳಾಗಿಯೂ, ಚಂದ್ರನಂತೆ ಮನಶ್ಶಾಂತಿಯುಳ್ಳವಳಾಗಿ ಹತ್ತು ಸಾವಿರ ವರ್ಷಗಳು ಪತಿಯೊಡನೆ ರಾಜ್ಯವಾಳುವಳು, ಎಂದೀ ಪರಿಯಿಂದ ಜಾತಕ ಫಲವನ್ನು ಜೋಯಿಸರು ಹೇಳಿದರು. ಆಗ ರಾಜನು ಆನಂದಹೊಂದಿ ಆ ಜೋಯಿಸರಿಗೆ ಅನೇಕ ದಾನಗಳನ್ನು ಕೊಟ್ಟನು. ಹೀಗಿರಲು ಸಭೆಯಲ್ಲಿ ಒಬ್ಬ ಬ್ರಾಹ್ಮಣನು ಹೆದರದೆ ರಾಜನಂ ಕುರಿತು ಎಲೈ ಧೊರೆಯೇ, ಕೇಳು. ನಿನ್ನ ಮಗಳಿಗೆ ಹದಿನಾಲ್ಕನೇ ವರ್ಷದಲ್ಲಿ ವೈಧವ್ಯವುಂಟಾದೀತು ಎಂದನು. ಈ ಮಾತನ್ನು ಕೇಳಿ ರಾಜನು ಮೂರ್ಛಿತನಾಗಿ ಎಚ್ಚತ್ತು ಚಿಂತಿಸಿದನು. ಆ ವಿಪ್ರನು ಹೊರಟು ಹೋದನು. ಆಗ ಸರ್ವರೂ ದುಃಖಿಸಿದರು. ಈ ಮಗಳಿಗೇಳು

ವರ್ಷವಾಯಿತು. ಇವಳಿಗೆ ವರನನ್ನು ಎಲ್ಲಿ ಹುಡುಕಬೇಕೆಂದು ಚಿಂತಿಸಿದನು. ಮತ್ತೂ ಈ ಮಗಳಿಗೆ ಹದಿನಾಲ್ಕನೇ ವರ್ಷದಲ್ಲಿ ವೈಧವ್ಯ ಬರುವುದು ಎಂದು ಚಿಂತಿಸಿದನು.

ಈ ಸೀಮಂತಿನಿಯು ರಾಜಾಂಗಣದಲ್ಲಿ ಆಡುತ್ತಿದ್ದವಳಾಗಿ ತನಗೆ ವಿಧವತ್ವವು ಬರುವುದೆಂಬುದನ್ನು ತಂದೆಯ ಮಾತಿನಿಂದ ತಿಳಿದು ಚಿಂತಿಸಿದಳು. ಯಾಜ್ಞವಲ್ಕ್ಯರ ಪತ್ನಿಯಾದ ಮೈತ್ರೇಯಿಯು ಈ ಮಗುವಿನ ಹತ್ತಿರ ಬಂದಳು. ಆಗ ಈಕೆಯು ಸಾಷ್ಟಾಂಗ ನಮಸ್ಕಾರ ಮಾಡಿ ಕೈಗಳನ್ನು ಜೋಡಿಸಿ ಅಮ್ಮಾ, ನನ್ನನ್ನು ಸಲಹು. ನನಗೆ ಸೌಭಾಗ್ಯವು ಸ್ಥಿರವಾಗಲು ಉಪಾಯವನ್ನು ಹೇಳಿರಿ, ಎಂದು ವಂದಿಸಿದಳು. ಈ ಕನ್ಯೆಯ ಮಾತನ್ನು ಕೇಳಿ ಮೈತ್ರೇಯಿಯು ಬಾಲೆಯೇ, ಹೆದರದಿರು. ಸೋಮವಾರ ವ್ರತವನ್ನು ಮಾಡು. ಆ ದಿನ ಶಿವನನ್ನು ಪೂಜಿಸಿ ಉಪವಾಸ ಮಾಡು. ಆ ದಿನ ಮಂಗಳಸ್ನಾನಮಾಡಿ ಪೀತಾಂಬರವನ್ನುಟ್ಟು ಸ್ಥಿರಮನಸ್ಸಿನಿಂದ ಗೌರೀಶ್ವರರನ್ನು ಪೂಜಿಸಬೇಕು. ಅಭಿಷೇಕದಿಂದ ಪಾಪನಾಶವಾಗುವುದು. ಪೀಠಪೂಜೆಯಿಂದ ಸಾಮ್ರಾಜ್ಯವುಂಟಾಗುವುದು. ಗಂಧಪುಷ್ಪಾಕ್ಷತೆಗಳಿಂದರ್ಚಿಸಲು ಸೌಭಾಗ್ಯಸೌಖ್ಯವುಂಟಾಗುವುದು. ಧೂಪದಿಂದ ಸುಗಂಧವೂ, ದೀಪದಿಂದ ದೇಹಕಾಂತಿಯೂ, ನೈವೇದ್ಯದಿಂದ ಭೋಗವೂ, ತಾಂಬೂಲದಿಂದೈಶ್ವರ್ಯವೂ, ನಮಸ್ಕಾರದಿಂದ ಪುರುಷಾರ್ಥಗಳೂ ಉಂಟಾಗುವುವು. ಶಿವಜಪ ಮಾಡುವುದರಿಂದ ಅಷ್ಟೈಶ್ವರ್ಯವುಂಟಾಗುವುದು. ಹೋಮದಿಂದ ಭಂಡಾರವು ಪೂರ್ಣವಾಗುವುದು. ವಿಪ್ರರಿಗೆ ಭೋಜನ ಮಾಡಿಸಿದರೆ ಸರ್ವ ದೇವತೆಗಳೂ ತೃಪ್ತರಾಗುವರು. ಈ ವ್ರತವನ್ನು ಮಾಡುವವಳಾಗು. ಇದರಿಂದ ಭಯವೂ, ದುರಿತವೂ, ಕ್ಲೇಶವೂ ಪರಿಹರಿಸುವುವು. ಗೌರೀಶನ ಪೂಜೆಯಿಂದ ಪಾಪಗಳೆಲ್ಲವೂ ಹೋಗುವುವು, ಎಂದಳು. ಇದನ್ನು ಕೇಳಿ ಸೀಮಂತಿನಿಯು ಈ ವ್ರತವನ್ನು ಮಾಡುವೆನೆಂದೊಪ್ಪಿ ಆಚರಿಸಿದಳು. ಮದುವೆಗೆ ಯೋಗ್ಯಳಾದ ಇವಳಿಗೆ ಪೂರ್ವಜನ್ಮದ ಕರ್ಮಫಲದಂತೆ ಆಗುವುದೆಂದು ತಿಳಿದು ರಾಜನು ವರನನ್ನು ಗೊತ್ತುಮಾಡುವುದಕ್ಕಾಗಿ ತನ್ನ ಮಂತ್ರಿಯನ್ನು ಕಳುಹಿಸಿದನು. ನಳ ಚಕ್ರವರ್ತಿಯ ಪುತ್ರನಾದ ಇಂದ್ರ

ಸೇನನಿಗೆ ಚಂದ್ರನಂತೆ ಕಾಂತಿಯುಳ್ಳ ಚಿತ್ರಾಂಗದನೆಂಬ ಮಗನಿದ್ದನು. ಮಂತ್ರಿಯು ಈ ವರನನ್ನು ಗೊತ್ತುಮಾಡಿ ಕರೆದುಕೊಂಡು ಬಂದನು. ರಾಜನು ಇವನಿಗೆ ಮಗಳನ್ನು ಕೊಡಬೇಕೆಂದು ಯೋಚಿಸಿದನು.

ಭೂಮಂಡಲದಲ್ಲಿರುವ ರಾಜರೆಲ್ಲರಿಗೂ ಲಗ್ನಪತ್ರಿಕೆಗಳು ಬರೆಯಿಸಿ ಕಳುಹಿಸಲ್ಪಡಲು, ಅವರೆಲ್ಲರೂ ಅಲ್ಲಿಗೆ ಬಂದು ಸೇರಿದರು. ವಿವಾಹ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ರಾಜನು ಅಳಿಯನಿಗೂ, ಮಗಳಿಗೂ ನಾನಾ ವಿಧಗಳಾದ ದ್ರವ್ಯಾಲಂಕಾರಗಳನ್ನೂ, ದಾನಗಳನ್ನೂ ಕೊಟ್ಟನು. ರಾಜರೆಲ್ಲರನ್ನೂ ಸನ್ಮಾನಿಸಿ ಗೌರವದಿಂದ ಕಳುಹಿಸಿದನು. ಅಳಿಯನನ್ನು ಮನೆಯಲ್ಲಿಯೇ ಇರಿಸಿಕೊಂಡನು. ಈ ರಾಜಕುವರನು ಹೆಂಡತಿಯೊಡನೆ ಸ್ನೇಹದಿಂದ ಕಾಲಕಳೆಯುತ್ತಿದ್ದನು. ಈತನೊಂದು ದಿನ ಜಲಕ್ರೀಡೆಗೋಸ್ಕರವಾಗಿ ಸೇನೆಯೊಡನೆ ಹೊರಟು ಕಾಳಿಂದೀ ನದಿಗೆ ಹೋಗಿ ಅಲ್ಲಿ ಜಲಕ್ರೀಡೆಯಾಡುತ್ತಿದ್ದನು. ಜನರೆಲ್ಲರೂ ವಿನೋದವಾಗಿದ್ದರು. ಹೀಗೆ ಜಲಕ್ರೀಡೆಯಾಡುತ್ತಿರುವಾಗ ಈ ರಾಜಪುತ್ರನು ನದಿಯಲ್ಲಿ ಮುಳುಗಿದನು. ಇವನನ್ನು ಹಿಡಿಯಿರಿ, ಹಿಡಿಯಿರಿ, ಎಂದು ಜನರು ಕೂಗುತ್ತಿದ್ದರು. ಸೇನೆಯೆಲ್ಲವೂ ನೋಡುತ್ತಿದ್ದುದೇ ಹೊರತು ರಾಜಪುತ್ರನನ್ನು ತೆಗೆಯಲು ಯತ್ನಿಸಲಿಲ್ಲ. ರಾಜಪುತ್ರನು ಕಾಣಿಸಲಿಲ್ಲ. ಸೇನೆಯ ಜನರೆಲ್ಲರೂ ನದಿಯ ಇಕ್ಕಡೆಗಳಲ್ಲಿಯೂ ಓಡ್ಯಾಡುತ್ತಾ ಅಳಿಯನು ಮುಳುಗಿದನು, ಎಂದು ಕೂಗಿದರು. ಇದನ್ನು ಕೇಳಿ- ರಾಜನು ಮೂರ್ಛಿತನಾಗಿ ಭೂಮಿಯ ಮೇಲೆ ಬಿದ್ದನು. ಸೀಮಂತಿನಿಯು ತನ್ನ ಪತಿಯ ಮರಣವನ್ನು ಕೇಳಿ ಪ್ರಾಣ ಬಿಡಬೇಕೆಂದು ಯೋಚಿಸುತ್ತಿದ್ದಳು. ರಾಜನು ಮಗಳನ್ನು ಸಮಾಧಾನಪಡಿಸುತ್ತಿದ್ದನು. ರಾಜಸ್ತ್ರೀಯರೂ ದುಃಖಿಸಿದರು. ರಾಜಪುತ್ರಿಯು ದೇವನೇ! ತ್ರಿಪುರಾರಿಯೇ! ನಾನು ನಿನ್ನನ್ನು ಮರೆಹೊಗಲಾಗಿ ನನ್ನ ಪತಿಗೆ ಮರಣವು ಹೇಗೆ ಬಂದಿತು? ನನಗೆ ಹದಿನಾಲ್ಕನೇ ವಯಸ್ಸಿನಲ್ಲಿ ವಿಧವತ್ವ ಬಂದೀತೆಂದು ತಿಳಿದು ನಿಮ್ಮ ಚರಣವನ್ನು ನಂಬಿ ಸೋಮವಾರ ವ್ರತನನ್ನು ಮಾಡಿದೆನು. ಸಕಲರಿಗೂ ಇಷ್ಟಾರ್ಥಗಳನ್ನು ಕೊಡುವ ನೀನು ನನ್ನನ್ನು ಮಾತ್ರ ಉಪೇಕ್ಷಿಸಿದೆಯಾ? ಮರೆಹೊಕ್ಕವ

ರನ್ನು ರಕ್ಷಿಸದಿರಲು ನಿನಗೆ ಅಪಕೀರ್ತಿಯುಂಟಾಯಿತು. ಶ್ರೀಗುರು ವನ್ನು ನೆನೆದು ಯಾಜ್ಞವಲ್ಕ್ಯರ ಪತ್ನಿಯು ಹೇಳಿದಂತೆ ವ್ರತ ಮಾಡಿ ದೆನು. ನನಗೆ ಸ್ಥಿರಸೌಭಾಗ್ಯವುಂಟಾದೀತೆಂದು ಭವಾನೀಶ್ವರನನ್ನು ಪೂಜಿಸಿದೆನು. ಇದು ವ್ಯರ್ಥವಾಯಿತು, ಎಂದಳುತ್ತಾ ಗಂಗೆಯನ್ನು ಪ್ರವೇಶಿಸುವೆನೆಂದು ಹೊರಟಳು. ರಾಜನು ಮಗಳ ದುಃಖವನ್ನು ನೋಡಿ ತಬ್ಬಿಕೊಂಡು ತಾನೂ ದುಃಖಿಸಿದನು. ಮಂತ್ರಿ ಪುರೋ ಹಿತರೂ, ಸೈನ್ಯದವರೂ ಎಲ್ಲರೂ ಅತಿಯಾಗಿ ದುಃಖಿಸಿದರು. ನಾವಿಕರನೇಕರನ್ನು ಕರೆಯಿಸಿ ನದಿಯಲ್ಲಿ ಹುಡುಕಿರೆಂದು ಆಜ್ಞಾಪಿಸಿ ದರು. ಹುಡುಕಿದರೂ ಸಿಕ್ಕಲಿಲ್ಲ. ಸೀಮಂತಿನಿಯು ದುಃಖಿಸಿದಳು. ರಾಜನು ಮಗಳನ್ನು ಸಮಾಧಾನಮಾಡುತ್ತಿದ್ದನು. ಈ ರಾಜಕುವರನ ಮರಣವಾರ್ತೆಯನ್ನು ಸೇವಕರು ಹೋಗಿ ಇಂದ್ರಸೇನ ರಾಜನಿಗೆ ತಿಳಿಸಿದರು. ಅವನೂ ರಾಣಿಯೊಡನೆ ಬಂದನು. ಈ ರಾಜರಿಬ್ಬರೂ ದುಃಖಿಸಿದರು. ಇಂದ್ರಸೇನನು ಅಪ್ಪಾ ಮಗನೇ ಎಂದಳುತ್ತಾ ಎದೆಯನ್ನೂ, ತಲೆಯನ್ನೂ ಹೊಡೆದುಕೊಂಡು ಅತ್ತನು. ಮಂತ್ರಿ ಗಳೂ, ನಾಗರಿಕರೂ ದುಃಖಿಸಿದರು. ಸೀಮಂತಿನಿಯು ಪತಿಯು ಬಿದ್ದ ಸ್ಥಳವನ್ನು ಕೇಳಿ ಹಣೆಯನ್ನು ಕುಟ್ಟಿಕೊಂಡು ಅತ್ತಳು. ಈಕೆಯ ದುಃಖಕ್ಕೆ ಪಾರವಿಲ್ಲವಾಯಿತು. ಈಕೆಯು ತಂದೆಯಂ ಕುರಿತು ಅಪ್ಪಾ, ನಾನು ವೈಧವ್ಯ ದುಃಖವನ್ನು ಸಹಿಸಲಾರೆನು. ನಾನು ಪ್ರಾಣ ಬಿಡುವೆನು, ಎಂದಳು. ಆಗ ಬ್ರಾಹ್ಮಣರು ಪತಿಯ ಶವವು ಸಿಕ್ಕದಿರಲು ಸಹಗಮನವು ಕೂಡದು. ಪ್ರೇತವನ್ನು ಶೋಧಿಸ ಬೇಕು. ಇದು ಸಿಕ್ಕಿದರೆ ಕನ್ಯೆಯು ಸಹಗಮನ ಮಾಡಬೇಕು. ಅದುವರೆಗೆ ಕಾದಿರಬೇಕು, ಎಂದು ಹೇಳಿದರು. ರಾಜನು ಇದರಂತೆಯೇ ಸಮಾಧಾನಮಾಡಿದನು. ಮಂತ್ರಿ ಪುರೋಹಿತಾದಿಗಳು ರಾಜನನ್ನು ಕುರಿತು ಅಯ್ಯಾ, ಆಗತಕ್ಕದ್ದು ಬ್ರಹ್ಮಾದಿಗಳಿಗೂ ತಪ್ಪದು. ದುಃಖಿಸಿ ಫಲವೇನು? ಎಂದರು. ಇಬ್ಬರು ರಾಜರೂ ದುಃಖದಿಂದ ತಮ್ಮ ಮನೆಗಳಿಗೆ ಹೋದರು. ಇಂದ್ರಸೇನನು ಪುತ್ರಶೋಕವನ್ನು ಮರೆಯ ಲಿಲ್ಲ. ಈ ಚಿಂತೆಯಿಂದ ರಾಜ್ಯವ್ಯವಹಾರವನ್ನು ಬಿಟ್ಟನು. ಇವನ ದಾಯಾದಿಗಳು ಇವನ ರಾಜ್ಯವನ್ನಪಹರಿಸಿ ಈ ಇಂದ್ರಸೇನನನ್ನು

ರಾಣಿಯೊಡನೆ ಸೆರೆಯಲ್ಲಿಟ್ಟರು. ಚಿತ್ರವರ್ಮನು ಮಗಳಿಗಾಗಿ ಪ್ರಾಣ ಬಿಡಲು ಯೋಚಿಸುತ್ತಾ ಜನನಿಂದೆಗಾಗಿ ಸುಮ್ಮನಾದನು. ಇವನು ಮಗಳನ್ನು ಕುರಿತು ಅಮ್ಮಾ, ನನಗೆ ಗಂಡು ಮಗನಿಲ್ಲ. ನೀನೇ ಮಗನೆಂದು ತಿಳಿದಿರುವೆನು. ಮಗಳೇ ನೀನು ವೈಧವ್ಯ ಧರ್ಮದಂತೆ ನಡೆಯಬೇಕು. ಇಲ್ಲದಿರಲು ಜನರು ನಿಂದಿಸುವರು, ಎಂದನು. ತಂದೆಯ ಮಾತನ್ನು ಕೇಳಿ ಸೀಮಂತಿನಿಯು ಬಹಳವಾಗಿ ಚಿಂತಿಸಿ ಶೂಲಪಾಣಿಯೇ, ಇಂಥಾ ದುಃಖವನ್ನೇಕೆ ಕೊಟ್ಟೆ? ನಿನ್ನ ವ್ರತವನ್ನು ಮಾಡಿ ಉಪವಾಸದಿಂದ ಪೂಜಿಸಿದೆನು, ಎಂದು ದುಃಖಿಸುತ್ತಿದ್ದಳು. ಇತ್ತ ರಾಜಪುತ್ರನು ಗಂಗೆಯಲ್ಲಿ ಮುಳುಗಲು ನಾಗಕನ್ಯೆಯರು ಅಲ್ಲಿಗೆ ಬಂದು ನದಿಯಲ್ಲಿ ತೇಲಿಹೋಗುವ ರಾಜಪುತ್ರನನ್ನು ಹಿಡಿದು ಅಮೃತವನ್ನು ಸಿಂಪಡಿಸಿ ಎಚ್ಚರವನ್ನುಂಟುಮಾಡಿ ಪಾತಾಳಕ್ಕೆ ತಕ್ಷಕನ ಹತ್ತಿರಕ್ಕೆ ತೆಗೆದುಕೊಂಡು ಹೋದರು. ರಾಜಪುತ್ರನು ಆ ವಿಚಿತ್ರವಾದ ಭೋಗವತೀ ನಗರವನ್ನು ನೋಡುತ್ತಿದ್ದನು. ಈ ರಾಜಧಾನಿಯು ಅಮರಾವತಿಯಂತೆ ಗೋಪುರಗಳಿಂದ ಶೋಭಿಸುತ್ತಿತ್ತು. ಗೋಪುರಗಳಲ್ಲಿ ಮಿಂಚಿನಂತೆ ಹೊಳೆಯುವ ರತ್ನಗಳು ಕೆತ್ತಲ್ಪಟ್ಟಿದ್ದುವು. ಇಂದ್ರನೀಲವೂ, ವೈಡೂರ್ಯವೂ, ಮಾಣಿಕ್ಯವೂ, ಮುತ್ತುಗಳೂ ಇವುಗಳಿಂದಲಂಕೃತವಾದ ಈ ನಗರಿಯು ಸೂರ್ಯನಂತೆ ಹೊಳೆಯುತ್ತಿತ್ತು. ಅಲ್ಲಿನ ಭೂಮಿಯು ಚಂದ್ರನಂತೆ ಕಾಂತಿಯುಕ್ತವಾಗಿತ್ತು. ಅಲ್ಲಿನ ಹೆಬ್ಬಾಗಿಲು ಸುವರ್ಣ ರತ್ನಾದಿಗಳಿಂದ ನಿರ್ಮಿತವಾಗಿತ್ತು. ಇಂಥಾ ಮಂದಿರವನ್ನು ಹೊಕ್ಕನು. ಅಲ್ಲಿನ ರಾಜಸಭೆಗೆ ಹೋಗಿ ನೋಡಲು ಅಲ್ಲಿನ ಸಭಿಕರೆಲ್ಲರೂ ಸರ್ಪಾಕಾರವುಳ್ಳವರಾಗಿದ್ದರು. ಆ ಸಭಾಮಧ್ಯದಲ್ಲಿ ಪನ್ನಗೇಶ್ವರನು ಉನ್ನತ ಪೀಠದಲ್ಲಿ ಸೂರ್ಯನಂತೆ ಕಾಂತಯುಳ್ಳವನಾಗಿದ್ದನು. ಈತನು ಸಾವಿರ ಹೆಡೆಗಳುಳ್ಳವನಾಗಿಯೂ, ಮಿಂಚಿನಂತೆ ಹೊಳೆಯುತ್ತಾ ಪೀತಾಂಬರಧಾರಿಯಾಗಿ ರತ್ನಕುಂಡಲಗಳನ್ನು ಧರಿಸಿದ್ದನು. ಮತ್ತೂ ಅನೇಕ ರತ್ನಗಳಿಂದ ಕೆತ್ತಲ್ಪಟ್ಟ ಕಿರೀಟವನ್ನು ಧರಿಸಿದ್ದನು. ಈ ರೀತಿಯಿಂದ ನಾಗರಾಜನು ಹೊಳೆಯುತ್ತಿದ್ದನು. ರೂಪ ಯೌವನವುಳ್ಳ ನಾಗಕನ್ಯೆಯರನೇಕರು ತಕ್ಷಕನನ್ನು ಸೇವಿಸುತ್ತಿದ್ದರು. ಈ ರಾಜಪುತ್ರನು ನಾಗರಾಜನನ್ನು ನೋಡಿ ಸಾಷ್ಟಾಂಗ ನಮಸ್ಕಾರ ಮಾಡಿದನು.

ಆಗ ತಕ್ಷಕನು ನಾಗಕನ್ಯೆಯರನ್ನು ಕುರಿತು ಈತನು ಯಾವ ರಾಜಕುಮಾರನು? ಸುಲಕ್ಷಣನಾದೀತನನ್ನು ಇಲ್ಲಿಗೇಕೆ ತಂದಿರಿ? ಇವನೆಲ್ಲಿದ್ದನು? ಎಂದು ಕೇಳಿದನು. ಆಗ ನಾಗಕನ್ಯೆಯರು ಸ್ವಾಮಿಾ, ಈತನು ಯಮುನಾ ನದಿಯಲ್ಲಿ ತೇಲಿಹೋಗುತ್ತಿದ್ದನು. ನಾವು ಇವನನ್ನು ತೆಗೆದುಕೊಂಡು ಬಂದೆವು, ಎಂದರು. ಬಳಿಕ ನಾಗರಾಜನು ಈ ರಾಜಪುತ್ರನಂ ಕುರಿತು ಎಲೈ ನೀನು ಯಾರು? ಯಾವ ವಂಶದವನು? ಯಾವ ದೇಶಸ್ಥನು? ಎಂದು ಕೇಳಲು, ಸ್ವಾಮಿಾ, ಭೂಮಂಡಲದ ನಿಷಧದೇಶಾಧೀಶ್ವರನಾದ ನಳ ಚಕ್ರವರ್ತಿಯೆಂಬವನು ಪುಣ್ಯಶ್ಲೋಕನಾಗಿದ್ದನಷ್ಟೆ? ಇವನ ಪುತ್ರನಾದ ಇಂದ್ರಸೇನನೇ ನನ್ನ ತಂದೆಯು. ನನ್ನ ಹೆಸರು ಚಿತ್ರಾಂಗದನು. ನಾನು ಮಾವನ ಮನೆಯಲ್ಲಿದ್ದು ಜಲಕ್ರೀಡೆಯಾಡುತ್ತಿರಲು ಆ ಯಮುನಾ ನದಿಯಲ್ಲಿ ಮುಳುಗಿದೆನು. ಈ ನಾಗಕನ್ಯೆಯರು ನನ್ನನ್ನಿಲ್ಲಿಗೆ ತಂದರು. ಪೂರ್ವಾರ್ಜಿತ ಪುಣ್ಯವಶದಿಂದ ತಮ್ಮ ಚರಣಸಂದರ್ಶನವಾಯಿತು. ಈಗ ನನ್ನ ಜೀವನವು ಧನ್ಯವಾದುದು. ಕೃತಾರ್ಥನಾದೆನು, ಎಂದನು. ಈತನ ನಯವಚನವನ್ನು ಕೇಳಿ ತಕ್ಷಕನು ಆನಂದದಿಂದ ರಾಜಕುಮಾರನೇ, ಹೆದರದಿರು. ನೀನು ನಿರ್ಮಲಚಿತ್ತನಾಗಿದ್ದೀಯೆ. ನಿಮ್ಮ ಮನೆಯಲ್ಲಿ ಯಾವ ದೇವರನ್ನು ಪೂಜಿಸುವಿರಿ? ಎಂದು ಕೇಳಿದನು. ಆಗ ರಾಜಕುಮಾರನು ಸಂತೋಷದಿಂದ ಸ್ವಾಮಿಾ, ಶಂಕರನೇ ನಮಗೆ ದೇವರು. ಸಕಲ ದೇವತೆಗಳಿಗೂ ದೇವನಾದವನು ಸದಾಶಿವನು. ಇವನನ್ನು ಪೂಜಿಸುವೆವು. ಶಿವನೇ ನಮಗೆ ದೇವರು. ಸತ್ವಗುಣಪ್ರಧಾನನಾದ ವಿಷ್ಣುವು ಸಕಲರನ್ನೂ ರಕ್ಷಿಸುವನು. ತಮೋಗುಣವುಳ್ಳ ಏಕಾದಶ ರುದ್ರರು ಪ್ರಳಯಕಾರಿಗಳಾಗಿದ್ದಾರೆ. ಬ್ರಹ್ಮನೇ ತಾನಾಗಿ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಕಾರಣನಾದ ತೇಜಸ್ಸಿಗೆ ತೇಜಸ್ಸ್ವರೂಪನಾದಂಥವನಾಗಿಯೂ, ಪೃಥಿವ್ಯಾಪಸ್ತೇಜೋವಾಯು ರಾಕಾಶಗಳಲ್ಲಿ ವ್ಯಾಪ್ತನಾಗಿಯೂ, ಸರ್ವಭೂತಗಳಲ್ಲಿ ಪರಿಪೂರ್ಣನಾಗಿಯೂ, ಚಿನ್ಮಯನಾಗಿಯೂ, ನಿರಂಜನನಾಗಿಯೂ, ಅಚಿಂತನೀಯ ರೂಪವುಳ್ಳವನಾಗಿಯೂ ಇರುವ ಈಶ್ವರನನ್ನು ಪೂಜಿಸುವೆವು. ಯಾರ ಚರಿತ್ರೆಯೇ ವೇದಗಳಾಗಿರುವುವೋ, ಯಾವ ತಕ್ಷಕನು

ಕುಂಡಲಗಳಾಗಿರುವನೋ ಆ ತ್ರಿಣೇತ್ರನಾದ ಚಂದ್ರಮೌಳಿಯನ್ನು ನಾವು ಪೂಜಿಸುವೆವು, ಎಂದನು. ಈ ಮಾತನ್ನು ಕೇಳಿ ತಕ್ಷಕನು ಸಂತೋಷಿತನಾಗಿ ರಾಜಪುತ್ರನನ್ನು ತಬ್ಬಿಕೊಂಡು ರಾಜಪುತ್ರನೇ, ನೀನು ಈ ಪಾತಾಳದಲ್ಲಿದ್ದು ಭಾಗ್ಯವಂತನಾಗಿ ಸುಖವಾಗಿರು. ನಿನಗೆ ರಾಜ್ಯವನ್ನೂ, ನನ್ನ ಲೋಕದಲ್ಲಿರುವ ರತ್ನಗಳೆಲ್ಲವನ್ನೂ ಕೊಡುವೆನು. ಈ ಪಾತಾಳದ ರಚನೆಯನ್ನು ನೋಡು. ನಮ್ಮ ನಗರದಲ್ಲಿ ಮನೋಹರವಾದ ಕಲ್ಪವೃಕ್ಷಗಳಿವೆ. ಅಮೃತವನ್ನು ನೀನು ಸ್ವಪ್ನದಲ್ಲಿಯೂ ಕಾಣೆಯಷ್ಟೆ? ನೀರಿನಿಂದ ತುಂಬಿದ ಕೆರೆಗಳಂತೆ ಅಮೃತದಿಂದ ತುಂಬಿದ ಕೆರೆ ಭಾವಿಗಳಿವೆ. ಇಲ್ಲಿದ್ದರೆ ನಿನಗೆ ಮರಣವಿಲ್ಲ. ಸ್ವಪ್ನದಲ್ಲಿಯೂ ರೋಗಭಯವಿಲ್ಲ. ಇಲ್ಲಿ ಸುಖವಾಗಿರು, ಎಂದು ತಕ್ಷಕನು ಹೇಳಿದನು. ಈ ಮಾತನ್ನು ಕೇಳಿ ರಾಜಪುತ್ರನು ನಾಗ ರಾಜನೇ, ನನ್ನ ತಂದೆಗೆ ನಾನೊಬ್ಬನೇ ಮಗನು. ಹದಿನಾಲ್ಕು ವರ್ಷ ವಯಸ್ಸಿನವಳಾದ ನನ್ನ ಹೆಂಡತಿಯು **ಸದಾಶಿವಪೂಜಾನಿರತಳಾಗಿರು** ವಳು. ನನ್ನ ತಾಯಿತಂದೆಗಳ ಚರಣಂಗಳನ್ನು ನೋಡಲು ಸಕಲೇಷ್ಟ ಗಳೂ ಉಂಟಾದಂತಾಗುವುದು. ನಾನು ನೀರಿನಲ್ಲಿ ಮುಳುಗಿದೆನೆಂದು ತಿಳಿದು ತಾಯಿತಂದೆಗಳೂ, ಮಾವನೂ ದುಃಖಿಸುವರು. ನನ್ನ ಪತ್ನಿಯು ಜೀವವನ್ನು ಬಿಟ್ಟಾಳು! ಇದು ಸತ್ಯವು. ನನಗೆ ಸ್ತ್ರೀಹತ್ಯಾ ದೋಷವುಂಟಾದೀತು. ನಿಮ್ಮ ಚರಣಗಳನ್ನು ನೋಡಿ ಧನ್ಯನಾದೆನು. ನನ್ನ ಪ್ರಾಣವನ್ನುಳಿಸಿದಿರಿ. ನನ್ನ ತಾಯಿತಂದೆಗಳ ದರ್ಶನಮಾಡಿಸಿರಿ, ಎಂದು ಬೇಡಿಕೊಂಡನು. ತಕ್ಷಕನು ಸಂತೋಷಿತನಾಗಿ ಇವನಿಗೆ ನಾನಾ ವಿಧ ರತ್ನಗಳನ್ನು ಕೊಟ್ಟು, ಅಮೃತಪಾನ ಮಾಡಿಸಿ, ಸ್ವಲ್ಪ ಅಮೃತವನ್ನು ನಿನ್ನ ಪತ್ನಿಗೆ ಕೊಡೆಂದು ಕೊಟ್ಟು, ಕಲ್ಪವೃಕ್ಷದ ಫಲ ಗಳನ್ನೂ, ನಾನಾ ವಿಧಗಳಾದ ಆಭರಣಗಳನ್ನೂ, ಭೂಮಿಯಲ್ಲಿನ ಅಮೌಲ್ಯ ವಸ್ತುಗಳನ್ನೂ ಕೊಟ್ಟು, ನೀನು ನನ್ನನ್ನು ಯಾವಾಗ ಸ್ಮರಿಸುವೆಯೋ ಆಗ ನಾನು ಬಂದು ನಿನ್ನ ಕಾರ್ಯವನ್ನು ಸಾಧಿಸಿ ಕೊಟ್ಟು ಬರುವೆನೆಂದು ಹೇಳಿ ಸಂತೋಷದಿಂದ ವಸ್ತ್ರವಾಹನಗಳನ್ನೂ, ಮನೋವೇಗವುಳ್ಳ ಕುದುರೆಯನ್ನೂ ಇವನಿಗೆ ಕೊಟ್ಟು, ನಿರೂಪ ಕೊಟ್ಟು, ಕಳುಹಿಸಿದನು. ರಾಜಪುತ್ರನು ತಕ್ಷಕನನ್ನು ವಂದಿಸಿ,

ಅಶ್ವಾರೂಢನಾಗಿ ನಾಗಕುಮಾರನೊಡನೆ ವೇಗದಿಂದ ಬಂದು ಇವನು ಎಲ್ಲಿ ಮುಳುಗಿದ್ದನೋ ಅಲ್ಲಿಗೆ ಕ್ಷಣಕಾಲದಲ್ಲಿಯೇ ಬಂದು, ಆ ಯಮುನಾ ನದಿಯ ನೀರಿನಿಂದೆದ್ದು ದಡಕ್ಕೆ ಬಂದು ನಿಂತನು. ಆ ದಿನ ಸೋಮವಾರವಾದುದರಿಂದ ಸೀಮಂತಿನಿಯು ಸಖಿಯರೊಡನೆ ಬಂದಿದ್ದಳು. ನೀರಿನಿಂದ ಯಾರು ಎದ್ದು ಬಂದಾರು? ನಾಗಕುಮಾರನೇ ಸರಿಯೆಂದು ಆಶ್ಚರ್ಯವುಳ್ಳವಳಾದಳು. ಯಾವನೋ ಒಬ್ಬ ರಾಕ್ಷಸನೇ ಈ ರೀತಿಯಿಂದ ನರರೂಪವನ್ನು ಧರಿಸಿ ಬಂದಿರಬಹುದೋ ಎಂದು ಯೋಚಿಸಿದಳು. ಅಶ್ವಾರೂಢನಾಗಿ ಮನೋಹರನಾಗಿ ಕಾಣಿಸುವ ಈತನು ಸೂರ್ಯನಂತೆ ಪ್ರಕಾಶಿಸುತ್ತಾ, ದಿವ್ಯಮಾಲ್ಯಾಂಬರಧಾರಿಯಾಗಿಯೂ ಇರುವ ಈತನು ಧರಿಸಿದ ಸುವಾಸನಾದ್ರವ್ಯದ ವಾಸನೆಯು ಹತ್ತು ಗಾವುದದ ವರೆಗೆ ಹರಡುತ್ತಿರುವುದು. ಈ ರೂಪವಂತನನ್ನು ಮೊದಲು ಎಲ್ಲಿಯೋ ನೋಡಿದಂತಿದೆ, ಎಂದು ಭೀತಳಾಗಿ ಅವನ ರೂಪವನ್ನು ನೋಡಿದಳು. ತನ್ನ ಪತಿಯ ಹೋಲಿಕೆಯು ಕಾಣಲು ಅನುಮಾನಿಸುತ್ತಿದ್ದಳು. ರಾಜಪುತ್ರನು ಈಕೆಯನ್ನು ನೋಡಿ ಈಕೆಯ ಕಂಠದಲ್ಲಿ ಮಂಗಳಸೂತ್ರವಿಲ್ಲ, ಮುತ್ತಿನ ಸರಗಳಿಲ್ಲ, ದೇಹದಲ್ಲಿ ಅರಿಶಿನ ಕುಂಕುಮವನ್ನು ಧರಿಸಿಲ್ಲ, ಕೈಗಳಲ್ಲಿ ಕಂಕಣಗಳಿಲ್ಲ, ಆದುದರಿಂದ ಈತನು ಈಕೆಯು ತನ್ನ ಪತ್ನಿಯು ಅಹುದೇ ಅಲ್ಲವೇ ಎಂದು ಯೋಚಿಸಿ, ಎಲೌ ಸ್ತ್ರೀಯಳೇ, ನೀನು ಯಾರ ಮಗಳು? ನಿನ್ನ ಪತಿ ಯಾರು? ಈ ಬಾಲ್ಯದಲ್ಲಿ ನೀನು ದುಃಖಿನಿಯಾಗಿಯೂ, ನಿನ್ನ ಮುಖವು ಕಾಂತಿಹೀನವಾಗಿಯೂ ಇರಲು ಕಾರಣವೇನು? ಎಂದು ಪ್ರೇಮದಿಂದ ಕೇಳಿದನು.

ಸೀಮಂತಿನಿಯು ಈ ಮಾತುಗಳನ್ನು ಕೇಳಿ ಮಾತನಾಡದೇ ಲಜ್ಜೆಯಿಂದ ತನ್ನ ಸಖಿಗೆ ತನ್ನ ವೃತ್ತಾಂತವನ್ನು ಹೇಳೆಂದಳು. ಆಗ ಸಖಿಯು ಈಕೆಯ ಹೆಸರು ಸೀಮಂತಿನಿಯು; ಈಕೆಯು ಚಿತ್ರಾಂಗದನ ರಾಣಿಯು; ಈಕೆಯು ಚಿತ್ರವರ್ಮ ರಾಜನ ಪುತ್ರಿಯು; ಈಕೆಯ ಪತಿಯಾದ ಅತಿ ಸುಂದರನಾಗಿದ್ದ ಚಿತ್ರಾಂಗದನು ಇಲ್ಲಿ ಜಲಕ್ರೀಡೆ ಯಾಡುತ್ತಿರಲು ನದಿಯಲ್ಲಿ ಮುಳುಗಿದನು; ಇದರಿಂದೀಕೆಗೆ ವೈಧವ್ಯವುಂಟಾಯಿತು; ಇದರಿಂದ ಈಕೆಯು ನಿತ್ಯವೂ ದುಃಖಿಸುತ್ತಿರುವಳು;

ಈಕೆಯ ಸೌಂದರ್ಯವು ಶೂನ್ಯವಾಯಿತು; ಸೋಮವಾರ ವ್ರತವನ್ನು ಮಾಡುವೇಕೆಯು ಈ ದಿನ ನದಿಯ ಸ್ನಾನಕ್ಕೆ ಬಂದಿರುವಳು; ಈಕೆಯ ಮಾವನು ಪುತ್ರಶೋಕದಿಂದ ದುಃಖಿತನಾಗಿರುವನು; ಅವನ ಶತ್ರುಗಳು ಅವನ ರಾಜ್ಯವನ್ನಪಹರಿಸಿ ಅವನನ್ನು ಸೆರೆಯಲ್ಲಿಟ್ಟಿರುವರು; ಈ ಸೀಮಂತಿನಿಯು ಪ್ರತಿ ಸೋಮವಾರವೂ ಉಪವಾಸಮಾಡಿ ಶೂಲ ಪಾಣಿಯನ್ನು ಪೂಜಿಸುವಳು, ಎಂದು ಹೇಳಿದಳು. ಬಳಿಕ ಸೀಮಂತಿ ನಿಯು ಈ ರಾಜಪುತ್ರನನ್ನು ಕುರಿತು, ಕಂದರ್ಪನಂತೆ ರೂಪವುಳ್ಳ ನೀವು ಯಾರು? ನನ್ನನ್ನು ಈ ರೀತಿಯಿಂದ ವಿಚಾರಿಸಲು ಕಾರಣ ವೇನು? ನೀವು ಗಂಧರ್ವರೋ? ಕಿನ್ನರರೋ? ಸಿದ್ಧರೋ? ನರರೂಪ ವನ್ನು ಧರಿಸಿ ನನ್ನನ್ನು ವಿಚಾರಿಸಲು ಕಾರಣವೇನು? ನಿಮ್ಮನ್ನು ಮೊದಲು ಎಲ್ಲಿಯೋ ನೋಡಿದಂತಿದೆ. ಗುರುತು ತಿಳಿಯಲಿಲ್ಲ. ಆಪ್ತ ರಾದ ಸ್ವಜನರೆಂದು ಊಹಿಸುವೆನು. ನಿಮ್ಮ ಹೆಸರೇನು? ಎಂದು ಕೇಳಿದಳು. ಪತಿರೂಪವನ್ನು ನೆನೆದು ಅತಿಯಾಗಿ ಗೋಳಾಡಿದಳು. ನೆಲದಲ್ಲಿ ಬಿದ್ದು ಕಣ್ಣೀರನ್ನು ಸುರಿಯಿಸಿ ದುಃಖಿಸಿದಳು. ಈಕೆಯ ದುಃಖವನ್ನು ನೋಡಿ ರಾಜಪುತ್ರನು ಒಂದು ಮುಹೂರ್ತಕಾಲ ಮನಸ್ಸನ್ನು ದೃಢಪಡಿಸಿಕೊಂಡು ತಾನೂ ದುಃಖಿಸಿದನು. ಎಲೌ ಸ್ತ್ರೀಯಳೇ, ನಿನ್ನ ಮುಖವನ್ನು ತೊಳೆದುಕೊ. ದುಃಖಿಸದೇ ಸುಮ್ಮನಿರು. ನನ್ನ ಹೆಸರು ಸಿದ್ಧನೆಂದು ಪ್ರಸಿದ್ಧಿಯಾಗಿದೆ, ಎಂದು ಸೀಮಂತಿನಿಯ ಹತ್ತಿರ ಬಂದು ಪ್ರೇಮದಿಂದ ಸಮಾಧಾನಮಾಡಿ, ನಿನ್ನ ಪತಿಯನ್ನು ನಾನು ಜ್ಞಾನದೃಷ್ಟಿಯಿಂದ ಕಂಡೆನು. ನೀನು ಸುಖದಿಂದಿರು. ನಿನ್ನ ಪುಣ್ಯಪ್ರಭಾವದಿಂದ ನಿನ್ನ ಪತಿಯನ್ನು ಬೇಗನೆ ನೋಡುವೆ. ಚಿಂತಿಸದಿರು. ಇಂದಿಗೆ ಮೂರನೆಯ ದಿನದಲ್ಲಿ ನಿನ್ನ ಪತಿಯನ್ನು ಕಾಣುವೆ. ನಿನ್ನ ಪತಿಯು ನನ್ನ ಮಿತ್ರನು. ಅವನೇ ನನ್ನ ಪ್ರಾಣಸಮನು. ಸಂದೇಹ ಬೇಡ. ಇದಕ್ಕೆ ಶಿವನೇ ಸಾಕ್ಷಿ ಯಾಗಿರುವನು. ಇದು ನಿಜವು. ಇದನ್ನು ಪ್ರಕಟಿಸದಿರು, ಎಂದು ಏಕಾಂತದಲ್ಲಿ ಹೇಳಿದನು. ಸೀಮಂತಿನಿಯು ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಪ್ರೇಮದಿಂದ ಬಿಕ್ಕಿ ಬಿಕ್ಕಿ ಅಳುತ್ತಾ ಇವನೇ ತನ್ನ ಪತಿಯಾಗಿರಬಹುದೆಂದು ಊಹಿಸಿದಳು. ಪತಿಯಂತೆ ಮುಖಕಮಲವೂ

ಸುಂದರಗಳಾದ ಕಣ್ಣುಗಳೂ, ಮಂಜುಳವಾದ ಕಂಠಸ್ವರವೂ, ಮೃದು ವಾಣಿಯೂ ಇರುವುವು. ನನ್ನ ಕೈಯನ್ನು ಹಿಡಿದಾಗ ಆತನ ಕರವು ಮೃದುವಾಗಿ ತೋರಿತು. ನನ್ನ ಪತಿಯ ಲಕ್ಷಣವನ್ನು ಬಲ್ಲೆನು. ನನ್ನ ಪತಿಯ ಚಿಹ್ನೆಗಳೆಲ್ಲವೂ ಈತನಲ್ಲಿವೆ. ಈತನೇ ಪತಿಯು ನಿಜವು, ಎಂದು ಇವನನ್ನು ನೋಡಿ ಕಣ್ಣಿನಲ್ಲಿ ನೀರನ್ನು ಸುರಿಸಿ ಅನುಮಾನಿಸುತ್ತಿದ್ದಳು. ನಾನು ದೈವಹೀನೆಯು, ನನ್ನ ಪತಿಯು ಎಲ್ಲಿ ಬಂದಾನು? ನದಿಯಲ್ಲಿ ಮುಳುಗಿದನು. ಸತ್ತುಹೋದ ಪತಿಯು ಒಂದುದನ್ನು ನಾನು ನೋಡಲಿಲ್ಲ, ಕೇಳಲೂ ಇಲ್ಲ. ಇದು ಸ್ವಪ್ನವೋ? ಭ್ರಾಂತಿಯೋ? ಈತನು ಧೂರ್ತನಾದ ವೇಷಧಾರಿಯಾಗಿರುವನು. ಯಕ್ಷನೋ? ರಕ್ಕಸನೋ? ಕಿನ್ನರನೋ? ಕಪಟಕೃತ್ಯವುಳ್ಳವನಾಗಿ ಕಾಣುವನು, ಎಂದು ನಾನಾ ವಿಧದಿಂದ ಊಹಿಸುತ್ತಿದ್ದಳು. ಮತ್ತು ನಾನು ಶೈವವ್ರತವಂ ಮಾಡಿದುದರಿಂದ ಗಿರಿಜಾನಾಥನು ನನ್ನ ಸಂಕಟವನ್ನು ತಿಳಿದು ನನ್ನನ್ನು ಪರೀಕ್ಷಿಸಲು ಬಂದಿರುವನೇ? ಶಂಕರನು ಪ್ರಸನ್ನನಾದರೆ ಯಾರಿಗೆ ದುಃಖವುಂಟಾದೀತು? ಎಂದು ಯೋಚಿಸುತ್ತಿದ್ದಳು. ಈ ರಾಜಪುತ್ರನು ಪ್ರೀತಿಯಿಂದ ಸೀಮಂತಿನಿಯನ್ನು ಸಮಾಧಾನಮಾಡಿ ಕುದುರೆಯನ್ನು ಹತ್ತಿ ಹೊರಟುಹೋದನು. ಈತನು ವಾಸುಕಿ ಪುತ್ರನಂ ಕುರಿತು ನಾಗಕುಮಾರನೇ, ನೀನು ಬೇಗ ನಮ್ಮ ವೈರಿಗಳ ನಗರಕ್ಕೆ ಹೋಗಿ ನನ್ನ ಮಾತನ್ನು ಹೇಳು:— "ವೈರಿಗಳಿರಾ, ಕೇಳಿರಿ. ನನ್ನ ಮಾತನ್ನು ಯಾರು ಕೇಳರೋ ಅವರನ್ನು ನಾನು ಕೊಲ್ಲುವೆನು" ಎಂದು ಹೇಳು, ಎಂದನು. ನಾಗಪುತ್ರನು ರಾಜಮಂದಿರಕ್ಕೆ ಹೋಗಿ ನಿಂತು ಕಠೋರ ವಚನದಿಂದ ಎಲೈ ಕ್ಷತ್ರಿಯಾಧಮನಾದ ರಾಜನೇ ಕೇಳು:—

"ಚಿತ್ರಾಂಗದನು ಪಾತಾಳಕ್ಕೆ ತಕ್ಷಕನ ದರ್ಶನಕ್ಕೆಂದು ಹೋದ ಕ್ಷಣದಲ್ಲಿಯೇ ನದಿಯಲ್ಲಿ ಮುಳುಗಿದನೆಂದು ಕೇಳಿ ನೀನು ಸ್ವಾಮಿಘಾತ ಮಾಡಿದೆ. ಇಂದ್ರಸೇನನ ರಾಜ್ಯವನ್ನಪಹರಿಸಿದೆ. ನಾನು ಹೇಳುವುದನ್ನು ಕೇಳು. ನಿಮ್ಮೆಲ್ಲರಿಗೂ ಜೀವದಾಶೆಯಿದ್ದರೆ ಆ ಇಂದ್ರಸೇನನನ್ನು ರಾಜನನ್ನಾಗಿ ಮಾಡಿ ಅವನನ್ನು ಮರೆಹೊಗಿರಿ. ಚಿತ್ರಾಂಗದನಿಗೆ ತಕ್ಷಕನ ಸ್ನೇಹವಾಯಿತು. ಇವನಿಗೆ ಒಂಭತ್ತು

ಸಾವಿರ ನಾಗಸೈನ್ಯದ ಬಲವಿದೆ. ಬೇಗನೆ ಚಿತ್ರಾಂಗದನ ಮರೆಹೊಕ್ಕು ಬದುಕಿರಿ. ನನ್ನ ಮಾತನ್ನು ಕೇಳದಿದ್ದರೆ ಈಗ ನಿಮ್ಮನ್ನು ಶಿಕ್ಷಿಸುವುದಕ್ಕಾಗಿ ತಕ್ಷಕನು ನನ್ನನ್ನು ಕಳುಹಿಸಿರುವನು" ಎಂದನು. ಈ ಮಾತುಗಳನ್ನು ಕೇಳಿ ಹಗೆಗಳು ಮನಸ್ಸಿನಲ್ಲಿ ಹೆದರಿದವರಾಗಿ ಅಯ್ಯಾ, ನಾವು ದುರ್ಬುದ್ಧಿಯಿಂದ ರಾಜ್ಯವನ್ನಪಹರಿಸಿದೆವು. ಈಗ ನಾವು ಮರೆಹೊಗುವೆವು. ಇಲ್ಲದಿದ್ದರೆ ತಕ್ಷಕನು ಬಲಾತ್ಕಾರದಿಂದ ನಮ್ಮನ್ನು ಸಂಹರಿಸುವನು. ಲೋಕನಿಂದೆಯು ನಮಗೆ ತಪ್ಪದು. ನಮ್ಮ ಪ್ರಾಣ ಹೋದೀತು, ಎಂದು ಯೋಚಿಸಿ ಸೆರೆಯಲ್ಲಿದ್ದ ಇಂದ್ರಸೇನನನ್ನು ನಾನಾ ವಸ್ತ್ರಾಭರಣಗಳಿಂದಲಂಕರಿಸಿ ಸಿಂಹಾಸನದಲ್ಲಿ ಕುಳ್ಳಿರಿಸಿದರು. ಆಗ ಎಲ್ಲರೂ ಅವನನ್ನು ಕುರಿತು ಮಹಾರಾಜನೇ, ನಮ್ಮಿಂದ ತಪ್ಪಾಯಿತು. ನಮ್ಮ ಪ್ರಾಣವನ್ನು ರಕ್ಷಿಸಿರಿ, ಎಂದು ಇಂದ್ರಸೇನನ ಪಾದಗಳಿಗೆರಗಿದರು. ತಕ್ಷಕ ಪುತ್ರನು ಇಂದ್ರಸೇನ ರಾಜನನ್ನು ಕುರಿತು ಅಯ್ಯಾ, ನಿನ್ನ ಕುಮಾರನು ಪಾತಾಳಕ್ಕೆ ವಾಸುಕಿಯ ಭೇಟಿಗೆ ಹೋಗಿದ್ದು ಈಗ ಬಂದನು, ಎಂದು ಹೇಳಿದನು. ಇದನ್ನು ಕೇಳಿ ಸಂತೋಷದಿಂದ ಮೂರ್ಛಾಗತನಾಗಿ ಬಿದ್ದನು. ನಾಗ ಕುಮಾರನು ಇವನನ್ನೆತ್ತಿ ಸಮಾಧಾನಮಾಡಿದನು. ರಾಜನೇ, ನಿನ್ನ ಕುಮಾರನು ನಿನ್ನ ದರ್ಶನಕ್ಕೆ ಬಂದಿರುವನು. ಈಗ ದುಃಖಿಸುವಿಯೇಕೆ? ಎಂದನು. ಆಗ ರಾಜನು ಸಂತೋಷಿಸಿ ಮಂತ್ರಿಯನ್ನು ಕರೆಯಿಸಿ ನಗರವನ್ನು ಸಿಂಗರಿಸಲು ಅನುಜ್ಞೆಯನ್ನಿತ್ತನು. ಬಳಿಕ ಸಕಲ ಪರಿವಾರದೊಡನೆ ಮಗನನ್ನು ನೋಡಲು ಹೊರಟನು. ಮಂತ್ರಿ ಪುರೋಹಿತಾದಿ ಜನರೆಲ್ಲರೂ ಸತ್ತ ಮಗನು ಬದುಕಿ ಬಂದುದು ಹೇಗೆ? ಈ ಕೌತುಕವನ್ನು ನೋಡೋಣ, ಎಂದು ಬಂದರು. ರಾಜನು ಆನಂದದಿಂದ ಮಗನ ಮುಖವನ್ನು ನೋಡುವೆನೆಂದು ಹೊರಟನು. ಎಲ್ಲರೂ ಸಕಲ ವಾದ್ಯಗಳೊಡನೆ ಜಯ ಜಯವೆನ್ನುತ್ತಾ ಉಲ್ಲಾಸದಿಂದ ಬರುತ್ತಿದ್ದರು.

ರಾಜನು ಹೋಗಿ ಮಗನನ್ನು ನೋಡಲು ಚಿತ್ರಾಂಗದನು ತಂದೆಗೆ ವಂದಿಸಿದನು. ರಾಜನು ಪ್ರೀತಿಯಿಂದ ಮಗನನ್ನು ತಬ್ಬಿಕೊಂಡು ಕಣ್ಣೀರನ್ನು ಸುರಿಸಿದನು. ಇಂದ್ರಸೇನನು ಮಗನನ್ನು

ಕುರಿತು ಮಗನೇ, ನಿನಗಾಗಿ ನಾನು ಅತಿಯಾಗಿ ದುಃಖಿಸಿದೆನು, ಎಂದನು. ತಾಯಿಯೂ ಮಗನನ್ನು ತಬ್ಬಿಕೊಂಡು ದುಃಖಿಸಿದಳು. ರಾಜಪುತ್ರನು ತಾಯಿತಂದೆಗಳನ್ನು ಕುರಿತು ಪಿತೃವರ್ಯರೇ, ನಾನು ನಿಮ್ಮನ್ನು ಅತಿಯಾಗಿ ದುಃಖಪಡಿಸಿದೆನು. ನಾನು ನಿಮ್ಮ ಮಗನಲ್ಲವು, ವೈರಿಯಾದೆನು. ಆದರೆ ನಾನು ಪಾತಾಳ ಲೋಕಕ್ಕೆ ಹೋಗಿ ಮಹಾಶೇಷನ ಹತ್ತಿರ ಸುಖವಾಗಿದ್ದೆನು. ನೀವು ಬಹು ದುಃಖಿಸಿದಿರಿ. ನನ್ನ ಅಂತಃಕರಣವು ಕಠಿಣವಾದುದು. ಅಮ್ಮಾ ನನಗಾಗಿ ನೀನು ಅತಿಯಾಗಿ ದುಃಖಿಸಿದೆ. ತಾಯಿತಂದೆಗಳಿಗೆ ದುಃಖ ಕೊಡುವ ಮಗನು ಶತಮೂರ್ಖನು. ಒಂದು ಗಳಿಗೆಯು ಕಾಲ ತಾಯಿಯ ಸ್ತನ್ಯಪಾನಮಾಡಿದ ಋಣವನ್ನು ಯಾರು ತೀರಿಸುವರು? ಆದುದರಿಂದ ನಾನು ನಿಮ್ಮ ಪುತ್ರನಲ್ಲ. ಏಳು ಜನ್ಮಗಳಲ್ಲಿ ದರಿದ್ರನಾಗುವೆನು, ಎಂದು ತಾಯಿಗೆ ವಿಜ್ಞಾಪಿಸಿದನು. ಬಾಲಕರಿಗೆ ತಾಯಿಯು ವಿನಹ ದೇವರಿಲ್ಲ. ತಾಯಿಯು ಮೃಡಾಣಿಗೆ ಸಮಳು, ಎಂದು ಬಿನ್ನವಿಸಿ ಸಹೋದರಿಯರನ್ನೂ, ನೆಂಟರಿಷ್ಟರನ್ನೂ ಕಾಣಿಸಿಕೊಂಡು, ಮಂತ್ರಿಗಳನ್ನೂ, ನಾಗರಿಕರನ್ನೂ ನೋಡಿ ಸಮಾಧಾನಮಾಡಿ, ನಾನಾ ವಿಧಗಳಾದ ಉತ್ಸವಗಳಿಂದ ನಗರವನ್ನು ಹೊಕ್ಕು ರಾಜಮಂದಿರವನ್ನು ಪ್ರವೇಶಿಸಿದನು. ತಕ್ಷಕಪುತ್ರನನ್ನು ಗೌರವಿಸಿ ವಸ್ತ್ರಭೂಷಣರತ್ನಾದಿಗಳಿಂದ ಬಹುಮಾನಿಸಿದನು. ಚಿತ್ರಾಂಗದನು ತಂದೆಗೆ ತಕ್ಷಕನ ಉಪಕಾರವನ್ನೂ, ಅಪಾರವಾದ ವಸ್ತ್ರಾಭರಣಗಳನ್ನು ತನಗೆ ಕೊಟ್ಟುದನ್ನೂ ತಿಳಿಸಿ, ಅವುಗಳನ್ನು ತೋರಿಸಿದನು. ಇವುಗಳನ್ನು ನೋಡಿ ರಾಜನು ಸಂತೋಷಿಸಿ, ಆ ತಕ್ಷಕಸುತನನ್ನು ಮನ್ನಿಸಿ ಕಳುಹಿಸಿಕೊಟ್ಟನು. ಚಿತ್ರವರ್ಮ ರಾಜನಿಗೆ ಈ ರಾಜನು ತನ್ನ ಪುತ್ರನು ಬಂದುದನ್ನು ಕುರಿತು ವರ್ತಮಾನವನ್ನು ಕಳುಹಿಸಿದನು.

ಈ ರಾಜನು "ತಾನು ಅದೃಷ್ಟಹೀನನಾದರೂ ತನ್ನ ಸುತನ ಸತಿಯು ಶಂಕರನನ್ನಾರಾಧಿಸಿದ ಧರ್ಮದಿಂದ ಮಗನು ಬದುಕಿ ಬಂದನು. ನಿನ್ನ ಪುತ್ರಿಯೂ, ನನ್ನ ಪುತ್ರವಧುವೂ ಪತಿವ್ರತೆಯಾಗಿದ್ದಾಳೆ. ಈಕೆಯ ಕಂಕಣಗಳೂ, ಕೇಶಪಾಶವೂ ಸ್ಥಿರವಾಗಿ ಉಳಿದುವು. ಈಕೆಯು ಸೌಭಾಗ್ಯವತಿಯಾದಳು" ಎಂದು ಚಿತ್ರವರ್ಮನಿಗೆ ಕಾಗದ

ಬರೆದು ಕಳುಹಿಸಿದನು. ಇಂದ್ರುಸೇನರಾಯನ ಭೃತ್ಯರು ಹೊರಟು ವೇಗದಿಂದ ಹೋಗಿ ಚಿತ್ರಾಂಗದನ ಶುಭವಾರ್ತೆಯನ್ನು ಚಿತ್ರುವರ್ಮನಿಗೆ ತಿಳಿಸಿದರು. ಚಿತ್ರುವರ್ಮನು ಈ ವಾರ್ತೆಯನ್ನು ಕೇಳಿ ಸಂತಸವಂ ಪೊಂದಿ ಆ ಭೃತ್ಯರಿಗೆ ಅಪಾರವಾದ ರತ್ನಾಭರಣಾದಿಗಳನ್ನು ಕೊಟ್ಟನು. ಇಂದ್ರುಸೇನನು ಪುತ್ರುಕಳತ್ರುಭೃತ್ಯಪರಿವಾರದೊಂದಿಗೆ ಹೊರಟು ಬಂದು ಚಿತ್ರುವರ್ಮನ ರಾಜಧಾನಿಗೆ ಬಂದನು. ಆ ನಗರದಲ್ಲಿ ಮಹೋತ್ಸವ ಗಳಾದುವು. ಚಿತ್ರಾಂಗದನು ಪ್ರೀತಿಯಿಂದ ಸೀಮಂತಿನಿಯನ್ನು ನೋಡಿದನು. ಪಾತಾಳದಿಂದ ತಂದ ಅಮೌಲ್ಯ ವಸ್ತುಗಳನ್ನೂ ಕೊಟ್ಟು ತಾನು ತಂದ ಅಮೃತವನ್ನು ಕುಡಿಸಿ ಕಲ್ಪವೃಕ್ಷದ ಫಲಗಳನ್ನು ಕೊಟ್ಟನು. ಅಮೌಲ್ಯವಾದ ವಸ್ತ್ರಾಭರಣಗಳ ಕಾಂತಿಯು ಹತ್ತು ಗಾವುದದ ವರೆಗೆ ಹರಡಿತು. ಬಳಿಕ ಉತ್ಸಾಹದಿಂದ ಈ ರಾಜರಿಬ್ಬರೂ ನಗರವನ್ನು ಹೊಕ್ಕರು. ಸೀಮಂತಿನಿಯ ವೈಭವಕ್ಕೆ ತ್ರಿಭುವನಗಳಲ್ಲಿ ಜೋಡಿಲ್ಲವಾಯಿತು. ಇಂದ್ರುಸೇನನು ಮಗನಾದ ಚಿತ್ರಾಂಗದನಿಗೆ ಪಟ್ಟಾಭಿಷೇಕ ಮಾಡಿದನು. ಈತನು ಹತ್ತು ಸಾವಿರ ವರ್ಷಗಳ ಕಾಲ ರಾಜ್ಯವಾಳಿದನು. ಸೀಮಂತಿನಿಯು ಉಪವಾಸದಿಂದ ಸೋಮವಾರ ವ್ರುತವನ್ನು ಮಾಡಿ ಗೌರೀಶರ ದಯದಿಂದ ಇಷ್ಟಾರ್ಥ ಗಳನ್ನು ಪಡೆದಳು. ಇದು ವಿಚಿತ್ರುವಾದುದು, ಎಂದು ಶ್ರೀಗುರುಗಳು ಸುವಾಸಿನಿಗೆ ನಿರೂಪಿಸಿದರು.

ಇಂಥಾ ವ್ರುತವನ್ನು ನೀನೂ ಮಾಡುವವಳಾಗು. ನಿನ್ನ ತುರುಬೂ, ಕಂಕಣಗಳೂ, ಸೌಮಂಗಲ್ಯವೂ ಸ್ಥಿರವಾಗಿರುವುವು. ನಿನಗೆ ಅನೇಕ ಗಂಡು ಮಕ್ಕಳೂ, ಹೆಣ್ಣು ಮಕ್ಕಳೂ ಹುಟ್ಟುವರು. ನಮ್ಮ ಮಾತನ್ನು ಕೇಳು, ಎಂದರು. ಈ ದಂಪತಿಗಳು ಶ್ರೀಗುರು ಗಳನ್ನು ಕುರಿತು ಸ್ವಾಮಿಾ, ನಿಮ್ಮ ಚರಣಸೇವೆಯೇ ನಮ್ಮ ಮನೋ ರಥಗಳನ್ನು ಕೊಡುವುದು. ಹೀಗಿರಲು ನಮಗೆ ಬೇರೆ ವ್ರುತವೇಕೆ? ನೀವು ನಮ್ಮ ಪ್ರಾಣನಾಯಕರಾಗಿದ್ದೀರಿ. ನಿಮ್ಮ ಸ್ಮರಣೆಯು ಮಾತ್ರು ನಮಗಿರಲಿ, ಎಂದು ವಂದಿಸಿದರು. ಆಗ ಶ್ರೀಗುರುಗಳು ದಂಪತಿಗಳಿರಾ, ನೀವು ನಮ್ಮ ಮಾತಿನಂತೆ ಈ ಸೋಮವಾರವ್ರುತವನ್ನು ಮಾಡಿರಿ. ಆ ಸೇವೆಯೇ ನಮಗೆ ಸೇರುವುದು, ಎಂದರು. ಶ್ರೀಗುರು

ನಿರೂಪದಂತೆ ದಂಪತಿಗಳು ಸೋಮವಾರವ್ರತವನ್ನು ಮಾಡಿದವರಾಗಿ ತಮ್ಮ ತಾಯಿತಂದೆಗಳ ಸಮೀಪಕ್ಕೆ ಬಂದರು. ಇವರು ಈ ದಂಪತಿ ಗಳನ್ನು ನೋಡಿ ಆನಂದಹೊಂದಿ ಬ್ರಾಹ್ಮಣರಿಗೆ ಸಮಾರಾಧನೆ ಮಾಡಿಸಿ ಅಪಾರವಾದ ದಕ್ಷಿಣೆಯನ್ನು ಕೊಟ್ಟರು. ಹಗಲು ರಾತ್ರಿ ಗಳಲ್ಲಿಯೂ ಎಲ್ಲರೂ ಗುರುಗಳನ್ನು ಭಕ್ತಿಯಿಂದರ್ಚಿಸಿದರು. ಈ ದಂಪತಿಗಳಾದ ಚಿತ್ರಾಂಗದ ಸೀಮಂತಿನಿಯರಿಗೆ ಶ್ರೀಗುರುಗಳ ಆಶೀರ್ವಾದದಿಂದ ಪೂರ್ಣಾಯುಷಿಗಳಾದ ಐವರು ಮಕ್ಕಳಾದರು. ದಂಪತಿಗಳು ಭಕ್ತಿಯಿಂದ ಗುರುದರ್ಶನಕ್ಕೆ ಬರುತ್ತಿದ್ದರು, ಎಂದೀ ಪರಿಯಿಂದ ಸಿದ್ಧರು ನಾಮಧಾರಕನಿಗೆ ನಿರೂಪಿಸಿದರು.

**ಸರಸ್ವತೀಗಂಗಾಧರನು:**—ಆಹಾ! ಶ್ರೀ ನೃಸಿಂಹಸರಸ್ವತಿಗಳು ನಮಗೆ ವಂಶಪರಂಪರೆಯಿಂದ ಗುರುಗಳಾಗಿ ವರದಮೂರ್ತಿಗಳಾಗಿರು ವರು. ಜನರೆಲ್ಲರೂ ಇದನ್ನು ಕೇಳಿರಿ. ಆ ಕ್ಷಣವೇ ಮನೋರಥ ಗಳುಂಟಾಗುವುವು. ಸಂದೇಹವಿಲ್ಲ. ಕರದ ಕಂಕಣವನ್ನು ನೋಡಲು ಕನ್ನಡಿಯು ಏಕೆ? ಪ್ರತ್ಯಕ್ಷಪ್ರಮಾಣವಲ್ಲವೇ? ಈ ಲೋಕದಲ್ಲಿ ಗುರುಗಳ ಕೀರ್ತಿಯು ಹರಡಿರುವುದು. ಗುರುಸೇವೆಯಿಂದಿಷ್ಟಾರ್ಥ ಗಳು ಸಿದ್ಧಿಸುವುವು. ಈ ಚರಿತ್ರೆಯು ಕಾಮಧೇನು ಸ್ವರೂಪವಾಗಿರು ವುದು. ಅಮೃತದ ಅರವಟ್ಟಿಗೆಯಂತಿರುವ ಈ ಚರಿತ್ರೆಯನ್ನು ಪಾನ ಮಾಡಿರಿ. ಇದನ್ನು ಕೇಳಲು ಪತಿತನೂ ಪಾವನನಾಗುವನು, ಎಂಬಲ್ಲಿಗೆ ಮೂವತ್ತೈದನೇ ಅಧ್ಯಾಯವು ಮುಗಿದುದು.

## ೩೬ನೇ ಅಧ್ಯಾಯ.

ಸಿದ್ಧರು ಶಿಷ್ಯನೇ ಕೇಳೆಂದು ಹೇಳತೊಡಗಿದರು. ಶ್ರೀಗುರುವು ಗಾಣಗಾಪುರದಲ್ಲಿರುವಾಗ ಇವರ ಮಹಿಮೆಯು ಅಪಾರವಾಗಿ ಹರಡಿತು. ಒಂದೊಂದು ಮಹಿಮೆಯನ್ನು ವಿಸ್ತಾರವಾಗಿ ಹೇಳಲು ಕಥಾವಿಸ್ತಾರವಾಗುವುದು. ಗುರುಗಳು ಸಾಕ್ಷಾತ್ತಾಗಿ ಶ್ರೀಹರಿಯ ಅವತಾರವಲ್ಲವೇ? ಆ ಗ್ರಾಮದಲ್ಲಿ ಒಬ್ಬ ವೇದನಿರತನಾದ ವಿಪ್ರನಿದ್ದನು. ಈತನು ವಿರಕ್ತನಾಗಿ ಸತ್ಕರ್ಮಿಯಾಗಿದ್ದನು. ಇವನು ದಾನವನ್ನು

ಪರಿಗ್ರಹಿಸುತ್ತಿರಲಿಲ್ಲ. ಪರಾನ್ನವನ್ನು ಭುಂಜಿಸುತ್ತಿರಲಿಲ್ಲ. ಸುಳ್ಳನ್ನು ಹೇಳುತ್ತಿರಲಿಲ್ಲ. ವಾದಿಸುತ್ತಿರಲಿಲ್ಲ. ನಿತ್ಯವೂ ಉಪಾದಾನ ಮಾಡುತ್ತಾ ಉದರಭರಣ ಮಾಡುತ್ತಿದ್ದನು.

ಈತನ ಸತಿಯು ಕೋಪಿಷ್ಠಳಾಗಿದ್ದಳು. ಈ ವಿಪ್ರನು ಯಾಚನೆಯಿಂದ ಅತಿಥಿ ಅಭ್ಯಾಗತರನ್ನು ಪೂಜಿಸುತ್ತಾ ನಿತ್ಯವೂ ಭುಜಿಸುತ್ತಿದ್ದನು. ಆ ಗ್ರಾಮದಲ್ಲಿ ನಿತ್ಯವೂ ವಿಪ್ರರ ಸಮಾರಾಧನೆಯಾಗುತ್ತಿತ್ತು. ಇವರಿಗೆ ಮೃಷ್ಟಾನ್ನಭೋಜನವಾಗುತ್ತಿತ್ತು. ಇಲ್ಲಿ ಊಟಮಾಡಿದ ವಿಪ್ರರು ಈ ವಿಪ್ರನ ಮನೆಗೆ ಬಂದು ಈ ವಿಪ್ರವನಿತೆಯ ಹತ್ತಿರ ತಾವು ಊಟಮಾಡಿದ ಪಕ್ವಾನ್ನಗಳನ್ನು ಹೊಗಳುತ್ತಿದ್ದರು. ಇದನ್ನು ಕೇಳಿ ಆಕೆಯು ನಾನಾ ಪರಿಯಿಂದ ದುಃಖಿಸಿ ಶಂಕರನೇ, ನಾವು ಅದೃಷ್ಟಹೀನರು. ನಮಗೆ ಸ್ವಪ್ನದಲ್ಲಿಯೂ ಇಂಥಾ ಅನ್ನವಿಲ್ಲವು. ಬಡವನಾದ ಪತಿಯನ್ನು ವರಿಸಿ ಕಷ್ಟಪಡುತ್ತಿರುವೆನು. ಪೂರ್ವಜನ್ಮದ ದುಷ್ಕೃತದಿಂದ ಇಂಥಾ ಹೀನನಾದ ಕಡು ಬಡವನಾದ ಪತಿಯು ನನಗೆ ದೊರಕಿದನು. ವಿಪ್ರರೆಲ್ಲರೂ ತಮ್ಮ ಸ್ತ್ರೀಯರೊಡನೆ ಸದಾ ಪೂರ್ವಸುಕೃತದಿಂದ ದಿವ್ಯವಾದ ಪಕ್ವಾನ್ನಗಳನ್ನು ಭುಜಿಸುತ್ತಿರುವರು. ನನ್ನ ಪತಿಯು ದೈವಹೀನನು. ಪರಾನ್ನಭೋಜನವು ಎಂದಿಗೆ ಸಿಕ್ಕೀತು? ಏನು ಮಾಡಲಿ? ನಾರಾಯಣನೇ, ಎಂದು ಚಿಂತಿಸಿದಳು. ಹೀಗಿರಲೊಂದು ದಿನ ಮಹಾಧನಿಕನಾದೊಬ್ಬ ವಿಪ್ರನು ಅಪರಪಕ್ಷವನ್ನು ಮಾಡಬೇಕೆಂದು ಅಲ್ಲಿಗೆ ಬಂದನು. ಅನೇಕ ವಿಪ್ರ ದಂಪತಿಗಳಿಗೆ ನಿಮಂತ್ರಣಕ್ಕೆ ಕರೆದನು. ಈ ಸ್ತ್ರೀಯಳಿಗೂ ಆಮಂತ್ರಣವು ಬಂದಿತು. ಆಗ ವಿಪ್ರವನಿತೆಯು ಪತಿಯ ಹತ್ತಿರ ಬಂದು ಈ ನಿಮಂತ್ರಣ ಬಂದುದನ್ನೂ, ಈ ನಿಮಂತ್ರಣದಲ್ಲಿ ನಾನಾ ವಿಧಗಳಾದ ಪಕ್ವಾನ್ನಗಳೂ, ವಸ್ತ್ರಗಳೂ, ದಕ್ಷಿಣೆಯೂ ಈ ದಿನ ದೊರೆಯುವುದು. ಆದುದರಿಂದ ಈ ನಿಮಂತ್ರಣವನ್ನು ನೀವೂ ಅಂಗೀಕರಿಸಿರಿ; ಮತ್ತೂ ನನಗೂ ಅನುಜ್ಞೆಯನ್ನು ಕೊಡಿರಿ. ನಾನಾ ಪಕ್ವಾನ್ನಗಳನ್ನು ಭುಜಿಸುವುದಕ್ಕಾಗಿ ನನ್ನ ಮನಸ್ಸು ಆಶಿಸುವುದು, ಎಂದಳು. ಇದನ್ನು ಕೇಳಿ ವಿಪ್ರನು ಎಲೌ ಪ್ರಿಯಳೇ, ನೀನು ಸುಖವಾಗಿ ಊಟಕ್ಕೆ ಹೋಗು. ನನಗೆ ನಿಮಂತ್ರಣವು ಬರಲಿಲ್ಲ, ಎಂದನು.

ಆಗ ಆಕೆಯು ಪತಿಯಾಜ್ಞೆಹೊಂದಿ ಆ ಧನಿಕನ ಹತ್ತಿರ ಹೋಗಿ ಊಟಕ್ಕೆ ಬರುವೆನೆಂದು ಹೇಳಿದಳು. ಆಗ ಆತನು ಅಮ್ಮಾ ನೀವು ದಂಪತಿಗಳಿಬ್ಬರೂ ಊಟಕ್ಕೆ ಬರುವುದಾದರೆ ಬನ್ನಿರಿ, ಎಂದನು.

ಈ ಮಾತನ್ನು ಕೇಳಿ ಆಕೆಯು ದುಃಖಿಸಿ ನಮ್ಮ ಅದೃಷ್ಟವು ಕೆಟ್ಟದ್ದು. ಪತಿಯ ದೆಸೆಯಿಂದ ನನಗೆ ಪಕ್ವಾನ್ನವು ಸ್ವಪ್ನದಲ್ಲಿಯೂ ದೊರೆಯಲಾರದು, ಎನ್ನುತ್ತಾ ಶ್ರೀ ನೃಸಿಂಹಗುರುಗಳ ಹತ್ತಿರ ಬಂದು ಸಾಷ್ಟಾಂಗ ನಮಸ್ಕಾರಮಾಡಿ ಸ್ವಾಮಿಾ, ನನಗೆ ಮೃಷ್ಟಾನ್ನವು ದೊರೆಯುವುದಿಲ್ಲ. ನೀವು ನನ್ನ ಪತಿಗಳಿಗೆ ಔತಣಕ್ಕೆ ಹೋಗುವಂತೆ ಆಜ್ಞಾಪಿಸಿರಿ. ಆ ಗೃಹಸ್ಥನು ದಂಪತಿಗಳನ್ನು ಊಟಕ್ಕೆ ಕರೆಯುವನು. ಆದರೆ ನನ್ನ ಪತಿಯು ಪರಾನ್ನವನ್ನು ಭುಜಿಸುವುದಿಲ್ಲ. ಇದಕ್ಕೇನು ಮಾಡಲಿ? ನೀವು ದಯೆಯಿಟ್ಟು ನನ್ನ ಪತಿಗೆ ಹೇಳಿರಿ. ಒಳ್ಳೆಯ ಔತಣವು ಬರುವುದು. ಅನ್ನವಸ್ತ್ರಗಳನ್ನು ಕೊಡುವರು, ಎಂದು ಬಿನ್ನವಿಸಿದಳು. ಇದನ್ನು ಕೇಳಿ ಗುರುಗಳು ನಕ್ಕು ಆಗಲೇ ಆ ದ್ವಿಜನನ್ನು ಕರೆಯಿಸಿ ಅಯ್ಯಾ, ನೀನು ಔತಣಕ್ಕೆ ಹೋಗಿ ನಿನ್ನ ಸ್ತ್ರೀಯಳ ಇಷ್ಟದಂತೆ ಮೃಷ್ಟಾನ್ನವನ್ನು ಭುಜಿಸು. ನಿನ್ನ ಸತಿಯ ಇಷ್ಟವನ್ನು ಪೂರ್ಣಮಾಡು. ಕುಲಸ್ತ್ರೀಯಳ ಮನಸ್ಸನ್ನು ನೋಯಿಸದಿರು, ಎಂದರು. ಗುರುವಚನವನ್ನು ಕೇಳಿ ವಿಪ್ರನು ಸ್ವಾಮಿಾ, ನನಗೆ ಪರಾನ್ನ ನೇಮವಿದೆ. ಯಾವನು ಗುರುವಚನವನ್ನು ನಡೆಯಿಸುವುದಿಲ್ಲವೋ ಅವನು ರೌರವ ನರಕದಲ್ಲಿ ಬೀಳುವನು. ನಿಮ್ಮ ನಿರೂಪವನ್ನು ಶಿರದಲ್ಲಿ ಧರಿಸಿ ನಿಮಂತ್ರಣಕ್ಕೆ ಹೋಗುವೆನೆಂದನು. ಗುರುವಿನ ಅನುಜ್ಞೆಯಂತೆ ಆ ದಂಪತಿಗಳು ನಿಮಂತ್ರಣಕ್ಕೆ ಬಂದರು. ಆ ಸತಿಗಾನಂದವಾಯಿತು. ವಿಪ್ರನು ಪಿತೃನಾಮವನ್ನುಚ್ಚರಿಸಿ ಈ ದಂಪತಿಗಳಿಗೆ ಮೃಷ್ಟಾನ್ನ ಭೋಜನಕ್ಕೆ ಬಡಿಸಿದನು. ಭೋಜನ ಕಾಲದಲ್ಲಿ ನಾಯಿಗಳೂ, ಹಂದಿಗಳೂ ಬಂದು ತನ್ನ ಜೊತೆಯಲ್ಲಿ ಊಟಮಾಡುವಂತೆ ಈಕೆಗೆ ವಿಪರೀತವಾಗಿ ಕಣ್ಣಿಗೆ ಕಾಣಿಸಿತು. ಮನಸ್ಸು ಕಳವಳಿಸಿ ಅನ್ನವನ್ನು ಬಿಟ್ಟಿದ್ದಳು. ಅಲ್ಲಿ ಭುಜಿಸುತ್ತಿದ್ದ ವಿಪ್ರರಿಗೂ, ತನ್ನ ಪತಿಗೂ ನಾವೆಲ್ಲರೂ ನಾಯಿಯ ಎಂಜಲನ್ನು ತಿಂದೆವೆಂದು ಹೇಳಿದಳು. ಆಕೆಯ ಪತಿಯು ಎಲೌ ಸತಿಯೇ, ನೀನು ದೈವಹೀನಳು. ನಮಗೆ

ನಾಯಿಯ ಎಂಜಲಾದ ಪರಾನ್ನವು ಸಿಕ್ಕಿತೆಂದನು. ಈ ದಂಪತಿಗಳು ಗುರುಗಳ ಹತ್ತಿರ ಬಂದು ವಂದಿಸಿದರು. ಶ್ರೋತೃಗಳಿರಾ ಕೇಳಿರಿ.

ಬಳಿಕ ಶ್ರೀಗುರುವು ಆ ಸತಿಯನ್ನು ಕುರಿತು ಅಮ್ಮಾ, ಪರಾನ್ನ ಸುಖವು ಹೇಗಿತ್ತು? ನಿನ್ನ ಇಷ್ಟವು ಪೂರ್ಣವಾಯಿತೇ? ಎಂದು ಕೇಳಿದರು. ಈ ಮಾತನ್ನು ಕೇಳಿ ಆ ನಾರಿಯು ಗುರುಚರಣಂಗಳಿಗೆ ವಂದಿಸಿ ಕರಗಳನ್ನು ಜೋಡಿಸಿ ಸ್ವಾಮಿಾ ಯತಿವರ್ಯರೇ, ಮನ್ನಿಸಿರಿ. ಮಂದಮತಿಯಾದ ನಾನು ನನ್ನ ಪತಿಗೆ ದೋಷವನ್ನುಂಟುಮಾಡಿದೆನು. ಪತಿಯನ್ನು ಪರಾನ್ನಕ್ಕೆ ಕರೆದೆನು. ಮನ್ನಿಸಿರಿ, ಎಂದಳು. ಆ ದ್ವಿಜನು ಚಿಂತಿಸಿ ಸ್ವಾಮಿಾ ಏನು ಮಾಡಲಿ? ನನ್ನ ವ್ರತಭಂಗವಾಗಿ ದೋಷ ಬಂದಿತು. ಪರಾನ್ನವನ್ನು ಸ್ವೀಕರಿಸಬಾರದೆಂದು ಸಂಕಲ್ಪಿಸಿದ್ದೆನು. ನನಗೆ ಹಗೆಯಾದ ಸತಿಯು ದೊರೆತು ದೋಷವು ಬಂದಿತು, ಎಂದನು. ಶ್ರೀಗುರುವು ಇದನ್ನು ಕೇಳಿ ನಕ್ಕು ವಿಪ್ರನೇ, ನಿನ್ನ ಸತಿಯ ಕೋರಿಕೆಯು ಫಲಿಸಿ ಆಕೆಯ ಮನಸ್ಸು ನಿರ್ಮಲವಾಯಿತು. ಇನ್ನು ಪರಾನ್ನಕ್ಕೆ ಹೋಗಲಾರಳು. ಇನ್ನು ನಿನ್ನ ಮಾತಿನಂತೆ ನಡೆಯು ವಳು. ಚಿಂತಿಸದಿರು. ನಿನಗೆ ದೋಷವಿಲ್ಲ. ದೇವ ಪಿತೃಕರ್ಮಗಳಿಗೆ ಬ್ರಾಹ್ಮಣರು ಸಿಕ್ಕದಿರಲು ಆಗ ಅಲ್ಲಿಗೆ ಭೋಜನಕ್ಕೆ ಹೋಗಬೇಕು. ಆಗ ಹೋಗದಿರಲು ಮಹಾ ದೋಷವುಂಟಾಗುವುದು, ಎಂದರು. ಶ್ರೀಗುರು ವಚನವನ್ನು ಕೇಳಿ ವಿಪ್ರನು ಸಾಷ್ಟಾಂಗ ನಮಸ್ಕಾರಮಾಡಿ ಕೈಗಳನ್ನು ಜೋಡಿಸಿ ಸ್ವಾಮಿಾ, ಯಾರ ಮನೆಗೆ ಊಟಕ್ಕೆ ಹೋಗ ಬೇಕು? ಎಲ್ಲಿ ದೋಷವುಂಟು? ಎಲ್ಲಿಗೆ ಹೋಗಬಾರದು? ನಿರೂಪಿಸಿರಿ ಎಂದು ಬಿನ್ನವಿಸಿದನು.

ಶ್ರೋತೃಗಳಿರಾ ಕೇಳಿರಿ. ಗುರುವು ಹೇಳುವರು. ವಿಪ್ರನೇ, ಕೇಳು. ಗುರುಗಳ ಮನೆಯಲ್ಲಿಯೂ, ಶಿಷ್ಯರ ಮನೆಗಳಲ್ಲಿಯೂ, ವೈದಿಕ ಪಂಡಿತರ ಮನೆಯಲ್ಲಿಯೂ, ಸೋದರಮಾವನ ಮನೆ ಯಲ್ಲಿಯೂ, ಹೆಣ್ಣು ಕೊಟ್ಟ ಮಾವನ ಮನೆಯಲ್ಲಿಯೂ, ಸಹೋದರರ ಮನೆಯಲ್ಲಿಯೂ, ಸಾಧುಗಳ ಮನೆಯಲ್ಲಿಯೂ ಭುಜಿಸಬೇಕು. ಹೀನನಾದ ಬ್ರಾಹ್ಮಣನ ಮನೆಯಲ್ಲಿ ಊಟಮಾಡಿದರೆ ಗಾಯತ್ರೀ ಜಪಮಾಡುವುದರಿಂದ ಆ ದೋಷವು ಹೋಗುವುದು. ಋಷಿಗಳಿಂದ

ಹೇಳಲ್ಪಟ್ಟ ಸ್ಮೃತಿಚಂದ್ರಿಕೆಯಲ್ಲಿ ಕಂಡ ಸಿದ್ಧಾಂತವು ಯಾವು ದೆಂದರೆ:—ತಾಯಿತಂದೆಗಳಿಂದ ಸೇವ್ಯನಾದವನ ಮನೆಯಲ್ಲಿಯೂ, ಧನಲೋಭಿಯಾದ ವಿಪ್ರನ ಮನೆಯಲ್ಲಿಯೂ, ಪುತ್ರಕಳತ್ರಾದಿಗಳನ್ನು ಕಷ್ಟಪಡಿಸಿ ಧರ್ಮಮಾಡುವವನ ಮನೆಯಲ್ಲಿಯೂ ಊಟಮಾಡ ಬಾರದು. ಅವರ ಮನೆಯ ಅನ್ನದಿಂದ ದೋಷವುಂಟು. ಗರ್ವಿಷ್ಠನ, ಚಿತ್ರಗಾರನ, ಶಸ್ತ್ರಧಾರಿಯ, ಮಲ್ಲಯುದ್ಧಗಾರನ, ವೀಣಾವಿದ್ಯೆಯ ನ್ನರಿತವನ ಮನೆಗಳಲ್ಲಿ ಉಣ್ಣಬಾರದು. ಬಹಿಷ್ಕೃತನಾದ ವಿಪ್ರನ ಮನೆಯಲ್ಲಿಯೂ, ಯಾಚಕತನದಿಂದ ಉದರಭರಣಮಾಡುವವನ ಮನೆ ಯಲ್ಲಿಯೂ, ಆತ್ಮಸ್ತುತಿ ಮಾಡಿಕೊಳ್ಳುವವನ ಮನೆಯಲ್ಲಿಯೂ, ಪರನಿಂದಕನಲ್ಲಿಯೂ, ಬಹುಜನರ ಅನ್ನವನ್ನು ಗ್ರಹಿಸುವವನ ಮನೆ ಯಲ್ಲಿಯೂ, ವೈಶ್ವದೇವವಿಲ್ಲದ ಮನೆಯಲ್ಲಿಯೂ ಊಟಮಾಡಲು ದೋಷವುಂಟು. ತಾನು ಮಂತ್ರವನ್ನು ಉಪದೇಶಿಸಿದರೂ ಶಿಷ್ಯನು ದುರ್ಜಡತೆಯಿಂದಿದ್ದರೆ ಆತನ ಗುರುವಿನ ಮನೆಯಲ್ಲಿ ಉಣ್ಣಬಾರದು. ಸಿಟ್ಟುಳ್ಳ ವಿಪ್ರನ ಮನೆಯಲ್ಲಿಯೂ, ಹೆಂಗಸಿಲ್ಲದ ಪುರುಷನ ಮನೆ ಯಲ್ಲಿಯೂ, ಧನಗರ್ವಿತನಾಗಿಯೂ, ತಾಮಸಿಯಾಗಿಯೂ, ಬಡವ ನಾಗಿಯೂ, ವ್ಯಭಿಚಾರಿಯಾಗಿಯೂ, ಡಾಂಭೀಕನಾಗಿಯೂ, ದುರಾ ಚಾರಿಯಾಗಿಯೂ ಇರುವವನ ಮನೆಯಲ್ಲಿಯೂ ಭುಜಿಸಬಾರದು. ಪತಿಪುತ್ರರನ್ನು ಬಿಟ್ಟು ಬೇರೆ ಇರುವ ಬ್ರಾಹ್ಮಣಿಯ ಮನೆಯಲ್ಲಿ ಸಾಧುಗಳು ಭುಜಿಸಬಾರದು. ಸ್ತ್ರೀಜಿತನಲ್ಲಿಯೂ, ಸ್ವರ್ಣಕಾರ ನಲ್ಲಿಯೂ, ಸದಾ ಭಿಕ್ಷೆ ಬೇಡುವವನ ಮನೆಯಲ್ಲಿಯೂ ಉಣ್ಣ ಬಾರದು. ನೀಚನಾದ ರಾಜಸೇವಕನಲ್ಲಿಯೂ, ಲೋಹವನ್ನೂ ಕಟ್ಟಿಗೆಯನ್ನೂ ಛೇದಿಸುವವನಲ್ಲಿಯೂ, ಅಗಸನಲ್ಲಿಯೂ ದಾನ ತೆಗೆದುಕೊಳ್ಳಬಾರದು. ಮದ್ಯಪಾನಮಾಡುವವನಲ್ಲಿಯೂ, ಯಾಚಕ ನಲ್ಲಿಯೂ, ಸೂಳೆಯರಲ್ಲಿಯೂ ವಿಪ್ರನು ದಾನವನ್ನು ಹೊಂದಬಾರದು. ಕಳ್ಳನೂ, ದ್ವಾರಪಾಲಕನೂ, ಮೋಸಗಾರನೂ ಆದವರಲ್ಲಿ ಊಟ ಮಾಡಲು ಅತಿಯಾದ ದೋಷವುಂಟು. ಧನವನ್ನು ಹೊಂದಿ ಅಧ್ಯಯನ ಮಾಡಿಸುವ ದ್ವಿಜನ ಮನೆಯಲ್ಲಿಯೂ, ಅತಿ ನಿಷ್ಠೂರಿಯಾದವನ ಮನೆ ಯಲ್ಲಿಯೂ, ಸ್ನಾನವಿಲ್ಲದೆ ಊಟಮಾಡುವವನ ಮನೆಯಲ್ಲಿಯೂ

ಭುಜಿಸಬಾರದು. ಸಾಯಂಕಾಲದಲ್ಲಿ ಸಂಧ್ಯಾವಂದನೆ ಮಾಡದವನ ಮನೆಯಲ್ಲಿಯೂ, ದಾನಮಾಡದವನ ಮನೆಯಲ್ಲಿಯೂ, ಪಿತೃಕರ್ಮವನ್ನು ಬಿಟ್ಟವನ ಮನೆಯಲ್ಲಿಯೂ, ಡಾಂಭಿಕದಿಂದ ಜಪಮಾಡುವವನ ಮನೆಯಲ್ಲಿಯೂ, ಧನವನ್ನು ಹೊಂದಿ ಕಪಟದಿಂದ ಜಪಿಸುವವನ ಮನೆಯಲ್ಲಿಯೂ, ಸಾಲವನ್ನು ಕೊಟ್ಟು ಅವನಲ್ಲಿ ಉಪಕಾರ ಹೊಂದುವವನಲ್ಲಿಯೂ, ಹೆಂಡತಿಯ ವಶದಲ್ಲಿ ಹಣವನ್ನಿರಿಸುವವನ ಮನೆಯಲ್ಲಿಯೂ, ವಿಶ್ವಾಸಘಾತಕಿಯ ಮನೆಯಲ್ಲಿಯೂ, ಅನೀತಿಯಿಂದ ಪಕ್ಷಪಾತ ಮಾಡುವವನ ಮನೆಯಲ್ಲಿಯೂ, ತನ್ನ ಧರ್ಮವನ್ನು ತೊರೆದು ದುರಾಚಾರಿಯಾದವನ ಮನೆಯಲ್ಲಿಯೂ, ಹಿರಿಯರ ಆಚಾರಗಳನ್ನು ಬಿಟ್ಟವನಲ್ಲಿಯೂ, ವಿದ್ವಜ್ಜನರಾದ ಸಾಧುಗಳಾದ ಬ್ರಾಹ್ಮಣರಲ್ಲಿ ದ್ವೇಷವುಳ್ಳವನ ಮನೆಯಲ್ಲಿಯೂ ಭುಜಿಸಬಾರದು. ಕುಲದೇವತೆಯನ್ನೂ, ತಾಯಿತಂದೆಗಳನ್ನೂ ಬಿಟ್ಟು ಪರದೇವತೆಯನ್ನು ಪೂಜಿಸುತ್ತಾ ಗುರುವನ್ನು ನಿಂದಿಸುವವನ ಮನೆಯಲ್ಲಿ ಭುಜಿಸಬಾರದು. ಗೋಬ್ರಾಹ್ಮಣಸ್ತ್ರೀವಧೆ ಮಾಡುವವರ ಮನೆಯಲ್ಲಿ ಊಟಮಾಡಲು ಅತಿ ದೋಷವುಂಟಾದೀತು. ಸದಾ ಆಶಾನಿರತನಾಗಿ ದಾನಕೊಡದವನ ಮನೆಯಲ್ಲಿ ಉಣ್ಣಬಾರದು. ಸಮಸ್ತ ಜಾತಿಗಳಲ್ಲಿಯೂ ಶರಣು ಹೊಗುವವನು ಚಂಡಾಲನಾಗುವನು. ಇವನನ್ನು ವಂದಿಸಬಾರದು. ಅಳಿಯನನ್ನೂ, ಮಗಳನ್ನೂ ದೂಷಿಸುವವನಲ್ಲಿಯೂ, ಮಕ್ಕಳಿಲ್ಲದವನಲ್ಲಿಯೂ ಅನ್ನವನ್ನು ಸ್ವೀಕರಿಸಬಾರದು. ಪಂಚಮಹಾಯಜ್ಞ ಮಾಡುತ್ತಾ ಇದ್ದರೂ ಮತ್ತೊಬ್ಬರ ಮನೆಯಲ್ಲಿ ಊಟಮಾಡುವವರ ಮನೆಯಲ್ಲಿ ಉಣ್ಣಬಾರದು. ವಿವಾಹವಾಗಿ ಪಂಚಮಹಾಯಜ್ಞ ಮಾಡದವನ ಮನೆಯಲ್ಲಿಯೂ, ಸ್ಥಾಲೀಪಾಕವನ್ನು ಬಿಟ್ಟವನ ಮನೆಯಲ್ಲಿಯೂ ಭುಜಿಸಬಾರದು. ತನ್ನ ಮನೆಯ ಅನ್ನವನ್ನು ದೂಷಿಸಿ ಪರಾನ್ನವನ್ನು ಹೊಗಳುವವನ ಮನೆಯಲ್ಲಿ ಭುಜಿಸಬಾರದು. ಅಡಿಗೆ ಮಾಡಿ ಜೀವಿಸುವವನ ಮನೆಯಲ್ಲಿ ಊಟಮಾಡಿದರೆ, ಕಣ್ಣುಗಳು ಹೋಗಿ ಕುರುಡನಾಗಿಯೂ, ಕಿವುಡನಾಗಿಯೂ, ಸ್ಮೃತಿಯೂ, ಮೇಧಾಶಕ್ತಿಯೂ, ಧೈರ್ಯವೂ ಕುಂದಿ ಅಲ್ಪಾಯುವಾಗುವನು ಆದ್ದರಿಂದ ಬಾಣಸಿಗನ ಮನೆಯಲ್ಲಿ ಉಣ್ಣಬಾರದು. ಗೃಹಸ್ಥನು

ತಾನು ದಾನಧರ್ಮ ಮಾಡದೆ ವೇದಾಂತವನ್ನು ಹೇಳುವವನ ಮನೆ ಯಲ್ಲಿ ಭುಜಿಸಬಾರದು. ಪರಗೃಹದಲ್ಲಿ ವಾಸಿಸಿ ಪರಾನ್ನವನ್ನು ಭುಜಿಸುವವನ ಪುಣ್ಯವೆಲ್ಲವೂ ಯಜಮಾನನಿಗೆ ಸೇರುವುದು. ಯಜ ಮಾನನ ದೋಷವು ಭುಜಿಸಿದವನಿಗೆ ಬರುವುದು. ಆದುದರಿಂದ ಪರಾನ್ನವು ನಿಷಿದ್ಧವು. ಭೂದಾನ, ಗೋದಾನ, ಸುವರ್ಣದಾನ, ಗಜದಾನ, ರತ್ನದಾನಗಳನ್ನು ಗ್ರಹಿಸಿದರೂ ದೂಷ್ಯವಲ್ಲ. ಅನ್ನ ದಾನವು ಅತಿ ದೋಷವು. ಪರಾನ್ನಭೋಜನದಿಂದನೇಕ ಪಾಪ ಗಳುಂಟು. ಹಾಗೆಯೇ ಪರನಾರಿಯು ಸಂಗಮಾಡಿದರೂ ನರಕ ವುಂಟಾಗುವುದು. ಪರಗೃಹದಲ್ಲಿ ವಾಸಿಸುತ್ತಿರಲು ತನ್ನ ಐಶ್ವರ್ಯವು ಬೇಗ ನಾಶವಾಗುವುದು. ಅಮಾವಾಸ್ಯೆಯ ದಿನದಲ್ಲಿ ಪರಾನ್ನವನ್ನು ಭುಜಿಸಿದರೆ ಒಂದು ತಿಂಗಳಲ್ಲಿ ಮಾಡಿದ ಪುಣ್ಯವು ಹೋಗುವುದು. ಹೇಳಿಸಿಕೊಳ್ಳದೇ ಪರಾನ್ನಕ್ಕೆ ಹೋಗಲು ದೋಷವುಂಟು. ಶೂದ್ರನು ಊಟಕ್ಕೆ ಕರೆದರೆ ಹೋಗಬಾರದು. ಮಕ್ಕಳಿಲ್ಲದ ಮಗಳ ಮನೆಗೆ ಊಟಕ್ಕೆ ಹೋಗಬಾರದು. ಸೂರ್ಯಚಂದ್ರ ಗ್ರಹಣಗಳಲ್ಲಿ ದಾನ ವನ್ನು ಸ್ವೀಕರಿಸಬಾರದು. ಜಾತಾಶೌಚ, ಮೃತಾಶೌಚಗಳುಳ್ಳವರ ಮನೆಗೆ ಊಟಕ್ಕೆ ಹೋಗಬಾರದು. ಈ ರೀತಿಯಾಗಿ ಆಚಾರವಂತ ನಾದವನಿಗೆ ಬಡತನವಿಲ್ಲ. ಸರ್ವದೇವತೆಗಳೂ ಈತನಿಗೆ ವಶರಾಗುವರು. ಅಷ್ಟಸಿದ್ಧಿಗಳುಂಟಾಗುವುವು. ಬ್ರಾಹ್ಮಣರ ಆಚಾರದಂತೆ ನಡೆಯು ವವನ ಮನೆಯಲ್ಲಿ ಕಾಮಧೇನುವು ವಾಸವಾಗಿರುವುದು. ವಿಪ್ರನು ಮದಾಂಧನಾಗಿ ಆಚಾರವನ್ನು ಬಿಟ್ಟುದರಿಂದ ಸ್ವಧರ್ಮಭ್ರಷ್ಟನಾಗಿ ಬಡತನದಿಂದ ದುಃಖಿಸುವನು, ಎಂದರು. ಆಗ ವಿಪ್ರನು ಸ್ವಾಮಿಾ, ನನಗೆ ಸಕಲ ಧರ್ಮಗಳನ್ನೂ ನಿರೂಪಿಸಿರಿ, ಎಂದು ಬೇಡಿಕೊಂಡನು. ತ್ರಿಮೂರ್ತಿಗಳ ಅಂಶೀಭೂತರಾದ ಗುರುಗಳು ಪೂರ್ವದಲ್ಲಿ ಋಷಿಗಳು ಆಚರಿಸಿದ ಬ್ರಾಹ್ಮಣರ ಆಚಾರ ಧರ್ಮಗಳನ್ನು ಹೇಳತೊಡಗಿದರು. ನೈಮಿಷಾರಣ್ಯದಲ್ಲಿ ಸಮಸ್ತ ಋಷಿಗಳೂ ತಪಸ್ಸನ್ನು ಮಾಡುತ್ತಿದ್ದರು. ಅಲ್ಲಿಗೆ ಪರಾಶರ ಮುನಿಗಳು ಬಂದರು. ಋಷಿಗಳೆಲ್ಲರೂ ಅವರನ್ನು ವಂದಿಸಿ, ಕರಗಳನ್ನು ಜೋಡಿಸಿ ಸ್ವಾಮಿಾ, ಬ್ರಾಹ್ಮಣರ ಆಚಾರವು ಹೇಗೆ? ನಮ್ಮ ಆಚಾರದಲ್ಲಿ ನಮಗೆ ಸಂಶಯವುಂಟಾಗಿದೆ. ಬ್ರಹ್ಮರ್ಷಿ

ಗಳಾದ ನೀವು ನಮ್ಮ ಆಚಾರಗಳನ್ನು ನಿರೂಪಿಸಿರಿ. ಗುರುವಿಲ್ಲದೆ ಮಂತ್ರವು ಗ್ರಾಹ್ಯವೂ, ಪವಿತ್ರವೂ ಅಲ್ಲವು. ಸದ್ಗುರುಗಳಾದ ನೀವು ಧರ್ಮಗಳನ್ನು ನಿರೂಪಿಸಿರಿ, ಎಂದು ಪ್ರಾರ್ಥಿಸಿದರು. ಆಗ ಪರಾಶರರು ಎಲೈ ಋಷಿಗಳಿರಾ, ಆಚಾರವನ್ನು ಹೇಳುವೆನು, ಕೇಳಿರಿ. ಅದರಂತೆ ಆಚರಿಸಿದರೆ ಸರ್ವಸಿದ್ಧಿಯೂ ಆಗುವುದು.

## ಆಚಾರ ಧರ್ಮಗಳು.

ವಿಪ್ರನು ಬ್ರಾಹ್ಮೀ ಮುಹೂರ್ತದಲ್ಲಿ ಗುರುವನ್ನು ನೆನೆಯುತ್ತಾ ಏಳಬೇಕು. ತ್ರಿಮೂರ್ತಿಗಳನ್ನೂ, ನವಗ್ರಹರನ್ನೂ, ಸನಕಸನಂದನ ರನ್ನೂ ಧ್ಯಾನಿಸಬೇಕು. ನಾರದ ತುಂಬುರರನ್ನೂ, ಸಿದ್ಧಯೋಗಿ ಗಳನ್ನೂ, ಸಪ್ತರ್ಷಿಗಳನ್ನೂ, ಸಪ್ತದ್ವೀಪಗಳನ್ನೂ, ಸಪ್ತಭುವನ ಗಳನ್ನೂ ಸ್ಮರಿಸಬೇಕು. ಹೀಗೆ ಹಾಸಿಗೆಯಿಂದೆದ್ದು ಎರಡು ಆಚಮನ ಮಾಡಬೇಕು. ಬಳಿಕ ಲಘುಶಂಕೆಗೆ ಹೋಗಿ ಶೌಚಾಚಮನ ಮಾಡ ಬೇಕು. ಆಚಮನ ವಿಧಿಯನ್ನು ಕೇಳಿರಿ. ಸ್ನಾನಕ್ಕೆ ಮೊದಲು ಎರಡು, ಮಲಗುವಾಗಲೂ, ಎದ್ದ ಮೇಲೆಯೂ, ಅಧೋವಾಯು ಬಂದಾಗಲೂ, ಊಟಕ್ಕೆ ಮೊದಲೂ, ಅನಂತರದಲ್ಲಿಯೂ ಎರಡು ಆಚಮನ ಮಾಡಬೇಕು. ಆಕಳಿಸಿದಾಗಲೂ, ಲಘುಶಂಕೆಯಾದ ಮೇಲೂ ಎರಡು ಆಚಮನ ಮಾಡಬೇಕು. ಹತ್ತಿರ ನೀರಿಲ್ಲದಿರಲು ಶ್ರೋತ್ರಾಚಮನ ಮಾಡಲು ಪವಿತ್ರನಾಗುವನು. ಬ್ರಾಹ್ಮಣನ ಬಲಗಿವಿಯಲ್ಲಿ ಸಪ್ತದೇವತೆಗಳಿರುವರು. ಆದುದರಿಂದ ಬಲಗಿವಿಯನ್ನು ಮುಟ್ಟಲು ಶುದ್ಧನಾಗುವನು.

ಅಗ್ನಿರಾಪಶ್ಚ ಚಂದ್ರಶ್ಚ । ವರುಣಾರ್ಕೇಂದು ವಾಯವಃ ॥
ವಿಪ್ರಸ್ಯ ದಕ್ಷಿಣೇ ಕರ್ಣೇ । ನಿತ್ಯಂ ತಿಷ್ಠಂತಿ ದೇವತಾಃ ॥ ೧ ॥

ಅಗ್ನಿಯೂ, ನೀರೂ, ವರುಣೇಂದ್ರವಾಯುಗಳೂ ಬ್ರಾಹ್ಮಣನ ಬಲಗಿವಿಯಲ್ಲಿ ಇರುವರು. ಲಘುಶಂಕೆಗೆ ಹೋಗಿ ಬಂದು ಆಚಮನ ಮಾಡಿ ಸುಮ್ಮನೆ ಸ್ನಾನಮಾಡಬೇಕು. ಅರುಣೋದಯವಾಗುವ ವರೆಗೆ ಶುಚಿಯಾದ ಆಸನದಲ್ಲಿ ಕುಳಿತುಕೊಳ್ಳಬೇಕು. ಬಹಿರ್ಭೂಮಿಗೆ ಹೋಗುವಾಗ ಯಜ್ಞೋಪವೀತವನ್ನು ಬಲಕಿವಿಗಿಟ್ಟುಕೊಂಡು ನೈಋತ್ಯ ದಿಕ್ಕಿನಲ್ಲಿ ಹೋಗಿ ಗಿಡದ ಚಿಗುರನ್ನು ಹಾಕಿ ಕುಳಿತುಕೊಳ್ಳ

ಬೇಕು. ಹಗಲು ಉತ್ತರ ದಿಕ್ಕಿಗೆ ಮುಖವಾಗಿಯೂ, ರಾತ್ರಿಯಲ್ಲಿ ದಕ್ಷಿಣ ದಿಕ್ಕಿಗೆ ಮುಖವಾಗಿಯೂ ನಾಲ್ಕು ಕಡೆಗಳಲ್ಲಿ ನೋಡದೆ ಮೌನವಾಗಿರಬೇಕು. ಆಗ ಸೂರ್ಯಚಂದ್ರ, ನಕ್ಷತ್ರ, ನದಿ, ಆಕಾಶ, ಸ್ತ್ರೀಜನರನ್ನು ನೋಡಬಾರದು. ಶೌಚಮಾಡದೆ ಕಚ್ಚೆಯನ್ನು ಹಾಕಬಾರದು. ಕಚ್ಚೆಯನ್ನು ಬಿಚ್ಚದೆ ಲಘುಶಂಕೆಗೆ ಹೋದರೆ ನರಕವುಂಟಾಗುವುದು. ಆಗತ್ಯಕಾಲದಲ್ಲಿ ನೀರಿಲ್ಲದಿರಲು ಗಂಗೆಯನ್ನು ಸ್ಮರಿಸಬೇಕು. ಮೃತ್ತಿಕಾಶೌಚ ಮಾಡಬೇಕು. ಏನನ್ನೂ ತಿನ್ನಬಾರದು. ಭೂಮಿಯ ಮೇಲೆ ಬಹಿರ್ಭೂಮಿಗೆ ಹೋಗಬಾರದು. ಒಣಗಿದೆಲೆಗಳನ್ನು ಹಾಸಿ ಅದರ ಮೇಲೆ ಕುಳಿತುಕೊಳ್ಳಬೇಕು. ಯಾವ ದ್ವಿಜನು ನಿಂತು ಮೂತ್ರವಿಸರ್ಜನೆ ಮಾಡುವನೋ ಅವನು ಅವನ ದೇಹದ ರೋಮಗಳಿರುವಷ್ಟು ಕಾಲ ನರಕದಲ್ಲಿ ಬೀಳುವನು. ಮಲವಿಸರ್ಜನೆಮಾಡಿ ಶಿಶ್ನವನ್ನು ಧರಿಸಿ ಜಲಪಾತ್ರೆಯ ಹತ್ತಿರ ಹೋಗಿ ಮೃತ್ತಿಕಾಶೌಚ ಮಾಡಬೇಕು. ಮೃತ್ತಿಕಾಶೌಚಕ್ಕೆ ಇರುವೆ ಗೂಡಿನ ಮಣ್ಣನ್ನೂ, ಇಲಿಯ ಬಿಲದ ಮಣ್ಣನ್ನೂ, ನದಿಯ ಮಧ್ಯದ ಮಣ್ಣನ್ನೂ ತರಬಾರದು. ಜನರು ನಡೆಯುವ ದಾರಿಯ ಮಣ್ಣನ್ನೂ, ಮರದ ಬುಡದ ಮಣ್ಣನ್ನೂ, ದೇವಾಲಯ ತೀರ್ಥಕ್ಷೇತ್ರಗಳ ಮಣ್ಣನ್ನೂ ತರಬಾರದು. ಕೆರೆಭಾವಿಗಳ ಮಣ್ಣು ತಂದರೆ ಅತಿ ಪುಣ್ಯವು. ಲಿಂಗದ ಸ್ಥಾನದಲ್ಲಿ ನೀರನ್ನು ತೆಗೆದುಕೊಳ್ಳುವವನಾಗಿ ಮೃತ್ತಿಕೆಯನ್ನು ಲೇಪಿಸಬೇಕು. ಅಪಾನದ್ವಾರದಲ್ಲಿ ಐದು ಬಾರಿಯೂ, ಕೈಗಳಿಗೆ ಏಳು ಬಾರಿಯೂ ಮೃತ್ತಿಕೆಯನ್ನು ಲೇಪಿಸಬೇಕು. ಈ ರೀತಿಯಾಗಿ ಮೂತ್ರವಿಸರ್ಜನೆಯ ಕಾಲದಲ್ಲಿ ಮಾಡಬೇಕು. ಮಲವಿಸರ್ಜನೆಯಾದ ಬಳಿಕ ಇದರ ಎರಡಷ್ಟು ಮೃತ್ತಿಕೆಯನ್ನು ಲೇಪಿಸಬೇಕು. ಮೈಥುನಾಂತ್ಯದಲ್ಲಿ ಮೂರರಷ್ಟು ಶೌಚಮಾಡಬೇಕು. ಈ ರೀತಿಯಾಗಿ ಗೃಹಸ್ಥನು ಆಚರಿಸಬೇಕು. ಬ್ರಹ್ಮಚಾರಿಯು ಇದಕ್ಕೆ ದ್ವಿಗುಣವಾಗಿ ನಡೆಸಬೇಕು. ವಾನಪ್ರಸ್ಥನು ಮೂರರಷ್ಟೂ, ಯತಿಯು ನಾಲ್ಕರಷ್ಟೂ ಮೃತ್ತಿಕಾಶೌಚ ಮಾಡಬೇಕು. ನ್ಯೂನತೆಯಿಲ್ಲದೆ ಈ ರೀತಿ ಮೃತ್ತಿಕಾಶೌಚ ಮಾಡಲು ಧರ್ಮಸಿದ್ಧಿಯಾಗುವುದು. ಈ ರೀತಿಯಾಗಿ ಹಗಲು ಆಚರಿಸಬೇಕು. ರಾತ್ರಿಯಲ್ಲಿ

ಇದರಲ್ಲರ್ಧ ನಡೆಸಬೇಕು. ಸಂಕಟಕಾಲದಲ್ಲಿಯೂ, ದಾರಿ ನಡೆ ವಾಗಲೂ ಇದರರ್ಧವನ್ನು ನಡೆಯಿಸಬೇಕು. ವ್ರತಬಂಧವಾದವನಿಗೂ ಈ ಆಚಾರವು ಕರ್ತವ್ಯವಾಗಿದೆ. ಈ ಶೌಚವಿಧಿಯು ನಾಲ್ಕು ವರ್ಣ ದವರಿಗೂ ಉಕ್ತವಾಗಿದೆ. ಶೌಚವಾದ ಮೇಲೆ ಬ್ರಾಹ್ಮಣನು ಎಂಟು ಬಾರಿಯೂ, ಕ್ಷತ್ರಿಯನು ಆರು ಬಾರಿಯೂ, ವೈಶ್ಯನು ನಾಲ್ಕು ಬಾರಿಯೂ, ಶೂದ್ರನು ಎರಡು ಬಾರಿಯೂ ಬಾಯಿ ಮುಕ್ಕುಳಿಸ ಬೇಕು. ಇದಕ್ಕೆ ಹೆಚ್ಚಾಗಿ ಮಾಡಬಾರದು. ಮೂರು ಬಾರಿ ಆಚಮನ ಮಾಡಬೇಕು. ಶುಚಿಸ್ಥಾನದಲ್ಲಿ ಕುಳಿತು ಕುಲದೈವವನ್ನು ನೆನೆಯಬೇಕು. ೨೪ ನಾಮಗಳನ್ನು ಉಚ್ಚರಿಸಿ ಸುಮ್ಮನೆ ಆಚಮನ ಮಾಡಬೇಕು. ಬ್ರಾಹ್ಮಣನ ಬಲಹಸ್ತದಲ್ಲಿ ಐದು ತೀರ್ಥಗಳಿವೆ. ಅಂಗುಷ್ಠಮೂಲದ ಅಂಗೈ ಬುಡದಲ್ಲಿ ಅಗ್ನಿತೀರ್ಥವೂ, ಬ್ರಹ್ಮ ತೀರ್ಥವೂ ಇದೆ. ತರ್ಜನೀ ಅಂಗುಷ್ಠ ಮಧ್ಯದಲ್ಲಿ ಪಿತೃತೀರ್ಥವಿದೆ. ನಾಲ್ಕು ಬೆರಳುಗಳ ತುದಿಯಲ್ಲಿ ದೇವತೀರ್ಥವಿದೆ. ಕಿರುಬೆರಳ ಬುಡ ದಲ್ಲಿ ಋಷಿತೀರ್ಥವಿದೆ. ಈ ತೀರ್ಥಗಳನ್ನರಿತು ದೇವಪಿತೃತರ್ಪಣ ಮಾಡಬೇಕು. ಬ್ರಹ್ಮತೀರ್ಥದಲ್ಲಿ ಆಚಮನ ಮಾಡಬೇಕು, ಈ ರೀತಿಯಾಗಿ ಬ್ರಹ್ಮತೀರ್ಥದಲ್ಲಿ ಮೂರು ಬಾರಿ ಆಚಮನ ಮಾಡಬೇಕು. ಗೋವಿಂದನಾಮವನ್ನುಚ್ಚರಿಸಬೇಕು. ವಿಷ್ಣು ಮಧುಸೂದನ ನಾಮ ದಿಂದ ಕೈಗಳನ್ನು ತೊಳೆಯಬೇಕು. ತ್ರಿವಿಕ್ರಮ ವಾಮನ ನಾಮ ದಿಂದ ಎರಡು ಗಲ್ಲಗಳನ್ನು ಮುಟ್ಟಬೇಕು. ಶ್ರೀಧರನಾಮದಿಂದ ತುಟಿಯನ್ನು ಮುಟ್ಟಬೇಕು. ಹೃಷೀಕೇಶನೆಂದು ಹಸ್ತವನ್ನೂ, ಪದ್ಮನಾಭನೆಂದು ಪಾದದ್ವಯಗಳನ್ನೂ, ದಾಮೋದರನೆಂದು ಶಿಖಾ ಸ್ಥಾನವನ್ನೂ, ಸಂಕರ್ಷಣನೆಂದು ಪೃಷ್ಠದೇಶವನ್ನೂ, ವಾಸುದೇವ ಪ್ರದ್ಯುಮ್ನನೆಂದು ಮೂಗಿನ ಸೊಳ್ಳೆಗಳನ್ನೂ ಮುಟ್ಟಬೇಕು. ಅಚ್ಯುತ ನೆಂದು ನಾಭಿಯನ್ನೂ, ಹರಯೆ ಶ್ರೀಕೃಷ್ಣ ಎಂದು ಎರಡು ಭುಜ ಗಳನ್ನೂ ಮುಟ್ಟಬೇಕು. ಈ ರೀತಿಯಾಗಿ ಸಂಧ್ಯಾಕಾಲದಲ್ಲಿಯೂ ಮಾಡಬೇಕು. ಅಶೌಚಕಾಲದಲ್ಲಿಯೂ, ಸಂಕಟಕಾಲದಲ್ಲಿಯೂ ಮೂರು ಬಾರಿ ಆಚಮನ ಮಾಡಬೇಕು. ಗೋವಿಂದನಾಮದಿಂದ ಹಸ್ತವನ್ನು ತೊಳೆಯಬೇಕು. ಇನ್ನೊಂದು ವಿಧಿ ಯಾವುದೆಂದರೆ:—

ಮೂರು ಬಾರಿ ಆಚಮನಮಾಡಿ ಗೋವಿಂದನಾಮದಿಂದ ಹಸ್ತವನ್ನು ತೊಳೆದು ಕಣ್ಣು ಕಿವಿಗಳನ್ನು ಮುಟ್ಟಬೇಕು. ಶೂದ್ರಾದಿ ಸ್ಪರ್ಶ ವಾದರೂ ಈ ರೀತಿಯಾಗಿ ಆಚರಿಸಬೇಕು. ಮಳೆಯಿಂದ ನೆನೆದು ಬಂದಾಗ ಎರಡು ಬಾರಿ ಆಚಮನ ಮಾಡಬೇಕು. ಸ್ನಾನ ಭೋಜನ ಗಳಲ್ಲಿ ಎರಡು ಆಚಮನ ಮಾಡಬೇಕು. ಫಲಾಹಾರ ಮಾಡಿದರೂ, ನೀರು ಕುಡಿದರೂ, ಸ್ಮಶಾನದಲ್ಲಿ ತಿರುಗಿ ಬಂದರೂ ಎರಡು ಆಚಮನ ದಿಂದ ಶುದ್ಧಿಯಾಗುವುದು. ಹತ್ತಿರ ನೀರಿಲ್ಲದಿರಲು ಶ್ರೋತ್ರಾಚಮನ ಮಾಡಬೇಕು. ಈ ರೀತಿ ಆಚಮನಮಾಡಲು ಬಡತನವಿಲ್ಲ.

ದಂತಧಾವನ ವಿಧಿಯು ಹೇಗೆಂದರೆ:— ಪರ್ವಣಿಗಳಲ್ಲಿಯೂ, ಪಾಡ್ಯ, ಷಷ್ಠಿ, ನವಮಿ, ದ್ವಾದಶಿಗಳಲ್ಲಿಯೂ, ಶನಿ, ಭಾನು, ಮಂಗಳ ವಾರಗಳಲ್ಲಿಯೂ, ಶ್ರಾದ್ಧದಿನದಲ್ಲಿಯೂ, ವಿವಾಹದಿನಗಳಲ್ಲಿಯೂ ಹಲ್ಲನ್ನುಜ್ಜಬಾರದು. ಮುಳ್ಳುಗಿಡದಿಂದಲೂ, ತಾಳೆ, ಕೇದಿಗೆ, ಖರ್ಜೂರ, ತೆಂಗಿನ ಕಡ್ಡಿಗಳಿಂದ ಹಲ್ಲನ್ನುಜ್ಜಿದರೆ ಚಾಂಡಾಲನಾಗಿ ಹುಟ್ಟುವನು. ಖದಿರ = ಕಗ್ಗಲೀ ಗಿಡ, ಕರಂಜ = ಹುಲಿಯುಗುರು ಗಿಡ, ಅಷಾಢ = ಉತ್ತರಣೇ ಗಿಡ, ಅತ್ತಿ, ಎಕ್ಕ, ಆಲದ ಕಡ್ಡಿಯಿಂದಾ ಗಲೀ, ಕಮರಿಕೆ ಗಿಡದ ಕಡ್ಡಿಯಿಂದಾಗಲೀ ಹಲ್ಲುಜ್ಜಬೇಕು. ಬ್ರಾಹ್ಮಣನು ೧೨ ಅಂಗುಲವೂ, ಕ್ಷತ್ರಿಯನು ೯ ಅಂಗುಲವೂ, ವೈಶ್ಯ ಶೂದ್ರರು ೬ ಅಂಗುಲವೂ ಉಳ್ಳ ಕಡ್ಡಿಗಳಿಂದ ಹಲ್ಲನ್ನುಜ್ಜಬೇಕು. **ಆಯುಃ ಪ್ರಜ್ಞಾ** ಎಂಬ ಮಂತ್ರದಿಂದ ಮೇಲೆ ಹೇಳಿದ ಗಿಡಗಳ ಕಡ್ಡಿಯನ್ನು ಮುರಿದು ತರಬೇಕು. ಹಲ್ಲನ್ನುಜ್ಜಿದ ಕಡ್ಡಿಯನ್ನು ನೈಋತ್ಯ ದಿಕ್ಕಿನಲ್ಲಿ ಹಾಕಿ ಹನ್ನೆರಡು ಬಾರಿ ಬಾಯಿ ಮುಕ್ಕುಳಿಸು ವುದು. ಬಳಿಕ ಎರಡು ಸಾರಿ ಆಚಮನಮಾಡಬೇಕು. ಬಳಿಕ ಪ್ರಾತಃ ಸ್ನಾನಮಾಡಲು ಸರ್ವಸಾಧನವಾಗಿ ತೇಜಸ್ಸೂ, ಬಲವೂ, ಆಯುಷ್ಯವೂ, ಜ್ಞಾನವೂ ಹೆಚ್ಚುವುದು. ದುಃಸ್ವಪ್ನ ನಾಶವಾಗು ವುದು. ಸರ್ವದೇವತೆಗಳೂ ವಶರಾಗುವರು. ಸೌಭಾಗ್ಯವೂ, ಸುಖ ಹರ್ಷಗಳೂ ಉಂಟಾಗುವುವು. ಸನ್ಯಾಸಿಯು ತ್ರಿಕಾಲ ಸ್ನಾನ ಮಾಡಬೇಕು. ಬ್ರಹ್ಮಚಾರಿಯು ಒಂದು ಬಾರಿ ಸ್ನಾನಮಾಡಬೇಕು. ನಿತ್ಯವೂ · ಹೀಗೆ ಸ್ನಾನಮಾಡಲು ಪಾಪ ನಾಶವಾಗುವುದು.

ಗೃಹಸ್ಥನೂ, ವಾನಪ್ರಸ್ಥನೂ ಪ್ರಾತಃಕಾಲದಲ್ಲಿಯೂ, ಮಧ್ಯಾಹ್ನ ದಲ್ಲಿಯೂ ಸ್ನಾನಮಾಡಬೇಕು. ಸಂಕಟಕಾಲದಲ್ಲಿಯೂ, ನಿರ್ಮ ಲೋದಕ ದೊರೆಯದ ಕಾಲದಲ್ಲಿಯೂ ಸ್ನಾನಮಾಡುವುದು ಹೇಗೆಂದರೆ: — ಅಗ್ನಿಸ್ನಾನವನ್ನಾಗಲೀ, ಭಸ್ಮಸ್ನಾನವನ್ನಾಗಲೀ, ವಾಯುಸ್ನಾನವನ್ನಾಗಲೀ, ಆಪೋಹಿಷ್ಠಾ ಎಂಬ ಮಂತ್ರದಿಂದ ಆಗಲೀ ಸ್ನಾನಮಾಡಬೇಕು. ಭಾವಭಕ್ತಿಯಿದ್ದವರಿಗೆ ಗುರುದೇವತಾ ದರ್ಶನ ದಿಂದಲೇ ತೀರ್ಥಸ್ನಾನ ಫಲವುಂಟಾಗುವುದು. ಅಥವಾ ತಾಯಿ ತಂದೆಗಳ ದರ್ಶನಮಾಡಿ ಅವರ ಚರಣತೀರ್ಥವನ್ನು ಭಕ್ತಿಯಿಂದ ಮೈ ಮೇಲೆ ಪ್ರೋಕ್ಷಿಸಲು ತೀರ್ಥಸ್ನಾನ ಫಲವುಂಟಾಗುವುದು. ಅಥವಾ ಮಳೆಯಲ್ಲಿ ನೆನೆದು ಗಾಳಿಯನ್ನು ತೆಗೆದುಕೊಳ್ಳುತ್ತಾ ಗೋಧೂಳಿ ಯಲ್ಲಿ ಕುಳಿತರೆ ಸ್ನಾನಫಲವುಂಟು. ಚಾಂಡಾಲ ಸ್ಪರ್ಶವಾದರೆ ಜಲ ಸ್ನಾನದಿಂದ ಶುದ್ಧನಾಗುವನು. ಶೂದ್ರಸ್ಪರ್ಶವಾದರೆ ಉಪಸ್ನಾನ ಮಾಡಬೇಕು. ದೇಹವು ಆರೋಗ್ಯವಾಗಿರಲು ನರನು ಜಲಸ್ನಾನ ಮಾಡಬೇಕು. ಯುದ್ಧದಲ್ಲಿಯೂ, ಸಂಕಟದಲ್ಲಿಯೂ ಉಪಸ್ನಾನ ಮಾಡಬೇಕು. ಪ್ರಾತಃಸ್ನಾನಕ್ಕೆ ಶೀತೋದಕವೇ ಉತ್ತಮವು. ಅಶಕ್ತನಾಗಿದ್ದರೆ ಉಷ್ಣೋದಕ ಸ್ನಾನಮಾಡಬೇಕು. ಗೃಹಸ್ಥನಿಗೂ ಉಷ್ಣೋದಕ ಸ್ನಾನವೇ ಯೋಗ್ಯವು. ಬಿಸಿನೀರಿಗೆ ತಣ್ಣೀರನ್ನು ಬೆರೆಯಿಸಿ ಆಚಮನಮಾಡಿ ಸಂಕಲ್ಪಮಾಡಬೇಕು. ಮನೆಯಲ್ಲಿ ಸ್ನಾನಮಾಡುವಾಗ ಅಘಮರ್ಷಣವನ್ನೂ, ತರ್ಪಣವನ್ನೂ ಮಾಡ ಬೇಕಾಗಿಲ್ಲ. ಪುತ್ರೋತ್ಸವದಲ್ಲಿಯೂ, ಸಂಕ್ರಾಂತಿಯಲ್ಲಿಯೂ, ಶ್ರಾದ್ಧ ಕಾಲದಲ್ಲಿಯೂ, ಮೃತದಿನದಲ್ಲಿಯೂ, ಪರ್ವಣಿಗಳಲ್ಲಿಯೂ ಉಷ್ಣೋ ದಕ ಸ್ನಾನಮಾಡಬಾರದು. ಸ್ನಾನಮಾಡಿ ಜುಟ್ಟನ್ನು ಕಟ್ಟಿ ದರ್ಭ ಹಸ್ತನಾಗಿ ಸೂರ್ಯಾಭಿಮುಖನಾಗಿ ಮೌನದಿಂದ ಮೂರು ಬಾರಿ ಗಾಯತ್ರಿಯನ್ನು ಹೇಳಿ ಸ್ನಾನೋದಕವನ್ನು ಮಂತ್ರಿಸಬೇಕು. ಮೊದಲು ತಣ್ಣೀರನ್ನು ತೆಗೆದುಕೊಂಡು ಬಳಿಕ ಬಿಸಿನೀರನ್ನು ಸೇರಿಸಿ ನಿತ್ಯವೂ ಗೃಹಸ್ಥನು ಮನೆಯಲ್ಲಿ ಸ್ನಾನಮಾಡಬೇಕು. **ಅವಧೂತ ಮಂತ್ರ**ವನ್ನು ಜಪಿಸಿ ವಸ್ತ್ರವನ್ನು ಹಿಂಡಬೇಕು. **ಉದ್ಯಂತ ಮಂತ್ರ** ವನ್ನು ಜಪಿಸಿ ವಸ್ತ್ರವನ್ನು ಸೂರ್ಯನಿಗೆ ತೋರಿಸಿ ಆಚಮನಮಾಡಿ

**ದೇವಸ್ಯತ್ವಾ** ಮಂತ್ರವನ್ನು ಜಪಿಸಿ ಒಣಗಿದ ಬಟ್ಟೆಯನ್ನುಟ್ಟು **ಆವಹಂತೀ** ಎಂಬ ಮಂತ್ರವನ್ನು ಜಪಿಸಿ ಶುದ್ಧ ವಸ್ತ್ರವನ್ನುಟ್ಟು ಎರಡು ಸಾರಿ ಆಚಮನ ಮಾಡಬೇಕು. ಮಂತ್ರಸ್ನಾನ ವಿಧಿಯು ಹೇಗೆಂದರೆ:—**ಆಪೋಹಿಷ್ಠಾ** ಮಂತ್ರದಿಂದ ಪಾದ, ತಲೆ, ಹೃದಯ ಗಳಲ್ಲಿ ಮಂತ್ರಿಸಿ ಪ್ರೋಕ್ಷಿಸಿಕೊಳ್ಳಬೇಕು. ಹೀಗೆ ಸ್ನಾನಮಾಡಿ ಆಚಮನಮಾಡಿ, ಚತುರ್ಭುಜಗಳಿಂದಲಂಕೃತನಾದ ನಾರಾಯಣನನ್ನು ಭಕ್ತಿಯಿಂದ ಧ್ಯಾನಿಸಿದರೆ ಮಾನಸಸ್ನಾನವಾಗುವುದು. **ಅಪವಿತ್ರಃ ಪವಿತ್ರೋವಾ ಮಂತ್ರ**ದಿಂದ ಹರಿಯನ್ನು ಧ್ಯಾನಿಸಿ ನೀರನ್ನು ಪ್ರೋಕ್ಷಿಸಲು ಸ್ನಾನಫಲವುಂಟಾಗುವುದು. ಭಾನುವಾರ ಅಭ್ಯಂಗ ಮಾಡಲು ಜ್ವರವುಂಟಾಗುವುದು. ಆದುದರಿಂದ ಅಭ್ಯಂಗವು ನಿಷೇಧವು. ನದೀತೀರದಲ್ಲಿರುವ ನರನು ಅಶಕ್ತನಾಗಿದ್ದರೆ ಗಂಗೆಯನ್ನು ಸ್ಮರಿಸಿ ಒದ್ದೆ ಬಟ್ಟೆಯಿಂದ ಮೈಯನ್ನು ಜ್ಜಬೇಕು. ಸೋಮವಾರ ಅಭ್ಯಂಗ ಮಾಡಲು ಕಾಂತಿಹಾನಿಯೂ, ಮಂಗಳವಾರ ಸ್ನಾನಮಾಡಲು ಮೃತ್ಯುವೂ, ಬುಧವಾರ ಐಶ್ವರ್ಯವೂ, ಗುರುವಾರ ಹಾನಿಯೂ, ಶುಕ್ರವಾರ ಪುತ್ರಘಾತವೂ, ಶನಿವಾರ ಸಕಲ ಸಂಪತ್ತೂ ಉಂಟಾಗು ವುದು. ನದಿಯಲ್ಲಿ ಪ್ರವಾಹಾಭಿಮುಖವಾಗಿಯೂ, ಮನೆಯಲ್ಲಿ ಸೂರ್ಯಾಭಿಮುಖವಾಗಿಯೂ, ಸಂಧ್ಯಾಕಾಲದಲ್ಲಿ ಪಶ್ಚಿಮಾಭಿಮುಖ ವಾಗಿಯೂ ಸ್ನಾನಮಾಡಬೇಕು. ನದಿಯಲ್ಲಿ ಸ್ನಾನಮಾಡುವಾಗ ಅಘಮರ್ಷಣ ಮಾಡಬೇಕು. **ನಮೋಗ್ನಯೇಪ್ಸುಮತೇ** ಎಂಬ ಮಂತ್ರದಿಂದ ಸ್ನಾನಮಾಡಬೇಕು. **ಯದಪಾಂ ಕ್ರೂರಂ** ಎಂಬ ಮಂತ್ರದಿಂದ ನೀರನ್ನು ಎರಡು ಕೈಗಳಿಂದ ಮೂರು ಬಾರಿ ಓರೆಮಾಡಿ **ಇಮಂ ಮೇ ಗಂಗೇತಿ** ಮಂತ್ರವನ್ನು ಜಪಿಸಬೇಕು. **ಋತಂ ಚ ಸತ್ಯಂ ಚ** ಎಂಬ ಮಂತ್ರವನ್ನು ಜಪಿಸಿ ವಿಧಿಪೂರ್ವಕವಾಗಿ ನದಿಯಲ್ಲಿ ಸ್ನಾನಮಾಡಬೇಕು. ರೋದನಾಂತ್ಯದಲ್ಲಿಯೂ ವ ಮನಾಂತ್ಯ ದಲ್ಲಿಯೂ, ಮೈಥುನಾಂತ್ಯದಲ್ಲಿಯೂ, ದುಃಸ್ವಪ್ನದರ್ಶನಾಂತ್ಯ ದಲ್ಲಿಯೂ ಸ್ನಾನಮಾಡಲು ಶುದ್ಧನಾಗುವನು. ಗೃಹಸ್ಥನು ಒದ್ದೆ ಬಟ್ಟೆಯನ್ನುಡಬಾರದು. ಕಚ್ಚೆ ಹಾಕದೇ ಉಡಬಾರದು. ಕೆಂಪು ಬಟ್ಟೆ, ಹರಕು ಬಟ್ಟೆ, ಒಂದೇ ಬಟ್ಟೆಯನ್ನು ಧರಿಸಿ ಜಪಮಾಡಲು ಆ

ಪುಣ್ಯವು ರಾಕ್ಷಸರಿಗೆ ಸೇರುವುದು. ಬಿಳೀ ಬಟ್ಟೆಯು ಬ್ರಾಹ್ಮಣರಿಗೆ ಮುಖ್ಯವು. ಉತ್ತರೀಯವಾದ ಬಹಿರ್ವಾಸವು ಉಪವಸ್ತ್ರವಾಗಿರಬೇಕು. ಧೋತ್ರವನ್ನುಟ್ಟು ವಿಭೂತಿಯನ್ನು ಮಂತ್ರವಿಧಿಯಿಂದ ಧರಿಸಬೇಕು. ಶುದ್ಧ ಭಸ್ಮವು ಸಿಕ್ಕದಿದ್ದರೆ ಗೋಪೀಚಂದನವನ್ನು ಹಚ್ಚಬೇಕು. ಇನ್ನಾವ ಮಣ್ಣೂ ಗ್ರಾಹ್ಯವಲ್ಲವು. ದ್ವಾರಕೆಯ ಮೃತ್ತಿಕೆ ದೊರೆಯದಿರಲು ಗಂಗಾಮೃತ್ತಿಕೆಯಿಂದ ಊರ್ಧ್ವಪುಂಡ್ರ ಧರಿಸಲು ವಿಷ್ಣುಸಾಯುಜ್ಯವಾಗುವುದು. ಪುಷ್ಟಿಯನ್ನು ಬಯಸುವವನು ಅಂಗುಷ್ಠದಿಂದಲೂ, ಆಯುಷ್ಕಾಮಿಯು ಮಧ್ಯಮಾಂಗುಲಿಯಿಂದಲೂ, ಅನ್ನಕಾಮಿಯು ಅನಾಮಿಕೆಯಿಂದಲೂ, ಮುಕ್ತಿಕಾಮಿಯು ತರ್ಜನಿಯಿಂದಲೂ ಭಸ್ಮವನ್ನು ಲೇಪಿಸಬೇಕು. ಉಗುರಿನಿಂದ ಭಸ್ಮವನ್ನು ಲೇಪಿಸಲು ಮಹಾಪಾಪವು. ಭಸ್ಮವನ್ನು ಹತ್ತು ಅಂಗುಲ ಪ್ರಮಾಣವಾಗಿ ಲೇಪಿಸುವುದು ಉತ್ತಮವು. ಒಂಭತ್ತು ಅಂಗುಲ ಧರಿಸುವುದು ಮಧ್ಯಮವು. ಐದಾರೇಳು ಅಂಗುಲ ಪ್ರಮಾಣದಿಂದಾದರೂ ಶೂರ್ಪಾಕಾರವಾಗಿ ಭಸ್ಮವನ್ನು ಲೇಪಿಸಬೇಕು. ಎರಡು ಮೂರು ನಾಲ್ಕು ಅಂಗುಲ ಲೇಪಿಸುವುದು ಅಧಮಪಕ್ಷವು. ವಿಷ್ಣುನಾಮವನ್ನುಚ್ಚರಿಸಿ ಹನ್ನೆರಡು ನಾಮಗಳನ್ನು ಧರಿಸಬೇಕು. ಕೇಶವನಾಮದಿಂದ ಹಣೆಯಲ್ಲಿಯೂ, ನಾರಾಯಣನೆಂದು ನಾಭಿಯಲ್ಲಿಯೂ, ಮಾಧವನೆಂದು ಹೃದಯದಲ್ಲಿ ಕಮಲದಂತೆಯೂ, ಗೋವಿಂದನೆಂದು ಕಂಠದಲ್ಲಿಯೂ, ವಿಷ್ಣುವೆಂದು ಕಟಿಯಲ್ಲಿಯೂ, ಮಧುಸೂದನನೆಂದು ದಕ್ಷಿಣ ಭುಜದಲ್ಲಿಯೂ, ತ್ರಿವಿಕ್ರಮನೆಂದು ನಾಭಿಯ ಉತ್ತರದಲ್ಲಿಯೂ, ವಾಮನನೆಂದು ಬಾಹುವಿನಲ್ಲಿಯೂ, ಶ್ರೀಧರನೆಂದು ಬಲಗಿವಿಯಲ್ಲಿಯೂ, ಹೃಷೀಕೇಶನೆಂದು ಎಡಗಿವಿಯಲ್ಲಿಯೂ, ಪದ್ಮನಾಭನೆಂದು ಬಲದ ಸೊಂಟದಲ್ಲಿಯೂ, ದಾಮೋದರನೆಂದು ಶಿರದಲ್ಲಿಯೂ ಗೋಪೀಚಂದನದಿಂದ ಊರ್ಧ್ವಪುಂಡ್ರವನ್ನು ಧರಿಸಲು ಪಾಪಗಳು ಸುಟ್ಟುಹೋಗುವುವು. ಗೋಪೀಚಂದನವನ್ನು ಹಚ್ಚಿ ಭಸ್ಮತ್ರಿಪುಂಡ್ರವನ್ನು ಧರಿಸಲು ಹರಿಹರರು ಸಂತೋಷಿಸುವರು. ಭುಕ್ತಿ ಮುಕ್ತಿಗಳುಂಟಾಗುವುವು. ವಿವಾಹಾದಿ ಶುಭದಿನಗಳಲ್ಲಿಯೂ, ದೇವಕಾರ್ಯಗಳಲ್ಲಿಯೂ, ಶ್ರಾದ್ಧ

ದಿನದಲ್ಲಿಯೂ, ಅಭ್ಯಂಗಾಂತ್ಯದಲ್ಲಿಯೂ, ಸೂತಕದಲ್ಲಿಯೂ ಗೋಪಿ
ಚಂದನವನ್ನು ಬಿಡಬೇಕು.

ಬ್ರಹ್ಮಯಜ್ಞ ತರ್ಪಣಾದಿಗಳಿಗೆ ಬೇಕಾದ ದರ್ಭೆಗಳ ವಿಷಯ
ವೇನೆಂದರೆ:—ದರ್ಭೆಯಲ್ಲಿ ದೂರ್ವಾ, ಲಾವಂಚ, ಕುಶ, ಕಾಶ
ಸಕುದ, ಗೋಧೂಮ, ವ್ರೀಹಿ, ಮೌಂಜೀಷ, ಮುಸ್ತಕ, ದರ್ಭೆ
ಎಂದು ಹತ್ತು ಭೇದಗಳಿವೆ. ನಿತ್ಯವೂ ದೂರ್ವೆಯನ್ನು ತರಬೇಕು
ಇದು ಸಾಧ್ಯವಾಗದಿದ್ದರೆ ಶ್ರಾವಣ, ಭಾದ್ರಪದಗಳಲ್ಲಿ ವರ್ಷಕ್ಕೆ
ಬೇಕಾದಷ್ಟು ಸಂಗ್ರಹಿಸಬೇಕು. ಬ್ರಾಹ್ಮಣನಿಗೆ ನಾಲ್ಕು ದೂರ್ವೆ
ಗಳೂ, ಕ್ಷತ್ರಿಯನಿಗೆ ಮೂರು, ವೈಶ್ಯನಿಗೆ ಮೂರು, ಶೂದ್ರನಿ
ಒಂದು ದೂರ್ವೆಯೂ ನಿಯಮಿತವಾಗಿದೆ. ಅನುಪಮವಾದ
ದೂರ್ವೆಯ ಮಹಿಮೆಯು ಅಗಾಧವಾಗಿದೆ. ಇದರ ತುದಿಯ
ಬ್ರಹ್ಮನೂ, ಮೂಲದಲ್ಲಿ ರುದ್ರನೂ, ಮಧ್ಯದಲ್ಲಿ ವಿಷ್ಣುವೂ ಇರುವರು
ಅಗ್ರದಲ್ಲಿ ನಾಲ್ಕಂಗುಲವೂ, ಗಣ್ಣಿನ ಬುಡದಲ್ಲಿ ಎರಡಂಗುಲವ
ಇರುವದನ್ನು ವಿಪ್ರರು ಧರಿಸಬೇಕು. ಇದರ ಮಹಿಮೆಯು
ದೊಡ್ಡದು. ಚಕ್ರವನ್ನು ಧರಿಸಿ ವಿಷ್ಣುವೂ, ತ್ರಿಶೂಲವಂ ಧರಿ
ಶಂಕರನೂ, ವಜ್ರವನ್ನು ಧರಿಸಿ ಇಂದ್ರನೂ ರಾಕ್ಷಸರನ್ನು ಗೆದ್ದಂ
ದೂರ್ವೆಯನ್ನು ಧರಿಸಿದ ವಿಪ್ರನು ಪಾಪಗಳನ್ನು ಗೆಲ್ಲುವನು. ದರ್ಭೆ
ಯನ್ನು ಧರಿಸುವುದರಿಂದ ಹುಲ್ಲು ಬಣವಿಗೆ ಬೆಂಕಿ ಬಿದ್ದು ಸುಟ್ಟಂ
ಪಾಪ ನಾಶವಾಗುವುದು. ಬ್ರಹ್ಮಯಜ್ಞ ಜಪಗಳಲ್ಲಿ ದರ್ಭೆಯನ್ನು
ಗಂಟುಹಾಕಿಯೂ, ಭೋಜನಕಾಲದಲ್ಲಿ ದುಂಡಾಗಿ ಗಂಡುಹಾಕಿಯೂ
ಧರಿಸಬೇಕು. ಕರ್ಮಕಾಲದಲ್ಲಿ ದೂರ್ವೆಯನ್ನು ಧರಿಸಲು ಬೆಂಕಿಯ
ತಗಲಿ ಕರ್ಪೂರ ರಾಶಿಯು ಸುಟ್ಟುಹೋದಂತೆ ಥಟ್ಟನೆ ಪಾಪ ನಾ
ವಾಗುವುದು. ಹನ್ನೊಂದು ಅಂಗುಲದ ೨ ದರ್ಭೆಯ ಪವಿತ್ರವನ್ನು
ನಿತ್ಯಕರ್ಮದಲ್ಲಿ ಧರಿಸಬೇಕು. ಜಪ ಹೋಮಾದಿಗಳಲ್ಲಿಯೂ, ದಾ
ದಲ್ಲಿಯೂ, ವೇದಾಧ್ಯಯನದಲ್ಲಿಯೂ, ಪಿತೃಕರ್ಮದಲ್ಲಿಯೂ ಚಿನ
ಅಥವಾ ಬೆಳ್ಳಿಯ ಮುದ್ರೆಯುಂಗುರವನ್ನು ಧರಿಸಿ ಕುಶಪವಿತ್ರವನ
ಧರಿಸಬೇಕು. ದೇವ ಪಿತೃಕರ್ಮಗಳಲ್ಲಿ ತರ್ಜನೀ ಬೆರಳಿನಲ್ಲಿ ಬೆ
ಯುಂಗುರವನ್ನೂ, ಅನಾಮಿಕೆಯಲ್ಲಿ ಚಿನ್ನದುಂಗುರವನ್ನೂ ಧರಿ

ಬೇಕು. ತಂದೆ ಜೀವಿಸಿರಲು ಪವಿತ್ರ ಮತ್ತೂ ಪಾದುಕೆಗಳನ್ನೂ ಧರಿಸಬಾರದು. ಗಯಾಶ್ರಾದ್ಧ ಮಾಡಬಾರದು. ನವರತ್ನ ಮುದ್ರಿಕೆ ಯನ್ನು ಬೆರಳಲ್ಲಿ ಧರಿಸಿದರೆ ಅವನಿಗೆ ದುರಿತವು ತಗಲದು. ರತ್ನಖಚಿತ ವಾದ ಪವಿತ್ರದುಂಗುರವನ್ನು ಧರಿಸಬೇಕು. ಪ್ರಾತಃ ಸಂಧ್ಯಾವಿಧಿ ಯನ್ನು ಕೇಳಿರಿ. ನಕ್ಷತ್ರವಿರುವಾಗಲೇ ಸಂಧ್ಯೆಯನ್ನು ಪ್ರಾರಂಭಿಸಿ ಸೂರ್ಯೋದಯಕಾಲದಲ್ಲಿ ಅರ್ಘ್ಯ ಕೊಟ್ಟು ಜಪಮಾಡುತ್ತಾ ನಿಂತಿರ ಬೇಕು. ಸೂರ್ಯೋದಯಕ್ಕೆ ಮೊದಲು ಅರ್ಘ್ಯಕೊಡಬಾರದು. ಸಂಧ್ಯಾವಂದನೆ ವಿಧಿಯನ್ನು ವಿಸ್ತಾರವಾಗಿ ಹೇಳುವೆನು ಕೇಳಿರಿ. ವಿಪ್ರನು ದರ್ಭೆಯನ್ನು ಧರಿಸಿ ಆಸನದಲ್ಲಿ ಕುಳಿತು ಜುಟ್ಟು ಗಂಟು ಹಾಕಿ ಗಾಯತ್ರೀ ಜಪಮಾಡಬೇಕು. ದೇವತೀರ್ಥದಲ್ಲಿ ಎರಡು ಬಾರಿ ಆಚಮನವಮಾಡಿ ವಿಷ್ಣುವಂ ನೆನೆದು ನ್ಯಾಸಪೂರ್ವಕವಾಗಿ ಪ್ರಾಣಾ ಯಾಮ ಮಾಡಬೇಕು. ಪ್ರಣವಕ್ಕೆ ಪರಬ್ರಹ್ಮ ಋಷಿಯು. ಗಾಯತ್ರೀ ಛಂದಸ್ಸು. ಪರಮಾತ್ಮನೇ ದೇವತೆಯು. ಓಂಕಾರವು ಸತ್ಯಜ್ಞಾನವುಳ್ಳದ್ದು. ಓಂ ಎಂದು ನಾಭಿಯನ್ನೂ, ಹೃದಯವನ್ನೂ, ತಲೆಯನ್ನೂ ಮುಟ್ಟಬೇಕು. ಈ ಸಪ್ತವ್ಯಾಹೃತಿಗಳಿಗೆ ಪ್ರಜಾಪತಿಯೇ ಋಷಿಯು. ಅಗ್ನಿ, ವಾಯು, ಗುರು, ರವಿ, ವರುಣ, ಇಂದ್ರ, ವಿಶ್ವೇದೇವರು ಅಧಿಪತಿಗಳು. ಗಾಯತ್ರೀ, ಉಷ್ಣಿಕ್, ಅನುಷ್ಟುಪ್, ಬೃಹತೀ, ಪಙ್ಕ್ತಿ, ತ್ರಿಷ್ಟುಪ್, ಜಗತೀ ಛಂದಸ್ಸುಗಳು ಈ ವ್ಯಾಹೃತಿ ಗಳಲ್ಲಿ ಉಕ್ತವಾಗಿವೆ. ಓಂ–ಭೂಃ ಎಂದು ಪಾದವನ್ನೂ, ಭುವಃ ಎಂದು ಮೊಣಕಾಲನ್ನೂ, ಸುವಃ ಎಂದು ಗುಹ್ಯವನ್ನೂ, ಓಂ ಮಹಃ ಎಂದು ನಾಭಿಯನ್ನೂ, ಜನಃ ಎಂದು ಹೃದಯವನ್ನೂ, ತಪಃ ಎಂದು ಕಂಠವನ್ನೂ, ಸತ್ಯಂ ಭೂಃ ಎಂದು ಹಣೆಯನ್ನೂ ಮುಟ್ಟಬೇಕು. ಗಾಯತ್ರೀ ಛಂದಸ್ಸಿಗೆ ವಿಶ್ವಾಮಿತ್ರ ಋಷಿಯು ಅಧಿಪತಿಯು. ಓಂ ಭೂಃ ಹೃದಯಾ ಓಂ ಭುವಃ ಶಿರಸೇ ಸುವಃ ಶಿಖಾ ಓಂ ತತ್ಸ....ಣ್ಯಂ ಕವಚಾ । ಓಂ ಭರ್ಗೋ......ಹಿ ನೇತ್ರತ್ರಯಾ । ಧಿಯೊಯೊ......ತ್ ಅಸ್ತ್ರಾಯ । ಓಂ ಭೂರಿತಿ ದಿಗ್ಬಂಧಃ ॥ ಎಂದು ನ್ಯಾಸಮಾಡಬೇಕು. ಪ್ರಾಣಾಯಾಮಕ್ಕೆ ಬ್ರಹ್ಮಾಗ್ನಿ, ವಾಯು, ಸೂರ್ಯರು ದೇವತೆ ಗಳು. ಬ್ರಹ್ಮಾಭೂರ್ಭುವಸ್ಸುವರಿರೆ ಪ್ರಾಣಾಯಾಮವನ್ನು ಮೂರು

ಬಾರಿ ಮಾಡಬೇಕು. ತ್ರಿಪದಾ ಗಾಯತ್ರಿಯನ್ನು ಜಪಿಸಲು ಸರ್ವ ಸಿದ್ಧಿಯಾಗುವುದು. ಗಾಯತ್ರಿಗೆ ಬ್ರಹ್ಮಾಗ್ನಿವಾಯು ಸವಿತೃಗಳು ದೇವತೆಗಳು. ಬ್ರಹ್ಮನೇ ಋಷಿಯು, ಸಪ್ತಲೋಕನ್ಯಾಸಗಳ್ಯಾವುವೆಂದರೆ:–ಪಾದನ್ಯಾಸವು ಭೂಲೋಕವು. ಜಾನುವು ಭುವರ್ಲೋಕವು. ಗುಹ್ಯವು ಸ್ವರ್ಲೋಕವು. ನಾಭಿಯು ಮಹರ್ಲೋಕವು. ಹೃದಯವು ಜನೋಲೋಕವು. ಕಂಠವು ತಪೋಲೋಕವು. ಸತ್ಯಲೋಕವು ಹುಬ್ಬು, ಹಣೆಯೂ. ಈ ರೀತಿಯಾಗಿ ಶಿರಸ್ಸು ಸತ್ಯಲೋಕವು ಎನ್ನುವರು. ಗಾಯತ್ರಿಯನ್ನು ಪ್ರಾರ್ಥಿಸಿ ಪ್ರಾಣಾಯಾಮ ಮಾಡಬೇಕು. ಬ್ರಹ್ಮಚಾರಿಯೂ, ಗೃಹಸ್ಥನೂ ಐದಂಗುಲಿಗಳಿಂದ ಮೂಗನ್ನು ಹಿಡಿದು ಪ್ರಾಣಾಯಾಮ ಮಾಡಬೇಕು. ವಾನಪ್ರಸ್ಥನೂ ಯತಿಯೂ ಅನಾಮಿಕೆ ಕನಿಷ್ಠಾಂಗುಲಿಗಳಿಂದ ಹಿಡಿದು ಪ್ರಾಣಾಯಾಮ ಮಾಡುವಾಗ ಓಂಕಾರಾದಿಯಾಗಿ ವಾಯುಪೂರಣದಿಂದ ದಕ್ಷಿಣನಾಸಿಕವನ್ನು ಹತ್ತಿ ವಾಮನಾಸಿಕೆಯಿಂದ ಬಿಟ್ಟು ಈ ರೀತಿ ಮೂರು ಬಾರಿ ಪ್ರಾಣಾಯಾಮವನ್ನು ತ್ರಿಕಾಲ ಸಂಧ್ಯೆಯಲ್ಲಿಯೂ ಆಚರಿಸಬೇಕು. ಮಾರ್ಜನೆ ಕ್ರಮ ಹೇಗೆಂದರೆ:—ಸ್ಮೃತಿಚಂದ್ರಿಕೆಯಲ್ಲಿ ಸರ್ವ ಋಷಿಗಳೂ ಹೇಳಿರುವುದೇನೆಂದರೆ:—ಆಪೋಹಿಷ್ಠಾ ಸೂಕ್ತಕ್ಕೆ ಸಿಂಧುದ್ವೀಪ ಋಷಿಯು, ಗಾಯತ್ರೀ ಛಂದಸ್ಸು, ಮಾರ್ಜನೆಗೆ ಆಪೋದೇವತೆಯು. ಈ ಮಂತ್ರದಿಂದ ಕುಶಪವಿತ್ರ ಧರಿಸಿ ಮಾರ್ಜನ ಮಾಡಬೇಕು. **ಯಸ್ಯಕ್ಷಯಾಯ** ಮಂತ್ರದಿಂದ ಪಾದಗಳಲ್ಲಿ ಪ್ರೋಕ್ಷಿಸಬೇಕು. **ಆಪೋಜನ** ಮಂತ್ರದಿಂದ ತಲೆಯಲ್ಲಿ ಪ್ರೋಕ್ಷಿಸಬೇಕು. **ಸೂರ್ಯಶ್ಚೇತಿ** ಮಂತ್ರದಿಂದ ನೀರನ್ನು ಪ್ರಾಶನ ಮಾಡಬೇಕು. **ಹಿರಣ್ಯವರ್ಣ** ಸೂಕ್ತದಿಂದ ಮಾರ್ಜನ ಮಾಡಬೇಕು. **ದ್ರುಪದಾದಿ** ಮಂತ್ರದಿಂದ ನೀರನ್ನು ಮೂಸಿ ಬಿಡಬೇಕು. ಬಳಿಕ ಎರಡು ಆಚಮನ ಮಾಡಬೇಕು. ವಾಮಹಸ್ತದಲ್ಲಿ ಪಾತ್ರೆಯನ್ನು ಹಿಡಿದು ಮಾರ್ಜನ ಮಾಡಬೇಕು. ಅತ್ತಿಯ ಮರ, ಚಿನ್ನ, ಬೆಳ್ಳಿ, ಮರ ಇವುಗಳ ಪಾತ್ರೆಗಳು ಪವಿತ್ರವಾದುವು. ಮಣ್ಣಿನ ಪಾತ್ರೆಯೂ, ದ್ವಿಮುಖಿಯೂ, ಭಿನ್ನಪಾತ್ರೆಯೂ ಅಶುದ್ಧವು. ಇವನ್ನು ದೇವ ಪಿತೃಕರ್ಮಗಳಲ್ಲಿ ಉಪಯೋಗಿಸಬಾರದು.

ಮಾರ್ಜನ ಸಂಖ್ಯೆ ಹೇಗೆಂದರೆ:—ತಲೆಯಲ್ಲಿ ಎಂಟು, ಪಾದಗಳಲ್ಲಿ ಒಂಭತ್ತು ಸಾರಿ **ಯಸ್ಯಕ್ಷಯಾಯ** ಎಂದು ಭೂಮಿಗೆ ಮಾರ್ಜನ ಮಾಡಬೇಕು. ಮಧ್ಯಾಹ್ನದಲ್ಲಿ **ಆಪಃ ಪುನಂತು** ಮಂತ್ರದಿಂದಲೂ ಸಾಯಂಕಾಲ **ಅಗ್ನಿಶ್ಚ** ಮಂತ್ರದಿಂದಲೂ ನೀರನ್ನು ಪ್ರಾಶನಮಾಡಿ ಎರಡು ಆಚಮನ ಮಾಡಬೇಕು. ನೀರನ್ನು ಮೂಸಿ ಬಿಟ್ಟು ಆಚಮನ ಮಾಡಬೇಕು. ಗೋಶೃಂಗದ ಆಕೃತಿಯಿಂದ ಮೂರು ಅರ್ಘ್ಯಗಳನ್ನು ಸಾಯಂ ಪ್ರಾತಃಕಾಲಗಳಲ್ಲಿ ಗಾಯತ್ರಿಯಿಂದ ಕೊಡಬೇಕು. ಮಧ್ಯಾಹ್ನದಲ್ಲಿ **ಹಂಸಃಶುಚಿ** ಮಂತ್ರದಿಂದ ಅರ್ಘ್ಯ ಕೊಡಬೇಕು. ಪ್ರಾತಃಕಾಲ ಮಧ್ಯಾಹ್ನಗಳಲ್ಲಿ ನಿಂತುಕೊಂಡೂ, ಸಾಯಂಕಾಲ ಕೂತುಕೊಂಡೂ ಅರ್ಘ್ಯ ಕೊಟ್ಟು ಮೂರು ಆಚಮನ ಮಾಡಬೇಕು. **ಅಸಾವಾದಿತ್ಯ** ಎಂದು ಪ್ರದಕ್ಷಿಣೆ ಮಾಡಬೇಕು. ಈ ರೀತಿ ಅರ್ಘ್ಯಕೊಡಲು ಕಾರಣವೇನೆಂದರೆ ಮಹಾಕ್ರೂರಿಗಳಾದ **ಮಂದೇಹ**ರೆಂಬ ಮೂವತ್ತು ಕೋಟಿ ರಾಕ್ಷಸರು ನಿತ್ಯವೂ ಸೂರ್ಯ ನೊಡನೆ ಯುದ್ಧಕ್ಕೆ ಬರುವರು. ಸೂರ್ಯನಿಗೆ ಅಪಜಯವಾದೀತೆಂದು ದೇವತೆಗಳು ಸಂದೇಹಪಟ್ಟರು. ಸೂರ್ಯನಿಗೆ ಅಪಜಯವಾದರೆ ಉದಯಾಸ್ತಮಾನಗಳಾಗಲಾರದು. ಬ್ರಾಹ್ಮಣರಲ್ಲಿ ಸ್ವಾಹಾಕಾರ, ಸ್ವಧಾಕಾರ ಕರ್ಮಗಳು ನಡೆಯುವುದಿಲ್ಲ. ಇದರಿಂದ ದೇವತೆಗಳಿಗೆ ಉಪವಾಸವಾಗುವುದು. ಸೃಷ್ಟಿಯು ನಿಂತೀತು, ಎಂದು ಬ್ರಾಹ್ಮಣರು ಸೂರ್ಯನಿಗೆ ಅರ್ಘ್ಯಕೊಡಬೇಕು. ಈ ಅರ್ಘ್ಯವು ವಜ್ರಾಯುಧ ವಾಗಿ ಆ ದೈತ್ಯರಿಗೆ ತಗಲಿ ಅವರು ನಿತ್ಯವೂ ಪರಾಭವಹೊಂದುವರು. ಈ ದೈತ್ಯರು ಬ್ರಹ್ಮವಂಶದವರು. ಇವರು ಸಂಹೃತರಾಗುವುದರಿಂದ ಬ್ರಹ್ಮಹತ್ಯಾದೋಷವುಂಟಾಗುವುದು. ಈ ದೋಷವು **ಅಸಾವಾದಿತ್ಯ** ಎಂದು ಪ್ರದಕ್ಷಿಣೆಮಾಡಲು ಭೂಪ್ರದಕ್ಷಿಣೆಯ ಫಲವುಂಟಾಗಿ ದೋಷವು ಪರಿಹಾರವಾಗುವುದು. ನಿತ್ಯವೂ ಮನೆಯಲ್ಲಿ ಸಂಧ್ಯೆಯನ್ನು ಮಾಡಲು ಒಂದೇ ಫಲವೂ, ಗ್ರಾಮದ ಹೊರಗೆ ದಶಗುಣವೂ, ನದಿ ಯಲ್ಲಿ ಶತಗುಣವೂ, ಪುಷ್ಕರತೀರ್ಥದಲ್ಲಿ ಸಾವಿರ ಗುಣವೂ, ಗಂಗೆ ಯಲ್ಲಿ ಕೋಟಿ ಗುಣವೂ ಉಂಟಾಗುವುದು. ಗ್ರಾಮದ ಹೊರಗೆ ಸಂಧ್ಯೆಯನ್ನು ಗೈದರೆ ಸುರಾಪಾನ, ದಿವಾಮೈಥುನ, ಸುಳ್ಳು ಸಾಕ್ಷಿ

ಮುಂತಾದ ಪಾಪಗಳು ಆ ಕ್ಷಣವೇ ಸುಟ್ಟುಹೋಗುವುದು. ಸ್ವಸ್ಥಾನದಲ್ಲಿ ಜಪಮಾಡುವ ಕ್ರಮವನ್ನು ಶ್ರೀಗುರುವು ಬ್ರಾಹ್ಮಣನಿಗೆ ಹೇಳುವರು. ಮನೆಯಲ್ಲಿ ಜಪಿಸಿದರೆ ಒಂದೇ ಫಲವೂ, ಗ್ರಾಮದ ಹೊರಗೆ ದ್ವಿಗುಣವೂ, ನದೀತೀರದಲ್ಲಿ ತ್ರಿಗುಣವೂ, ಗೋಸ್ಥಳದಲ್ಲಿಯೂ ಬೃಂದಾವನದಲ್ಲಿಯೂ ದಶಗುಣ ಫಲವೂ, ಅಗ್ನಿಹೋತ್ರ ಸ್ಥಾನದಲ್ಲಿ ಶತಗುಣವೂ, ತೀರ್ಥ ದೇವತಾ ಸನ್ನಿಧಿಯಲ್ಲಿ ಸಾವಿರ ಫಲವೂ, ಹರಿ ಸನ್ನಿಧಿಯಲ್ಲಿ ಶತಕೋಟಿ ಫಲವೂ, ಶಿವಸನ್ನಿಧಿಯಲ್ಲಿ ಅನಂತ ಫಲವೂ ಉಂಟಾಗುವುದು. ಜಪಮಾಡುವಾಗ ಆಸನವಿಧಿಯು ಹೇಗೆಂದರೆ:— ಮರದ ಪೀಠದಲ್ಲಿ ಕುಳಿತು ಜಪಮಾಡಿದರೆ ದುಃಖಿಯಾಗಿ ಸದಾ ದರಿದ್ರ ನಾಗುವನು. ಚಿಗುರೆಲೆಯ ಮೇಲೆ ಕುಳಿತರೆ ದುಃಖಿಯಾಗುವನು. ವಸ್ತ್ರಾಸನದಲ್ಲಿ ದರಿದ್ರನಾಗುವನು. ಕಲ್ಲಿನ ಮೇಲೆ ಕುಳಿತರೆ ರೋಗ ವುಂಟಾದೀತು. ಭಸ್ಮಾಸನದಿಂದ ವ್ಯಾಧಿ ನಾಶವಾದೀತು. ಕಂಬಳಾ ಸನದಲ್ಲಿ ಸುಖ ಸಂತೋಷಗಳುಂಟು. ಕೃಷ್ಣಾಜಿನದಲ್ಲಿ ಜ್ಞಾನ ಪ್ರಕಾಶವಾಗುವುದು. ವ್ಯಾಘ್ರಚರ್ಮದಿಂದ ಮೋಕ್ಷಶ್ರೀಯುಂಟಾ ಗುವುದು. ಕುಶಾಸನದಿಂದ ಸರ್ವರೋಗ ನಿವಾರಣೆಯಾಗಿ ವಶೀ ಕರಣವುಂಟಾಗುವುದು. ಪಾಪಗಳು ಸುಟ್ಟುಹೋಗುವುವು. ಆಯು ಷ್ಯವೂ, ಪ್ರಜ್ಞೆಯೂ ಹೆಚ್ಚುವುದು. ಓಮಿತ್ಯಕ್ಷರಪೂರ್ವಕವಾಗಿ ಗಾಯತ್ರೀ ಧ್ಯಾನಮಾಡಿ ಜಪಿಸಿದರೆ ಪಾಪವೆಲ್ಲವೂ ಹೋಗುವುದು.

ಗಾಯತ್ರಿಯ ಸ್ವರೂಪವೆಂತೆಂದರೆ:— ಗಾಯತ್ರೀದೇವಿಯು ರಕ್ತಾಂಗಿಯು, ರಕ್ತವಸ್ತ್ರಧಾರಿಣಿಯು, ಹಂಸವಾಹನೆಯು. ಆಕಾ ರವು ಬ್ರಹ್ಮಸಂತಿರುವುದು. ನಾಲ್ಕು ಭುಜಗಳೂ, ನಾಲ್ಕು ಮುಖ ಗಳೂ ಉಂಟು. ಕಮಂಡಲವೂ, ಅಕ್ಷಸೂತ್ರಗಳನ್ನೂ ಕರಗಳಲ್ಲಿ ಧರಿಸಿರುವಳು. ಋಗ್ವೇದ ಸಮಾಗಮದಲ್ಲಿ ಅಗ್ನಿಹೋತ್ರ ಫಲವನ್ನು ಆವಾಹಿಸುವೆನು, ಎಂದು ಹೇಳಿ, ವರದಾಯಕಿಯಾದ ದೇವಿಯು ಬರಲಿ, ಎಂದು ಜಪಿಸಬೇಕು. (**ಆಯಾತುವರದಾದೇವಿ**) ಎಂಬ ಮಂತ್ರಕ್ಕೆ ಗಾಯತ್ರಿಯೇ ದೇವತೆಯು. ಅನುಷ್ಟುಪ್ ಛಂದಸ್ಸು. ಆದಿತ್ಯ ದೇವತೆಯು, ಗಾಯತ್ರೀ ಆವಾಹನೇ ವಿನಿಯೋಗವೆಂದು ಪ್ರಾತಃಸಂಧ್ಯೆಯಲ್ಲಿ ತಿಳಿಯಬೇಕು. ಮಧ್ಯಾಹ್ನಿಕಸಂಧ್ಯೆಯಲ್ಲಿ

ಗಾಯತ್ರೀ ಆವಾಹನೇ ವಿನಿಯೋಗವೆಂದು ಸವಿತೃದೇವತೆಯು ಗಾಯತ್ರೀ ಛಂದಸ್ಸು, ಸರಸ್ವತಿಯನ್ನು ಆವಾಹಿಸಬೇಕು. ಪ್ರಾತಃ ಸಂಧ್ಯೆಯ ಧ್ಯಾನವನ್ನು ಕೇಳು. ಗಾಯತ್ರಿಯು ರಕ್ತಾಂಗಿಯು, ರಕ್ತವಸ್ತ್ರಧಾರಿಣಿಯು, ಹಂಸವಾಹನೆಯು, ಚತುರ್ಮುಖಿಯು, ಚತುರ್ಬಾಹುಗಳುಳ್ಳವಳು, ಕಮಂಡಲು ಅಕ್ಷಸೂತ್ರಗಳನ್ನು ಧರಿಸಿರುವಳು, ಋಗ್ವೇದಾಗ್ನಿಸ್ವರೂಪಳು, ಎಂದು ನೆನೆಯಬೇಕು. ಓವೆಂದು ಶಿಖೆಯಲ್ಲಿ ಆವಾಹಿಸುತ್ತೇನೆ; ಛಂದರ್ಷಿಯನ್ನೂ, ಅತ್ರಿಯೆಯನ್ನೂ, ಬಲವನ್ನೂ ಆವಾಹಿಸುತ್ತೇನೆಂದು ಪ್ರಾತಃಸಂಧ್ಯೆಯಲ್ಲಿ ನೆನೆಯಬೇಕು. ಮಧ್ಯಾಹ್ನದಲ್ಲಿ ಗಾಯತ್ರಿಯು ಶ್ವೇತಾಂಗಿಯು, ಶ್ವೇತವಸ್ತ್ರಧಾರಿಣಿಯು, ವೃಷಭವಾಹಿನಿಯು, ಉಕಾರವು, ರುದ್ರಗಣದೇವತೆಯು, ಪಂಚಮುಖಿಯು, ವರದಾಭಯಹಸ್ತವುಳ್ಳವಳು, ರುದ್ರಾಕ್ಷಿಯ ಮಾಲೆಯನ್ನೂ, ತ್ರಿಶೂಲವನ್ನೂ ಧರಿಸಿರುವವಳು, ಯಜುರ್ವೇದದ ಅಗ್ನಿಷ್ಟೋಮವುಳ್ಳವಳು. ಓವೆಂದು ಶಿಖೆಯನ್ನೂ, ಛಂದರ್ಷಿಯನ್ನೂ, ಶ್ರಿಯೆಯನ್ನೂ, ಹ್ರಿಯೆಯನ್ನೂ ಆವಾಹಿಸಬೇಕು. ಸಾಯಂಸಂಧ್ಯೆಯಲ್ಲಿ ಅಭಿಭೂವರೋಂ ಸರಸ್ವತಿಯು, ವೃದ್ಧಾವಸ್ಥೆ, ಕೃಷ್ಣಾಂಗಿಯು, ಕೃಷ್ಣವಸ್ತ್ರಧಾರಿಣಿಯು, ಗರುಡವಾಹನೆಯು, ಮಕಾರವು, ವಿಷ್ಣುದೇವತೆಯು, ಚತುರ್ಭುಜಗಳಲ್ಲಿ ಶಂಖ, ಚಕ್ರ, ಗದಾ, ಪದ್ಮಗಳನ್ನು ಧರಿಸಿರುವವಳು, ಸಾಮವೇದಸ್ವರೂಪಳು, ವಾಜಪೇಯ ಫಲವು, ಓವೆಂದು ಶಿಖೆಯನ್ನೂ, ಛಂದರ್ಷಿಯನ್ನೂ, ಬಲವನ್ನೂ ಆವಾಹಿಸುವೆನು. ಪಂಚಶೀರ್ಷ ಉಪನಯನ ವಿನಿಯೋಗವು. ಪ್ರಣವಕ್ಕೆ ಪರಬ್ರಹ್ಮ ಋಷಿಯು, ಪರಮಾತ್ಮನೇ ದೇವತೆಯು, ಗಾಯತ್ರೀ ಛಂದಸ್ಸು, ಉದಾತ್ತಸ್ವರಿತ ಸ್ವರವು, ಅಗ್ನಿ ವಾಯು ಸೂರ್ಯದೇವತೆಯು, ಗಾಯತ್ರೀ ತ್ರಿಷ್ಟುಪ್, ಜಗತೀ ಛಂದಸ್ಸು, ತ್ರಿಮೂರ್ತಿಗಳೇ ದೇವತೆಗಳು, ಋಗ್ಯಜುಸ್ಸಾಮಸ್ವರೂಪಳು, ಆಹವನೀಯಗಾರ್ಹಪತ್ಯ ದಕ್ಷಿಣಾಗ್ನಿಗಳು ಉಪಸ್ಥಾನಗಳಾಗಿವೆ, ಭೂಮಿ, ಆಕಾಶ ದ್ಯೌಃತತ್ವಗಳು, ಉದಾತ್ತ ಅನುದಾತ್ತ ಸ್ವರವು, ಪೀತವಿದ್ಯುತ್‌ಶ್ವೇತವರ್ಣ, ಪ್ರಾತಃ ಮಧ್ಯಾಹ್ನ ತೃತೀಯ ಸವನಗಳು, ವಿಶ್ವತೈಜಸಪ್ರಾಜ್ಞಸ್ವರೂಪಿಣಿಯು, ಜಾಗ್ರತ್‌ಸ್ವಪ್ನ

ಸುಷುಪ್ತ್ಯಾವಸ್ಥೆ, ಎಂದೀ ರೀತಿ ತ್ರಿಪದಾಗಾಯತ್ರೀ ಧ್ಯಾನವಾಗಿದೆ. ಪಾಪಗಳು ಪರಿಹಾರವಾಗಿ ಪರಮೇಶ್ವರ ಪ್ರೀತಿಗಾಗಿ ಗಾಯತ್ರೀ ಜಪಮಾಡಬೇಕು. ಓಂ–ಅಂ–ನಾಭೌ–ವಂ ಹೃದಯೆ, ಮಂ–ಕಂಠೇ, ಭೂಃ ಅಕ್ಷರ ಮಂತ್ರಕ್ಕೆ ಗಾಯತ್ರೀ ಛಂದಸ್ಸು, ಅಗ್ನಿ ದೇವತೆಯು, ವಿಶ್ವಾಮಿತ್ರ ಋಷಿಯು, ಷಡ್ಜಸ್ವರವು, ಶ್ವೇತವರ್ಣ, ಎಂದು ಹೇಳಿ ಪ್ರಾಣಾಯಾಮ ಮಾಡಬೇಕು. ಎರಡನೇ ವ್ಯಾಹೃತಿಯು ಭುವಃ ಇದಕ್ಕೆ ಉಷ್ಣಿಕ್ ಛಂದಸ್ಸು, ವಾಯುದೇವತೆಯು, ಭೃಗುಋಷಿಯು, ಶ್ಯಾಮವರ್ಣವು. ಪಾದಸ್ಪರ್ಶ ಮಾಡಿ ಜಾನು ಮಧ್ಯದಲ್ಲಿ ನ್ಯಾಸ ಮಾಡಬೇಕು. ಸುವಃ ಎಂಬುದಕ್ಕೆ ಅನುಷ್ಟುಪ್ ಛಂದಸ್ಸು, ಸವಿತೃ ದೇವತೆಯು, ಭಾರದ್ವಾಜಋಷಿಯು, ಗಾಂಧಾರಸ್ವರವು, ಪೀತವರ್ಣ. ಕಂಠಸ್ಪರ್ಶಮಾಡಿ ಪ್ರಾಣಾಯಾಮ ಮಾಡಬೇಕು. ಮಹಃ ಎಂಬ ಮೂರನೇ ವ್ಯಾಹೃತಿಗೆ ಬೃಹತೀ ಛಂದಸ್ಸು, ಬೃಹಸ್ಪತಿದೇವತೆಯು, ವಸಿಷ್ಠಋಷಿಯು, ಮಧ್ಯಮಸ್ವರವು, ಪಿತಂಗವರ್ಣ, ಎಂದು ನೆನೆದು ನಾಭಿಸ್ಪರ್ಶ ಮಾಡಬೇಕು. ಜನಃ ಮಂತ್ರಕ್ಕೆ ಪಙ್ಕ್ತಿ ಛಂದಸ್ಸು, ವರುಣದೇವತೆ, ಗೌತಮಋಷಿಯು, ಪಂಚಮಸ್ವರವು, ನೀಲವರ್ಣ, ಹೃದಯನ್ಯಾಸ, ಎಂದು ಪ್ರಾಣಾಯಾಮ ಮಾಡಬೇಕು. ತಪಃ ಮಂತ್ರಕ್ಕೆ ತ್ರಿಷ್ಟುಪ್ ಛಂದಸ್ಸು, ಶಿವನೇ ದೇವರು, ಕಶ್ಯಪಋಷಿಯು, ಧೈವತಸ್ವರವು, ಲೋಹವರ್ಣ, ಕಂಠನ್ಯಾಸ. ಸತ್ಯಃ ಎಂಬುದಕ್ಕೆ ಜಗತೀ ಛಂದಸ್ಸು, ವಿಶ್ವೇದೇವರು, ಆಂಗೀರಸಋಷಿಗಳು, ನಿಷಾದ ಸ್ವರವು, ಕನಕವರ್ಣ, ಹುಬ್ಬು ಹಣೆಯನ್ನು ಮುಟ್ಟಬೇಕು. ಈ ರೀತಿ ಪ್ರಾಣಾಯಾಮ ಮಾಡಬೇಕು. ತಲೆಯಲ್ಲಿ ಹಸ್ತವನ್ನಿಟ್ಟು ಧ್ಯಾನಿಸಿ ಆಪೋಜ್ಯೋತಿ ಮಂತ್ರವನ್ನು ಭಕ್ತಿಯಿಂದ ಹೇಳಬೇಕು. ಓಂ ಆಪೋ.....ಪರೋಮ್ ಎಂದು ಶಿರಸ್ಸನ್ನು ಧರಿಸಿ ಹೇಳಬೇಕು.

ಗಾಯತ್ರಿಯ ಇಪ್ಪತ್ನಾಲ್ಕು ಅಕ್ಷರಗಳಿಗೆ ನ್ಯಾಸ ಹೇಗೆಂದರೆ:– ತ್ರಿಪದಾ ಗಾಯತ್ರಿಗೆ ವಿಶ್ವಾಮಿತ್ರಋಷಿಯು, ಗಾಯತ್ರೀಛಂದಸ್ಸು.

೧ ತ ವರ್ಣಕ್ಕೆ ವಿಶ್ವಾಮಿತ್ರ ಋಷಿಯು, ಅಗ್ನಿದೇವತೆಯು, ಗಾಯತ್ರೀ ಛಂದಸ್ಸು, ಅಗಸೇಹೂವಿನ ವರ್ಣ, ವಾಯುವ್ಯ ಕೋಣಸ್ಥಾನ, ಗುಲ್ಫನ್ಯಾಸ.

೨ **ತ್ಸ** ವರ್ಣಕ್ಕೆ ವಿಶ್ವಾಮಿತ್ರ ಋಷಿಯು, ವಾಯುದೇವತೆಯು, ಗಾಯತ್ರೀ ಛಂದಸ್ಸು, ಜಂಘನ್ಯಾಸ, ಹಳದಿಯ ಬಣ್ಣ, ಸೌಮ್ಯರೂಪವು, ಸರ್ವಪಾಪ ಪರಿಹಾರ.

೩ **ವಿ** ವರ್ಣಕ್ಕೆ ವಿಶ್ವಾಮಿತ್ರ ಋಷಿಯು, ಸೋಮದೇವತೆಯು, ಗಾಯತ್ರೀ ಛಂದಸ್ಸು, ಜಾನುನ್ಯಾಸ, ಇಂದ್ರನೀಲದ ಮಿಂಚಿನ ಬಣ್ಣ, ಮಹಾರೋಗ ಪರಿಹಾರ.

೪ **ತು** ವರ್ಣಕ್ಕೆ ವಿಶ್ವಾಮಿತ್ರ ಋಷಿಯು, ವಿದ್ಯುದ್ದೇವತೆಯು, ಗಾಯತ್ರೀ ಛಂದಸ್ಸು, ಜಾನುನ್ಯಾಸ, ಬೆಂಕಿಯ ಕಾಂತಿಯು, ಭ್ರೂಣಹತ್ಯಾ ಪಾಪನಾಶ.

೫ **ರ್ವ** ವರ್ಣಕ್ಕೆ ವಿಶ್ವಾಮಿತ್ರ ಋಷಿಯು, ಸೋಮದೇವತೆಯು, ಗಾಯತ್ರೀ ಛಂದಸ್ಸು, ಚಿನ್ನದಂತೆಯೂ, ಸ್ಫಟಿಕದಂತೆಯೂ ಕಾಂತಿಯುಳ್ಳದ್ದು, ಪಾಪನಾಶ.

೬ **ರೇ** ವರ್ಣಕ್ಕೆ ವಿಶ್ವಾಮಿತ್ರ ಋಷಿಯು, ವರುಣದೇವತೆಯು, ಗಾಯತ್ರೀ ಛಂದಸ್ಸು.

**ಣಿ** ವರ್ಣಕ್ಕೆ ವೃಷಣಸ್ಥಾನ, ಮಿಂಚಿನ ವರ್ಣ, ಬಾರ್ಹಸ್ಪತ್ಯದ ಗುರುತು, ಅಭಕ್ಷ್ಯ ಪಾಪನಾಶ. ಇದಕ್ಕೆ ವಿಶ್ವಾಮಿತ್ರ ಋಷಿಯು, ಬೃಹಸ್ಪತಿದೇವತೆಯು, ಗಾಯತ್ರೀ ಛಂದಸ್ಸು.

೭ **ಯಂ** ವರ್ಣಕ್ಕೆ ಕಟಿಸ್ಥಾನವು, ಶಾಂತಾಕಾರವು, ದೇವಹತ್ಯಾ ಪಾಪನಾಶ, ಸಗುಣನ್ಯಾಸ, ವಿಶ್ವಾಮಿತ್ರ ಋಷಿಯು, ತಾರಕದೇವತೆಯು, ಗಾಯತ್ರೀ ಛಂದಸ್ಸು.

೮ **ಭ** ವರ್ಣಕ್ಕೆ ನಾಭಿನ್ಯಾಸ, ಕಪ್ಪು ಮೇಘದ ಬಣ್ಣ, ಪರ್ಜನ್ಯ ದೇವತೆಯು, ಗುರುಹತ್ಯಾ ಪಾಪನಾಶ, ವಿಶ್ವಾಮಿತ್ರ ಋಷಿ, ಗಾಯತ್ರೀ ಛಂದಸ್ಸು.

೯ **ರ್ಗೋ** ವರ್ಣಕ್ಕೆ ಉದರನ್ಯಾಸ, ರಕ್ತವರ್ಣ, ಇಂದ್ರದೇವತೆ, ಗೋಹತ್ಯಾದೋಷ ನಾಶ, ವಿಶ್ವಾಮಿತ್ರ ಋಷಿ, ಗಾಯತ್ರೀ ಛಂದಸ್ಸು.

೧೦ **ದೇ**ಕಾರಕ್ಕೆ ಸ್ತನನ್ಯಾಸ, ಗಂಧರ್ವದೇವತೆ, ಸ್ತ್ರೀಹತ್ಯಾ ಪಾಪ ನಾಶ, ವಿಶ್ವಾಮಿತ್ರ ಋಷಿ, ಗಾಯತ್ರೀ ಛಂದಸ್ಸು.

೧೧ **ವ**ಕಾರಕ್ಕೆ ಹೃದಯನ್ಯಾಸ, ಶುಕ್ಲವರ್ಣ, ಪೂಷದೇವತೆ, ವೈಶ್ಯ ಸ್ತ್ರೀಸಂಗದೋಷ ನಾಶ, ವಿಶ್ವಾಮಿತ್ರ ಋಷಿಯೂ, ರುದ್ರ ದೇವತೆ, ಗಾಯತ್ರೀ ಛಂದಸ್ಸು.

೧೨ **ಸ್ಯ**ಕಾರಕ್ಕೆ ಕಂಠನ್ಯಾಸ, ಚಿನ್ನದಂತೆ ಸುರಸವರ್ಣ, ಮಿತ್ರುದೇವತೆ, ಬೆಕ್ಕು ಕೋಳಿಗಳನ್ನು ಕೊಂದ ಪಾಪನಾಶ, ವಿಶ್ವಾಮಿತ್ರ ಋಷಿ, ಗಾಯತ್ರೀ ಛಂದಸ್ಸು.

೧೩ **ಧೀ**ಕಾರಕ್ಕೆ ದಂತನ್ಯಾಸ, ವಿಶ್ವಾಮಿತ್ರ ಋಷಿ, ಗಾಯತ್ರೀ ಛಂದಸ್ಸು, ವಿಷ್ಣುದೇವತೆಯೂ, ಬಿಳೀ ನೈದಿಲೆ ಬಣ್ಣ, ತ್ವಷ್ಟೃದೇವತೆ, ಪಿತೃಹತ್ಯಾ ಪಾಪನಾಶ.

೧೪ **ಮ**ಕಾರಕ್ಕೆ ದವಡೆನ್ಯಾಸ, ಪದ್ಮವರ್ಣ, ವಾಸುದೇವದೇವತೆ, ಸರ್ವಜನ್ಮದ ಪಾಪನಾಶ, ವಿಶ್ವಾಮಿತ್ರ ಋಷಿ, ಗಾಯತ್ರೀ ಛಂದಸ್ಸು.

೧೫ **ಹಿ**ಕಾರಕ್ಕೆ ನಾಸಿಕನ್ಯಾಸ, ಶಂಖವರ್ಣ, ವಾಸುದೇವದೇವತೆ, ಸರ್ವಪಾಪನಾಶ, ವಿಶ್ವಾಮಿತ್ರ ಋಷಿ, ಮೇರುದೇವತೆ, ಗಾಯತ್ರೀ ಛಂದಸ್ಸು.

೧೬ **ಧೀ**ಕಾರಕ್ಕೆ ನೇತ್ರನ್ಯಾಸ, ಪಾಂಡುರವರ್ಣ, ಸೋಮದೇವತೆ, ಪಾಣಿಗ್ರಹಣ ಪಾಪನಾಶ, ವಿಶ್ವಾಮಿತ್ರ ಋಷಿ, ಗಾಯತ್ರೀ ಛಂದಸ್ಸು.

೧೭ **ಯೋ**ಕಾರಕ್ಕೆ ಭ್ರೂಮಧ್ಯನ್ಯಾಸ, ರಕ್ತದಂತೆ ಗೌರವರ್ಣ, ಪ್ರಾಣಿಹತ್ಯಾ ಪಾಪನಾಶ, ವಿಶ್ವಾಮಿತ್ರ ಋಷಿ, ಯಮ ದೇವತೆ, ಗಾಯತ್ರೀ ಛಂದಸ್ಸು.

೧೮ **ಯೋ**ಕಾರಕ್ಕೆ ಲಲಾಟನ್ಯಾಸ, ಚಿನ್ನದ ವರ್ಣ, ಸರ್ವಪಾಪ ನಾಶ, ವಿಶ್ವಾಮಿತ್ರ ಋಷಿ, ವಿಶ್ವೇದೇವದೇವತೆ, ಗಾಯತ್ರೀ ಛಂದಸ್ಸು.

೧೯ **ನಃ**ಕಾರಕ್ಕೆ ಪೂರ್ವಮುಖವು, ಸೂರ್ಯನ ತೇಜಸ್ಸು, ಅಶ್ವಿನೀ ದೇವತೆಯೇ ದೇವತೆಯು, ವಿಶ್ವಾಮಿತ್ರ ಋಷಿ, ಗಾಯತ್ರೀ ಛಂದಸ್ಸು, ಕಾಂತಿಕರ.

೨೦ **ಪ್ರ**ಕಾರಕ್ಕೆ ದಕ್ಷಿಣನ್ಯಾಸ, ನೀಲವರ್ಣ, ಪ್ರಜಾಪತಿದೇವತೆ, ವಿಷ್ಣುಸಾಯುಜ್ಯವಾಗುವುದು, ವಿಶ್ವಾಮಿತ್ರ ಋಷಿ, ಗಾಯತ್ರೀ ಛಂದಸ್ಸು.

೨೧ **ಚೋ**ಕಾರಕ್ಕೆ ಪಶ್ಚಿಮಭಾಗನ್ಯಾಸ, ಕುಂಕುಮವರ್ಣ, ಸರ್ವದೇವತ್ವವುಂಟಾಗುವುದು, ವಿಶ್ವಾಮಿತ್ರ ಋಷಿ, ಗಾಯತ್ರೀ ಛಂದಸ್ಸು.

೨೨ **ದ**ಕಾರಕ್ಕೆ ಉತ್ತರನ್ಯಾಸ, ಶುಕ್ಲವರ್ಣ, ಕೈಲಾಸಪದಪ್ರಾಪ್ತಿ, ವಿಶ್ವಾಮಿತ್ರ ಋಷಿ, ರುದ್ರದೇವತೆ, ಗಾಯತ್ರೀ ಛಂದಸ್ಸು.

೨೩ **ಯಾ**ಕಾರಕ್ಕೆ ಶಿರೋನ್ಯಾಸ, ಸುವರ್ಣರೂಪ, ಬ್ರಹ್ಮಸ್ಥಾನವಾಸ, ವಿಶ್ವಾಮಿತ್ರ ಋಷಿ, ಬ್ರಹ್ಮದೇವತೆ, ಗಾಯತ್ರೀ ಛಂದಸ್ಸು.

೨೪ **ತ್**ಕಾರಕ್ಕೆ ಶಿಖಾನ್ಯಾಸ, ವಿಷ್ಣುರೂಪವುಂಟಾಗಿ ವೈಕುಂಠವಾಸವಾಗುವುದು, ವಿಶ್ವಾಮಿತ್ರ ಋಷಿ, ವಿಷ್ಣುದೇವತೆ, ಗಾಯತ್ರೀ ಛಂದಸ್ಸು.

ಈ ರೀತಿ ಇಪ್ಪತ್ನಾಲ್ಕು ಅಕ್ಷರ ಮಂತ್ರದಿಂದ ಹಸ್ತವನ್ನು ತಲೆಯ ಮೇಲಿಟ್ಟು ನ್ಯಾಸಮಾಡಬೇಕು. ಶಿರಸ್ಥಾನನ್ಯಾಸ ಮಂತ್ರಕ್ಕೆ ಅನುಷ್ಟುಪ್ ಛಂದಸ್ಸು, ಪ್ರಜಾಪತಿ ಋಷಿಯು, ಪರಮಾತ್ಮನೇ ದೇವತೆಯು. ಓಂ ಆಪಃ ಎಂದು ಸ್ತನವನ್ನು ಸ್ಪರ್ಶಮಾಡಬೇಕು. ಜ್ಯೋತಿನೇತ್ರ, ರಸೋಜಿಹ್ವಾ, ಅಮೃತೇತಿಲಲಾಟೇ, ಶಿರಸ್ಸನ್ನು ಸ್ಪರ್ಶಮಾಡಬೇಕು. ಬ್ರಹ್ಮಭೂಃ ಎಂದು ನ್ಯಾಸಮಾಡಿ ತ್ರಿವಾರ ಗಾಯತ್ರಿಯನ್ನು ಜಪಿಸಬೇಕು. ಭೂಃ ಸುವಃ ಎಂದು ನ್ಯಾಸಮಾಡಿ ದಶಾಂಗುಲಿಗಳಿಂದ ಪಾದಪ್ರಮಾಣ ನ್ಯಾಸಮಾಡಿ ಅಂಗುಷ್ಠಮೂಲವನ್ನು ಹಿಡಿದು ಕನಿಷ್ಠಾಂಗುಲಿಯಿಂದ ಸ್ಪರ್ಶಿಸಿ ಹತ್ತು ಅಂಗುಲಿಗಳಿಂದ ನ್ಯಾಸಮಾಡಬೇಕು. ಈ ಇಪ್ಪತ್ನಾಲ್ಕು ಅಕ್ಷರ ಮಂತ್ರಗಳಿಗೆ

ಅಂಗುಲಿನ್ಯಾಸಮಾಡಿ ತರ್ಜನಿಯಿಂದ ಕನಿಷ್ಠಾಂಗುಲಿಯ ವರೆಗೆ ಹನ್ನೆರಡು ಅಕ್ಷರಗಳಲ್ಲಿ ಒಂದೊಂದು ಹಸ್ತನ್ಯಾಸಮಾಡಿ ಪ್ರಣವ ಸಹಿತ ಷಡಂಗನ್ಯಾಸ ಮಾಡಬೇಕು. ಭೂಃ ಹಿರಣ್ಯಾತ್ಮನೇ ಅಂಗುಷ್ಠಾಭ್ಯಾಂ ನಮಃ । ಓಂ ಭುವಃ ಪ್ರಜಾಪತ್ಯಾತ್ಮನೇ ತರ್ಜನೀ । ಓಂ ಸುವಃ ಸೂರ್ಯಾತ್ಮನೇ ಮಧ್ಯಮಾ। ಓಂ ಮಹಃ ಬ್ರಹ್ಮಾತ್ಮನೇ ಅನಾಮಿಕಾ । ಓಂ ಜನಃ ಸೋಮಾತ್ಮನೇ ಕನಿಷ್ಠಿಕಾ । ಓಂ ತಪಃ ಸತ್ಯಂ ಸವಿತ್ರಾತ್ಮನೇ ಕರತಲಕರತಳ । ಓಂ ತತ್ಸವಿತುಃ ಅಂಗುಷ್ಠಾ ಹೃದಯಾ । ವರೇಣ್ಯಂ ತರ್ಜನೀ । ಶಿರಸೇ ಭರ್ಗೋ ದೇವಸ್ಯ ಮಧ್ಯಮಾ । ಶಿಖಾಯೈ । ಧೀಮಹಿ ಅನಾಮಿಕಾ ಕವಚಾ । ಧೀಯೊ ಯೋನಃ ಕನಿಷ್ಠಿಕಾ ನೇತ್ರತ್ರಯಾಯೈ ಪ್ರಚೋದಯಾತ್ ಕರತಲ ಅಸ್ತ್ರಾಯಫಟ್ ಎಂದು ಉಭಯಹಸ್ತಾಂಗುಲಿ ನ್ಯಾಸಮಾಡಬೇಕು. ಓಂ ಭೂಃ ಹಿರಣ್ಯಾತ್ಮನೇ ಹೃದಯಾಯ । ಓಂ ಭುವಃ ಪ್ರಜಾಪತ್ಯಾತ್ಮನೇ ಶಿರಸೇ । ಓಂ ಸುವಃ ಸೂರ್ಯಾತ್ಮನೇ ಶಿಖಾಯೈ । ಓಂ ಮಹಃ ಬ್ರಹ್ಮಾತ್ಮನೇ ಕವಚಾಯ । ಓಂ ಜನಃ ಓಂ ತಪಃ ಓಂ ಸತ್ಯಂ ಸೋಮಾತ್ಮನೇ ನೇತ್ರತ್ರಯಾಯೈ। ಪ್ರಚೋದಯಾತ್ ಸರ್ವಾತ್ಮನೇ ಅಸ್ತ್ರಾಯಫಟ್ ಎಂದು ನ್ಯಾಸಮಾಡಬೇಕು. ಓಂ ತತ್ಸವಿತುಃ ಹೃದಯಾ । ಓಂ ವರೇಣ್ಯಂ ಶಿರಸೇ ಭರ್ಗೋ ಶಿಖಾಯೈ । ಧೀಮಹಿ ಕವಚಾಯ । ಧಿಯೋ ನೇತ್ರತ್ರಯಾಯೈ ಪ್ರಚೋದಯಾತ್ ಅಸ್ತ್ರಾಯಫಟ್ ಎಂದು ಅಂಗನ್ಯಾಸಮಾಡಬೇಕು. ಈ ದಶಸ್ಥಾನಗಳು ಯಾವುವೆಂದರೆ ಪಾದ, ಜಾನು, ಕಟಿ, ನಾಭಿ, ಹೃದಯ, ಕಂಠ, ಭುವನ, ತಾಲುನೇತ್ರ, ಲಲಾಟ, ಶಿರಸ್ಸುಗಳು. ಗಾಯತ್ರಿಯ ದಶಪದಗಳಿಗೆ ದಶಸ್ಥಾನಗಳಿವೆ. ತಂ ಅಂಗುಷ್ಠಾಭ್ಯಾಂ ನಮಃ । ತ್ಸಂ ಗುಲ್ಫಾಯೈ ನಮಃ । ಪಂ ಜಂಘಾಯೈ ನಮಃ । ತುಂ ಜಾನುಭ್ಯಾಂ ನಮಃ । ವಂ ಊರುಭ್ಯಾಂ ರೇಂ ಗುಹ್ಯಾಯ । ಣೇಂ ವೃಷಣಾಯ । ಯಂ ಕಟಿಭ್ಯಾಂ । ಭಂ ನಾಭೌ । ಗೋ ಉದರಾಯ । ದೇ ಸ್ತನಾಭ್ಯಾಂ । ವಂ ಹೃದಯಾ । ಸ್ಯಂ ಕಂಠಾಯ । ಧೀಂ ದಂತೇಭ್ಯಃ । ಮಂ ತಾಲವೇ । ಹಿಂ ನಾಸಿಕಾಯೈ । ಧಿಂ ನೇತ್ರಾಭ್ಯಾಂ । ಯೋಂ ಭ್ರೂಭ್ಯಾಂ । ಯೋಂ ಲಲಾಟಾಯ । ನಃ

ಪ್ರಾಙ್ಮುಖಾಯ । ಪ್ರುಂ ದಕ್ಷಿಣಮುಖಾಯ । ಜೋಂ ಪಶ್ಚಿಮ ಮುಖಾಯ । ದಂ ಉತ್ತರಮುಖಾಯ । ಯಾಂ ಮೂರ್ಧ್ನೇ । ತಂ ಶಿಖಾಯೈ ಎಂದು ನ್ಯಾಸಮಾಡಬೇಕು. ಸುಮುಖಂ ಸಂಪುಟಂ ಚೈವೇತ್ಯಾದಿ ಇಪ್ಪತ್ನಾಲ್ಕು ಮುದ್ರೆಗಳನ್ನು ಮಾಡಬೇಕು. ಈ ಮುದ್ರೆಯಿಲ್ಲದೆ ಗಾಯತ್ರೀ ಜಪಮಾಡಲು ವ್ಯರ್ಥವಾಗುವುದು. ಗಾಯತ್ರಿಯನ್ನು ಗೋಪ್ಯವಾಗಿ ಜಪಿಸಬೇಕು. ಸರ್ವಪಾಪ ಕ್ಷಯಾರ್ಥೆ ಎಂದು ಸಂಕಲ್ಪಮಾಡಿ ನೂರೆಂಟು ಜಪ ಮಾಡಬೇಕು. ಈ ಗಾಯತ್ರಿಯ ಪ್ರಥಮ ಪಾದಕ್ಕೆ ಋಗ್ವೇದ ಋಷಿಯು, ಭೂ ತತ್ವವು, ಬ್ರಹ್ಮದೇವತೆಯು, ತ್ರಿಷ್ಟುಪ್ ಛಂದಸ್ಸು. ಎರಡನೇ ಪಾದಕ್ಕೆ ಯಜುರ್ವೇದ ಋಷಿಯು, ರುದ್ರದೇವತೆಯು, ಪ್ರಾಣಾ ಪಾನವ್ಯಾನ ತತ್ವಗಳು, ಜಗತೀ ಛಂದಸ್ಸು. ಮೂರನೇ ಪಾದಕ್ಕೆ ಋಗ್ಯಜುಸ್ಸಾಮ ತತ್ವಗಳು, ವಿಷ್ಣುದೇವತೆಯು, ತ್ರಿಷ್ಟುಪ್ ಛಂದಸ್ಸು ಉಳ್ಳದ್ದಾಗಿದೆ. ಗಾಯತ್ರೀ ಧ್ಯಾನ ಹೇಗೆಂದರೆ:—

ಮುಕ್ತಾವಿದ್ರುಮಹೇಮನೀಲಧವಳಚ್ಛಾಯೈ ಮುರ್ಖೈಃ ತ್ರ್ಯಕ್ಷಣೈಃ । ಯುಕ್ತಾಮಿಂದುಕಲಾನಿಬದ್ಧಮುಕುಟಾಂ ತತ್ವಾರ್ಥ ವರ್ಣಾತ್ಮಿಕಾಂ ॥ ಗಾಯತ್ರೀಂ ವರದಾಭಯಾಂ ಕುಶಕಶಾಂ ಶುಭ್ರಂ ಕಪಾಲಂ ಗುಣಂ । ಶಂಖಂ ಚಕ್ರ ಮಥಾರವಿಂದಯುಗಲಾಂ ಹಸ್ತೈ ರ್ವಹಂತೀಂ ಭುಜೆ ॥ ೧ ॥ ಎಂದು ಧ್ಯಾನಿಸಿ ನಾಸಾಗ್ರ ದೃಷ್ಟಿಯಿಂದ ಷಡಂಗನ್ಯಾಸ ಮಾಡಿ ಜಪಿಸಬೇಕು. ಗಾಯತ್ರೀ ಮಂತ್ರದ ಪ್ರಶಂಸೆಯೇನೆಂದರೆ:—ಮಂತ್ರ ಎಂಬಲ್ಲಿ ಮಂ ಕಾರಕ್ಕೆ ಮನಸ್ಸು ಎಂದೂ, ತ್ರ ಕಾರಕ್ಕೆ ಪ್ರಾಣವೆಂತಲೂ ತಿಳಿದು ಮನಸ್ಸೂ ಪ್ರಾಣವೂ ಸೇರಿ ಏಕಚಿತ್ತದಿಂದ ಜಪಿಸಬೇಕು. ಜಪ ಶಬ್ದಾರ್ಥ ವೆಂತೆಂದರೆ:—ಜ ಕಾರಕ್ಕೆ ಜನ್ಮವನ್ನು ಛೇದಿಸುವುದು, ಪ ಕಾರಕ್ಕೆ ಜನ್ಮದ ಪಾಪವು ನಾಶವಾಗುವುದು ಎಂದರ್ಥವು. ನಾಲ್ಕು ವೇದ ಗಳಿಗೆ ಮೂಲವಾದ ಗಾಯತ್ರಿಯು ಪಾಪಗಳನ್ನು ನಾಶಮಾಡುವುದು. ಇದರಿಂದ ವೇದಪಠನದ ಫಲವುಂಟಾಗುವುದು. ಗಾಯತ್ರಿಯನ್ನು ಜಪಿಸದ ನರನು ಹಂದಿಯಂತೆ ವ್ಯರ್ಥವೇ ಸರಿ. ಇದನ್ನು ಜಪಿಸಲು ಚಿಂತಿಸಿದ ಫಲವುಂಟಾಗುವುದು. ನೀರಿನಲ್ಲಿ. ಕುಳಿತು ಜಪಿಸಲು

ಪ್ರಜ್ಞಾಹೀನನಾಗುವನು. ಬ್ರಾಹ್ಮಣರ ಮುಖದಲ್ಲಿ ಆಹವನೀಯ, ದಕ್ಷಿಣಾಗ್ನಿ, ಗಾರ್ಹಪತ್ಯ ಎಂದು ಮೂರು ಅಗ್ನಿಗಳು ಇವೆ. ಅಗ್ನಿಯೂ, ಉದಕವೂ ಸೇರಿದರೆ ಅಗ್ನಿಯ ತೇಜಸ್ಸು ನಾಶವಾಗುವುದು. ಆದುದರಿಂದ ನೀರಲ್ಲಿ ಕುಳ್ಳಿರದೆ ಉತ್ತಮಾಸನದಲ್ಲಿ ಕೂತು ನಾಭಿಯನ್ನು ಮುಟ್ಟಿ ಜಪಮಾಲೆಯನ್ನು ಹಿಡಿದು ಜಪಿಸಬೇಕು. ಬೆಳಿಗ್ಯೆ ನಿಂತುಕೊಂಡೂ, ಮಧ್ಯಾಹ್ನವೂ, ಸಾಯಂಕಾಲವೂ ಕೂತುಕೊಂಡೂ ಜಪಿಸಬೇಕು. ಸಾಯಂಕಾಲ ಮುಖವನ್ನು ಮುಟ್ಟಿ ನಿರ್ಮಲ ವೃಕ್ಷವನ್ನು ನೋಡುತ್ತಾ ಕುಳಿತು ಜಪಿಸಬೇಕು. ವೃಕ್ಷವು ಹತ್ತಿರ ಇಲ್ಲದಿರಲು ನಾಸಾಗ್ರವನ್ನು ದೃಷ್ಟಿಸುತ್ತಾ ಜಪಿಸಬೇಕು. ಬ್ರಹ್ಮಚಾರಿಯೂ, ಗೃಹಸ್ಥನೂ ನೂರೆಂಟು ಜಪಮಾಡಬೇಕು. ವಾನಪ್ರಸ್ಥನೂ, ಸನ್ಯಾಸಿಯೂ ಸಾವಿರ ಜಪಮಾಡಬೇಕು. ತೊಂದರೆಯಾದರೆ ಇಪ್ಪತ್ತೆಂಟು ಜಪಮಾಡಬೇಕು. ಅಶಕ್ತನಾದರೆ ಹತ್ತು ಜಪಮಾಡಬೇಕು. ಮನಸ್ಸಿನಲ್ಲಿ ಜಪಿಸುವುದು ಉತ್ತಮವು. ಗೋಪ್ಯವಾಗಿ ಜಪಿಸಲು ಮಧ್ಯಮವು. ಗಟ್ಟಿಯಾಗಿ ಜಪಿಸುವುದು ಕನಿಷ್ಟವು. ಗಾಯತ್ರಿಯ ಮೂರು ಪಾದವನ್ನು ಸೇರಿಸಿ ಜಪಿಸಬೇಕು. ಇಲ್ಲದಿದ್ದರೆ ಮಹಾನರಕವುಂಟಾದೀತು. ಈ ಜಪದಿಂದ ಬ್ರಹ್ಮಹತ್ಯಾದಿ ಪಾಪಗಳು ನಾಶವಾಗುವುವು. ಅಂಗುಷ್ಠ ಜಪಮಾಡಿದರೆ ಒಂದು ಪುಣ್ಯವು. ಅಂಗುಲಿಪರ್ವದಿಂದ ಎಂದರೆ ಬೆರಳುಗಳ ಗೆರೆಗಳಿಂದ ಜಪಿಸಿದರೆ ದಶಗುಣವು. ಶಂಖಮಣಿಯಿಂದ ಜಪಿಸಲು ಶತಗುಣ ಪುಣ್ಯವು. ಹವಳಮಣಿಯನ್ನು ಧರಿಸಲು ಸಾವಿರ ಫಲವು. ಸ್ಫಟಿಕ ಮಣಿಯಿಂದ ಹತ್ತು ಸಾವಿರ ಫಲವು. ಮುತ್ತಿನಿಂದ ಲಕ್ಷಾಧಿಕ ಫಲವು. ಪದ್ಮಬೀಜದಿಂದ ಹತ್ತು ಲಕ್ಷ ಪುಣ್ಯವು. ಚಿನ್ನದ ಮಾಲೆಯಿಂದ ಕೋಟಿ ಗುಣವು. ಕುಶ ರುದ್ರಾಕ್ಷಗಳಿಂದ ಅನಂತ ಫಲವು. ನಿತ್ಯವೂ ಗೋಪ್ಯವಾಗಿ ಮಾಲೆಯನ್ನು ಧರಿಸಿ ಜಪಿಸಬೇಕು. ಇದರಿಂದ ಅನಂತಫಲವುಂಟು. ಬೆರಳನ್ನೆಣಿಸಿ ಜಪಿಸಲು ಪಾಪವುಂಟಾದೀತು. ಆಗ ಮೂರು ಬಾರಿ ಪ್ರಾಣಾಯಾಮ ಮಾಡಲು ಆ ಪಾಪ ಹೋಗುವುದು. ನಿತ್ಯವೂ ಹನ್ನೊಂದು ಜಪವನ್ನು ಮೂರು ದಿನ ಜಪಿಸಲು ಮೂರು ದಿನದ ಪಾಪ ಪರಿಹಾರವು. ನೂರೆಂಟು ಜಪಮಾಡಲು

ಅಘೋರ ಪಾಪವು ಹೋಗುವುದು. ಸಾವಿರ ಜಪಮಾಡಿದರೆ ಉಪಪಾತಕಗಳು ನಾಶವಾಗುವುವು. ಕೋಟಿ ಜಪಮಾಡಲು ಮಹಾಪಾತಕಗಳು ನಾಶವಾಗುವುವು. ದೃಢಚಿತ್ತದಿಂದ ಜಪಿಸಬೇಕು. ಹಿಂದು ಮುಂದು ನೋಡಬಾರದು. ಶೂದ್ರಾದಿಗಳೊಡನೆ ಮಾತಾಡಬಾರದು. ಒಬ್ಬರಿಂದ ದ್ರವ್ಯವನ್ನು ಹೊಂದಿ ಜಪಿಸಲು ಅನಂತ ದೋಷವುಂಟಾಗಿ ಚಾಂಡಾಲನಾಗಿ ಹುಟ್ಟುವನು. ಜಪಮಾಡುವಾಗ ಮೈಯನ್ನು ತುರಿಸಬಾರದು. ತುರಿಸಿದರೆ ಶ್ರೋತ್ರಾಚಮನ ಮಾಡಿದರೆ ದೋಷವಿಲ್ಲ. ವಿಪ್ರನ ಬಲಗಿವಿಯಲ್ಲಿ ಸಪ್ತದೇವತೆಗಳಿರುವರು. ಇದನ್ನು ಮುಟ್ಟಲು ಪಾಪವು ಹೋಗುವುದು. ಜಪಕಾಲದಲ್ಲಿ ಚಾಂಡಾಲನನ್ನು ನೋಡಬಾರದು. ನೋಡಿದರೆ ದ್ವಿರಾಚಮನ ಮಾಡುವುದರಿಂದ ಶುದ್ಧನಾಗುವನು. ಪತಿತನೊಡನೆ ಮಾತಾಡಿದರೆ ಸ್ನಾನವನ್ನೂ, ಆಚಮನವನ್ನೂ ಮಾಡಬೇಕು.

ಜಪಕಾಲದಲ್ಲಿ ನಿದ್ರೆ ಬಂದರೂ, ಆಕಳಿಸಿದರೂ, ಕೋಪಿಸಿದರೂ, ಅಧೋವಾಯು ಬಂದರೂ ಪಾಪವುಂಟು. ಜಪಿಸುವಾಗ ಮೌನವಾಗಿರುವುದು ಉತ್ತಮ. ಆವಶ್ಯಕವಾಗಿ ಮಾತಾಡಬೇಕಾದರೆ ಮಾತಾಡಿದ ಬಳಿಕ ತದ್ವಿಷ್ಣೋಃ ಎಂಬ ಮಂತ್ರವನ್ನು ಜಪಿಸಿ ಗಾಯತ್ರೀ ಜಪಮಾಡಲು ಆ ಪಾಪವು ಹೋಗುವುದು. ಬಳಿಕ ಶ್ರೋತ್ರಾಚಮನಮಾಡಿ, ಅಗ್ನಿ, ಸೂರ್ಯ, ಹಸುಗಳನ್ನು ದರ್ಶನ ಮಾಡಿ ವಿಷ್ಣುಮಂತ್ರವನ್ನು ಜಪಿಸಬೇಕು. ಈ ರೀತಿಯಿಂದ ಜಪಿಸಲು ಇಷ್ಟಸಿದ್ಧಿಯಾಗುವುದು. ಬೆಳಿಗ್ಗೆ ಮಿತ್ರಸ್ಯ ಎಂಬ ಮಂತ್ರವನ್ನೂ, ಮಧ್ಯಾಹ್ನಕಾಲದಲ್ಲಿ ಉದಿತ್ಯ ಮಂತ್ರವನ್ನೂ, ಸಾಯಂಕಾಲ ಇಮಂ ಮೇ ಮಂತ್ರವನ್ನೂ ಉಚ್ಚರಿಸಿ ವೃದ್ಧಾಚಾರದಂತೆ ಗೋತ್ರಪ್ರವರರನ್ನುಚ್ಚರಿಸಬೇಕು. ನಾಲ್ಕು ದಿಕ್ಕುಗಳನ್ನೂ ಪ್ರದಕ್ಷಿಣೆಗೈದು ವಂದಿಸಬೇಕು. ಸಂಧ್ಯೆಯನ್ನು ಮಾಡಿದ ಮೇಲೆ ಅಗ್ನಿಕುಂಡದಲ್ಲಿ ಔಪಾಸನ ಮಾಡಬೇಕು. ಎಲೆಯಿಂದ ಅಗ್ನಿಯನ್ನು ಬೀಸಿದರೆ ರೋಗಿಯಾಗುವನು. ಮೊರದಿಂದ ಬೀಸಲು ಬಡವನಾಗುವನು. ಬಾಯಿಯಿಂದ ಊದಲು ಆಯುಷ್ಯಹೀನವು. ಕೈಯಿಂದ ಬೀಸಿದರೆ ಮೃತ್ಯುವುಂಟಾದೀತು. ಬೀಸಣಿಗೆಯಿಂದಾಗಲೀ, ಊದುವ ಕೊಳವೆ

ಯಿಂದಾಗಲೀ ಬೆಂಕಿಯನ್ನು ಹತ್ತಿಸಬೇಕು. ಔಪಾಸನ ಕಾಲದಲ್ಲಿ ಅಗ್ನಿಯು ಉರಿಯುತ್ತಿರಬೇಕು. ಸವಿತ್ತನ್ನು ಬ್ರಾಹ್ಮಣನೇ ತರಬೇಕು. ಶೂದ್ರನಿಂದ ತರಿಸಬಾರದು. ಶೂದ್ರನಿಂದ ಸವಿತ್ತು ದೂರ್ವೆ, ಹೂವು, ಹೋಮ ದ್ರವ್ಯಗಳನ್ನು ತರಿಸಬಾರದು. ಭತ್ತ, ಸಾವೆ ಅಕ್ಕಿ, ಕಾಡಿನಲ್ಲಿ ಬೆಳೆದ ಬತ್ತ, ನವಣೆ, ಗೋಧಿ, ಜೋಳ ಇವು ಹೋಮಕ್ಕೆ ಯೋಗ್ಯವು. ಪ್ರಮಾಣಾನುಸಾರವಾಗಿ ತುಪ್ಪವನ್ನು ಸೇರಿಸಿ ಆಹುತಿ ಕೊಡಬೇಕು. ಹೋಮಕ್ಕೆ ಎಳ್ಳು ಯೋಗ್ಯವು. ಔಪಾಸನೆಯಾದ ಮೇಲೆ ಬೆಳಗಿನ ಕರ್ಮಗಳನ್ನು ಮಾಡಿ ಮಧ್ಯಾಹ್ನದಲ್ಲಿ ಬ್ರಹ್ಮಯಜ್ಞ ಮಾಡಿ ನೀರಿನ ಹತ್ತಿರ ತರ್ಪಣಮಾಡಬೇಕು. ಮೂರು ಪ್ರಾಣಾಯಾಮ ಮಾಡಿ ವಿದ್ಯುದಸಿ ಮಂತ್ರವನ್ನು ಜಪಿಸಿ ದೂರ್ವೆ ಯನ್ನು ಕರದಲ್ಲಿ ಹಿಡಿದು ಪೂರ್ವಕ್ಕಾಗಲೀ, ಉತ್ತರಕ್ಕಾಗಲೀ ಮುಖ ವಾಗಿ ಕುಳಿತು ಎಡಗಾಲ ಮೇಲೆ ಬಲಗಾಲನ್ನಿಟ್ಟು ಹಸ್ತಗಳನ್ನು ಸೇರಿಸಿ ಬಲದ ಮೊಳಕಾಲ ಮೇಲಿಟ್ಟು ಮೂರು ಬಾರಿ ಪ್ರಣವದೊಡನೆ ಋಜೋಕ್ಷರ ಮಂತ್ರವನ್ನು ಹೇಳಿ, ಓಂ ಭೂಃ ಎಂದು ತ್ರಿಪಾದ ಗಾಯತ್ರಿಯನ್ನುಚ್ಚರಿಸಿ, ತತ್ಸವಿತುಃ ಎಂದು ಮತ್ತೆ ಹತ್ತು ಬಾರಿ ಜಪಿಸಬೇಕು. ಸ್ವಾಧ್ಯಾಯ ದಿನಗಳಲ್ಲಿ ಶಕ್ತಿಯಿದ್ದಷ್ಟು ವೇದವನ್ನು ಹೇಳಬೇಕು. ಅನಾಧ್ಯಾಯ ದಿನದಲ್ಲಿ ಐವತ್ತೊಂದು ಋಕ್ಕನ್ನು ಹೇಳಬೇಕು. ಇದು ಬಾರದಿರಲು ನಮೋ ಬ್ರಹ್ಮಣೆ ಎಂಬ ಮಂತ್ರ ವನ್ನು ಮೂರು ಬಾರಿ ಜಪಿಸಬೇಕು. ವೃಷ್ಟಿರಸಿ ಮಂತ್ರ ಜಪಿಸಿ ಉದಕವನ್ನು ಮುಟ್ಟಿ ತರ್ಪಣಕೊಡಬೇಕು. ಬ್ರಹ್ಮಯಜ್ಞ ಮಾಡಲು ವಸು ರುದ್ರಾದಿತ್ಯರೂ, ಸರ್ವದೇವತೆಗಳೂ, ಪಿತೃಗಳೂ ತೃಪ್ತರಾಗು ವರು. ಒಂದಾನೊಂದು ದಿನ ಬ್ರಹ್ಮಯಜ್ಞ ಮಾಡಲು ಸಮಯ ಸಿಕ್ಕದಿದ್ದರೆ ಗಾಯತ್ರೀ ಜಪಮಾಡಲು ವೇದಪಠಣದ ಫಲವಾಗು ವುದು. ದೇವತರ್ಪಣವನ್ನು ಕುಶಾಗ್ರದಲ್ಲಿಯೂ, ಋಷಿತರ್ಪಣವನ್ನು ಮಧ್ಯಸ್ಥಾನದಲ್ಲಿಯೂ, ಪಿತೃತರ್ಪಣವನ್ನು ಕುಶಮೂಲದಲ್ಲಿಯೂ ಕೊಡಬೇಕು. ಪಾತ್ರೆಯಲ್ಲಿ ತರ್ಪಣಕೊಡಬಾರದು. ನೀರಿನಲ್ಲಿ ತರ್ಪಣಕೊಡಬೇಕು. ಮನೆಯಲ್ಲಿ, ಭೂಮಿಯಲ್ಲಿ ತರ್ಪಣಮಾಡ ಬಾರದು. ಭೂಮಿಯಲ್ಲಿ ದರ್ಭೆಯನ್ನಿಟ್ಟು ಅದರಲ್ಲಿ ತರ್ಪಣ

ಕೊಡಬೇಕು. ಎಳ್ಳನ್ನು ಕೈಯಲ್ಲಿ ಹಿಡಿದು ತರ್ಪಣಕೊಡಬೇಕು. ಕಲ್ಲಿನಲ್ಲಿಯೂ, ಭೂಮಿಯಲ್ಲಿಯೂ, ಮರದ ಪಾತ್ರೆಯಲ್ಲಿಯೂ ಎಳ್ಳನ್ನಿಡಬಾರದು. ಮನೆಯಲ್ಲಿ ತರ್ಪಣಮಾಡುವಾಗ ಎಳ್ಳು ಗ್ರಾಹ್ಯವಲ್ಲ. ನೀರಿನಲ್ಲಿ ತರ್ಪಣ ಕೊಡಬೇಕು. ಬಿಳೀ ಎಳ್ಳು ದೇವತೆಗಳಿಗೂ, ಧೂಮ್ರವರ್ಣದ್ದು ಋಷಿಗಳಿಗೂ, ಕರೀ ಎಳ್ಳು ಪಿತೃಗಳಿಗೂ ತರ್ಪಣಕ್ಕೆ ಯೋಗ್ಯವು. ಯಜ್ಞೋಪವೀತವು ಸವ್ಯದಲ್ಲಿರಲು ದೇವತರ್ಪಣವನ್ನೂ, ನಿವೀತಿಯಲ್ಲಿ ಋಷಿತರ್ಪಣವನ್ನೂ, ಎಡದಲ್ಲಿರಲು ಪಿತೃತರ್ಪಣವನ್ನೂ ಕೊಡಬೇಕು. ದೇವತೆಗಳಿಗೊಂದು ಬಾರಿಯೂ, ಋಷಿಗಳಿಗೆರಡು ಬಾರಿಯೂ, ಪಿತೃಗಳಿಗೆ ಮೂರು ಬಾರಿಯೂ ತರ್ಪಣ ಕೊಡಬೇಕು. ಹೆಂಗಸಿಗೊಂದು ಬಾರಿಯೂ, ಸಾಪತ್ನಿಗೂ, ಆಚಾರ್ಯರಿಗೂ ಎರಡು ಬಾರಿಯೂ ತರ್ಪಣಕೊಡಬೇಕು. ದೇವಬ್ರಹ್ಮರ್ಷಿಗಳಿಗೆ ತರ್ಪಣಕ್ಕೆ ಅಕ್ಷತೆಯು ಮುಖ್ಯವು. ಕರೀ ಎಳ್ಳು ಪಿತೃಗಳಿಗೆ ಉಪಯೋಗವು ಸುತ್ತೂ ಪುಣ್ಯಾಕರವಾಗಿದೆ.

ಭಾನುವಾರ, ಶುಕ್ರವಾರ, ಪಾಡ್ಯ, ಮಖಾ ನಕ್ಷತ್ರ, ಷಷ್ಠಿ, ನವಮಿ, ಏಕಾದಶಿಗಳಲ್ಲಿ ತಿಲತರ್ಪಣ ಮಾಡಬಾರದು. ವಿವಾಹ ಉಪನಯನಗಳಲ್ಲಿಯೂ, ಜನ್ಮನಕ್ಷತ್ರ ಜನ್ಮದಿನಗಳಲ್ಲಿಯೂ, ಶುಭದಿನಗಳಲ್ಲಿಯೂ ತಿಲತರ್ಪಣ ಕೂಡದು; ನೀರಿನಿಂದ ತರ್ಪಣಮಾಡಬೇಕು. ಆಗ ಕರದಲ್ಲಿ ಚಿನ್ನದ ಮುದ್ರೆಯುಂಗುರವನ್ನೂ, ದರ್ಭೆ ಪವಿತ್ರವನ್ನೂ ಧರಿಸಿ ತರ್ಪಣಮಾಡಬೇಕು. ಕಾಲನ್ನು ತೊಳೆಯದೇ ಮಂಗಲಸ್ನಾನವನ್ನೂ, ಎಳ್ಳಿಲ್ಲದೆ ತರ್ಪಣವನ್ನೂ, ದಕ್ಷಿಣೆಯಿಲ್ಲದೆ ಶ್ರಾದ್ಧವನ್ನೂ ಮಾಡಲು ನಿಷ್ಫಲವಾಗುವುದು. ಮೇಲೆ ಹೇಳಿದ ನಿಷಿದ್ಧ ದಿನಗಳಲ್ಲಿ ನೀರಿನಿಂದ ತರ್ಪಣಮಾಡಬೇಕು. ದೀಪಾವಳಿ ಚತುರ್ದಶಿಗಳಲ್ಲಿಯೂ, ಕೃಷ್ಣಾಂಗಾರಕ ಚತುರ್ದಶಿಯಲ್ಲಿಯೂ ಸವ್ಯವಾಗಿ ಯಮನ ಹೆಸರಿನಿಂದ ತರ್ಪಣಕೊಡಬೇಕು. ಯಮನ ಹೆಸರುಗಳು ಹದಿಮೂರು ಇವೆ. ಯಮ, ಧರ್ಮರಾಜ, ಮೃತ್ಯು, ಅಂತಕ, ವೈವಸ್ವತ, ಕಾಲ, ಸರ್ವಭೂತಕ್ಷಯ, ಔದುಂಬರ, ನೀಲ, ಪರಮೇಷ್ಠಿ, ವೃಕೋದರ, ಚಿತ್ರರೇಖಾ, ಚಿತ್ರಗುಪ್ತ ಎಂಬೀ ಪ್ರತಿಯೊಂದು ಹೆಸರನ್ನು ಹೇಳಿ ನದಿಯಲ್ಲಿ ಒಂದೊಂದು ತರ್ಪಣ

ಕೊಡಬೇಕು. ಇದರಿಂದ ಸರ್ವಪಾಪಗಳೂ ನಾಶವಾಗುವುದು. ರೋಗವೂ, ಅಪಮೃತ್ಯುವೂ ಎಂದಿಗೂ ಬಾರದು, ಗ್ರಹಪೀಡೆ ಯಿಲ್ಲ. ಮಾಘ ಶುಕ್ಲ ಅಷ್ಟಮಿಯಲ್ಲಿ ಭೀಷ್ಮತರ್ಪಣ ಮಾಡಬೇಕು. ಸೂರ್ಯನ ಹೆಸರಿನಲ್ಲಿ ಮೂರು ಅರ್ಘ್ಯ ಕೊಡಬೇಕು, ಎಂದು ನೃಸಿಂಹಸರಸ್ವತಿಗಳು ಹೇಳಿದರು, ಎಂದು ಸಿದ್ಧರು ನಾಮಧಾರಕನಿಗೆ ಹೇಳಿದರು, ಎಂದು ಸರಸ್ವತೀ ಗಂಗಾಧರನು ಈ ರೀತಿಯಿಂದ ಬ್ರಾಹ್ಮಣರ ಆಚಾರಕ್ರಮವನ್ನು ಹೇಳಿದರು. ಇದರಂತೆ ನಡೆದರೆ ಸರ್ವಾಭೀಷ್ಟಗಳೂ ಉಂಟಾಗುವುವು, ಎಂಬಲ್ಲಿ ಶ್ರೀಗುರುಚರಿತ್ರಾಮೃತದಲ್ಲಿ ವೇದೋಕ್ತವಾದ ಆಚಾರನಿರೂಪಣವೆಂಬ ೩೬ನೇ ಅಧ್ಯಾಯವು ಮುಗಿದುದು. ॥ ಶ್ರೀಃ ॥

## ೩೭ನೇ ಅಧ್ಯಾಯ.

ನಾಮಧಾರಕನು ಸಿದ್ಧರನ್ನು ಕುರಿತು ಸ್ವಾಮಿ, ಮುಂದಿನ ಕಥೆಯೇನು? ಗುರುಗಳು ಏನು ಹೇಳಿದರು? ಎಂದು ಕೇಳಿದನು. ಆಗ ಸಿದ್ಧರು ಶಿಷ್ಯನೇ, ಕೇಳು. ನಾರಾಯಣನ ಅವತಾರರಾದ ಗುರುಗಳು ಆಚಾರಧರ್ಮವನ್ನು ಹೇಳಲು ಪ್ರಯಾಸವಾದೀತೇ? ಪತಿತನಿಗೆ ಜ್ಞಾನವಂ ಕೊಟ್ಟು ವೇದವನ್ನು ಹೇಳಿಸಲಿಲ್ಲವೇ? ಗುರುಗಳು ಆ ವಿಪ್ರನಂ ಕುರಿತು ಹೇಳುವರು. ವಿಪ್ರನೇ, ಕೇಳು. ಗೃಹರಕ್ಷಣೆಗಾಗಿ ಅಗ್ನಿಯನ್ನು ಕಡೆಯುವ ಕಟ್ಟಿಗೆಯನ್ನೂ, ಶ್ರೀಗಂಧವನ್ನೂ, ತುಪ್ಪವನ್ನೂ, ಕೃಷ್ಣಾಜಿನವನ್ನೂ, ಭಾಗವಸ್ತ್ರವನ್ನೂ ಸಂಪಾದಿಸಿದರೆ ಪಾಪವಿಲ್ಲ. ಪಾಪನಾಶಿನಿಯಾದ ಹಸುವನ್ನು ಪಾಲಿಸಬೇಕು. ದೇವಪೂಜೆಯ ವಿಧಿಯನ್ನು ಕೇಳು. ಮನೆಯನ್ನೂ, ದೇವರ ಮನೆಯನ್ನೂ ಶುದ್ಧಿಮಾಡಬೇಕು. ಚಿನ್ನ, ಬೆಳ್ಳಿ, ತಾಮ್ರ, ಮಣ್ಣಿನ ಗಡಿಗೆಗಳೇ ಮುಂತಾದ ಪಾತ್ರೆಗಳನ್ನು ಶುದ್ಧಿಗೈಯಬೇಕು. ಕಂಚಿನ ಪಾತ್ರೆಯಿಂದಲೂ, ಕನ್ಯೆಯ ಹಸ್ತದಿಂದಲೂ, ಎಡಗೈ ಬಟ್ಟೆಯಿಂದಲೂ ಸಾರಿಸಬಾರದು. ಬಲಗೈಯಿಂದ ನೆಲವನ್ನು ಸಾರಿಸಬೇಕು. ಶೂದ್ರರು ಸಾರಿಸಬಾರದು. ನೈಋತ್ಯ ದಿಕ್ಕಿನಿಂದ ಸಾರಿಸಬೇಕು. ರಾತ್ರಿಯಲ್ಲಿ

ತಂಢ ನೀರಿನಿಂದ ಸಾರಿಸಬಾರದು. ಅಗತ್ಯವಾಗಿ ಹಾಗೆ ಸಾರಿಸ ಬೇಕಾದರೆ ಆ ನೀರಿಗೆ ಭಸ್ಮವನ್ನು ಹಾಕಿ ಸಾರಿಸಿ ರಂಗವಲ್ಲಿ ಹಾಕಬೇಕು. ಶುಭಾಸನದಲ್ಲಿ ಕುಳಿತು ದೇವಪೂಜೆ ಮಾಡಬೇಕು. ಸಂಧ್ಯಾವಂದನೆ ಮಾಡಿದಂತೆಯೇ ತ್ರಿಕಾಲವೂ ದೇವಪೂಜೆ ಮಾಡಬೇಕು. ಅಥವಾ ಮಧ್ಯಾಹ್ನ ಪೂಜಿಸಬೇಕು. ಸಾಯಂಕಾಲ ಮಂತ್ರಪುಷ್ಪ ಹಾಕ ಬೇಕು. ದೇವಪೂಜೆ ಮಾಡದವನು ಯಮಪುರಿಯಲ್ಲಿ ನರಕದುಃಖ ವನ್ನನುಭವಿಸುವನು. ದೇವಪೂಜೆಯನ್ನೂ, ವೈಶ್ವದೇವವನ್ನೂ ಮಾಡದಿರುವವನು ಯಮನಿಗೆ ತುತ್ತಾಗುವನು. ದೇವರ ಪೂಜೆಯು ಆರು ವಿಧವಾಗಿದೆ. ನೀರಿನಿಂದ ಅಭಿಷೇಕಮಾಡಲು ನಾರಾಯಣನು ತೃಪ್ತನಾಗುವನು. ಎರಡನೇ ಅಗ್ನಿದೇವಪೂಜೆಯು. ೩ನೇ ಸೂರ್ಯ ಪೂಜೆಯು. ೪ನೇ ಮಾನಸಪೂಜೆಯು, ಅತಿ ವಿಶೇಷವಾದುದು. ಸ್ವಲ್ಪ ಬುದ್ಧಿಯುಳ್ಳವರಿಗೆ ಪ್ರತಿಮಾಪೂಜೆಯು ಉಕ್ತವಾಗಿದೆ. ಜ್ಞಾನಿಯು ಯಜ್ಞಪುರುಷನ ಪೂಜೆಯಿಂದ ಸ್ವರ್ಗವನ್ನೂ, ಮೋಕ್ಷ ವನ್ನೂ ಹೊಂದುವನು. ಗೋಬ್ರಾಹ್ಮಣರನ್ನೂ, ಗುರುಗಳನ್ನೂ ಭಕ್ತಿಯಿಂದ ಪೂಜಿಸಬೇಕು. ಗುರುವು ತ್ರಿಮೂರ್ತಿಸ್ವರೂಪನೆಂದು ವೇದಗಳು ಹೇಳುವುವು. ಪುರುಷಾರ್ಥಗಳು ಗುರುಪೂಜೆಯಿಂದ ಸಿದ್ಧಿಸುವುವು. ಕಲಿಯುಗದ ಜನರನ್ನು ರಕ್ಷಿಸಲು ನಾರಾಯಣನು ಚಕ್ರಾಂಕಿತವಾದ ಸಾಲಿಗ್ರಾಮವನ್ನು ನಿರ್ಮಿಸಿದನು. ಸಾಲಿಗ್ರಾಮ ತೀರ್ಥವನ್ನು ತೆಗೆದುಕೊಳ್ಳಲು ಪಾಪ ನಾಶವಾಗುವುದು. ಗುರ್ವಾಜ್ಞೆ ಹೊಂದಿ ಪ್ರತಿಮಾಪೂಜೆಯನ್ನು ವೇದೋಕ್ತ ಮಂತ್ರವಿಧಿಯಿಂದ ಮಾಡಬೇಕು. ಸ್ತ್ರೀಯರಿಗೂ, ಶೂದ್ರರಿಗೂ ಮಂತ್ರವನ್ನು ಹೇಳ ಬಾರದು. ಗುರುನಿರೂಪಹೊಂದಿ ಮರದಿಂದಾಗಲೀ, ಕಲ್ಲಿನಿಂದಾಗಲೀ ಮಾಡಿದ ಪ್ರತಿಮೆಯನ್ನು ಪೂಜಿಸಬೇಕು. ಈ ಪ್ರತಿಮೆಗಳು ದೇವರಾಗಿ ಪ್ರಸನ್ನವಾಗುವುವು. ಶುಚಿಯಾದ ಆಸನದಲ್ಲಿ ಕುಳಿತು ಮೂರು ಪ್ರಾಣಾಯಾಮ ಮಾಡಿ ವಿಭ್ಯೋ ಮಾತಾ ಎಂಬ ಮಂತ್ರ ವನ್ನು ಹೇಳಿ ಹನ್ನೆರಡು ಸಾರಿ ಪ್ರಣವವನ್ನು ಉಚ್ಚರಿಸಿ ತನ್ನ ಶಿರದಲ್ಲಿ ನೀರನ್ನು ಪ್ರೋಕ್ಷಿಸಿ ಸಂಕಲ್ಪಮಾಡಿ ಕಲಶಪೂಜೆ ಮಾಡಬೇಕು. ದೇವರ ದಕ್ಷಿಣಭಾಗದಲ್ಲಿ ಕಲಶವನ್ನಿಟ್ಟು ಶಂಖಪೂಜೆ ಮಾಡಬೇಕು.

ನಿರ್ಮಾಲ್ಯವನ್ನು ತೆಗೆದು ನೈಋತ್ಯದಿಕ್ಕಿನಲ್ಲಿ ಹಾಕಬೇಕು. ದೀಪವನ್ನು ಹಚ್ಚಿಸಿ ಗುರುವನ್ನು ಸ್ಮರಿಸಿ ಮನೋವಾಕ್ಕಾಯಕರ್ಮಗಳಿಂದ ಪೀಠ**ಪೂಜೆ**ಯನ್ನೂ, ದ್ವಾರಪಾಲ**ಪೂಜೆ**ಯನ್ನೂ ಮಾಡಬೇಕು. ಶಾಂತಾಕಾರಂ ಎಂದು ಧ್ಯಾನಿಸಿ ಮಂತ್ರೋಕ್ತವಾಗಿ ಆವಾಹನೆ ಮಾಡಬೇಕು.

** **ಸಹಸ್ರಶೀರ್ಷಾ** ಎಂದು ಆವಾಹಿಸಿ, **ಪುರುಷಯೇವೇದಗ್** ಎಂದು ಆಸನವನ್ನೂ, **ಏತಾವಾನಸ್ಯ** ಎಂದು ಪಾದ್ಯವನ್ನೂ, **ತ್ರಿಪಾದೂರ್ಧ್ವಂ** ಎಂದು ಅರ್ಘ್ಯವನ್ನೂ, **ತಸ್ಮಾದ್ವಿರಾಡ** ಎಂದು ಆಚಮನವನ್ನೂ, **ಯತ್ಪುರುಷೇಣ** ಎಂದು ಪಂಚಾಮೃತಸ್ನಾನವನ್ನೂ, ಪುರುಷಸೂಕ್ತ ರುದ್ರಸೂಕ್ತಗಳಿಂದ ಸ್ನಾನವನ್ನೂ ಮಾಡಿಸಿ, **ತಂ ಯಜ್ಞಂ** ಎಂಬ ಮಂತ್ರದಿಂದ ವಸ್ತ್ರವನ್ನೂ, **ತಸ್ಮಾದ್ಯಜ್ಞಂ** ಎಂದು ಉಪವೀತವನ್ನೂ, ಗಂಧವನ್ನೂ ಅರ್ಪಿಸಬೇಕು. **ತಸ್ಮಾದಶ್ವಾ** ಎಂಬ ಮಂತ್ರದಿಂದ ಹೂವನ್ನು ಅರ್ಪಿಸಬೇಕು. ತಾನೇ ನೆಟ್ಟು ಬೆಳೆದ ಹೂವನ್ನು ಅರ್ಪಿಸುವುದು ಒಳ್ಳೇದು. ಕಾಡಿನಲ್ಲಿ ಬೆಳೆದ ಹೂವು ಮಧ್ಯಮವು. ಕೊಂಡ ಹೂವು ಅಧಮವು. ಉತ್ತಮ ಪುಷ್ಪವು ಸಿಕ್ಕದಿದ್ದರೆ ಬಿಳಿಯ ಹೂವು ಕೊಳ್ಳುವುದು ಉತ್ತಮವು. ಕೆಂಪು ಹೂವು ಮಧ್ಯಮವು. ಹಳದಿ, ಕಪ್ಪು ಚಿತ್ರವರ್ಣದವು ಅಧಮವು. ಸಚ್ಛಿದ್ರವಾದುದಾಗಿಯೂ, ಹುಳ ತಿಂದುದಾಗಿಯೂ, ನೆಲದಲ್ಲಿ ಬಿದ್ದುದಾಗಿಯೂ ಇರುವ ಹೂವನ್ನು ಬಿಡಬೇಕು. ಬಿಲ್ವಪತ್ರೆ, ತುಳಸಿ, ತಾವರೇ ಹೂವುಗಳನ್ನು ಸದಾ ತಂದು ಅರ್ಪಿಸಬೇಕು. ತಾವರೆ, ಪಗಡೆ, ಸಂಪಿಗೆ, ಪಾದರಿ, ಪುನ್ನಾಗ, ಮಲ್ಲಿಗೆ, ಜಾಜಿ, ಕಣಿಗಲು, ನೈದಿಲೆಗಳನ್ನು ಅರ್ಪಿಸಬೇಕು. ವಿಷ್ಣುಪೂಜೆಯಲ್ಲಿ ಉಮ್ಮತ್ತಿನ ಹೂವು, ಕಣಿಗಲು, ರಕ್ತಪುಷ್ಪಗಳನ್ನು ಬಿಡಬೇಕು. ಬೆಟ್ಟದಾವರೆ, ಲಕ್ಕಿಹೂವು, ಬಿದುರು, ಬೇಲ, ಹೊಂಗೆ, ಹುಲಿಯುಗುರು ಗಿಡ, ನೆಲ್ಲಿ, ಕುಂಬಳದ ಹೂವುಗಳನ್ನು ವಿಷ್ಣುಪೂಜೆಗೆ ಬಿಡಬೇಕು. ಎಕ್ಕದ ಹೂವು ಅರ್ಪಿಸಿದರೆ ತನಗೆ ನಾಶವಾಗುವುದು. ಉಮ್ಮತ್ತಿನ ಹೂವನ್ನು ಅರ್ಪಿಸಿದರೆ ಪ್ರಜ್ಞಾನಾಶವಾಗುವುದು. ಕೆಂಪು ಕಂಚವಾಳದ ಹೂವನ್ನು ಅರ್ಪಿಸಿದರೆ ಬಡತನ ಬರುವುದು. ಶ್ರೀಕರ್ಣಿಕಾ ಪುಷ್ಪ

ವನ್ನು ಅರ್ಪಿಸಲು ಕುಲಕ್ಷಯವಾಗುವುದು. ಹೆಗ್ಗುಳ್ಳದ ಹೂವನ್ನು ಅರ್ಪಿಸಲು ದುಃಖವಾಗುವುದು. ಮೂಲಂಗಿ ಹೂವಿನಿಂದ ದುಃಖ ವುಂಟಾಗುವುದು. ಬೂರಗದ ಹೂವಿನಿಂದ ರೋಗವುಂಟಾದೀತು.

ಶಿವನಿಗೆ ಅರ್ಪಿಸುವ ಹೂವುಗಳ್ಯಾವುವೆಂದರೆ:—ಬೇಲ, ಕೇದಿಗೆ, ಚಂದ್ರಕಾಂತಿ, ಶ್ಯಾಮಪುಷ್ಪ (ನೀಲಿ), ಅರಳಿ, ಹುಲಿಯುಗುರು ಗಿಡ, ಪಗಡೇ (ರಂಜ), ದಾಳಿಂಬ, ಕೋಲುಮಲ್ಲಿಗೆ, ಸಂಜಬಟ್ಟಲು, ಜಾಜಿ ಈ ಹೂವುಗಳನ್ನು ಬಿಡಬೇಕು. ಬಿಳೀ ಹೂವುಗಳು ಉತ್ತಮ. ಗಣಪತಿಗೆ ತುಳಸಿಯು ಕೂಡದು, ದೂರ್ವೆಯನ್ನರ್ಪಿಸಬೇಕು. ಶಕ್ತಿದೇವತೆಗೆ ದೂರ್ವೆಯು ಕೂಡದು. ಉತ್ತಮ ಪುಷ್ಪಗಳನ್ನು ಅರ್ಪಿಸಲು ಪುರುಷಾರ್ಥಗಳುಂಟಾಗುವುವು. **ಯತ್ಪುರುಷೇತಿ** ಮಂತ್ರದಿಂದ ಸುಗಂಧಧೂಪವನ್ನು ಅರ್ಪಿಸಬೇಕು. **ಬ್ರಾಹ್ಮಣೋಸ್ಯೇತಿ** ಮಂತ್ರದಿಂದ ಏಕಾರ್ತಿ ಮಾಡಿ, **ಚಂದ್ರಮಾಮನಸೇತಿ** ಮಂತ್ರದಿಂದ ನೈವೇದ್ಯ ಮಾಡಬೇಕು. **ನಾಭ್ಯಾ ಆಸೀತ್** ಎಂಬ ಮಂತ್ರದಿಂದ ತಾಂಬೂಲವನ್ನರ್ಪಿಸಿ, **ಸಪ್ತಾಸ್ಯೇತಿ** ಮಂತ್ರದಿಂದ ನೀರಾಜನವೆತ್ತಬೇಕು. **ದೇವಾಯಜ್ಞೇತಿ** ಮಂತ್ರದಿಂದ ಪುಷ್ಪಾಂಜಲಿ ಯರ್ಪಿಸಬೇಕು. **ಧಾತಾಪುರಸ್ತಾತ್** ಎಂದು ನಮಸ್ಕರಿಸಬೇಕು. ವಿದ್ವಾಂಸರನ್ನೂ, ದೇವರನ್ನೂ ಸವ್ಯವಾಗಿ ಪ್ರದಕ್ಷಿಣೆಮಾಡಬೇಕು. ಗುರುವನ್ನೂ, ತಾಯಿತಂದೆಗಳನ್ನೂ ಎದುರಿನಲ್ಲಿ ವಂದಿಸಬೇಕು. ವಿಪ್ರಸಭೆಯಲ್ಲಿಯೂ, ದೇವಾಲಯದಲ್ಲಿಯೂ ಮುಂದೆ ನಮಸ್ಕರಿಸ ಬೇಕು. ತಾಯಿತಂದೆ, ಗುರುಗಳನ್ನು ಎರಡು ಕೈಗಳಿಂದ ಕಿವಿಗಳನ್ನು ಮುಟ್ಟಿ ವಂದಿಸಬೇಕು. ಅವರ ಬಲಪಾದವನ್ನು ಬಲಗೈಯಿಂದಲೂ, ಎಡಪಾದವನ್ನು ಎಡಗೈಯಿಂದಲೂ ಮುಟ್ಟಿ ವಂದಿಸಬೇಕು. ತಾಯಿ ತಂದೆಗಳು ಗುರುವಿನಂತೆಯೂ, ಬ್ರಹ್ಮನಂತೆಯೂ ಪೂಜ್ಯರಾಗಿರುವರು. ಉಪನಯನ ಮಾಡಿಸಿದ ಪುರೋಹಿತನೂ, ಮಲೆದಾಯಿಯೂ, ಹಿರಿಯಣ್ಣನೂ, ಚಿಕ್ಕಪ್ಪನೂ, ವಯಸ್ಸಾದ ಇಷ್ಟಮಿತ್ರರೂ ಗುರುವಿನಂತೆ ಪೂಜ್ಯರಹರು. ವಿದ್ವಾಂಸರು ಚಿಕ್ಕ ವಯಸ್ಸಿನವರನ್ನು ನಮಸ್ಕರಿಸ ಬಾರದು. ಅಗ್ನಿ, ಸಮಿತ್ತು, ಹೂವು, ದರ್ಭೆ, ಅಕ್ಷತೆಗಳನ್ನು ತಾನಾಗಲೀ, ಇತರರಾಗಲೀ ಧರಿಸಿರುವಾಗ ವಂದಿಸಿದರೆ ಅಶಸ್ತ್ರವಧಾ

ದೋಷ ಬರುವುದು. ಜಪ, ಹೋಮಕಾಲಗಳಲ್ಲಿಯೂ, ಸ್ನಾನ ಕಾಲದಲ್ಲಿಯೂ, ದೂರದಲ್ಲಿ ಬ್ರಾಹ್ಮಣನು ಬರುವಾಗಲೂ ವಂದಿಸಲು ದೋಷವುಂಟು. ಓಡುವ ವಿಪ್ರನಿಗೂ, ಧನಗರ್ವಿತನಿಗೂ, ಕೋಪಿಗೂ, ಮಂಗಲಸ್ನಾನಮಾಡುವವನಿಗೂ ವಂದಿಸಬಾರದು. ಒಂದು ಕೈಯುಲ್ಲಿ ವಿಪ್ರನಂ ವಂದಿಸಬಾರದು. ಸೂತಕನನ್ನೂ, ಮೂರ್ಖನನ್ನೂ ವಂದಿಸ ಬಾರದು. ಗೀತ, ನೃತ್ಯ, ವಾದ್ಯಗಳಿಂದ ದೇವರನ್ನು ಸಂತೋಷ ಪಡಿಸಬೇಕು. ಪೀಠದಲ್ಲಿ ಹಸ್ತವನ್ನಿಟ್ಟು ಅರ್ಚಿಸಿ ಉತ್ತರಪೂಜೆ ಮಾಡಬೇಕು. ಉದ್ವಾರ್ಜನೆ ಮಾಡುತ್ತಿರಬೇಕು. ಈ ರೀತಿ ಭಕ್ತಿ ಯಿಂದ ದೇವಪೂಜೆ ಮಾಡಬೇಕು. ಅನ್ನದಿಂದ ವೈಶ್ವದೇವ ಮಾಡ ಬೇಕು. ಅಗ್ನಿಯನ್ನಲಂಕರಿಸಿ ಅನ್ನವನ್ನು ಅಗ್ನಿಕುಂಡಕ್ಕೆ ತೋರಿಸಿ ತುಪ್ಪವನ್ನು ಹಾಕಿ ಐದು ಭಾಗ ಮಾಡಬೇಕು. ಒಂದು ಭಾಗದಲ್ಲಿ ಹತ್ತು ಆಹುತಿಯನ್ನೂ, ಎರಡನೇದರಲ್ಲಿ ಬಲಿಹರಣವನ್ನೂ ಮಾಡಿ, ಮೂರನೇದರಲ್ಲಿ ಅವಧಾನಮಾಡಿ, ನಾಲ್ಕನೇದರಲ್ಲಿ ಪಿತೃಯಜ್ಞ ಮಾಡಬೇಕು. ಐದನೇದರಲ್ಲಿ ಅತಿಥಿಗಳನ್ನು ಸಂತೋಷಪಡಿಸಬೇಕು. ಅನ್ನವಿಲ್ಲದ ದಿನ ಅಕ್ಕಿಯಿಂದ ವೈಶ್ವದೇವ ಮಾಡಬೇಕು. ವೈಶ್ವದೇವ ಕಾಲದಲ್ಲಿ ಕಳ್ಳನಾಗಲೀ, ಚಾಂಡಾಲನಾಗಲೀ ಅತಿಥಿಯಾಗಿ ಬಂದರೆ ಅವನನ್ನು ತೃಪ್ತಿಪಡಿಸಬೇಕು. ಯಮನು ತನ್ನ ದೂತರನ್ನು ಕುರಿತು ವೈಶ್ವದೇವ ಮಾಡುವ ಸರಸ ಹತ್ತಿರಕ್ಕೆ ಹೋಗಬೇಡಿರಿ, ಇದು ವಿಷ್ಣುವಿನ ಆಜ್ಞೆಯು, ಎಂದು ಹೇಳುವನು. ತಾಯಿತಂದೆಗಳನ್ನು ಕೊಂದವನೂ, ನಾಯಿಯೂ, ಚಾಂಡಾಲನೂ ಅತಿಥಿಯಾಗಿ ಬಂದರೆ ಅವರಿಗೆ ಅನ್ನ ಕೊಡದೇಕು. ಆಗ ಕುಲಗೋತ್ರವನ್ನು ವಿಚಾರಿಸದೆ ಅವರಿಗೆ ಅನ್ನ ಹಾಕಬೇಕು. ಈ ಅತಿಥಿಗಳು ವಿಮುಖರಾಗಿ ಹೋದರೆ ಪಿತೃಗಳು ಹದಿನಾರು ವರ್ಷಕಾಲ ಮನೆಗೆ ಬರುವುದಿಲ್ಲ.

ತಾನು ಪಯಣಮಾಡುತ್ತಿದ್ದರೆ ಆಗ ಔಷಧಿ, ತುಪ್ಪ, ಮೊಸರು, ಹಾಲು, ಗೆಡ್ಡೆಗೆಣಸು, ಹಣ್ಣುಗಳಿಂದಾದರೂ ದೇವಯಜ್ಞ ಮಾಡ ಬೇಕು. ಅನ್ನ ಹೊರತು ಅವಧಾನ ಮಾಡಬಾರದು. ಬ್ರಾಹ್ಮಣನು ಪಂಚಮಹಾಯಜ್ಞ ಮಾಡಬೇಕು. ವೈಶ್ವದೇವವಿಲ್ಲದಿದ್ದರೂ ತನ್ನ ಮನೆಗೆ ಒಬ್ಬ ಭಿಕ್ಷುಕನು ಬಂದರೆ ಪಾಪವು ಹೋಗಿ ವೈಶ್ವದೇವ

ಫಲವುಂಟಾಗುವುದು. ಬಲಿಹರಣ ಹಾಕಬೇಕು. ಈ ಬಲಿಹರಣವನ್ನು ತಾನು ತೆಗೆದರೆ ಚಾಂದ್ರಾಯಣವ್ರತ ಮಾಡಬೇಕು. ಮತ್ತೊಬ್ಬರಿಂದ ಬಲಿಹರಣ ತೆಗೆಯಿಸಬೇಕು. ಬಲಿಹರಣ ತೆಗೆಯದೆ ಊಟಮಾಡಲು ಆರು ಪ್ರಾಣಾಯಾಮ ಮಾಡಲು ಪಾಪವು ಹೋಗುವುದು. ಗೋಗ್ರಾಸ ಕೊಡಬೇಕು. ನಿತ್ಯಶ್ರಾದ್ಧ ಮಾಡಬೇಕು. ಬ್ರಹ್ಮಚಾರಿಗೆ ಸ್ವಧಾಕಾರ ಅಗ್ನೌಕರಣ ಕೂಡದು. ತಾಂಬೂಲ ದಕ್ಷಿಣೆ ಸಹಾ ಕೂಡದು. ವೈಶ್ವದೇವವಾದ ಮೇಲೆ ಮನೆಯ ಬಾಗಿಲಲ್ಲಿ ನಿಂತು ಅತಿಥಿಗಳನ್ನು ನಿರೀಕ್ಷಿಸಬೇಕು. ಬಳಲಿ ಬಂದ ಅತಿಥಿಯನ್ನು ಭಕ್ತಿಯಿಂದ ಪೂಜಿಸಬೇಕು. ಅಸ್ತಮಯಕಾಲದಲ್ಲಿಯೂ ಪೂಜಿಸಬೇಕು. ವರ್ಣಗಳಲ್ಲಿ ಬ್ರಾಹ್ಮಣನೇ ಶ್ರೇಷ್ಠನು, ಎಂದು ವೇದಶಾಸ್ತ್ರಗಳು ಹೇಳುವುವು. ವೈಶ್ವದೇವಕಾಲದಲ್ಲಿ ಬಂದ ಅತಿಥಿಯು ಸರ್ವರಿಗೂ ಗುರುವು. ಅತಿಥಿಪೂಜೆ ಮಾಡಿದರೆ ದೇವಪ್ರೀತಿಯಾಗುವುದು. ಬ್ರಹ್ಮೇಂದ್ರಾಗ್ನಿಗಳೂ, ವಾಯು, ಅರ್ಯಮಾದಿ ಸರ್ವದೇವತೆಗಳೂ ತೃಪ್ತರಾಗುವರು. ಅತಿಥಿಯ ಪಾದವನ್ನು ತೊಳೆದರೆ ಪಿತೃಗಳು ತೃಪ್ತರಾಗುವರು. ಅನ್ನದಾನ ಮಾಡುವುದರಿಂದ ಬ್ರಹ್ಮತೃಪ್ತಿಯಾಗಿ ಹರಿಹರರು ತೃಪ್ತರಾಗುವರು. ಯತಿಗಳೂ, ಬ್ರಹ್ಮಚಾರಿಯೂ ಮನೆಗೆ ಬಂದರೆ ಇವರಿಗೆ ಅನ್ನದಾನ ಮಾಡಬೇಕು. ಇದರಿಂದ ಮಹಾಪುಣ್ಯವುಂಟು. ಅತಿಥಿಗೆ ಒಂದು ಕವಳ ಆಹಾರ ಕೊಟ್ಟರೆ ಮೇರುವಿಗೆ ಸಮವಾದ ಪುಣ್ಯವುಂಟಾಗುವುದು. ಒಳ್ಳೇ ನೀರನ್ನು ಕೊಡಲು ಸಮುದ್ರದಾನ ಮಾಡಿದಷ್ಟು ಪುಣ್ಯವುಂಟು. ಅತಿಥಿಯು ಮನೆಗೆ ಬಂದರೆ ಅವನನ್ನು ಬಿಟ್ಟು ಊಟಮಾಡಿದರೆ ನಾಯಿಯೂ, ಕತ್ತೆಯೂ ಆಗಿ ಹುಟ್ಟುವನು. ಅತಿಥಿಪೂಜೆ ಮಾಡಿ ತಾನು ಊಟ ಮಾಡಬೇಕು. ಊಟದಲ್ಲಿ ಪಕ್ಷಪಾತಮಾಡಲು ದೋಷವುಂಟು. ಸಾಯಂಕಾಲ, ಮಧ್ಯಾಹ್ನಕಾಲಗಳಲ್ಲಿ ಗೃಹಸ್ಥನು ಊಟಮಾಡಿ ಕಾಲುಗಳಂ ತೊಳೆದುಕೊಳ್ಳಬೇಕು. ಐದು ಸ್ಥಳಗಳು ಒದ್ದೆಯಾಗಿರಬೇಕು. ಎರಡು ಕೈಗಳೂ, ಎರಡು ಕಾಲುಗಳೂ, ಮುಖವೂ ಸೇರಿ ಐದು ಸ್ಥಾನಗಳು ಒದ್ದೆಯಾಗಿರಬೇಕು. ಇವು ಒದ್ದೆಯಾಗಿದ್ದರೆ ಪುರುಷನು ಶತಾಯುವಾಗುವನು. ಪೂರ್ವಮುಖವಾಗಿ ಮೌನ

ವಾಗಿ ಎರಡು ಕಾಲುಗಳನ್ನು ಜೋಡಿಸಿ ಕುಳಿತು ಊಟಮಾಡಬೇಕು. ವಿಪ್ರನು ಚತುಷ್ಕೋನ ಮಂಡಲವನ್ನೂ, ಕ್ಷತ್ರಿಯನು ತ್ರಿಕೋನ ಮಂಡಲವನ್ನೂ, ವೈಶ್ಯನು ದುಂಡು ಮಂಡಲವನ್ನೂ, ಶೂದ್ರನು ಅರ್ಧಚಂದ್ರಾಕಾರ ಮಂಡಲವನ್ನೂ ಮಾಡಿ, ಸೂರ್ಯ, ವಸು, ರುದ್ರ, ಬ್ರಹ್ಮ ಮುಂತಾದ ದೇವತೆಗಳನ್ನು ಆ ಮಂಡಲದಲ್ಲಿ ಆವಾಹಿಸಿ ಊಟಮಾಡಬೇಕು. ಮಂಡಲವಿಲ್ಲದೆ ಊಟಮಾಡಬಾರದು. ಮಂಡಲ ವಿಲ್ಲದೆ ಭುಜಿಸಿದರೆ ಅನ್ನರಸವನ್ನು ಪಿಶಾಚರೂ, ರಾಕ್ಷಸರೂ ಒಯ್ಯು ವರು. ಪೂರ್ವಮುಖವಾಗಿ ಕುಳಿತು ಊಟಮಾಡುವುದು ಉತ್ತಮ. ಪಶ್ಚಿಮಮುಖವು ಮಧ್ಯಮವು. ಪಿತೃಕಾರ್ಯಕ್ಕೆ ಉತ್ತರಮುಖ ವಾಗಿ ಕುಳಿತು ಭುಜಿಸಬೇಕು. ದಕ್ಷಿಣಮುಖವು ಕೂಡದು. ಚಿನ್ನ, ಬೆಳ್ಳಿ, ತಾಮ್ರದ ಪಾತ್ರೆಗಳನ್ನು ಉಪಯೋಗಿಸುವುದು ಉತ್ತಮವು. ಊಟಮಾಡುವಾಗ ಗೃಹಸ್ಥನು ತಾಮ್ರದಪಾತ್ರೆಗಳನ್ನು ಉಪ ಯೋಗಿಸಬಾರದು. ಯತಿಯು ಚಿನ್ನ, ಬೆಳ್ಳಿ, ತಾಮ್ರ, ಮುತ್ತಿನ ಚಿಪ್ಪು, ಶಂಖ, ಸ್ಫಟಿಕ, ಪಾಷಾಣಗಳ ಪಾತ್ರೆಗಳನ್ನು ಉಪಯೋಗಿಸ ಬೇಕು. ಸುಳಿಬಾಳೆಯ ಎಲೆಯಲ್ಲಿಯೂ, ತಾವರೆಯ ಎಲೆಗಳಲ್ಲಿಯೂ, ಮುತ್ತುಗದೆಲೆಗಳಲ್ಲಿಯೂ ಊಟಮಾಡಲು ಚಾಂದ್ರಾಯಣ ವ್ರತ ವನ್ನು ಮಾಡಬೇಕು. ಆಲ, ಅರಳಿ, ಎಕ್ಕ, ಪಡವಲ, ಕಡಹ, ಕೆಂಪು ಕಂಚವಾಳ, ಗಳ ಎಲೆಗಳಲ್ಲಿ ಊಟಮಾಡಿದರೆ ಆಗ ಚಾಂದ್ರಾಯಣ ವ್ರತ ಮಾಡಬೇಕು. ಲೋಹಪಾತ್ರೆಯನ್ನು ಕೈಯಲ್ಲಿ ಹಿಡಿದು ತಾಮ್ರದ ಅಥವಾ ಮಣ್ಣಿನ ಪಾತ್ರೆಯನ್ನು ಎಲೆಯ ಮೇಲಿಟ್ಟು ಹತ್ತಿಯ ಎಲೆಯನ್ನು ಬಟ್ಟೆಯ ಮೇಲಿಟ್ಟು ಊಟಮಾಡಲು ನರಕ ವುಂಟಾಗುವುದು. ಕಂಚಿನ ಪಾತ್ರೆಯಲ್ಲಿ ಊಟಮಾಡಿದರೆ ಯಶಸ್ಸೂ, ಬಲವೂ, ಪ್ರಜ್ಞೆಯೂ, ಆಯುಸ್ಸೂ ಹೆಚ್ಚುವುದು. ಆದುದರಿಂದ ಗೃಹಸ್ಥನಿಗೆ ಕಂಚಿನ ಪಾತ್ರೆಯು ಊಟಕ್ಕೆ ಶ್ರೇಷ್ಠವು. ಈ ಕಂಚಿನ ಪಾತ್ರೆಯು ಐದು ಸೇರು ತೂಕವಿರಬೇಕು. ಕಮ್ಮಿಯಾಗಿರಬಾರದು. ಆರು ಸೇರು ಇದ್ದರೆ ಚಿನ್ನದ ಪಾತ್ರೆಯಂತೆ ಶ್ರೇಷ್ಠವು. ವಿಧವೆಯೂ, ಯತಿಯೂ, ಬ್ರಹ್ಮಚಾರಿಯೂ ಕಂಚಿನ ಪಾತ್ರೆಯಲ್ಲಿ ಊಟವನ್ನೂ, ತಾಂಬೂಲವನ್ನೂ, ಅಭ್ಯಂಗವನ್ನೂ ಬಿಡಬೇಕು.

ಕೆರಳೆಲೆಯಲ್ಲಿ ಊಟಮಾಡಬಾರದು. ಇದು ನಾಯಿಯ ಚರ್ಮಕ್ಕಿಂತಲೂ ನಿಷೇಧವು. ಬೇರೆಯಾದ ಲೋಹಪಾತ್ರೆಯಲ್ಲಿ ಭುಜಿಸಲು ಅಧಮವಾದುದು. ಒಡೆದ ಕಂಚಿನ ಪಾತ್ರೆಯಲ್ಲಿ ಊಟಮಾಡಲು ದೋಷವುಂಟು. ಸಂಧ್ಯಾಕಾಲದಲ್ಲಿ ಭುಜಿಸಲು ಮಹಾಪಾಪವು. ಪತಿತನೊಡನೆ ಕುಳಿತು ಭುಜಿಸಬಾರದು. ಶ್ರಾದ್ಧದಿನದಲ್ಲಿ ಬಾಲಕರೊಡನೆ ಭುಜಿಸಬಾರದು. ಶೂದ್ರನು ಭುಜಿಸಿದ ಶೇಷವನ್ನು ಉಣ್ಣಬಾರದು. ಆಸನವನ್ನೂ, ಆಪೋಶನವನ್ನೂ ತಾನೇ ಹಾಕಿಕೊಳ್ಳಬಾರದು. ತಾನೇ ತೈಲವನ್ನು ಹಾಕಿಕೊಂಡು ಅಭ್ಯಂಜನವನ್ನು ಮಾಡಬಾರದು. ಊಟದ ಕಾಲದಲ್ಲಿ ತಾನೇ ಮಂಡಲವನ್ನು ಮಾಡಬಾರದು. ಇದರಿಂದ ಆಯುಸ್ಸು ಕಮ್ಮಿಯಾಗುವುದು. ಇದರಿಂದ ಪುತ್ರಘಾತಕಿಯೆನಿಸುವನು. ಬಡಿಸಿದ ಅನ್ನವನ್ನು ವಂದಿಸಬೇಕು. ಮೊದಲು ಅಭಿಘಾರ ಮಾಡಬೇಕು. ಪ್ರಾಣಾಹುತಿ ತೆಗೆದುಕೊಂಡ ಮೇಲೆ ತನ್ನ ಕೈಯಿಂದ ತುಪ್ಪವನ್ನು ಹಾಕಿಕೊಳ್ಳಬೇಕು. ನೀರು ತೆಗೆದುಕೊಂಡು ವ್ಯಾಹೃತಿ ಮಂತ್ರವನ್ನು ಉಚ್ಚರಿಸಿ ಮಂತ್ರಿಸಿ ಅನ್ನವನ್ನು ಪವಿತ್ರವಾಗಿ ಮಾಡಬೇಕು. ಪರಿಷೇಚನೆಗೈದು ಚಿತ್ರಗುಪ್ತರನ್ನು ವಂದಿಸಿ, ಚಿತ್ರಗುಪ್ತರಿಗೆ ಬಲಿಕೊಡಬೇಕು. ಎಡಗೈಯ ಅಂಗುಷ್ಠ ತರ್ಜನೀ ಮಧ್ಯಮಾಂಗುಲಿಗಳಿಂದ ಪಾತ್ರೆಯನ್ನು ಹಿಡಿದು ಬಲಗೈಯಿಂದ ಆಪೋಶನ ತೆಗೆದುಕೊಳ್ಳಬೇಕು. ಕಾಕಬಲಿಯನ್ನು ಹಾಕಬೇಕು. ಆಪೋಶನದ ನೀರನ್ನು ಬಿಟ್ಟು ಬೇರೆಯಾದ ನೀರನ್ನು ಸ್ವೀಕರಿಸಿದರೆ ನಾಯಿಯ ಮೂತ್ರವನ್ನು ತೆಗೆದುಕೊಂಡಂತಾಗುವುದು. ಆಪೋಶನ ತೆಗೆದುಕೊಳ್ಳುವ ವಿಪ್ರನನ್ನು ವಂದಿಸಬಾರದು. ಇಂಥವರಿಂದ ಆಶೀರ್ವಾದವನ್ನು ಪಡೆಯಲೂ ಬಾರದು. ಇದರಿಂದಿಬ್ಬರಿಗೂ ದೋಷವುಂಟು. ಮಂತ್ರಯುಕ್ತವಾಗಿ ಆಪೋಶನ ತೆಗೆದುಕೊಳ್ಳಬೇಕು. ಬಳಿಕ ಪ್ರಾಣಾಹುತಿ ತೆಗೆದುಕೊಂಡು ಮೌನವಾಗಿದ್ದು ಊಟಮಾಡಬೇಕು. ಆಪೋಶನವಿಲ್ಲದೆ ಭುಜಿಸಬಾರದು. ಹಾಗೆ ಉಂಡರೆ ಆ ಪಾಪ ನಿವೃತ್ತಿಗಾಗಿ ನೂರೆಂಟು ಗಾಯತ್ರೀ ಜಪ ಮಾಡಬೇಕು. ಪ್ರಾಣಾಗ್ನಿಹೋತ್ರದಿಂದ ಸರ್ವಪಾಪಗಳೂ ಹತ್ತಿಯ ರಾಶಿಗೆ ಬೆಂಕಿ ಬಿದ್ದು ಸುಡುವಂತೆ ನಾಶವಾಗುವುವು. ಅನ್ನವನ್ನು

ಮಂತ್ರಿಸಿ ಪ್ರಾಣಾಹುತಿ ತೆಗೆದುಕೊಳ್ಳುವಾಗ ಈ ಕೆಳಗಿನ ಶ್ಲೋಕಗಳನ್ನು ಹೇಳಬೇಕು. ಯಾವುದೆಂದರೆ:—

ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ||
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ || ೧ ||
ಅನ್ನಂ ಬ್ರಹ್ಮರಸೋ ವಿಷ್ಣುಃ ಭೋಕ್ತಾ ದೇವೋ ಮಹೇಶ್ವರಃ ||

ಎಂಬ ಮಂತ್ರವನ್ನು ಹೇಳಿ ಅಗ್ನಿರಸ್ಮಿ ಎಂಬ ಮಂತ್ರವನ್ನು ಜಪಿಸಬೇಕು. ಮಧ್ಯಮಾಂಗುಷ್ಠ ತರ್ಜನಿಗಳಿಂದ ಪಂಚಪ್ರಾಣಾಹುತಿಯನ್ನು ತೆಗೆದುಕೊಳ್ಳಬೇಕು. ಪ್ರಾಣಾಹುತಿಯ ಅನ್ನವನ್ನು ಹಲ್ಲಿನಿಂದ ಅಗಿಯದೆ ಮೌನವಾಗಿ ನುಂಗಬೇಕು. ಸ್ನಾನಕಾಲದಲ್ಲಿಯೂ, ಹೋಮಕಾಲದಲ್ಲಿಯೂ, ಊಟದಕಾಲದಲ್ಲಿಯೂ, ಶ್ರಾದ್ಧಭೋಜನಕಾಲದಲ್ಲಿಯೂ ಮೌನವಾಗಿರಬೇಕು. ಸ್ನಾನಕಾಲದಲ್ಲಿ ಮೌನವಾಗಿಲ್ಲದಿರಲು ಸ್ನಾನದ ಫಲವಿಲ್ಲ. ಹೋಮಕಾಲದಲ್ಲಿ ಮೌನವಾಗಿಲ್ಲದಿರಲು ಇವನನ್ನು ಲಕ್ಷ್ಮಿಯು ಬಿಡುವಳು. ಊಟದಕಾಲದಲ್ಲಿ ಮೌನವಿಲ್ಲದಿರಲು ಅಪಮೃತ್ಯುವುಂಟಾದೀತು. ಮೌನದಿಂದಿರಲು ಅಶಕ್ಯವಾದರೆ ಪ್ರಾಣಾಹುತಿ ತೆಗೆದುಕೊಳ್ಳುವ ವರೆಗಾದರೂ ಮೌನದಿಂದಿರಬೇಕು. ತಂದೆಯೂ, ಅಣ್ಣನೂ ಬದುಕಿರಲು ಮೌನವಾಗಿರಬಾರದು. ಶ್ರಾದ್ಧದಿನದಲ್ಲಿನ ಊಟದಲ್ಲಿ ಮಾತ್ರ ಮೌನವಾಗಿರಬೇಕು. ತಂದೆಯೂ, ಅಣ್ಣನೂ ಜೀವಿಸಿರುವಾಗ ಮೌನವಾಗಿದ್ದರೆ ಅಧೋನರಕವುಂಟು. ಊಟದಲ್ಲಿ ಮೊದಲು ಮಧುರಾನ್ನವನ್ನುಣ್ಣಬೇಕು. ಬೆಲೆಯನ್ನು ಕೊಟ್ಟ ಅನ್ನವನ್ನು ತಿಂದರೆ ಬಲಹೀನನಾಗುವನು. ನಸವು ನೀರು ಕುಡಿಯುವಷ್ಟು ಕಾಲದೊಳಗಾಗಿ ಭುಜಿಸಬೇಕು. ಯತಿಯೂ, ಮುನಿಯೂ ಎಂಟು ಗ್ರಾಸ ತೆಗೆದುಕೊಳ್ಳಬೇಕು. ವನವಾಸಿಯು ಹದಿನಾರು ಕವಳ ತೆಗೆದುಕೊಳ್ಳಬೇಕು. ಗೃಹಸ್ಥನು ಮೂವತ್ತೆರಡು ಕವಳ ತೆಗೆದುಕೊಳ್ಳಬೇಕು. ಪಂತಿಪಿಾರಿ ಭುಜಿಸಿದರೆ ಎಂಜಲನ್ನು ತಿಂದಂತಾಗುವುದು. ಅರ್ಧಗ್ರಾಸವನ್ನು ತಿಂದು ಅರ್ಧಬಿಟ್ಟರೆ ಉಚ್ಛಿಷ್ಟಭೋಜನ ದೋಷವುಂಟಾದೀತು. ಇದಕ್ಕಾಗಿ ಚಾಂದ್ರಾಯಣ ವ್ರತ ಮಾಡಬೇಕು. ವ್ರತಬಂಧಕಾಲದ ಹೊರತು ಉಳಿದ ಕಾಲಗಳಲ್ಲಿ ಇಷ್ಟಮಿತ್ರರೊಡನೆ ಭುಜಿಸಬಾರದು. ಪುತ್ರ

ಪೌತ್ರರೊಡನೆ ಭುಜಿಸಲು ದೋಷವಿಲ್ಲ. ಅನ್ನವನ್ನೂ, ತುಪ್ಪವನ್ನೂ, ಪಾಯಸವನ್ನೂ ಚಲ್ಲಬಾರದು. ಸ್ವಲ್ಪ ಗ್ರಾಸವನ್ನು ಇಟ್ಟು ಭುಜಿಸಬೇಕು. ಅನ್ನವೆಲ್ಲವನ್ನೂ ಉಣ್ಣಬಾರದು. ಊಟ ಮುಗಿಯುವವರೆಗೆ ಪಾತ್ರೆಯನ್ನು ಎಡಗೈಯಿಂದ ಹಿಡಿದಿರಬೇಕು. ತಿಳಿಯದೆ ಪಾತ್ರೆಯನ್ನು ಬಿಟ್ಟರೆ ಅನ್ನವನ್ನು ಬಿಟ್ಟು ಏಳಬೇಕು. ಆದುದರಿಂದ ವಿದ್ವಾಂಸರು ಪಾತ್ರೆಯನ್ನು ಬಿಡಬಾರದು. ಅಥವಾ ಮೊದಲೇ ಪಾತ್ರೆಯನ್ನು ಹಿಡಿದಿರಬಾರದು. ಇದರಿಂದ ದೋಷವಿಲ್ಲ. ದಕ್ಷಿಣಾಭಿಮುಖವಾಗಿ ಕುಳಿತು ಎಡಗಾಲಿನ ಮೇಲೆ ಹಸ್ತವನ್ನಿಟ್ಟು ಭುಜಿಸಿದರೆ ಅನ್ನವನ್ನು ರಾಕ್ಷಸರು ಒಯ್ಯುವರು. ಎಡಗೈಯನ್ನು ನೆಲದಲ್ಲಿಟ್ಟು ಭುಜಿಸಲು ರೋಗ ಬರುವುದು. ಬೆರಳುಗಳನ್ನು ಬಿಟ್ಟು ಭುಜಿಸಲು ಗೋಮಾಂಸವನ್ನು ತಿಂದ ದೋಷವುಂಟಾದೀತು. ಆನೆ, ಕುದುರೆಗಳನ್ನು ಹತ್ತಿಯಾಗಲೀ, ಸ್ಮಶಾನದಲ್ಲಿಯಾಗಲೀ, ದೇವಾಲಯದಲ್ಲಾಗಲೀ, ಮಲಗುವ ಸ್ಥಳದಲ್ಲಾಗಲೀ ಭುಜಿಸಬಾರದು. ಕರದಲ್ಲಿ ಪಾತ್ರೆಯನ್ನು ಹಿಡಿದಾಗಲೀ, ಒದ್ದೆ ಕೂದಲುಳ್ಳವನಾಗಿ ಹೊರಭಾಗದಲ್ಲಿ ಕೈಯನ್ನಿಟ್ಟು ಕೂದಲುಗಳನ್ನು ಬಿಟ್ಟು ಆಗಲೀ ಭುಜಿಸಲು ದೋಷವುಂಟು. ಬಲಕ್ಕೆ ಯಜ್ಞೋಪವೀತವುಳ್ಳವನಾಗಿ ಎದುರಿನಲ್ಲಿ ಪಾದರಕ್ಷೆಗಳನ್ನು ನೋಡದೆ ಭುಜಿಸಬೇಕು. ನೀರು, ಗೆಡ್ಡೆ, ಗೆಣಸು, ಕಬ್ಬುಗಳನ್ನು ತಿಂದು ಪಾತ್ರೆಯಲ್ಲಿಟ್ಟರೆ ಉಚ್ಛಿಷ್ಟದೋಷವುಂಟಾದೀತು. ಸ್ನಾನ, ಹೋಮಗಳಿಲ್ಲದೆ ಉಣ್ಣಲು ಅನ್ನವು ಕ್ರಿಮಿಗೆ ಸಮವೆಂದು ಪರಾಶರರು ಹೇಳುವರು. ರಾತ್ರಿಯಲ್ಲಿ ಎಲೆಗಳ ಮೇಲೆ ಕುಳಿತು ದೀಪವಿಲ್ಲದೆ ಉಣ್ಣಲು ದೋಷಕರವು. ಹುಳಗಳನ್ನು ತಿಂದಂತಾಗುವುದು. ಊಟಮಾಡುವಾಗ ದೀಪ ಹೋದರೆ ಪಾತ್ರೆಯನ್ನು ಹಿಡಿದಿದ್ದು ಸವಿತೃದೇವತೆಯನ್ನು ಧ್ಯಾನಿಸಿ ದೀಪ ಹತ್ತಿಸಿ ಉಣ್ಣಬೇಕು. ಪಾತ್ರೆಯು ಎಷ್ಟು ದೊಡ್ಡದಾಗಿರುವುದೋ ಅಷ್ಟೇ ಅನ್ನವನ್ನು ಭುಜಿಸಬೇಕು. ಹೆಚ್ಚಾಗಿ ಭುಜಿಸಲು ದೋಷವುಂಟು. ಊಟ ಮಾಡುವಾಗ ಕೂದಲನ್ನು ಮುಟ್ಟಬಾರದು. ಕಥೆಯನ್ನು ಹೇಳಬಾರದು. ಆಕಾಶವನ್ನು ನೋಡಬಾರದು. ಕತ್ತಲೆಯಲ್ಲಿ ಊಟ ಮಾಡಬಾರದು. ತನ್ನ ಪತ್ನಿಗೆ ಆಹಾರವನ್ನು ಇಡದೆ ಭುಜಿಸಲು

ದೋಷವುಂಟು. ಹಾಗೆ ಇಟ್ಟುದನ್ನು ಪತ್ನಿಯು ಭುಜಿಸದಿರಲು ದೋಷವುಂಟು. ಹಾಳು ದೇವಾಲಯದಲ್ಲಿಯೂ, ನೀರಿನ ಹತ್ತಿರ ದಲ್ಲಿಯೂ, ಸಂಧ್ಯಾಕಾಲದಲ್ಲಿಯೂ ಉಣ್ಣಬಾರದು. ಕಲ್ಲಿನ ಮೇಲೆ ಪಾತ್ರೆಯನ್ನಿಟ್ಟು ಭುಜಿಸಬಾರದು. ಊಟದ ಕಾಲದಲ್ಲಿ ಸ್ತ್ರೀಯರ ಮುಖವಂ ನೋಡಬಾರದು. ಸ್ತ್ರೀಯರ ಪಙ್ತ್ತಿಯಲ್ಲಿ ಭೋಜನವು ಕೂಡದು. ತನ್ನ ಪತ್ನಿಯೊಡನೆ ಭುಜಿಸಲು ದೋಷವಿಲ್ಲ. ತನ್ನ ಎಂಜಲನ್ನು ನೀರಿನಲ್ಲಿ ಹಾಕಬಾರದು. ಬಟ್ಟೆಯ ನೀರನ್ನು ತಟ್ಟನೆ ಕುಡಿಯಲು ದೋಷವುಂಟು. ಹೀಗೆ ಕುಡಿದರೆ ನಾಯಿಯಾಗಿ ಹುಟ್ಟಿ ನರಕಕ್ಕೆ ಹೋಗಬೇಕಾಗುವುದು. ನೀರು, ಹಾಲು, ತುಪ್ಪಗಳನ್ನು ಭುಜಿಸುವಾಗಲೂ, ಆಪೋಶನ ತೆಗೆದುಕೊಳ್ಳುವಾಗಲೂ ಶಬ್ದಮಾಡಿದರೆ ಸುರಾಪಾನ ಮಾಡಿದಂತಾಗುವುದು. ಮಹಾನದಿಯ ನೀರನ್ನು ಬಾಯಿಯಿಂದ ಕುಡಿದರೂ, ನಿಂತು ನೀರು ಕುಡಿದರೂ ಸುರಾಪಾನಕ್ಕೆ ಸಮವಾಗುವುದು. ಎರಡು ಕೈಗಳನ್ನು ಸೇರಿಸಿ ಬೊಗಸೆಯಲ್ಲಿ ನೀರನ್ನು ಕುಡಿಯಬಾರದು. ಒಂದು ಕೈಯಿಂದ ಕುಡಿಯಬೇಕು. ಕುಡಿಯುವ ನೀರನ್ನು ಎಡಗೈಯಿಂದ ಮುಟ್ಟಬಾರದು. ಸಭೆಯಲ್ಲಿ ಏಕಾಸನದಲ್ಲಿ ಕುಳಿತಾಗಲೀ, ಹಾಸಿಗೆಯಲ್ಲಿ ಕುಳಿತಾಗಲೀ ನೀರು ಕುಡಿಯಬಾರದು. ಇದು ದೋಷಕರವು. ಭಿನ್ನಪಾತ್ರೆಯಲ್ಲಿ ಬಡಿಸುವವರನ್ನು ನೋಡಬಾರದು. ರಜಸ್ವಲೆಯನ್ನೂ, ಚಾಂಡಾಲ ನನ್ನೂ, ನಾಯಿಯನ್ನೂ ನೋಡಬಾರದು. ಇವರ ಶಬ್ದ ಕೇಳಲು ಅನ್ನವನ್ನು ಬಿಟ್ಟು ಏಳಬೇಕು. ಆಗ ಉಣ್ಣಲು ದೋಷವುಂಟು. ಜಗಳವನ್ನೂ, ಕುಟ್ಟುವುದನ್ನೂ, ಬೀಸುವುದನ್ನೂ ಕೇಳುತ್ತಾ ಭುಜಿಸ ಬಾರದು. ಅಪಶಬ್ದವನ್ನು ಕೇಳಬಾರದು. ಮೂಢರ ಪಙ್ತ್ತಿಯಲ್ಲಿ ಊಟಮಾಡಬಾರದು. ಹಾಗೆ ಊಟಮಾಡಬೇಕಾದರೆ ನೀರಿಂದಾಗಲೀ, ಭಸ್ಮದಿಂದಾಗಲೀ ಪಾತ್ರೆಯನ್ನು ಬೇರೆ ಮಾಡಬೇಕು. ಇಂಥವರಿಗೂ ತನಗೂ ಮಧ್ಯದಲ್ಲಿ ಕಂಭವೂ, ಬಾಗಿಲೂ ಇದ್ದರೆ ಶುದ್ಧವು. ನೀರನ್ನು ಸುತ್ತುಗಟ್ಟಲು ದೋಷವಿಲ್ಲ. ಕರೀ ಬಟ್ಟೆಯನ್ನುಟ್ಟು ಭುಜಿಸಲು ದೋಷವುಂಟು. ಕಚ್ಚೆಯನ್ನು ಹಾಕದೆಯೂ, ಶರಗಿಲ್ಲದೆಯೂ ಇದ್ದ ಸ್ತ್ರೀಯು ಬಡಿಸಲು ಎಂಜಲಿಗೆ ಸಮವು. ವಿದ್ವಾಂಸರು ಇಷ್ಟನ್ನೂ

ತಿಳಿದು ಭುಜಿಸಬೇಕು. **ವಿಕಿರಿದವಿಲೋಹಿತ** ಎಂಬ ಮಂತ್ರದಿಂದ ಶೇಷಾನ್ನವನ್ನು ಮಂತ್ರಿಸಬೇಕು. ಈ ವಿಕಿರಿದ ಮಂತ್ರಕ್ಕೆ ಅಘೋರ ಋಷಿಯು, ರುದ್ರದೇವತೆಯು, ಅನ್ನಾಭಿಮಂತ್ರಣವೇ ವಿನಿಯೋಗವು. ಇದರಿಂದ ಮಂತ್ರಿಸಿ ಶೇಷಾನ್ನವನ್ನು ಕೈಯಿಂದ ತೆಗೆದು ಯಮನ ಹೆಸರಿನಿಂದ ಬಲಿ ಹಾಕಬೇಕು. ಬಳಿಕ ಉತ್ತರಾಪೋಶನ ತೆಗೆದು ಕೊಳ್ಳಬೇಕು. ಪಾತ್ರಯಲ್ಲಿರುವ ಉಚ್ಛಿಷ್ಟವನ್ನು ನೆಲದಲ್ಲಿಡಬೇಕು. ರೌರವ ಮಂತ್ರವನ್ನು ಹೇಳಿ ಎದ್ದು ಹೋಗಿ ಕೈಯನ್ನು ತೊಳೆದು ಬಾಯಿ ಮುಕ್ಕುಳಿಸಬೇಕು. ಇದನ್ನು ಕೈಗೆ ತಗಲಿಸಿದರೆ ಆತ್ಮ ಘಾತಕಿಯಾಗುವನು. ಮುಖವನ್ನು ತೊಳೆಯುವಾಗ ಮಧ್ಯ ಮಾಂಗುಲಿಯಿಂದ ಹಲ್ಲನ್ನು ಉಜ್ಜಬೇಕು. ತರ್ಜನೀ ಅಂಗುಷ್ಠಾಂ ಗುಲಿಗಳು ಮಹಾ ದೋಷಕರವು. ರೌರವ ನರಕವಾದೀತು. ಕೈ ಗಳನ್ನು ಚೆನ್ನಾಗಿ ತೊಳೆದು ದಂತಶೋಧನೆ ಮಾಡಬೇಕು. ಕೈಯಲ್ಲಿದ್ದ ಪವಿತ್ರವನ್ನು ನೈಋತ್ಯ ದಿಕ್ಕಿನಲ್ಲಿ ಬಿಸುಡಬೇಕು. ಅಂಗುಷ್ಠಮಾತ್ರ ಪುರುಷನೆಂಬ ಮಂತ್ರವನ್ನು ಹೇಳಬೇಕು. ಕೈಗಳನ್ನು ತಿಕ್ಕಿ ಕಣ್ಣು ಗಳಿಗೆ ನೀರನ್ನು ಹಚ್ಚಬೇಕು. ಈ ಮಂತ್ರ ಹೇಳದಿದ್ದರೆ ಕಣ್ಣು ಬೇನೆಯಾದೀತು. ಎರಡು ಬಾರಿ ಆಚಮನ ಮಾಡಬೇಕು. **ಆಯಂಗೌ** ಎಂಬ ಮಂತ್ರವನ್ನು ಹೇಳಿ **ದ್ರುಪದಾದಿವೇ** ಎಂಬ ಮಂತ್ರ ಹೇಳಿ ಕಾಲು ತೊಳೆಯಬೇಕು. ಮತ್ತೆ ಭೋಜನ ಸ್ಥಳಕ್ಕೆ ಹೋಗಿ ಕುಳಿತರೆ ದ್ವಿರಾಚಮನ ಮಾಡಿ ನಾಸಿಕವನ್ನು ಮುಟ್ಟಬೇಕು. ಅಗಸ್ತ್ಯಃ ಕುಂಭಕರ್ಣಶ್ಚ ಬಕಶ್ಚ ಬಡಬಾನಲಃ ॥ ಆಹಾರಪರಿಣಾ ಮಾರ್ಥಂ ಸ್ಮರಾಮಿ ಚ ವೃಕೋದರಂ ॥ ಎಂದು ಹೇಳಿ ಕೈಯನ್ನು ಅಗ್ನಿಗೆ ತೋರಿಸಬೇಕು.

ನೆಂಟರಿಷ್ಟರಿದ್ದವರು ಕೈಯನ್ನು ಬಟ್ಟೆಯಲ್ಲಿ ಉಜ್ಜಬಾರದು. ಗುರುವನ್ನೂ, ಕುಲದೇವರನ್ನೂ ಸ್ಮರಿಸುತ್ತಾ ಊಟಮಾಡಬೇಕು, ಎಂದರು. ಆ ವಿಪ್ರನು ಗುರುವನ್ನು ಕುರಿತು ಸ್ವಾಮಿ, ಭೋಜನ ಪ್ರಕಾರವನ್ನು ನಿರೂಪಿಸಿದಿರಿ. ಯಾವ ಅನ್ನವು ನಿಷಿದ್ಧವೆಂಬುದನ್ನು ತಿಳುಹಿಸಬೇಕು, ಎಂದು ಬಿನ್ನವಿಸಿದನು. ಈ ಮಾತನ್ನು ಕೇಳಿ ಗುರುವು ಸಂತೋಷದಿಂದ ಹೇಳುವರು. ವೈಶ್ವದೇವವಿಲ್ಲದ ಅನ್ನ

ವನ್ನೂ, ಗಣಾನ್ನವನ್ನೂ, ಉಪ್ಪು ಹೆಚ್ಚಾದ ಅನ್ನವನ್ನೂ, ಬಹುವಿಧ ಮಿಶ್ರಾನ್ನವನ್ನೂ ಭುಜಿಸಬಾರದು. ಬೆಳ್ಳುಳ್ಳಿ, ಗಜರೀಗಡ್ಡೆ, ಮೂಲಂಗಿ, ಸೋರೆಕಾಯಿ, ಬಿಳೀ ಬದನೆ, ಛತ್ರಾಕಾರದ ತರಕಾರಿಗಳು ಇವು ಕೂಡದು. ಆಡು, ಹಸು, ಎಮ್ಮೆಗಳು ಈದರೆ ಹತ್ತು ದಿನ ಗಳೊಳಗಿನ ಹಾಲನ್ನು ಬಿಡಬೇಕು. ಹೊಸ ಸೀರನ್ನೂ, ಮಳೆ ಸೀರನ್ನೂ ಮೂರು ದಿನಗಳು ಬಿಡಬೇಕು. ಪಾಡ್ಯದಲ್ಲಿ ಕುಂಬಳ ನೆಲ್ಲಿ, ಪಡವಲಗಳನ್ನು ತಿನ್ನಲು ದೋಷವುಂಟು. ಸ್ವರ್ಗ ಮೋಕ್ಷ ಗಳನ್ನು ಬಯಸುವವರು ಅಷ್ಟಮಿಯ ದಿನ ಅತ್ತಿಯ ಹಣ್ಣು ತಿನ್ನ ಬಾರದು. ಭಾನುವಾರ, ಸಪ್ತಮಿಗಳಲ್ಲಿಯೂ, ರಾತ್ರಿಯಲ್ಲಿಯೂ ನೆಲ್ಲಿಯ ಕಾಯನ್ನು ತಿನ್ನಬಾರದು. ಶುಕ್ರವಾರ ಬೇಲದ ಹಣ್ಣು ತಿನ್ನಬಾರದು. ಶನಿವಾರ ಶಮೀಫಲವನ್ನು ಬಿಡಬೇಕು. ಇವನ್ನು ಭಕ್ಷಿಸಿದರೆ ಲಕ್ಷ್ಮಿಯು ಬಿಟ್ಟುಹೋಗುವಳು. ರಾತ್ರಿ ನೆಲ್ಲಿಯ ಕಾಯಿ ತಿಂದರೆ ಪ್ರಜ್ಞಾಹಾನಿಯೂ, ವೀರ್ಯನಾಶವೂ ಆದೀತು. ಉಗುರು, ಕೂದಲು ಬಿದ್ದ ಅನ್ನವನ್ನು ತಿನ್ನುವವನು ಚೆಕ್ಕೆಂದು ತಿಳಿಯಬೇಕು. ಕಾಗೆ, ಕೋಳಿ, ಹದ್ದುಗಳು ಮುಟ್ಟಿದ ಅನ್ನವು ನಿಷಿದ್ಧವು. ಹಸುವೂ, ಇಲಿಯೂ ಮುಟ್ಟಿದ ಅನ್ನವೂ, ಕೇಶಸ್ಪರ್ಶವಾದ ಅನ್ನವೂ, ಕಲ್ಲು ಇದ್ದ ಅನ್ನವೂ, ಒಂದು ಕೈಯಲ್ಲಿ ಬಡಿಸಿದ ಅನ್ನವೂ ನಿಷಿದ್ಧವು. ತುಪ್ಪ, ಎಣ್ಣೆ ಬೆರೆದ ಅನ್ನವೂ, ಸೀದುಹೋದ ಅನ್ನವೂ, ತಂಗಳೂ ಅಶುದ್ಧವು. ಅನ್ನದ ಗಂಜಿಯು ಬಸಿದಿರಬೇಕು. ಬ್ರಾಹ್ಮಣನು ಹಾಲು, ತುಪ್ಪಗಳನ್ನು ಮಾರಲು ಆದನ್ನು ಕೊಂಡರೆ ದೋಷವುಂಟು. ಸಾಕ್ಷಾತ್ತಾಗಿ ಬೆಂಕಿಯಲ್ಲಿ ಸುಟ್ಟದ್ದನ್ನು ತಿನ್ನಬಾರದು. ಉದ್ದಿನ ದೋಸೆಯೂ ಸೀದಿರಬಾರದು. ತಂಗಳು ತಿನ್ನಬಾರದು. ಅರಳು ಹಿಟ್ಟು ತಂಗಳಲ್ಲ. ಕಂದಮೂಲ ಮುಂತಾದ ಸುರಾನ್ನಗಳೂ, ಜವೆಯಸೀ ಪರಮಾನ್ನವೂ ತಂಗಳಲ್ಲ. ಇವು ಕಶ್ಮಲವಾಗಿದ್ದರೆ ದೋಷವುಂಟು. ಊಟವಾದ ಮೇಲೆ ಅಡಿಕೆ ಎಲೆಯ ತಾಂಬೂಲ ಹಾಕಿಕೊಳ್ಳಬೇಕು. ಎಳ್ಳು ಬೆರೆದ ಭಕ್ಷ್ಯಗಳನ್ನು ರಾತ್ರಿ ತಿನ್ನ ಬಾರದು. ಒಂದು ಅಡಿಕೆಯು ಯೋಗ್ಯವು, ಸುಖಕರವು; ಎರಡು ಆರೋಗ್ಯವು; ಮೂರು ಭಾಗ್ಯಕಾರಿಯು; ನಾಲ್ಕು ದುಃಖಕಾರಿಯು;

ಐದು ಆಯುಸ್ಸೂ, ಪ್ರಜ್ಞೆಯೂ ಹೆಚ್ಚುವುದು. ಆರು ಅಡಿಕೆ ಕೊಡಬಾರದು. ಇದರಿಂದ ಮರಣವುಂಟಾದೀತು. ಎಲೆಯ ತುದಿಯನ್ನೂ, ಬುಡವನ್ನೂ ತೆಗೆಯದೇ ತಿಂದರೆ ಮಹಾಪಾಪವು. ಸುಣ್ಣದೆಲೆ ತಿನ್ನಲು ಆಯುಸ್ಸು ಕ್ಷೀಣವು. ಎಲೆಯ ನಾರನ್ನು ತಿಂದರೆ ಬುದ್ಧಿನಾಶವು. ಎರಡೆಲೆಯನ್ನು ತಿನ್ನಲು ಧನನಾಶವಾದೀತು. ಇದು ಋಷಿಸಮ್ಮತವು. ಎಲೆಯಿಲ್ಲದೆ ಅಡಿಕೆ ತಿನ್ನಲು ಅಸುಖಿಯಾಗಿ ಏಳು ಜನ್ಮಗಳಲ್ಲಿ ದರಿದ್ರನಾಗಿ ದುಃಖಿಯಾಗಿ ಅಜ್ಞಾನಿಯಾಗುವನು. ಯತಿಯೂ, ವಟುವೂ, ರಜಸ್ವಲೆಯೂ, ವಿಧವೆಯೂ ತಾಂಬೂಲವನ್ನು ತಿನ್ನಲು ಮಾಂಸದಂತೆ ದೋಷಕರವಾಗಿ, ಅದರ ರಸವು ಸುರೆಗೆ ಸಮವು. ತಾಂಬೂಲವನ್ನು ತಿಂದು ಸಾಯಂಕಾಲದಲ್ಲಿ ಸಂಧ್ಯೆಯನ್ನು ಮಾಡಿ ಸೂರ್ಯಬಿಂಬವು ಅರ್ಧ ಮುಳುಗುತ್ತಿರಲು ಅರ್ಘ್ಯ ಕೊಡಬೇಕು. ಕೂತುಕೊಂಡು ಮೂರು ಅರ್ಘ್ಯ ಕೊಡಬೇಕು. ಕಾಲವು ತಪ್ಪಿರಲು ನಾಲ್ಕು ಅರ್ಘ್ಯ ಕೊಡಬೇಕು. **“ಇಮಂ ಮೇ ವರುಣ”** ಎಂಬ ಮಂತ್ರವನ್ನು ಹೇಳಬೇಕು. ಗೋತ್ರಪ್ರವರವನ್ನು ಹೇಳಿ ಔಪಾಸನ ಮಾಡಬೇಕು. ರಾತ್ರಿ ಹಾಲನ್ನು ಊಟಮಾಡಬೇಕು. ರಾತ್ರಿಯಲ್ಲಿ **ಋತಂತ್ವಾಸತ್ಯೇನ** ಎಂಬ ಮಂತ್ರದಿಂದ ಪರಿಷೇಚನ ಮಾಡಿ ಊಟವಾದ ಬಳಿಕ ಒಂದು ಪ್ರಹರದ ವರೆಗೆ ವೇದಾಭ್ಯಾಸ ಮಾಡಿ ಬಳಿಕ ಮಲಗಬೇಕು. ಒಳ್ಳೆಯ ಮಂಚದಲ್ಲಿ ಮಲಗಬೇಕು. ಮೂರು ಕಾಲಿನ ಮಂಚವು ಕೂಡದು. ಅರಳಿ, ಬಸರಿ, ಅತ್ತಿಯ ಗಿಡಗಳಿಂದ ಆದ ಮಂಚವೂ ಕೂಡದು. ಸತ್ತ ಆನೆಯ ದಂತದಿಂದ ಮಾಡಿದ ಮಂಚವೂ, ಭಿನ್ನವಾದ ಮರದಿಂದ ಮಾಡಿದ ಮಂಚವೂ, ನೇರಳೆ ಮರದ ಮಂಚವೂ ಕೂಡದು. ಒಳ್ಳೆಯ ಮುಹೂರ್ತದಲ್ಲಿ ಮಂಚ ಮಾಡಿಸಬೇಕು. ಧನಿಷ್ಠೆ, ಭರಣಿ, ಮೃಗಶಿರೆಗಳಲ್ಲಿ ಮಂಚವಂ ಮಾಡಿಸಬಾರದು. ಭಾನುವಾರ ಮಂಚ ಮಾಡಿಸಲು ಲಾಭವು. ಸೋಮವಾರ ಮಾಡಿಸಲು ಅತಿ ಸುಖವು. ಮಂಗಳವಾರ ದುಃಖವು. ಬುಧವಾರ ಮಹಾಪೀಡೆಯು. ಗುರುವಾರ ಮಂಚ ಮಾಡಿಸಿದರೆ ಆರು ಮಕ್ಕಳಾಗುವರು. ಶುಕ್ರವಾರ ವಿಶೇಷ ಫಲವು. ಶನಿವಾರ ಮೃತ್ಯುವೂ ಆದೀತು. ತನ್ನ ಮನೆಯಲ್ಲಿ ಪೂರ್ವ ದಿಕ್ಕಿಗೆ ತಲೆಯನ್ನಿಟ್ಟು

ಮಲಗಬೇಕು. ಮಾವನ ಮನೆಯಲ್ಲಿ ದಕ್ಷಿಣಕ್ಕೆ ತಲೆಯಿಟ್ಟು ಮಲಗಬೇಕು. ಪ್ರಯಾಣದಲ್ಲಿ ಪಶ್ಚಿಮಕ್ಕೆ ತಲೆಯಿಡಬೇಕು. ಉತ್ತರ ದಿಕ್ಕು ಸದಾ ನಿಷಿದ್ಧವು. ಇದು ಋಷ್ಯಾಚಾರವು. ತಲೆದಿಂಬಿನ ಹತ್ತಿರ ನೀರಿನ ಕುಂಭವನ್ನೂ, ಮಂಗಲದ್ರವ್ಯವನ್ನೂ ಇಟ್ಟು ರಾತ್ರಿ ಸೂಕ್ತವನ್ನು ಹೇಳಿ, ವಿಷ್ಣು ಅಗಸ್ತ್ಯರನ್ನು ಸ್ಮರಿಸಿ, ಮಾಧವ ಮುಚುಕುಂದನೆನ್ನುತ್ತಾ ಆಸ್ತೀಕ, ಕಪಿಲ, ಸರ್ಪಗಳನ್ನು ಸ್ತುತಿಸಬೇಕು. ಹಳೆಯ ದೇವಾಲಯದಲ್ಲಿಯೂ, ಸ್ಮಶಾನದಲ್ಲಿಯೂ, ಮರದ ಬುಡದಲ್ಲಿಯೂ, ಈಶ್ವರ ದೇವಾಲಯದಲ್ಲಿಯೂ, ತಾಯಿತಂದೆಗಳು ಮಲಗಿದ ಸ್ಥಳದಲ್ಲಿಯೂ ಮಲಗಬಾರದು. ಹುತ್ತದ ಹತ್ತಿರ ಮಲಗಬಾರದು. ಕೆರೆಯ ಬುಡದಲ್ಲಿಯೂ, ನದಿಯ ದಡದಲ್ಲಿಯೂ, ಘೋರ ಸ್ಥಳದಲ್ಲಿಯೂ, ಮುರುಕು ಮನೆಯಲ್ಲಿಯೂ ಮಲಗಬಾರದು. ಹಿರಿಯರು ಕೆಳಗೆ ಮಲಗಿರಲು ಮಂಚದ ಮೇಲೆ ಮಲಗಬಾರದು. ಒದ್ದೆಯನ್ನು ಉಟ್ಟಾಗಲೀ, ಬೆತ್ತಲೆಯಾಗಿಯಾಗಲೀ, ತಲೆಯನ್ನು ಮುಚ್ಚಿಕೊಂಡಾಗಲೀ ಮಲಗಬಾರದು. ದೀಪವಿದ್ದೂ ಮಲಗಬಾರದು. ಬಯಲಲ್ಲಿ ಮಲಗಬಾರದು. ಪೂರ್ವರಾತ್ರಿಯಲ್ಲಿಯೂ, ಅಪರರಾತ್ರಿಯಲ್ಲಿಯೂ ಸ್ತ್ರೀಯೊಡನೆ ಮಲಗಬಾರದು. ರಜಸ್ವಲೆಯಾದೊಡನೆ ನಾಲ್ಕು ದಿನಗಳೂ ಆಕೆಯೊಡನೆ ಮಲಗಬಾರದು. ಯೋನಿಯನ್ನು ದೃಷ್ಟಿಸಿದರೆ ಆಯುಷ್ಯಕ್ಷೀಣವಾಗುವುದು. ಮಲಗುವ ಸ್ಥಳದಲ್ಲಿ ದೀಪವಿರಬಾರದು. ನೀಲವಸ್ತ್ರವನ್ನುಟ್ಟು ಸ್ತ್ರೀಯಲ್ಲಿ ಸಂಗಮಾಡಿದರೆ ಹುಟ್ಟಿದ ಪುತ್ರನು ಚಾಂಡಾಲನಾಗುವನು. ಶುಭ್ರವಸ್ತ್ರವನ್ನುಡಬೇಕು. ರಜಸ್ವಲೆಯಾಗದ ಸ್ತ್ರೀಯ ಸಂಗಮಾಡಿದರೆ ಮಹಾದೋಷವು. ಕನ್ಯೆಗೆ ಹತ್ತು ವರ್ಷವಾಗಲು ರಜಸ್ವಲೆ ಎನಿಸುವಳು. ಸ್ತ್ರೀಯಳಿಗೆ ಋತುಕಾಲವಾಗಿರುವಾಗ ಬೇರೆ ಹಳ್ಳಿಗೆ ಹೋದರೆ ಭ್ರೂಣಹತ್ಯಾ ದೋಷ ಬರುವುದು. ಹೆಂಡತಿಯು ಮುದುಕಿಯೂ, ಬಂಜೆಯೂ, ಮಕ್ಕಳು ಸಾಯುವವಳೂ, ಬಹಳ ಹೆಣ್ಣು ಮಕ್ಕಳುಳ್ಳವಳೂ ಆಗಿದ್ದರೆ ಋತುಕಾಲದಲ್ಲಿ ಪ್ರಯಾಣಮಾಡಲು ದೋಷವಿಲ್ಲ. ಋತುವಾದ ನಾಲ್ಕನೇ ದಿನ ಸ್ತ್ರೀಸಂಗ ಮಾಡಲು ಹುಟ್ಟಿದ ಮಗನು ಅಲ್ಪಾಯುಷಿಯಾಗುವನು. ವಿಷಮ ದಿನಗಳಲ್ಲಿ ಸಂಗಮಾಡಿದರೆ

ಹೆಣ್ಣು ಮಗುವೂ, ಸರಿ ದಿನದಲ್ಲಿ ಗಂಡು ಮಗುವೂ ಹುಟ್ಟುವುದು. ಋತುಕಾಲವು ಹತ್ತು ದಿನಗಳಿರುವುದು. ಚಂದ್ರತಾರಾ ಬಲವಿದ್ದ ದಿನ ಸಂಗಮಾಡಬೇಕು. ಮೂಲ, ಮಘೆ, ರೇವತೀ ನಕ್ಷತ್ರಗಳಲ್ಲಿ ಸಂಗ ಕೂಡದು. ದಂಪತಿಗಳಿಬ್ಬರೂ ಕೋಪಿಸದೆ ಸಂತೋಷಿಗಳಾಗಿರಬೇಕು. ಋತುಕಾಲದಲ್ಲಿ ದಂಪತಿಗಳಿಗೆ ಮನಸ್ಸಿನಲ್ಲಿ ಸತ್ವರಜಸ್ತಮೋ ಗುಣಗಳಲ್ಲಿ ಯಾವುದು ಇರುವುದೋ ಅಂಥಾ ಗುಣವುಳ್ಳ ಪಿಂಡವೇ ಹುಟ್ಟುವುದು, ಎಂದು ಪರಾಶರರು ಆಚಾರ ಧರ್ಮವನ್ನು ಹೇಳಲು, ಇದನ್ನು ಕೇಳಿ ಆ ಋಷಿಗಳು ಅದರಂತೆ ಆಚರಿಸಿದರು, ಎಂದು ಗುರುಗಳು ಆ ವಿಪ್ರನಿಗೆ ಹೇಳಿದರು. ಈ ರೀತಿಯಾಗಿ ನಡೆಯುವವರಿಗೆ ದೀನತ್ವವಿಲ್ಲ. ಅವನು ದೇವತೆಗಳಿಂದ ವಂದಿಸಲ್ಪಡುತ್ತಾನೆ. ಇವನ ಮನೆಗೆ ಕಾಮಧೇನುವೇ ಬಂದೀತು. ಅಖಂಡೈಶ್ವರ್ಯವೂ, ಪುತ್ರಪೌತ್ರಾದಿ ಸುಖವೂ ಉಂಟಾಗುವುವು. ಶತಾಯುವಾಗುವನು. ಇವನಿಗೆ ಯಾವ ದೋಷವೂ ಇಲ್ಲ. ಇವನು ಕಲಿಕಾಲಕ್ಕೆ ಹೆದರಬೇಕಾಗಿಲ್ಲ. ಬ್ರಹ್ಮಜ್ಞಾನಿಯಾಗುವನು. ಕಾಲಮೃತ್ಯುವು ತಪ್ಪುವುದು. ಅಪಮೃತ್ಯು ಭಯವೂ ಇಲ್ಲ. ಈ ರೀತಿ ಆಚರಿಸಬೇಕು, ಎಂದರು. ಆ ವಿಪ್ರನು ಗುರುಚರಣಂಗಳಿಗೆ ವಂದಿಸಿ ಕೃಪಾಸಾಗರರೇ, ಈ ರೀತಿಯಾಗಿ ಉಪದೇಶಮಾಡಿ ರಕ್ಷಿಸಿದಿರಿ. ಭಕ್ತರಂ ಸಲಹಲು ಅವತರಿಸಿದ ವಿಷ್ಣುಸ್ವರೂಪರೇ, ಅಜ್ಞಾನಾಂಧಕಾರವನ್ನು ಹೋಗಲಾಡಿಸಿ ಜ್ಞಾನಜ್ಯೋತಿಯನ್ನು ಪ್ರಕಾಶಗೊಳಿಸಿದಿರಿ, ಎಂದು ಆನಂದ ಸಂದೋಹದಿಂದ ವಂದಿಸಿದರು. ಶ್ರೀಗುರುವು ಪ್ರಸನ್ನನಾಗಿ ವಿಪ್ರನೇ, ನೀನು ಭಿಕ್ಷೆಗೆ ಹೋಗು; ಈ ಧರ್ಮಗಳನ್ನಾಚರಿಸು; ಸುಖಿಯಾಗಿರು; ನೀನು ಬಯಸಿದ ಇಷ್ಟಗಳೆಲ್ಲವೂ ಕಷ್ಟವಿಲ್ಲದೆ ತಟ್ಟನೆ ಸಿದ್ಧಿಸುವುವು; ಇದು ದಿಟವು; ನಿನಗೆ ಗಂಡು ಮತ್ತು ಹೆಣ್ಣು ಮಕ್ಕಳಾಗುವುವು; ಸಂದೇಹಿಸದಿರು, ಎಂದರು. ಆ ವಿಪ್ರನು ಈ ರೀತಿ ವರವಂ ಪೊಂದಿ ಹೊರಟುಹೋಗಿ ಸಕಲೇಷ್ಟಗಳನ್ನು ಹೊಂದಿದನು. ನಾಮಧಾರಕನೇ ಕೇಳು. ಈ ಗುರುಚರಿತ್ರೆಯನ್ನು ಕೇಳುವವನು ಜ್ಞಾನಿಯಾಗುವನು. ಮೂರ್ಖನೂ ಬ್ರಹ್ಮಜ್ಞಾನಿಯಾಗುವನು. ಅಜ್ಞಾನವೆಂಬ ಕತ್ತಲೆಗೆ ಜ್ಯೋತಿಸ್ವರೂಪವಾದ, ಸರಸವಾದ ಈ ಕಥೆಯು ಇಷ್ಟಾರ್ಥವನ್ನು

ಕೊಡುವುದು, ಎಂದನು. ಎಂದು ಸರಸ್ವತೀ ಗಂಗಾಧರನು ಗುರು ಚರಿತ್ರೆಯನ್ನು ನಿರೂಪಿಸಿದನು, ಎಂಬಲ್ಲಿಗೆ ಗುರುಚರಿತ್ರೆಯಲ್ಲಿ ಆಹ್ನಿಕ ಕರ್ಮನಿರೂಪಣೆ ಎಂಬ ಮೂವತ್ತೇಳನೇ ಅಧ್ಯಾಯವು ಪೂರ್ಣ ವಾದುದು.

## ೩೮ನೇ ಅಧ್ಯಾಯ.

ನಾಮಧಾರಕನು ಸಿದ್ಧರನ್ನು ಕುರಿತು ವಂದಿಸಿ ಸ್ವಾಮಿಾ, ಮುಂದಿನ ಕಥಾವಿಷಯವೇನು? ನಿರೂಪಿಸಿರಿ, ಎಂದು ಬಿನ್ನವಿಸಿದನು. ಸಿದ್ಧರು ಹೇಳತೊಡಗಿದರು. ಶಿಷ್ಯನೇ, ನೀನು ಕೇಳಿದುದರಿಂದ ನನಗೆ ಸಂತೋಷವಾಯಿತು. ಇದರಿಂದ ಈ ಚರಿತ್ರೆಯು ನಮಗೆ ನೆನಪಾಗಿ ಲಾಭವಾಯಿತು. ಗುರುಗಳು ಯಾವ ಶಿಷ್ಯರಾಗಲೀ, ಭಕ್ತರಾಗಲೀ ದ್ರವ್ಯವನ್ನು ತಂದು ಕೊಟ್ಟರೆ ಸ್ವೀಕರಿಸದೆ ಸಮಾರಾಧನೆ ಮಾಡಿರಿ ಎನ್ನುತ್ತಿದ್ದರು. ಅನೇಕರು ಸಮಾರಾಧನೆ ಮಾಡುತ್ತಿದ್ದರು. ಒಂದು ದಿನವೂ ಬಿಡುವಿರಲಿಲ್ಲ. ಹೀಗಿರಲೊಂದು ದಿನ ದುರ್ಬಲನಾದ ವಿಪ್ರನೊಬ್ಬನು ಬಂದನು. ಇವನು ಕಾಶ್ಯಪಗೋತ್ರದವನಾದ ಭಾಸ್ಕರನೆಂಬ ಹೆಸರುಳ್ಳವನಾಗಿದ್ದನು. ಆ ದಿನವೂ ಸಮಾರಾಧನೆ ಯಾಗುತ್ತಿತ್ತು. ಇವನನ್ನು ಊಟಕ್ಕೆ ಕರೆದರು. ಈತನು ಗುರುಗಳಿಗೆ ಭಿಕ್ಷೆಮಾಡಿಸುವೆನೆಂದು ಮೂವರಿಗಾಗುವಷ್ಟು ಅಕ್ಕಿ, ಕಣಿಕ ಮುಂತಾದ ಪದಾರ್ಥಗಳನ್ನು ಬಟ್ಟೆಯಲ್ಲಿ ಕಟ್ಟಿ ತಂದಿದ್ದನ್ನು ಮಠ ದಲ್ಲಿಟ್ಟು ಊಟಕ್ಕೆ ಹೊರಟನು. ರಾತ್ರಿಯಾಯಿತು. ಮಠಕ್ಕೆ ಬಂದು ಗಂಟನ್ನು ತಲೆಯದಿಂಬಿನೆಡೆಯಲ್ಲಿಟ್ಟು ನಿದ್ರಿಸಿದನು. ನಿತ್ಯವೂ ಸಮಾರಾಧನೆಗೆ ಊಟಕ್ಕೆ ಹೋಗುತ್ತಿದ್ದನು. ಎಲ್ಲರೂ ಇವನನ್ನು ನೋಡಿ, ಆಹಾ ಇವನು ಭಕ್ತಿಯಿಂದ ಸಮಾರಾಧನೆಗೆಂದು ಪದಾರ್ಥ ಗಳನ್ನು ತಂದಿರುವನು, ಎಂದು ಹಾಸ್ಯಮಾಡುತ್ತಿದ್ದರು. ಒಬ್ಬನಿಗೆ ತಕ್ಕಷ್ಟು ಆಹಾರವು ಇವನಲ್ಲಿದೆ. ಗುರುಗಳ ಶಿಷ್ಯರು ಅನೇಕರಿರು ವರು. ಇವನು ಹೇಗೆ ಸಮಾರಾಧನೆ ಮಾಡುವನು? ನಾಚಿಕೆಯಿಲ್ಲದೆ ಜನರು ಈತನಿಗೆ ಸಮಾರಾಧನೆ ಮಾಡಿಸು, ಭಿಕ್ಷೆ ಬೇಡಿ ಸಮಾರಾಧನೆ

ಮಾಡೆನ್ನುತ್ತಿದ್ದರು. ಹೀಗೆ ಮೂರು ತಿಂಗಳು ಕಳೆಯಿತು. ನಿತ್ಯವೂ ಸಮಾರಾಧನೆಯಾಗುತ್ತಿತ್ತು. ವಿಪ್ರನು ಗಂಟನ್ನಿಟ್ಟು ಸಿದ್ಧಿಸುತ್ತಿದ್ದನು. ಇವನನ್ನು ಜನರು ಹಾಸ್ಯಮಾಡುವುದನ್ನು ಕೇಳಿ ಗುರುವು ಈತನನ್ನು ಕರೆಯಿಸಿ ವಿಪ್ರನೇ, ನೀನು ಈ ದಿನ ನಮಗೆ ಭಿಕ್ಷೆಯನ್ನೂ, ವಿಪ್ರರಿಗೆ ಸಮಾರಾಧನೆಯನ್ನೂ ಮಾಡಿಸು, ಎಂದರು. ಆತನು ಗುರುವಚನವಂ ಕೇಳಿ ಆನಂದದಿಂದ ಎರಡು ಸೇರು ತುಪ್ಪವನ್ನೂ, ಕಾಯಿಪಲ್ಯಗಳನ್ನೂ ತಂದನು. ಸ್ನಾನಮಾಡಿ ಅಡಿಗೆಮಾಡಿದನು. ಜನರು ಗುರುಗಳ ಹತ್ತಿರ ಬಂದು ಸ್ವಾಮಿಾ, ನಾವು ನಮ್ಮ ಮನೆಯಲ್ಲಿ ಜೋಳದ ಅನ್ನವಂ ತಿಂದು ಬೇಸರದಿಂದ ತಮ್ಮ ಸನ್ನಿಧಿಯಲ್ಲಿ ಮೃಷ್ಟಾನ್ನದ ಊಟವು ಲಭಿಸುವುದೆಂದರಿತು ಇಲ್ಲಿಗೆ ಬಂದೆವು. ಈ ದಿನ ಈ ವಿಪ್ರನು ಬಂದುದರಿಂದ ಸಮಾರಾಧನೆ ನಿಂತಿತು, ಎಂದರು. ಆಗ ಗುರುವು ಅಯ್ಯಾ, ನೀವು ಮನೆಗೆ ಹೋಗದೆ ಸ್ನಾನಗೈದು ಇಲ್ಲಿಯೇ ಊಟಮಾಡಿರಿ, ಎಂದನುಜ್ಞೆಯಿತ್ತರು. ಆಗ ವಿಪ್ರರು ಮಠದಲ್ಲಿ ಆಹಾರಸಾಮಗ್ರಿಗಳಿನೆ. ಅಡಿಗೆ ಮಾಡಿಸುವರೆಂದು ತಿಳಿದು ಸ್ನಾನಕ್ಕೆ ಹೋದರು. ಆಗ ಗುರುಗಳು ಈ ವಿಪ್ರರನ್ನು ಕುರಿತು ಅಯ್ಯಾ ನೀವು ಬೇಗ ಸ್ನಾನಮಾಡಿ ಬನ್ನಿರಿ. ಕತ್ತಲೆಯಾದೀತು, ಎಂದು ಹೇಳಿದರು. ಅಡಿಗೆಯಾಯಿತು. ಬ್ರಾಹ್ಮಣರು ಸ್ನಾನಮಾಡಿ ಬಂದರು. ಈ ವಿಪ್ರನು ಎಲ್ಲರನ್ನೂ ಕರೆದನು. ಆಗ ಇವರು ವಿಪ್ರನೇ, ಹೊತ್ತಾಯಿತು. ಗುರುಗಳಿಗೆ ಭಿಕ್ಷೆಮಾಡಿಸು, ಎಂದರು. ವಿಪ್ರನು ಗುರುಗಳ ಹತ್ತಿರ ಹೋದನು. ಗುರುವರ್ಯರೇ ಆ ಬ್ರಾಹ್ಮಣರು ಈಗ ಊಟಕ್ಕೆ ಬರುವುದಿಲ್ಲವು. ರಾತ್ರಿ ಬರುತ್ತೇವೆ ಎನ್ನುವರು, ಎಂದು ಬಿನ್ನವಿಸಿದನು. ಆಗ ಇದನ್ನು ಕೇಳಿ ಗುರುಗಳು ಅಯ್ಯಾ, ಈ ದಿನ ನಾವು ಬ್ರಾಹ್ಮಣರ ಪಂಙ್ತಿಯಲ್ಲಿ ಭಿಕ್ಷೆಮಾಡುವೆವು. ಬ್ರಾಹ್ಮಣರು ಬರದಿರಲು ನಾವು ಊಟವನ್ನು ಮಾಡುವುದಿಲ್ಲ, ಎಂದು ಹೇಳಿದರು. ಆಗ ಆತನು ಸ್ವಾಮಿಾ, ತಮ್ಮ ಆಜ್ಞೆಯಂತೆ ಬ್ರಾಹ್ಮಣರಿಗೆ ಅನ್ನ ಬಡಿಸುವೆನು, ಎಂದನು. ಈತನು ಮನಸ್ಸಿನಲ್ಲಿ ಶ್ರೀಗುರುಗಳು ಅವತಾರಪುರುಷರು. ತಮ್ಮ ಮನಸ್ಸನ್ನು ಸತ್ಯವಾಗಿ ಮಾಡುವರು. ಇವರ ಮಹಿಮೆಯು ತಿಳಿಯದು, ಎಂದುಕೊಂಡನು.

ಇವನು ಆ ವಿಪ್ರರಂ ಕರೆದನು. ಬರದೇ ಅವರು ಇವನನ್ನು ಹಾಸ್ಯ ಮಾಡಿದರು. ಮತ್ತೆ ಗುರುಗಳ ಹತ್ತಿರ ಬಂದು ಅಂಜಲಿಬದ್ಧನಾಗಿ ಸ್ವಾಮಿಾ, ಬ್ರಾಹ್ಮಣರು ಬರುವುದಿಲ್ಲ. ನನ್ನನ್ನು ಹಾಸ್ಯಮಾಡುವರು, ಎಂದನು. ಆಗ ಶ್ರೀಗುರುವು ಆ ಬ್ರಾಹ್ಮಣರೆಲ್ಲರನ್ನೂ ಬೇಗ ಊಟಕ್ಕೆ ಕರೆತರುವಂತೆ ಬೇರೆ ಶಿಷ್ಯನನ್ನು ಕಳುಹಿಸಿದರು. ಆ ಶಿಷ್ಯನು ಓಡುತ್ತಾ ಹೋಗಿ ಹೇಳಲು ವಿಪ್ರರು ಬಂದರು. ಗುರುಗಳು ನಾಲ್ಕು ಸಾವಿರ ಪತ್ರಾವಳಿಗಳನ್ನು ಹಾಕಿಸಿದರು. ಕುಟುಂಬ ಸಮೇತರಾಗಿ ಬಂದು ಎಲ್ಲರೂ ಊಟಮಾಡಿಕೊಂಡು ಹೋಗಿರಿ ಎಂದು ಹೇಳಿದರು. ಆಗ ಇದರಂತೆ ಆ ವಿಪ್ರನು ಬ್ರಾಹ್ಮಣರೆಲ್ಲರನ್ನೂ ಕುರಿತು, ಎಲ್ಲರೂ ಊಟಮಾಡಿರಿ, ಎಂದು ವಿಜ್ಞಾಪಿಸಿದನು. ಆಗ ಎಲ್ಲರೂ ಇವನನ್ನು ಹಾಸ್ಯಮಾಡಿದರು.

ಎಲೈ ವಿಪ್ರನೇ, ಇಷ್ಟು ಜನರನ್ನು ಊಟಕ್ಕೆ ಕರೆಯುತ್ತೀಯೆ. ನೀನು ಮಾಡಿದ ಅಡಿಗೆಯಲ್ಲಿ ಒಂದೊಂದು ಬಿಂದು ಆಹಾರವು ಇಷ್ಟು ಜನರಿಗೆ ಬರುವುದಿಲ್ಲ. ನೀನು ನಮ್ಮನ್ನು ಊಟಕ್ಕೆ ಕರೆಯುತ್ತೀಯೆ. ನಾಚಿಕೆಯಿಲ್ಲವೇ? ಎಂದರು. ಆಗ ವೃದ್ಧ ವಿಪ್ರನೊಬ್ಬನು ಅಯ್ಯಾ, ಇವನನ್ನು ನಿಂದಿಸದಿರಿ. ಶ್ರೀಗುರುವು ಹೇಳಿದಂತೆ ಈತನು ಹೇಳುವನು, ಎಂದು ಆತನ ದೂಷಣೆಯನ್ನು ನಿಲ್ಲಿಸಿದನು. ಎಲ್ಲರಿಗೂ ಎಲೆಗಳನ್ನು ಹಾಕಿದರು. ಆ ವಿಪ್ರನು ಗುರುಪೂಜೆ ಮಾಡಿ ಭಕ್ತಿಯಿಂದ ಮಂಗಳಾರತಿ ಮಾಡಿದನು. ಅಡಿಗೆಯನ್ನೆಲ್ಲವನ್ನೂ ತಂದು ಗುರುಗಳ ಹತ್ತಿರದಲ್ಲಿಟ್ಟನು. ಗುರ್ವನುಜ್ಞೆಯಂತೆ ಈ ಅಡಿಗೆಯ ಮೇಲೆ ಗುರುಗಳ ವಸ್ತ್ರವನ್ನು ಮುಚ್ಚಿದರು. ಆ ಅನ್ನದ ಮೇಲೆ ಗುರುವು ಕಮಂಡಲೋದಕವನ್ನು ಪ್ರೋಕ್ಷಿಸಿ ಮಂತ್ರಿಸಿದರು. ಗುರುವು ಆ ವಿಪ್ರನಂ ಕುರಿತು ಎಲೈ ವಿಪ್ರನೇ, ಈ ಬಟ್ಟೆಯನ್ನು ತೆಗೆಯದಿರು. ಈ ಅನ್ನರಾಶಿಯಿಂದ ಅನ್ನವಂ ತೆಗೆದು ಬಡಿಸು. ಮತ್ತು ತುಪ್ಪದ ಗಡಿಗೆಯಿಂದ ತುಪ್ಪವನ್ನು ತೆಗೆದು ಬಡಿಸು, ಎಂದು ನಿರೂಪಿಸಿದರು. ಎಲ್ಲರಿಗೂ ಈ ವಿಪ್ರನು ಬಡಿಸಿದನು. ಜನರು ಈ ಕೌತುಕವನ್ನು ನೋಡಿ ಆಶ್ಚರ್ಯಮಗ್ನರಾದರು. ಅನೇಕರು ಬಡಿಸಿದರು. ತುಪ್ಪ ವನ್ನೂ, ಅನ್ನವನ್ನೂ ಎಷ್ಟು ಬಡಿಸಿದರೂ ಅಷ್ಟೇ ರಾಶಿಯೇ ಉಳಿದಿತ್ತು.

ಎಲ್ಲರಿಗೂ ಬಡಿಸಿದರು. ಶ್ರೀಗುರುಗಳು ಊಟಮಾಡುತ್ತಾ ಆನಂದ ದಿಂದ ವಿಪ್ರರನ್ನು ವಿಚಾರಿಸುತ್ತಿದ್ದರು. ಯಾರು ಯಾವುದನ್ನು ಕೇಳಿದರೆ ಅದನ್ನು ಬಡಿಸಿರಿ. ಎಲ್ಲರೂ ಹಸಿದಿರುವರು. ಮನ್ನಿಸಿರಿ, ಎನ್ನುತ್ತಿದ್ದರು. ತುಪ್ಪವನ್ನು ಕರದಲ್ಲಿ ಹಿಡಿದು ಸಾಕೆನ್ನುವಷ್ಟು ಬಡಿಸಿದರು. ಭಕ್ಷ್ಯಗಳನ್ನೂ, ಪರಮಾನ್ನವನ್ನೂ, ಸಕ್ಕರೆಯನ್ನೂ, ಉಪ್ಪು ಮೊಸರುಗಳನ್ನೂ, ನಾನಾ ಕಾಯಿಪಲ್ಯಗಳನ್ನೂ ಬಡಿಸಿದರು. ಬ್ರಾಹ್ಮಣರೆಲ್ಲರೂ ತೃಪ್ತರಾಗಿ ಕೈ ತೊಳೆದರು. ಆಗ ಎಂಜಲೆಲೆಗಳನ್ನು ತೆಗೆದರು. ಎಲ್ಲರೂ ಕುಟುಂಬ ಸಹಿತರಾಗಿ ಬಂದು ಊಟಮಾಡಿ ಹೋಗಬೇಕೆಂದು ಎಲ್ಲರಿಗೂ ಹೇಳಿಕಳುಹಿಸಿದರು. ಬ್ರಾಹ್ಮಣರೆಲ್ಲರೂ ಬಂದು ಪಂಚಭಕ್ಷ್ಯ ಪರಮಾನ್ನಗಳನ್ನು ಉಂಡು ಹೋದರು. ಗುರುಗಳು ಶೂದ್ರರೆಲ್ಲರನ್ನೂ ಊಟಕ್ಕೆ ಕರೆಯಿಸಿದರು. ಶೂದ್ರ ರೆಲ್ಲರೂ ಕುಟುಂಬಸಹಿತರಾಗಿ ಬಂದು ಊಟಮಾಡಿ ಹೋದರು. ಬಳಿಕ ಗುರುಗಳು ಚಾಂಡಾಲರನ್ನು ಕರೆಯಿಸಿ ಅನ್ನಾದಿ ಪದಾರ್ಥ ಗಳನ್ನು ಬಡಿಸಿ ಕೊಟ್ಟರು. ಕೇಳಿದಷ್ಟು ಬಡಿಸಿ ಕೊಟ್ಟುದರಿಂದ ಅವರೂ ತೃಪ್ತರಾದರು. ಯಾವ ಪ್ರಾಣಿಯೂ ಈ ಗ್ರಾಮದಲ್ಲಿ ಹಸಿದಿರಕೂಡದೆಂದು ಡಂಗುರವನ್ನು ಹೊಡೆಯಿಸಿದರು. ಆ ದಿನ ಯಾವ ಪ್ರಾಣಿಯೂ ಉಪವಾಸವಿರಲಿಲ್ಲ. ಗುರುನಿರೂಪದಿಂದ ಎಲ್ಲರೂ ಭುಜಿಸಿದ ಮೇಲೆ ನೋಡಲಾಗಿ ಅನ್ನಾದಿ ಪದಾರ್ಥಗಳು ಎಷ್ಟಿದ್ದುವೋ ಅಷ್ಟೇ ಇದ್ದುವು. ಇವನ್ನು ಜಲಚರಗಳಿಗೆ ಹಾಕ ಬೇಕೆಂದು ಆಜ್ಞಾಪಿಸಿದರು. ಅದರಂತೆಯೇ ನೀರಿನಲ್ಲಿರುವ ಪ್ರಾಣಿ ಗಳಿಗೆ ಆಹಾರವನ್ನು ಹಾಕಿದರು. ಎಲ್ಲವೂ ತೃಪ್ತಿಹೊಂದಿದುವು. ಹೀಗೆಯೇ ನಾಲ್ಕು ಸಾವಿರ ಜನರಿಗೆ ಸಮಾರಾಧನೆಯಾಯಿತು. ಬಳಿಕ ಆ ವಿಪ್ರನಿಗೆ ಗುರುಗಳು ಎಲೈ ವಿಪ್ರನೇ, ನಿನ್ನ ಬಡತನ ಹೋಯಿತು. ನೀನು ಪುತ್ರಪೌತ್ರರೊಂದಿಗೆ ಸುಖವಾಗಿರು, ಎಂದು ವರವನ್ನು ಕೊಟ್ಟರು. ಸ್ವಲ್ಪ ಪಾಕದಿಂದ ನಾಲ್ಕು ಸಾವಿರ ಜನರಿಗೆ ಸಮಾರಾಧನೆ ಆದುದನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟರು. ಶ್ರೀಗುರುಗಳು ಅನ್ನಪೂರ್ಣಾವತಾರವು, ಎಂದು ಒಬ್ಬನು ಹೇಳಿದನು. ಪಾಂಡವರ ಮನೆಯಲ್ಲಿ ದೂರ್ವಾಸರು ಬಂದಾಗ ಮರ್ಯಾದೆಯ

ಸ್ನುಳಿಸಲು ಶ್ರೀಕೃಷ್ಣನು ಬಂದು ರಕ್ಷಿಸಿದನೆಂದು ಕೇಳಿದ್ದೆವು. ಈಗ ಕೌತುಕ ನೋಡಿದೆವು. ಶ್ರೀಗುರುವು ನರರಲ್ಲ, ತ್ರಿಮೂರ್ತಿಗಳ ಅವತಾರವು. ಇವರನ್ನು ನರರೆಂದು ಯಾರು ಹೇಳುವರೋ ಅವರು ಅಧೋಗತಿಯಂ ಹೊಂದುವರು. ಇವರ ಮಹಿಮೆಯನ್ನು ವರ್ಣಿಸಲು ಯಾರು ಶಕ್ತರು? ಈಶ್ವರಾಂಶವಿಲ್ಲದಿದ್ದರೆ ಹೀಗೆ ಅನ್ನಪೂರ್ಣತೆಯು ಹೇಗಾಗುತ್ತಿತ್ತು? ನಾಲ್ಕು ಸಾಸಿರ ವಿಪ್ರರಿಗೆ ಭೋಜನವು ಹೇಗಾಗುತ್ತಿತ್ತು? ಸಂಜೀವಿನೀ ವಿದ್ಯೆಯಿಂದ ಹೆಣವನ್ನು ಹೇಗೆ ಬದುಕಿಸಿದರು? ಒಣಮರವನ್ನು ಚಿಗುರಿಸಿದುದು ಹೇಗೆ? ಕುಮಸಿಯಲ್ಲಿ ತ್ರಿವಿಕ್ರಮ ಯತಿಗೆ ವಿಶ್ವರೂಪ ತೋರಿಸಲಿಲ್ಲವೇ? ಗೊಡ್ಡೆಮ್ಮೆಯಿಂದ ಹಾಲು ಕರೆಯಿಸಲಿಲ್ಲವೇ? ಪತಿತನಿಂದ ವೇದವನ್ನು ಹೇಳಿಸಲಿಲ್ಲವೇ? ಕುಷ್ಠರೋಗಿಯನ್ನು ದರ್ಶನಮಾತ್ರದಿಂದ ನಿರ್ಮಲದೇಹಿಯನ್ನಾಗಿ ಮಾಡಲಿಲ್ಲವೇ? ನೇಯಿಗೆಯವನಿಗೆ ಶ್ರೀಶೈಲಪರ್ವತವನ್ನು ತೋರಿಸಲಿಲ್ಲವೇ? ಒಬ್ಬ ಭಕ್ತನಿಗೆ ಶ್ರೀ ಕಾಶೀಕ್ಷೇತ್ರವನ್ನು ತೋರಿಸಿದರಲ್ಲವೇ? ಯಾವ ದೇವರಿಗೆ ಈ ಶಕ್ತಿಯಿದೆ? ಇಷ್ಟಸಿದ್ಧಿಗಾಗಿ ಸರ್ವದೇವತೆಗಳನ್ನು ಒಲಿಸಲು ಅತ್ಯಾಯಾಸವಾಗುವುದು. ಗುರುದರ್ಶನಮಾತ್ರದಿಂದಲೇ ಸಕಲೇಷ್ಟಗಳೂ ಉಂಟಾಗುವುವು, ಎಂದು ಎಲ್ಲರೂ ಹೇಳತೊಡಗಿದರು. ಶಿಷ್ಯನೇ, ಕೇಳು. ಗುರುಗಳಿಗೆ ಅನೇಕ ಶಿಷ್ಯರಾದರು. ನಾನಾ ರಾಷ್ಟ್ರದ ಜನರು ಗುರುಸೇವೆಗೆ ಬರುತ್ತಿದ್ದರು. ಭಕ್ತಿಯಿಂದ ಭಜಿಸಿದವರಿಗೆ ಪ್ರಸನ್ನರಾಗುವರು, ಎಂದರು. ಜನರೆಲ್ಲರೂ ಶ್ರೀಗುರುವನ್ನು ಭಜಿಸಿರಿ, ಎಂದು ಗಂಗಾಧರನಂದನನು ಹೇಳಿದನೆಂಬಲ್ಲಿಗೆ ಶ್ರೀಗುರುಚರಿತ್ರೆಯಲ್ಲಿ ಅನ್ನಪೂರ್ಣಾ ಪ್ರಸನ್ನತೆಯಿಂದ ಕೂಡಿದ ಚತುಃಸಹಸ್ರವಿಪ್ರಸಮಾರಾಧನಾಕಥನವೆಂಬ ಮೂವತ್ತೆಂಟನೇ ಅಧ್ಯಾಯವು ಮುಗಿದುದು.

## ೩೯ನೇ ಅಧ್ಯಾಯ.

ನಾಮಧಾರಕನೇ, ಮುಂದಿನ ಅಪೂರ್ವ ಕಥೆಯನ್ನು ಕೇಳು. ಆಪಸ್ತಂಭ ಶಾಖೆಯ ಶೌನಕಗೋತ್ರದ ಸೋಮನಾಥನೆಂಬ ವಿಪ್ರ

ನಿದ್ದನು. ಇವನ ಪತ್ನಿಯಾದ ಗಂಗೆ ಎಂಬವಳು ಪತಿವ್ರತೆಯಾಗಿದ್ದಳು. ಈತನು ವೇದಶಾಸ್ತ್ರ ಪುರಾಣಗಳನ್ನು ಬಲ್ಲವನಾಗಿದ್ದನು. ಈ ಸತಿಗೆ ಅರವತ್ತು ವರ್ಷ ವಯಸ್ಸಾಗಿತ್ತು. ಈ ದಂಪತಿಗಳಿಗೆ ಮಕ್ಕಳಿರಲಿಲ್ಲ. ಎಲ್ಲರೂ ಈಕೆಯನ್ನು ಬಂಜೆಯೆನ್ನುತ್ತಿದ್ದರು. ಇವರು ಗಾಣಗಾಪುರದಲ್ಲಿದ್ದರು. ಈ ಸತಿಯು ಭಕ್ತಿಯಿಂದ ಪತಿಯನ್ನು ಸೇವಿಸುತ್ತಾ ಗುರುದರ್ಶನಕ್ಕೆ ಬರುತ್ತಿದ್ದಳು.

ನಿತ್ಯವೂ ಗುರುಗಳಿಗೆ ಆರತಿಯನ್ನು ತಂದೆತ್ತುವಳು. ಹೀಗೆ ಬಹುದಿನಗಳಾದುವು. ಗುರುಗಳು ಒಂದು ದಿನ ಸಂತುಷ್ಟರಾಗಿ ಈ ಸ್ತ್ರೀಯನ್ನು ಕುರಿತು ಎಲೌ ಸ್ತ್ರೀಯಳೇ, ನೀನು ಯಾವ ಬಯಕೆಯಿಂದ ನಿತ್ಯವೂ ಬಂದು ಆರತಿಯನ್ನು ತಂದೆತ್ತುವೆ? ನಿನ್ನ ಇಷ್ಟವೇನು? ಹರಿಹರರ ದಯೆಯಿಂದ ನಿನ್ನ ಇಷ್ಟಸಿದ್ಧಿಯಾಗುವುದು, ಎಂದರು. ಈ ಮಾತನ್ನು ಕೇಳಿ ಈಕೆಯು ಸಾಷ್ಟಾಂಗ ವಂದನೆಗಳನ್ನು ಮಾಡಿ ಕರಗಳಂ ಜೋಡಿಸಿ ಸ್ವಾಮಿ, ನಾನು ಪುತ್ರಹೀನಳು ಎಂದು ಜನರಿಂದ ನಿಂದ್ಯಳಾದೆನು. ಸುತರಿಲ್ಲದ ಸತಿಯ ಮುಖವಂ ನೋಡುವುದು ಮಹಾದೋಷವೆಂದು ಜನರು ಹೇಳುವರು. ಸುತರಿಲ್ಲದವರ ಜನ್ಮವು ವ್ಯರ್ಥವು. ನಾಲ್ವತ್ತೆರಡು ಕುಲಗಳ ಪಿತೃಗಳು ತಮ್ಮ ವಂಶದಲ್ಲಿ ಯಾವಾಗ ಸುತರಾಗುವರು? ಯಾವಾಗ ಗತಿಯನ್ನು ಕಾಣಿಸುವರು? ಎಂದು ಚಿಂತಿಸುವರು. ಸುತರಿಲ್ಲದ ಮನೆಯು ಮನೆಯಲ್ಲ. **"ಯಥಾರಣ್ಯಸ್ತಥಾಗೃಹಂ"** ಎಂಬಂತಾಗಿದೆ. ನಿತ್ಯವೂ ಅನೇಕರು ತಮ್ಮ ಮಕ್ಕಳೊಡನೆ ನದಿಗೆ ಸ್ನಾನಕ್ಕೆ ಬರುವರು. ಆಗ ತೊಡೆಯ ಮೇಲೆ ಮಕ್ಕಳನ್ನಿಟ್ಟು ಆಡಿಸುವರು. ಮಂದಭಾಗ್ಯಳಾದ ನನ್ನ ಹಣೆಯಲ್ಲಿ ಈ ಸುಖವು ಬರೆಯಲ್ಪಟ್ಟಿಲ್ಲ. ನನ್ನ ಎದೆಯು ಸುಡಲಿ! ತೊಡೆಯ ಮೇಲೆ ಕುಳ್ಳಿರಿಸಿಕೊಳ್ಳಲು ಮಕ್ಕಳಿಲ್ಲ. ನನ್ನ ಜನ್ಮವು ನಿಷ್ಫಲವಾಯಿತು. ಮಕ್ಕಳಿದ್ದವರಿಗೆ ಪರಲೋಕವುಂಟು. ಪುತ್ರಹೀನರು ಲುಪ್ತಪಿಂಡರಾಗಿ ಅಧೋಗತಿಯನ್ನು ಹೊಂದುವರು. ನನಗೀ ಜನ್ಮವು ಸಾಕು. ಅರವತ್ತು ವರ್ಷವಾಯಿತು. ಮುಂದಾದರೂ ಉತ್ತಮ ಜನ್ಮವು ಬರಲಿ! ಆಗಲಾದರೂ ಪುತ್ರವತಿಯಾಗುವೆನು. ಈ ರೀತಿ ವರವನ್ನು ಪಾಲಿಸಿರಿ, ಎಂದು ಬೇಡಿದಳು. ಈ ಮಾತನ್ನು

ಕೇಳಿ ಗುರುವು ಸಕ್ಕು ನೀನು ನಿತ್ಯವೂ ಭಕ್ತಿಯಿಂದ ಆರತಿಯನ್ನೆತ್ತುವಿ. ಇದರಿಂದ ಆನಂದವಾಯಿತು. ನಿನಗೆ ಒಬ್ಬ ಮಗಳೂ, ಒಬ್ಬ ಮಗನೂ ಆಗುವರು. ಈ ಜನ್ಮದಲ್ಲಿಯೇ ಪುತ್ರಲಾಭ ಹೊಂದುವಿ. ಇದು ನಿಜವೆಂದು ತಿಳಿ, ಎಂದರು. ಇದನ್ನು ಕೇಳಿ ಆಕೆಯು ಶರಗು ಗಂಟು ಹಾಕಿಕೊಂಡು ಕೈಗಳನ್ನು ಜೋಡಿಸಿ ಕೃಪಾಸಿಂಧುವೇ! ನನಗೆ ಅರವತ್ತು ವರ್ಷವಾಯಿತು. ನಾನು ಈಗ ರಜಸ್ವಲೆಯಾಗುವುದಿಲ್ಲ. ಸಂತರಾಗುವುದೆಲ್ಲಿ? ನಾನಾ ವ್ರತಗಳನ್ನೂ, ತೀರ್ಥಯಾತ್ರೆಗಳನ್ನೂ, ಅನೇಕ ದೇವತಾರಾಧನೆಯನ್ನೂ ಮಾಡಿದೆನು. ಕೆಲವರು ಹೇಳಿದಂತೆ ಅಶ್ವತ್ಥಪ್ರದಕ್ಷಿಣೆ ಮಾಡಿದೆನು. ಆದರೂ ಸಂತರಾಗಲಿಲ್ಲ. ಅಶ್ವತ್ಥ ಸೇವೆಯನ್ನು ಮಾಡುತ್ತಿದ್ದೇನೆ. ಈಗ ನೀವು ನನಗೆ ಮಕ್ಕಳಾಗುವ ರೆಂದು ನುಡಿವಿತ್ತಿರಿ. ಈ ವಾಕ್ಯವು ಸುಳ್ಳಾಗದು. ತಮ್ಮ ಮಾತನ್ನು ಕೇಳಿದೊಡನೆಯೇ ಶರಗಿನಲ್ಲಿ ಶಕುನದ ಗಂಟು ಹಾಕಿದೆನು. ಮುಂದಿನ ಜನ್ಮದಲ್ಲಿ ಪುತ್ರರಾಗುವರೆಂದು ಅಶ್ವತ್ಥಪ್ರದಕ್ಷಿಣೆ ಮಾಡಿದೆನು. ಇದರಿಂದಲೇ ಮಕ್ಕಳಾಗುವರೆಂದು ತಿಳಿದವರು ಹೇಳುವರು. ಆದರೆ ಇದು ವ್ಯರ್ಥವಾಯಿತು, ಎಂದಳು. ಬಳಿಕ ಗುರುವು ಎಲೌ ಸ್ತ್ರೀಯಳೇ ಕೇಳು. ಅಶ್ವತ್ಥವನ್ನು ನಿಂದಿಸದಿರು. ಅಶ್ವತ್ಥಸೇವೆಯಿಂದ ಅನಂತ ಪುಣ್ಯವುಂಟು. ಈ ಸೇವೆಯಿಂದ ನಿನಗೆ ಪುತ್ರರಾಗುವರು. ನಮ್ಮ ಮಾತನ್ನು ಕೇಳಿ ಈ ನದಿಯ ಸಂಗಮದಲ್ಲಿರುವ ಅಶ್ವತ್ಥವನ್ನೂ, ನಮ್ಮನ್ನೂ ಸೇವಿಸು. ಅಶ್ವತ್ಥನಾರಾಯಣ ಮಹಿಮೆಯನ್ನು ಕೇಳು. ನಾವು ಅಲ್ಲಿಯೇ ವಾಸಿಸುವೆವು, ಎಂದರು. ಗುರುವಚನವನ್ನು ಕೇಳಿ ಆಕೆಯು ಕೈಗಳನ್ನು ಜೋಡಿಸಿ ಸ್ವಾಮಿ, ಅಶ್ವತ್ಥಸೇವೆಯ ಕ್ರಮ ವನ್ನು ಅಪ್ಪಣೆಕೊಡಿಸಿರಿ. ನನಗೆ ಆದರಿಂದ ಸ್ಥಿರಮನಸ್ಸುಂಟಾದೀತು, ಎಂದು ಬಿನ್ನವಿಸಿದಳು. ಗುರುವು ಆಕೆಯನ್ನು ಕುರಿತು ಎಲೌ ಸ್ತ್ರೀಯಳೇ ಕೇಳು. ನೀನು ಅಶ್ವತ್ಥವನ್ನು ನಿಂದಿಸಿದೆ. ಇದರ ಮಹಿಮೆಯು ಅಪಾರವಾಗಿದೆ. ಸರ್ವದೇವತೆಗಳೂ ಈ ವೃಕ್ಷದಲ್ಲಿರು ವರು. ಅಶ್ವತ್ಥಮಹಿಮೆಯನ್ನು ಬ್ರಹ್ಮಾಂಡಪುರಾಣದಲ್ಲಿ ಬ್ರಹ್ಮನು ನಾರದರಿಗೆ ಹೇಳಿರುವನು. ಇದನ್ನು ಕೇಳಿದ ನಾರದರು ಒಂದು ಋಷ್ಯಾಶ್ರಮಕ್ಕೆ ಬಂದರು. ಆಗ ಇಲ್ಲಿದ್ದ ಮುನಿಗಳಿವರನ್ನು ಅರ್ಘ್ಯ

ಪೂಜಾದಿಗಳಿಂದ ಸತ್ಕರಿಸಿ ಈ ನಾರದರನ್ನು ಕುರಿತು ಸ್ವಾಮೀ, ಅಶ್ವತ್ಥಮಹಿಮೆಯನ್ನು ನಿರೂಪಿಸಿರಿ, ಎಂದು ಕೇಳಲು ನಾರದರು ಅಯ್ಯಾ, ನಾನು ಬ್ರಹ್ಮಲೋಕಕ್ಕೆ ಹೋಗಿದ್ದೆನು. ಅಲ್ಲಿ ಬ್ರಹ್ಮದೇವರನ್ನು ಕುರಿತು ಸ್ವಾಮೀ, ಅಶ್ವತ್ಥಸೇವಾ ಮಹಿಮೆಯನ್ನು ನಿರೂಪಿಸಿರಿ, ಎಂದು ಕೇಳಿದೆನು. ಆಗ ಬ್ರಹ್ಮನು ಹೇಳಿದನು. ನಾರದನೇ, ಕೇಳು. ಅಶ್ವತ್ಥ ಮೂಲದಲ್ಲಿ ನಾನಿರುವೆನು. ಮಧ್ಯದಲ್ಲಿ ವಿಷ್ಣುವೂ, ತುದಿಯಲ್ಲಿ ರುದ್ರನೂ ಇರುವರು. ದಕ್ಷಿಣದ ಹರೆಯಲ್ಲಿ ಶೂಲಪಾಣಿಯಿರುವನು. ಪಶ್ಚಿಮಶಾಖೆಯಲ್ಲಿ ನಿರ್ಗುಣನಾದ ವಿಷ್ಣುವಿರುವನು. ಉತ್ತರಶಾಖೆಯಲ್ಲಿ ನಾನಿರುವೆನು. ಪೂರ್ವಶಾಖೆಯಲ್ಲಿ ಇಂದ್ರಾದಿ ದೇವತೆಗಳಿರುವರು. ಆದಿತ್ಯನೂ, ಗೋಬ್ರಾಹ್ಮಣರೂ, ಸಮಸ್ತ ಋಷಿಗಳೂ, ವೇದಗಳೂ, ಯಜ್ಞಗಳೂ, ಅಂಕುರಗಳಲ್ಲಿರುವರು. ಸರ್ವ ನದಿಗಳೂ, ತೀರ್ಥಗಳೂ, ಸಾಗರಗಳೂ ಪೂರ್ವಶಾಖೆಗಳಲ್ಲಿರುವುವು. ಅಕಾರವು ಮೂಲಸ್ಥಾನವು; ಉಕಾರವು ಸ್ಕಂಧಶಾಖೆಯು; ಮಕಾರವು ಫಲಪುಷ್ಪವು. ಹೀಗೆ ಅಶ್ವತ್ಥವು ಓಂಕಾರರೂಪಿಯಾಗಿದೆ. ಏಕಾದಶರುದ್ರರೂ, ಅಷ್ಟವಸುಗಳೂ, ತ್ರಿಮೂರ್ತಿಗಳೂ, ಸರ್ವದೇವತೆಗಳೂ ಈ ವೃಕ್ಷದಲ್ಲಿರುವರು. ಈ ಮಹಿಮೆಯನ್ನು ವರ್ಣಿಸಲು ಯಾರು ಶಕ್ತರು? ಅಶ್ವತ್ಥನನ್ನು ಪೂಜಿಸಿದರೆ ಕಾರ್ಯಸಿದ್ಧಿಯಾಗುವುದು. ಆಷಾಢ, ಪುಷ್ಯ, ಚೈತ್ರಮಾಸದಲ್ಲಿಯೂ, ಗುರು ಶುಕ್ರರ ಅಸ್ತಕಾಲಗಳಲ್ಲಿಯೂ, ಚಂದ್ರಬಲವಿಲ್ಲದಾಗಲೂ ಅಶ್ವತ್ಥಪೂಜೆಗೆ ಆರಂಭಿಸಬಾರದು. ಒಳ್ಳೆಯ ದಿನಗಳಲ್ಲಿ ಪೂಜೆಗೆ ಆರಂಭಿಸಬೇಕು. ಭಾನು, ಸೋಮ, ಶುಕ್ರವಾರಗಳಲ್ಲಿಯೂ, ಸಂಕ್ರಾಂತಿ ದಿನಗಳಲ್ಲಿಯೂ ಅಶ್ವತ್ಥನನ್ನು ಮುಟ್ಟಬಾರದು. ಸಂಧಿರಾತ್ರಿಯಲ್ಲಿಯೂ, ರಿಕ್ತತಿಥಿಗಳಲ್ಲಿಯೂ, ಪರ್ವಣಿ ವ್ಯತೀಪಾತಗಳಲ್ಲಿಯೂ, ದುರ್ದಿನದಲ್ಲಿಯೂ, ವೈಧೃತಿಯಲ್ಲಿಯೂ, ಅಪರಾಹ್ನದಲ್ಲಿಯೂ ಅಶ್ವತ್ಥವನ್ನು ಮುಟ್ಟಬಾರದು. ಸುಳ್ಳು, ಜೂಜು, ನಿಂದೆ, ಪಾಷಂಡವಾದಗಳನ್ನು ಬಿಟ್ಟು ಬೆಳಿಗ್ಗೆ ಮೌನದಿಂದ ಸಚೇಲಸ್ನಾನ ಮಾಡಿ ನಿರ್ಮಲ ವಸ್ತ್ರವನ್ನುಟ್ಟು ಗಂಗೆಯನ್ನು ತೆಗೆದುಕೊಂಡು ಬಂದು ಕಲಶಪೂಜೆಗೈದು ಪುಣ್ಯಾಹವಾಚನೆಮಾಡಿ ವಿಧಿಯಿಂದ

ಸಂಕಲ್ಪಮಾಡಿ ಕಾಮ್ಯಾರ್ಥವನ್ನುಚ್ಚರಿಸಿ ಕಲಶವನ್ನು ಏಳುಬಾರಿ ತುಂಬಿ ಅಭಿಷೇಕಮಾಡಬೇಕು. ಮತ್ತೆ ಸ್ನಾನಮಾಡಿ ಪುರುಷ ಸೂಕ್ತದಿಂದ ಅಭಿಷೇಕಮಾಡಬೇಕು. ಬಳಿಕ ಷೋಡಶೋಪಚಾರ ಪೂಜೆಮಾಡಿ ವಿಷ್ಣುಮೂರ್ತಿಯನ್ನು ಧ್ಯಾನಿಸಬೇಕು. ಹೇಗೆಂದರೆ, ಶಂಖ ಚಕ್ರಗಳನ್ನೂ, ಖಡ್ಗ ಖೇಟಕಗಳನ್ನೂ, ಧನುರ್ಬಾಣಗಳನ್ನೂ ಧರಿಸಿದವನಾಗಿಯೂ, ಪೀತಾಂಬರಧಾರಿಯಾಗಿಯೂ, ಲಕ್ಷ್ಮೀಸಹಿತ ನಾಗಿಯೂ ಇರುವ ವಿಷ್ಣುವನ್ನು ಧ್ಯಾನಿಸಿ ಅಶ್ವತ್ಥಪೂಜೆ ಮಾಡಬೇಕು. ಈ ವೃಕ್ಷವು ತ್ರಿಮೂರ್ತಿಗಳಿಗೆ ಸ್ಥಾನವಾದುದು. ಷೋಡಶೋಪ ಚಾರ ಪೂಜೆಮಾಡಬೇಕು. ವಸ್ತ್ರವನ್ನಾಗಲೀ, ದಾರವನ್ನಾಗಲೀ ವೃಕ್ಷಕ್ಕೆ ಸುತ್ತಬೇಕು. ಮತ್ತೆ ಸಂಕಲ್ಪಮಾಡಿ ಸಹಸ್ರನಾಮದಿಂದ ಪ್ರದಕ್ಷಿಣೆಮಾಡಬೇಕು. ಮೌನದಿಂದ ಪ್ರದಕ್ಷಿಣೆಮಾಡಲು ಅನಂತ ಫಲವುಂಟು. ಮನೋವಾಕ್ಕರ್ಮಗಳಿಂದಲೂ, ಭಕ್ತಿಯಿಂದಲೂ ಪುರುಷಸೂಕ್ತ ಹೇಳುತ್ತಾ ಪ್ರದಕ್ಷಿಣೆಮಾಡಬೇಕು. ಗರ್ಭಿಣಿಯು ನೀರು ತುಂಬಿದ ಗಡಿಗೆಯನ್ನು ಹೊತ್ತು ಹೇಗೆ ನಡೆದುಹೋಗುವಳೋ ಹಾಗೆ ಮೆಲ್ಲಗೆ ಪ್ರದಕ್ಷಿಣೆಮಾಡಬೇಕು. ಹೆಜ್ಜೆಹೆಜ್ಜೆಗೂ ಅಶ್ವಮೇಧ ಫಲವುಂಟು. ಪ್ರದಕ್ಷಿಣೆ ಮುಗಿದ ಬಳಿಕ ನಮಸ್ಕಾರಮಾಡಬೇಕು. ಬ್ರಹ್ಮಹತ್ಯೆಗೆ ಪ್ರಾಯಶ್ಚಿತ್ತವಿಲ್ಲವು. ಎರಡು ಲಕ್ಷ ಅಶ್ವತ್ಥ ಪ್ರದಕ್ಷಿಣೆಯಿಂದ ಬ್ರಹ್ಮಹತ್ಯಾದಿ ಪಾಪಗಳು ಪರಿಹರಿಸುವುವು.

ತ್ರಿಮೂರ್ತಿಗಳಿಗೆ ಸ್ಥಾನವಾದ ಈ ಅಶ್ವತ್ಥ ಪ್ರದಕ್ಷಿಣೆಯಿಂದ ಅನಂತ ಫಲವುಂಟು. ಗುರುತಲ್ಪಗಮನಾದಿ ಪಾಪಗಳು ಹೋಗು ವುವು. ನಾನಾ ರೋಗಗಳು ಪರಿಹರಿಸುವುವು. ಕೋಟಿಸಂಖ್ಯೆಯು ಸಾಲವಿದ್ದರೂ ತೀರುವುದು. ಸಾವಿರ ಪ್ರದಕ್ಷಿಣೆ ಮಾಡಿದರೆ ಮೃತ್ಯುಭಯವಿಲ್ಲ. . ರೋಗವು ಬಾರದು. ಸಂಸಾರ ದುಃಖವಿಲ್ಲ. ಗ್ರಹಪೀಡೆಯಿಲ್ಲ. ಪುತ್ರಕಾಮರಿಗೆ ಪುತ್ರರಾಗುವರು. ಭಕ್ತಿ ಯಿಂದ ಪೂಜಿಸಬೇಕು. ಚತುರ್ವಿಧ ಪುರುಷಾರ್ಥಗಳುಂಟಾಗು ವುವು. ಖಂಡಿತವಾಗಿ ಪುತ್ರನು ಹುಟ್ಟುವನು. ಇದರಲ್ಲಿ ಸಂಶಯವಿಲ್ಲ. ಶನಿವಾರ ವೃಕ್ಷವನ್ನು ಹಿಡಿದು ಮೃತ್ಯುಂಜಯ ಜಪ ಮಾಡಬೇಕು. ಇದರಿಂದ ಕಾಲಮೃತ್ಯುವನ್ನು ಗೆಲ್ಲಬಹುದು.

ಮೃತ್ಯು ಅಪಮೃತ್ಯುವಿಲ್ಲ. ಪೂರ್ಣಾಯುಷ್ಯವುಂಟಾಗುವುದು. ಶನಿ ಪೀಡೆಯಿಲ್ಲ.

ಕೋಣಸ್ಥ ಕೋರೌದ್ರಯಮಶ್ಚಬಭ್ರುಃ ಕೃಷ್ಣಃ ಶನಿಃ ಪಿಂಗಲ ಏವಮಂದಃ ॥ ನಿತ್ಯಂ ಸ್ಮರನ್ ವ್ಯಾಹರತೇ ಚ ಪೀಡಾಂ ತಸ್ಮೈ ನಮಸ್ತೇ ರವಿನಂದನಾಯ ॥ ೧ ॥

ಬಭ್ರು, ಪಿಂಗಲ, ಕೋಣಸ್ಥ, ಕೃಷ್ಣ, ಯಮ, ಅಂತಕ, ರೌದ್ರ, ಮಂದ, ಶನೈಶ್ಚರ, ಶೌರಿ ಎಂದು ಶನಿನಾಮವನ್ನುಚ್ಚರಿಸಬೇಕು. ಇದರಿಂದ ಶನಿಪೀಡೆ ಪರಿಹಾರವಾಗುವುದು. ಈ ರೀತಿ ದೃಢಚಿತ್ತದಿಂದ ಅಶ್ವತ್ಥಸೇವೆ ಮಾಡಿದರೆ ಪುತ್ರನಾಗುವನು. ಇದು ಸತ್ಯವು. ಅಮಾವಾಸ್ಯೆ ಗುರುವಾರಗಳಲ್ಲಿ ಅಶ್ವತ್ಥದ ನೆರಳಿನಲ್ಲಿ ಸ್ನಾನಮಾಡಿದರೆ ಬ್ರಹ್ಮಹತ್ಯಾದಿ ಪಾಪಗಳು ಹೋಗುವುವು. ಅಶ್ವತ್ಥ ವೃಕ್ಷದಡಿಯಲ್ಲಿ ಒಬ್ಬ ಬ್ರಾಹ್ಮಣನಿಗೆ ಅನ್ನವಿಟ್ಟರೆ ಕೋಟಿ ಬ್ರಾಹ್ಮಣ ಸಂತರ್ಪಣೆ ಮಾಡಿದ ಫಲವುಂಟು. ಅಶ್ವತ್ಥಮೂಲದಲ್ಲಿ ಕುಳಿತು ಒಂದು ಬಾರಿ ಮಂತ್ರವಂ ಜಪಿಸಿದರೆ ಅನಂತ ವೇದಪಠಣದ ಫಲವುಂಟು. ನರನು ಅಶ್ವತ್ಥಸ್ಥಾಪನೆ ಮಾಡಿದರೆ ನಾಲ್ವತ್ತೆರಡು ಜನ ಪಿತೃಗಳು ಸ್ವರ್ಗಕ್ಕೆ ಹೋಗುವರು. ಈ ಗಿಡವನ್ನು ಛೇದಿಸಿದರೆ ಮಹಾಪಾಪವುಂಟಾಗಿ ಪಿತೃಗಳೊಡನೆ ನರಕಕ್ಕೆ ಹೋಗುವನು. ಈ ಗಿಡದಡಿಯಲ್ಲಿ ಕುಳಿತು ಹೋಮಗೈದರೆ ಮಹಾಯಜ್ಞಫಲವುಂಟು. ಪುತ್ರನಾಗುವುದು ನಿಜವು, ಎಂದು ನಾರದನು ಋಷಿಗಳಿಗೆ ಹೇಳಿದನು. ಪ್ರದಕ್ಷಿಣೆಯ ಹತ್ತರಲ್ಲೊಂದಂಶ ಹೋಮಮಾಡಬೇಕು. ಹೋಮದ ದಶಾಂಶ ವಿಪ್ರಭೋಜನ ಮಾಡಿಸಬೇಕು. ಬ್ರಹ್ಮಚರ್ಯೆಯಿಂದ ಹವಿಸ್ಸನ್ನು ಭುಜಿಸಿ ವ್ರತಮಾಡಬೇಕು. ಬಳಿಕ ಉದ್ಯಾಪನೆ ಮಾಡಬೇಕು. ಶಕ್ತಿಗನುಸರಿಸಿ ಅಶ್ವತ್ಥವೃಕ್ಷಗಳನ್ನು ಚಿನ್ನ ಬೆಳ್ಳಿಗಳಿಂದ ಮಾಡಿಸಿ ವಿಪ್ರರಿಗೆ ದಾನಕೊಡಬೇಕು. ಈ ಗಿಡದಡಿಯಲ್ಲಿ ಎಳ್ಳಿನ ರಾಶಿಯನ್ನಿಟ್ಟು ಬಿಳಿಯ ಬಟ್ಟೆಯನ್ನು ಮುಚ್ಚಿ ಯಥಾಶಕ್ತಿ ದಕ್ಷಿಣೆಯೊಡನೆ ವಿಪ್ರರಿಗೆ ಕೊಡಬೇಕು, ಎಂದೀ ರೀತಿಯಾಗಿ ನಾರದರು ಋಷಿಗಳಿಗೆ ಹೇಳಿದರು. ಋಷಿಗಳು ಇವರು ಹೇಳಿದಂತೆ ಆಚರಿಸಿ ಇಷ್ಟಾರ್ಥಗಳನ್ನು ಪಡೆದರು. ಎಲೌ ಸ್ತ್ರೀಯೆ, ಅಶ್ವತ್ಥಮಹಿಮೆಯು

ಹೀಗಿರುವುದು. ಭಾವಭಕ್ತಿಯುಳ್ಳವರಿಗೆ ಫಲವುಂಟಾಗುವುದು. ನೀನೂ ಈ ರೀತಿಯಾಗಿ ಆಚರಿಸು. ಚಿಂತಿಸದಿರು. ಅಮರುಜಾಭೀಮಾ ಸಂಗಮದಲ್ಲಿ ಅಶ್ವತ್ಥವೃಕ್ಷವಿದೆ. ಅಲ್ಲಿಯೇ ನಾವಿರುವೆವು. ಏಕ ಚಿತ್ತದಿಂದ ಸೇವಿಸು. ನಿನಗೊಬ್ಬ ಮಗನೂ ಮಗಳೂ ಹುಟ್ಟುವರು, ಎಂದರು. ಇದನ್ನು ಕೇಳಿ ಅಂಗನೆಯು ವಂದಿಸಿ ಸ್ವಾಮಿ! ನನಗೆ ಅರವತ್ತು ವರ್ಷವಾಗಿದೆ. ನನಗೆಲ್ಲಿ ಸುತರಾಗುವರು? ಆದರೂ ಗುರು ವಾಕ್ಯವು ಕಾಮಧೇನುವಿಗೆ ಸಮವು, ಎಂದು ವೇದಪುರಾಣಗಳು ಹೇಳುವುವು. ಈಗ ಅನುಮಾನವಿಲ್ಲ. ಸೇವಿಸುವೆನು. ಆದರೆ ಅಶ್ವತ್ಥನಲ್ಲಿ ಪ್ರೀತಿಯಿಲ್ಲ; ನಿಮ್ಮ ವಚನವು ಸತ್ಯವು. ಅಶ್ವತ್ಥಸೇವೆ ಮಾಡುವೆನು, ಎಂದು ವಂದಿಸಿ ಗುರುನಿರೂಪಹೊಂದಿ ಸಂಗಮಕ್ಕೆ ಬಂದು ಷಟ್ಕೂಲದಲ್ಲಿ ಸ್ನಾನಮಾಡಿ ಅಶ್ವತ್ಥಪೂಜೆ ಮಾಡಿದಳು. ಹೀಗೆ ಮೂರು ದಿನಗಳು ಕಳೆದುವು. ಮೂರನೇ ದಿನದ ರಾತ್ರಿಯಲ್ಲಿ ಈಕೆಯ ಸ್ವಪ್ನದಲ್ಲಿ ಒಬ್ಬ ವಿಪ್ರನು ಬಂದು ಈಕೆಗೆ ಜ್ಞಾನವನ್ನು ಕೊಟ್ಟು ನಿನ್ನ ಕಾರ್ಯವಾಯಿತು, ನಾನು ಹೇಳುವಂತೆ ಮಾಡು. ಗಾಣಗಾಪುರದಲ್ಲಿರುವ ಗುರುನಾಥನನ್ನು ಏಳು ದಿನ ಪ್ರದಕ್ಷಿಣೆ ಮಾಡು. ಗುರುಗಳು ಆಗ ಏನನ್ನು ಕೊಡುವರೋ ಅದನ್ನು ಬೇಗ ತಿನ್ನುವವಳಾಗು. ನಿನ್ನ ಇಷ್ಟಾರ್ಥವುಂಟಾದೀತು, ಎಂದನು. ಈ ರೀತಿ ಸ್ವಪ್ನವಂ ಕಂಡು ಈಕೆಯು ಎಚ್ಚತ್ತು ಕಲ್ಪವೃಕ್ಷಸಮನಾದ ಅಶ್ವತ್ಥನು ಬೇಗ ಫಲವಿತ್ತನು, ಎಂದು ತಿಳಿದು ಗುರುಮಠಕ್ಕೆ ಬಂದು ಗುರುವನ್ನು ಪ್ರದಕ್ಷಿಣೆಮಾಡಿ ವಂದಿಸಿದಳು. ಶ್ರೀಗುರುವು ನಕ್ಕು ಎರಡು ಫಲಗಳನ್ನು ಕೊಟ್ಟು ಇವನ್ನು ತಿನ್ನುವವಳಾಗು. ನಿನ್ನ ಕಾರ್ಯವಾಯಿತು. ನಿನ್ನ ಇಷ್ಟಸಿದ್ಧಿಯಾಗುವುದು. ಒಬ್ಬ ಮಗನೂ ಒಬ್ಬ ಮಗಳೂ ಹುಟ್ಟುವರು. ವಿಧಿಪೂರ್ವಕವಾಗಿ ಇವನ್ನು ಪಾರಣೆ ಮಾಡು. ವ್ರತ ಸಂಪೂರ್ಣಮಾಡಿ ಬ್ರಾಹ್ಮಣರಿಗೆ ದಾನಮಾಡು, ಎಂದರು. ಇದರಂತೆ ಈಕೆಯು ಮಾಡಿದಳು. ಆ ದಿನ ಅಸ್ತಮಾನ ದಲ್ಲಿ ಬಹಿಷ್ಠೆಯಾದಳು. ಮೂರು ದಿನಗಳು ಮೌನವಾಗಿದ್ದು ಹವಿಸ್ಸನ್ನು ಭುಜಿಸಿ ಬಿಳಿಯ ವಸ್ತ್ರವನ್ನುಟ್ಟು ಯಾರನ್ನೂ ನೋಡದೆ ಮೂರು ದಿನಗಳಿದ್ದು ನಾಲ್ಕನೇ ದಿನ ಸುಸ್ನಾತೆಯಾಗಿ ಗುರುದರ್ಶನಕ್ಕೆ

ಬಂದಳು. ಪತಿಸಹಿತಳಾಗಿ ಗುರುವನ್ನು ಪೂಜಿಸಿದಳು. ಶ್ರೀಗುರುವು ಸಂತೋಷದಿಂದ ನೀನು ಪುತ್ರವಂತೆಯಾಗೆಂದು ಆಶೀರ್ವದಿಸಿದರು. ಗುರುವನ್ನು ವಂದಿಸಿ ಮನೆಗೆ ಬಂದಳು. ಐದನೇ ದಿನ ದಂಪತಿಗಳು ಸುಖಿಸಿದರು. ಈಕೆಯು ಗರ್ಭಿಣಿಯಾದಳು. ಗ್ರಾಮಸ್ಥರೆಲ್ಲರ ಈಕೆಯನ್ನು ನೋಡಿ ಆಶ್ಚರ್ಯಪಟ್ಟರು. ಬಂಜೆಯು ಬಸುರಾದಳು. ಸೋಮನಾಥನು ಸಜ್ಜನನಾಗಿದ್ದನು. ಏಳನೇ ತಿಂಗಳಲ್ಲಿ ಕಟಿಪ್ರದೇಶವು ತುಂಬಲ್ಪಟ್ಟಿತು. ಗುರುವಿಗೆ ವಿನೋದದಲ್ಲಿ ಬಲು ಪ್ರೀತಿ. ಈಕೆಗೆ ಬಾಗಿನಗಳನ್ನು ಕೊಡೆಂದರು. ಎಂಟನೇ ತಿಂಗಳಲ್ಲಿ ಸೀಮಂತ ವಾಯಿತು. ಬಂಜೆಯಾಗಿಯೂ, ಬಿಳಿಯ ಕೂದಲುಳ್ಳವಳಾಗಿಯೂ ಇರುವ ಈಕೆಯು ಮುಪ್ಪಿನಲ್ಲಿ ಗರ್ಭಿಣಿಯಾದಳು. ಇದು ಆಶ್ಚರ್ಯವು, ಎಂದು ಎಲ್ಲರೂ ಹೇಳಿದರು. ಮತ್ತೊಬ್ಬಳು ಆಹಾ! ನೃಸಿಂಹ ಸರಸ್ವತಿಗಳ ಪ್ರಸಾದದಿಂದಲೂ, ಸೇವೆಯಿಂದಲೂ ಪುರುಷಾರ್ಥಗಳು ಸಿದ್ಧಿಸುವುವು. ತ್ರಿಮೂರ್ತಿಗಳ ಅವತಾರರಾದ ಗುರುಗಳು ತಮ್ಮ ಮಹಿಮೆಯನ್ನು ಪ್ರಕಟಿಸುವರು, ಎಂದಳು. ಈಕೆಯು ಉತ್ಸಾಹ ದಿಂದ ಬಾಗಿನವನ್ನು ಕೊಟ್ಟು ಗುರುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದಳು. ಜಯ ಪರಮಪುರುಷನೇ, ತ್ರಿಮೂರ್ತಿಸ್ವರೂಪನೇ, ನಿಮ್ಮ ವರದಿಂದ ನನ್ನ ದೇಹವು ಸುವರ್ಣಸಮಾನವಾಯಿತು. ವಿಶ್ವ ತಾರಣೆಗಾಗಿ ಅವತರಿಸಿದ್ದೀರಿ. ತಮ್ಮನ್ನು ಸ್ತುತಿಸಲು ನಾನು ಶಕ್ತಳಲ್ಲ. ನಿಮ್ಮ ಮಹಿಮೆ ಅಪಾರವಾದುದು, ಎಂದು ಸ್ತುತಿಸಿ ವಂದಿಸಿ ನಿರೂಪಹೊಂದಿ ಮನೆಗೆ ಹೋದಳು. ನವಮಾಸಾಂತ್ಯದಲ್ಲಿ ಶುಭದಿನದಲ್ಲಿ ಕನ್ನೆಯನ್ನು ಹಡೆದಳು. ದಂಪತಿಗಳು ಸಂತೋಷಿಸಿ ದರು. ಜ್ಯೋತಿಷ್ಕರು ಬಂದು ಕನ್ಯೆಯ ಜಾತಕವನ್ನು ನೋಡಿ ಈಕೆಯು ನಿರ್ಮಲ ಮನಸ್ಸುಳ್ಳವಳಾಗಿ ಎಂಟು ಮಕ್ಕಳನ್ನು ಪಡೆದು ಪುತ್ರಪೌತ್ರರಿಂದೊಡಗೂಡಿ ಸುಖವಾಗಿರುವಳು, ಎಂದರು. ಸೋಮ ನಾಥನು ಆನಂದದಿಂದ ದಾನಧರ್ಮಗಳನ್ನು ಮಾಡಿದನು. ಹತ್ತು ದಿನಗಳಾದ ಮೇಲೆ ಸುಸ್ನಾತಳಾಗಿ ಮಗುವನ್ನು ಕರೆದುಕೊಂಡು ಗುರುದರ್ಶನಕ್ಕೆ ಬಂದು ಭಕ್ತಿಯಿಂದ ಮಗುವನ್ನು ಗುರುಚರಣಂಗಳ ಲ್ಲಿಟ್ಟು ಸಾಷ್ಟಾಂಗ ನಮಸ್ಕಾರಮಾಡಿದಳು. ಶ್ರೀಗುರುವು ಸದೂಥಾನ

ಮಾಡಿ ನೀನು ಪುತ್ರವಂತೆಯಾದೆ ಎಂದು ಈಕೆಯನ್ನು ಎಬ್ಬಿಸಿದರು. ಈಕೆಯು ಸ್ವಾಮಿಾ, ನನಗೆ ಈಗ ಗಂಡುಮಗನಾಗಲಿಲ್ಲ. ಸರಸ್ವತಿ ಯಂತಿರುವ ಮಗಳು ಹುಟ್ಟಿದ್ದಳು. ನಿಮ್ಮ ವಚನವನ್ನು ಸತ್ಯವನ್ನಾಗಿ ಮಾಡಿ ರಕ್ಷಿಸಿರಿ, ಎಂದಳು. ಈ ಮಾತನ್ನು ಕೇಳಿ ಗುರುವು ನಕ್ಕು ಸ್ತ್ರೀಯಳೇ, ಅನುಮಾನ ಬೇಡ. ಪುತ್ರನಾಗುವನು, ಎಂದು ಆ ಮಗುವನ್ನೆತ್ತಿಕೊಂಡು ಪ್ರೀತಿಯಿಂದ ಸರ್ವರಿಗೂ ಆ ಕನ್ಯೆಯ ಲಕ್ಷಣವನ್ನು ಹೇಳುವವರಾದರು. ಈ ಮಗುವಿಗೆ ಮುಂದೆ ಬಹಳ ಮಕ್ಕಳಾಗುವರು. ಈಕೆಯು ಶತಾಯುವಾಗಿ ಪುತ್ರಪೌತ್ರರೊಡನೆ ಮುತ್ತೈದೆಯಾಗಿರುವಳು. ಈಕೆಯ ಪತಿಯು ಜ್ಞಾನಿಯಾದಾನು. ನಾಲ್ಕು ವೇದಗಳನ್ನೂ, ಕಲಿಯುವನು. ಅಷ್ಟೈಶ್ವರ್ಯವಂತನಾಗಿ ಪ್ರಖ್ಯಾತನಾಗುವನು. ಈಕೆಯು ಪತಿವ್ರತೆಯಾಗಿಯೂ, ಪುಣ್ಯಶೀಲ ಳಾಗಿಯೂ, ಧರ್ಮನಿರತಳಾಗಿಯೂ ಸರ್ವವಂದ್ಯಳಾಗುವಳು. ದಕ್ಷಿಣ ದೇಶದ ರಾಜನು ದರ್ಶನಕ್ಕೆ ಬರುವನು. ನಿನಗೆ ಪುತ್ರನಾಗುವನು. ಆ ಪುತ್ರನೂ ಜ್ಞಾನಿಯಾಗುವನು, ಎಂದರು. ಆಗ ಈಕೆಯು ಪುತ್ರನಾಗಬೇಕೆಂದು ಕೇಳಿದರು. ಆಗ ಗುರುವು ಎಲೌ ಸ್ತ್ರೀಯಳೇ, ನಿನಗೆ ಮೂವತ್ತು ವರ್ಷದ ಯೋಗ್ಯ ಪುತ್ರನು ಬೇಕೋ? ಅಥವಾ ಶತಾಯುವಾದ ಮೂರ್ಖ ಪುತ್ರನು ಬೇಕೋ, ತಿಳಿಸು ಎಂದರು. ಆಗ ಆಕೆಯು ಸ್ವಾಮಿಾ, ನನಗೆ ಯೋಗ್ಯ ಪುತ್ರನಾಗಬೇಕು; ಅವನಿಗೆ ಐವರು ಪುತ್ರರಾಗಬೇಕು, ಎಂದು ಬೇಡಿಕೊಂಡಳು. ಭಕ್ತವತ್ಸಲನಾದ ಶ್ರೀಗುರುವು ಹಾಗೆಯೇ ಆಗಲಿ, ಎಂದು ವರವನ್ನಿತ್ತರು. ದಂಪತಿಗಳು ಮನೆಗೆ ಹೋದರು. ಈಕೆಗೆ ಮಗನಾದನು. ಈ ಮಗನು ವೇದ ಶಾಸ್ತ್ರಸಂಪನ್ನನಾದನು. ಮೊದಲಿನ ಮಗಳಿಗೆ ಸರಸ್ವತಿ ಎಂದು ಹೆಸರು. ಮಗನಿಗೆ ಗುರುವಿನ ಹೆಸರನ್ನಿಟ್ಟರು. ಈ ಸರಸ್ವತಿಯ ಪತಿಯು ಯಜ್ಞವನ್ನು ಮಾಡಿ ದೀಕ್ಷಿತನಾದನು. ಇವನ ಖ್ಯಾತಿಯು ಬಹಳವಾಯಿತು. ಈ ರೀತಿಯಿಂದ ಅರವತ್ತು ವರ್ಷದ ಹೆಂಗಸಿಗೆ ಪುತ್ರರಾದರು, ಎಂದು ಸಿದ್ಧರು ಹೇಳಿದರು. ಗುರು ಕೃಪೆಯು ಹೀಗಿರುವುದು. ಆದುದರಿಂದ ಗುರುವನ್ನು ಭಕ್ತಿಯಿಂದ ಸೇವಿಸಬೇಕು. ಗುರುವನ್ನು ಭಜಿಸಿದರೆ ಸಕಲೇಷ್ಟಗಳುಂಟಾಗುವುವು.

ಬಡತನವು ಹಿಂಗುವುದು, ಎಂದು ಸರಸ್ವತೀಗಂಗಾಧರನು ನಿರೂಪಿಸಿದನು, ಎಂಬಲ್ಲಿಗೆ ಮೂವತ್ತೊಂಭತ್ತನೇ ಅಧ್ಯಾಯವು ಮುಗಿದುದು.

## ೪೦ ನೇ ಅಧ್ಯಾಯ.

ಶಿಷ್ಯನೇ, ಕೇಳು. ಒಣ ಮರವು ಚಿಗುರಿದ ಕಥೆಯನ್ನು ಹೇಳುವೆವು. ಶ್ರೀಗುರುಗಳು ಗಾಣಗಾಪುರದಲ್ಲಿರುವಾಗ ಒಬ್ಬ ಕುಷ್ಠ ವಿಪ್ರನು, ಆಪಸ್ತಂಭ ಶಾಖೆಯ ಭಾರ್ಗವ ಗೋತ್ರದವನು, ಈತನ ಹೆಸರು ನರಹರಿ ಎಂದು, ಈತನು ಗುರುದರ್ಶನಕ್ಕೆ ಬಂದು ಭಕ್ತಿಯಿಂದ ವಂದಿಸಿ ಕೈಗಳನ್ನು ಜೋಡಿಸಿ ಸ್ತುತಿಸಿದನು. ಜಯ ಗುರುಮೂರ್ತಿಯೇ, ನಿಮ್ಮ ಕೀರ್ತಿಯನ್ನು ಕೇಳಿ ಬಂದೆನು. ಭಕ್ತವತ್ಸಲನೇ, ಪರಂಜ್ಯೋತಿಯೇ, ಪರಮಪುರುಷನೇ, ಜಗದ್ಗುರುವೇ ನಾನು ಕಲ್ಲಿನಂತೆ ವ್ಯರ್ಥವಾಗಿ ಜನಿಸಿದೆನು. ನನ್ನನ್ನು ಕುಷ್ಠರೋಗಿ ಎಂದು ಜನರು ನಿಂದಿಸುವರು. ನಾನು ಯಜುರ್ವೇದವನ್ನು ಓದಿದ್ದೇನೆ. ಅಂಗಹೀನನೆಂದು ನನಗೆ ನಿಮಂತ್ರಣಕ್ಕೆ ಹೇಳುವುದಿಲ್ಲ. ಪ್ರಾತಃಕಾಲದಲ್ಲಿ ಜನರು ನನ್ನ ಮುಖವನ್ನು ನೋಡುವುದಿಲ್ಲ. ಇದರಿಂದ ನನಗೆ ಬಹು ದುಃಖವಾಗುವುದು. ನನಗೆ ಜನ್ಮವು ಸಾಕಾಗಿದೆ. ಪಾಪಿಯಾದ ನಾನು ಈ ದುಃಖವನ್ನು ಅನುಭವಿಸುವೆನು. ಇನ್ನು ಇದನ್ನು ಸಹಿಸಲಾರೆನು. ನಾನಾ ತೀರ್ಥಯಾತ್ರೆಗಳನ್ನು ಮಾಡಿದೆನು. ನಾನಾ ವ್ರತಗಳಂ ಮಾಡಿದೆನು. ಸರ್ವದೇವತೆಗಳನ್ನರ್ಚಿಸಿದೆನು. ಆದರೂ ನನ್ನ ರೋಗ ಹೋಗಲಿಲ್ಲ. ನಾನು ಈಗ ನಿಮ್ಮ ದರ್ಶನಕ್ಕೆ ಬಂದೆನು. ತಾವು ದಯೆಗೈಯ್ಯದಿರಲು ಪ್ರಾಣವನ್ನು ಬಿಡುವೆನು, ಎಂದು ಭಕ್ತಿಯಿಂದ ಬಿನ್ನವಿಸಿ ವಂದಿಸಿ ಸ್ತುತಿಸಿದನು. ನಿಮ್ಮ ದರ್ಶನಮಾಡುವುದರಿಂದ ಲೋಹಕ್ಕೆ ಸ್ಪರ್ಶಮಣಿಯು ತಗಲಲು ಸುವರ್ಣವಾಗುವಂತೆ ನರನು ಶ್ರೇಷ್ಠನಾಗುವನು, ಎಂದನು. ಇದನ್ನು ಕೇಳಿ ಭಕ್ತವತ್ಸಲನಾದ ಗುರುವು ಎಲೈ ವಿಪ್ರನೇ, ನೀನು ಪೂರ್ವ ಜನ್ಮದಲ್ಲಿ ಮಹಾ ಪಾಪಿಯಾಗಿದ್ದೆ. ಇದರಿಂದ ಈ ಕುಷ್ಠರೋಗಿಯಾಗಿದ್ದೀಯೆ. ಈಗ ನಾನು ಹೇಳಿದಂತೆ ಮಾಡಿದರೆ ನಿನ್ನ ಪಾಪವು

ದೂರವಾಗಿ ದಿವ್ಯದೇಹಿಯಾಗುವಿ, ಎಂದರು. ಇಷ್ಟರಲ್ಲಿಯೇ ಒಬ್ಬ ಮನುಷ್ಯನು ನಾಲ್ಕು ವರ್ಷಗಳಿಂದ ಒಣಗಿದ್ದ ಅತ್ತಿಯ ಮರದ ಕಟ್ಟಿಗೆಯನ್ನು ತರುತ್ತಿದ್ದನು. ಶ್ರೀಗುರುವು ನೋಡಿ ಅದರಲ್ಲಿ ಒಂದನ್ನು ಈತನಿಗೆ ಕೊಡಿಸಿ, ನೀನು ಸಂಗಮಕ್ಕೆ ಹೋಗಿ ಪೂರ್ವ ಭಾಗದಲ್ಲಿ ಭೀಮಾತೀರದಲ್ಲಿ ನೆಡುವವನಾಗಿ, ಸ್ನಾನಮಾಡಿ ಅಶ್ವತ್ಥ ವನ್ನು ಪೂಜಿಸಿ ಪುನಃ ಸ್ನಾನಮಾಡು. ಕೈಯಲ್ಲಿ ಎರಡು ಕಲಶಗಳನ್ನು ಹಿಡಿದು ನೀರನ್ನು ತಂದು ಈ ಒಣ ಅತ್ತಿಯ ಮರಕ್ಕೆ ಮೂರು ಬಾರಿ ನೀರು ಹಾಕು. ಇದಕ್ಕೆ ಯಾವಾಗ ಚಿಗುರುಂಟಾಗುವುದೋ ಆ ದಿನ ನಿನ್ನ ದೋಷವು ಹೋಗಿ ದಿವ್ಯದೇಹಿಯಾಗುವಿ, ಎಂದು ನಿರೂಪಿಸಿ ದರು. ಆ ವಿಪ್ರನು ಆ ಕಾಷ್ಠವನ್ನು ತಂದು ನದೀತೀರದಲ್ಲಿ ನೆಟ್ಟು ನಿತ್ಯವೂ ಎರಡು ಕಲಶಗಳಿಂದ ನೀರನ್ನು ಹಾಕುತ್ತಿದ್ದನು. ಜನರೆಲ್ಲರೂ ಇವನನ್ನು ನೋಡಿ ಎಲೈ ವಿಪ್ರನೇ, ಒಣ ಕಟ್ಟಿಗೆಯನ್ನು ಏಕೆ ನೆಟ್ಟೆ? ಇದರಿಂದ ನಿನಗೇನಾದೀತು? ಈ ರೀತಿಯನ್ನೆಲ್ಲಿಯೂ ನೋಡಲಿಲ್ಲ. ಭಕ್ತವತ್ಸಲನಾದ ಗುರುವು ಎಲ್ಲರಲ್ಲಿ ಅಗಾಧವಾದ ಕರುಣೆಯಿಂದ ವರವನ್ನು ಕೊಡುತ್ತಿರುವರು. ಆದರೆ ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತ ವಿಲ್ಲವೆಂದು ಗುರುಗಳು ನಿನಗೀ ಕಟ್ಟಿಗೆಯನ್ನು ಕೊಟ್ಟರು. ನೀನೇಕೆ ಕಷ್ಟಪಡುತ್ತೀಯೆ, ಎಂದು ಹೇಳಿದರು. ಆ ವಿಪ್ರನು ಇದನ್ನು ಕೇಳಿ ಅಯ್ಯೋ, ಗುರುವಚನವೇ ನನಗೆ ಕಾಮಧೇನುವಾಗಿದೆ. ಬೇರೆ ರೀತಿಯು ಹೇಗಾದೀತು? ಗುರುಗಳು ಸತ್ಯಸಂಕಲ್ಪರಾಗಿದ್ದಾರೆ. ಇವರ ವಾಕ್ಯವು ಅನೃತವಲ್ಲವು. ಈ ಕಾಷ್ಠವೇ ಚಿಗುರಿ ಮರವಾದೀತು. ಇದಕ್ಕಾಗಿ ಪ್ರಾಣವನ್ನಾದರೂ ಬಿಡುವೆನು. ಗುರುವಾಕ್ಯವೇ ನನಗೆ ಕಾರಣವು, ಎಂದು ಎಲ್ಲರಿಗೂ ಹೇಳಿದನು. ಇತ್ತ ಶಿಷ್ಯನೊಬ್ಬನು ಗುರುಗಳಂ ಕುರಿತು ಸ್ವಾಮೀ, ನೀವು ಆ ವಿಪ್ರನಿಗೆ ಒಣಕಟ್ಟಿಗೆಯನ್ನು ಕೊಟ್ಟು ಅದನ್ನು ಭಜಿಸೆಂದು ನಿರೂಪಿಸಿದಿರಿ. ಅದರಂತೆಯೇ ಆತನು ಏಳು ದಿನಗಳಿಂದ ಭಕ್ತಿಯಿಂದ ಉಪವಾಸಮಾಡಿ ತಮ್ಮ ವಚನದಂತೆ ಸೇವಿಸುತ್ತಿದ್ದಾನೆ. ಅವನಿಗೆಷ್ಟು ಹೇಳಿದರೂ ಕೇಳನು. ಆತನು ಹೇಳುವುದೇನೆಂದರೆ, ಈ ಕಟ್ಟಿಗೆಯು ಹೊರತು ನನಗೆ ಗತಿಯಿಲ್ಲವು. ಗುರುವಾಕ್ಯವೇ ನನಗೆ ಕಾರಣವು. ಅದರಂತೆ ಸೇವಿಸುವೆನು,

ಎನ್ನುತಲೂ ಅನ್ನನೀರನ್ನು ಬಿಟ್ಟು ಸೇವಿಸುತ್ತಾನೆಂದು ಬಿನ್ನವಿಸಿದನು. ಇದನ್ನು ಕೇಳಿ ಗುರುವು ಶಿಷ್ಯನೇ, ಕೇಳು. ಅಂತಃಕರಣವು ಹೇಗಿರುವುದೋ ಹಾಗೆ ಸಿದ್ಧಿಯಾಗುವುದು. ಗುರ್ವಾಜ್ಞೆಯೇ ಶಿಷ್ಯನಿಗೆ ಕಾರಣವು. ಇದು ವ್ಯರ್ಥವಾಗದು. ಭಕ್ತರಿಗೆ ಮನಸ್ಸಿದ್ದಂತೆಯೇ ಸಿದ್ಧಿಯಾಗುವುದು. ಈ ವಿಷಯದಲ್ಲಿ ಸ್ಕಂದಪುರಾಣದಲ್ಲಿ ಸೂತರು ಋಷಿಗಳಿಗೆ ಹೇಳಿದ ಕಥೆಯನ್ನು ಹೇಳುವೆನು, ಕೇಳು. ಸೂತರು ಋಷಿಗಳಿರಾ, ಕೇಳಿರಿ. ಸಂಸಾರ ದಾಟಲು ಗುರುಭಕ್ತಿಯೇ ಉಪಾಯವಾಗಿದೆ. ಅಯೋಗ್ಯನೆಂದೂ, ಜ್ಞಾನಿಯೆಂದೂ ನೋಡದೆ, ಗುರುವನ್ನು ಧ್ಯಾನಿಸುತ್ತಾ ಭಕ್ತಿಯಿಂದ ಸೇವಿಸಬೇಕು. ದೃಢ ಭಕ್ತಿಯಿದ್ದವರಿಗೆ ಸರ್ವಸಿದ್ಧಿಯಾಗುವುದು. ಸಂದೇಹವಿಲ್ಲ. ಒಮ್ಮನದಿಂದ ಸೇವಿಸಬೇಕು. ಗುರುವನ್ನು ನರನೆನ್ನಬಾರದು; ತ್ರಿಮೂರ್ತಿಸ್ವರೂಪನೆಂದರಿಯಬೇಕು. ಗುಣದೋಷ ವಿಚಾರಮಾಡಬಾರದು. ಈಶ್ವರನೆಂದರಿತು ಗುರುಚರಣಗಳನ್ನು ಭಜಿಸಿದವರಿಗೆ ಶೂಲಪಾಣಿಯು ಆ ಕ್ಷಣವೇ ಪ್ರಸನ್ನನಾಗುವನು.

ಮಂತ್ರೇ ತೀರ್ಥೇ ದ್ವಿಜೇ ದೈವೇ ದೈವಜ್ಞೇ ಭೇಷಜೇ ಗುರೌ ‖
ಯಾದೃಶೀ ಭಾವನಾ ಕುರ್ಯಾತ್ ಸಿದ್ಧಿರ್ಭವತಿ ತಾದೃಶೀ ‖

(ಮಂತ್ರ, ತೀರ್ಥ, ಬ್ರಾಹ್ಮಣ, ದೇವರು, ಜೋಯಿಸ, ವೈದ್ಯ, ಗುರುಗಳಲ್ಲಿ ಯಾವ ರೀತಿ ಭಾವಿಸುವರೋ ಆ ರೀತಿ ಸಿದ್ಧಿಯುಂಟಾಗುವುದು.) ಇದರ ವಿಷಯದಲ್ಲಿ ಒಂದು ಆಖ್ಯಾನವನ್ನು ಕೇಳುವವರಾಗಿರಿ. ಪೂರ್ವದಲ್ಲಿ ಪಾಂಚಾಲ ನಗರದಲ್ಲಿ ಸಿಂಹಕೇತುವೆಂಬ ರಾಜನಿದ್ದನು. ಇವನಿಗೆ ಧನಂಜಯನೆಂಬ ಮಗನಿದ್ದನು. ಒಂದು ದಿನ ಈ ರಾಜಕುವರನು ಬೇಟೆಗಾರರೊಡನೆ ಕಾಡಿಗೆ ಬೇಟೆಗೆ ಹೋದನು. ಕಾಡಿನಲ್ಲಿ ಮನುಷ್ಯರೂ, ನೀರೂ ಇರಲಿಲ್ಲ. ಇವನು ದಾಹದಿಂದ ತಿರುಗುತ್ತಾ ಅತಿಯಾಗಿ ಬಳಲಿದನು. ಅಲ್ಲೊಬ್ಬ ಬೇಡನು ತಿರುಗುತ್ತಾ ಅಕಸ್ಮಾತ್ತಾಗಿ ಒಂದು ಜೀರ್ಣವಾದ ಶಿವಾಲಯವನ್ನು ಕಂಡನು. ಅಲ್ಲಿ ಒಂದು ಭಿನ್ನ ಲಿಂಗವಿತ್ತು. ಅದನ್ನು ತೆಗೆದುಕೊಂಡನು. ಈ ಕಾಲಕ್ಕೆ ಸರಿಯಾಗಿ ಈ ರಾಜಪುತ್ರನು ಬಂದನು. ಈತನು ಇವನ ಕರದಲ್ಲಿದ್ದ ಲಿಂಗವನ್ನು ನೋಡಿ ಎಲೈ ಬೇಡನೇ, ಈ ಲಿಂಗವನ್ನೇಕೆ ಹಿಡಿದಿರುವೆ?

ನೆಲದಲ್ಲಿ ಅನೇಕ ಕಲ್ಲುಗಳು ಬಿದ್ದಿವೆ. ಆದರೆ ಈ ಲಿಂಗವನ್ನೇಕೆ ಹಿಡಿದಿರುವಿ? ಎಂದು ಕೇಳಿದನು. ಆಗ ಶಬರನು ರಾಜಪುತ್ರನಂ ಕುರಿತು ಸ್ವಾಮಿಾ, ನನ್ನ ಮನಸ್ಸಿನಲ್ಲಿ ಲಿಂಗಪೂಜೆ ಮಾಡಬೇಕೆಂದಿಚ್ಛಿ ಸುತ್ತೇನೆ. ಇದಕ್ಕಾಗಿಯೇ ಈ ಲಿಂಗವನ್ನು ತೆಗೆದುಕೊಂಡೆನು, ಎಂದನು. ಇದನ್ನು ಕೇಳಿ ರಾಜಪುತ್ರನು ನಕ್ಕು ಅಯ್ಯಾ, ಈ ಲಿಂಗವು ಒಳ್ಳೆಯದಾಗಿದೆ, ಎಂದನು. ಬೇಡನು ಸ್ವಾಮಿಾ, ಲಿಂಗ ಪೂಜಾವಿಧಿಯನ್ನು ನನಗೆ ತಿಳಿಸಿರಿ. ನೀವೇ ನನಗೆ ಗುರುಗಳಾಗಿ ದ್ದೀರಿ, ಎಂದನು.

ಆಗ ರಾಜಪುತ್ರನು ಬೇಡನೇ, ಈ ಕಲ್ಲನ್ನು ಮನೆಗೆ ತೆಗೆದು ಕೊಂಡು ಹೋಗಿ ಪತ್ರಪುಷ್ಪಾದಿಗಳಿಂದರ್ಚಿಸು. ದಂಪತಿಗಳಿಬ್ಬರೂ ಶುದ್ಧಚಿತ್ತರಾಗಿ ಈ ಲಿಂಗವೇ ಗೌರೀಶನೆಂದು ತಿಳಿದು ಪೂಜಿಸಿರಿ. ನಾನಾ ವಿಧ ಹೂವುಗಳಿಂದರ್ಚಿಸಿ ಧೂಪ, ದೀಪ, ನೈವೇದ್ಯ ಗಳನ್ನರ್ಪಿಸಿ ಆರತಿ ಎತ್ತಬೇಕು. ಭಸ್ಮವನ್ನಾದರೂ ನೈವೇದ್ಯ ಮಾಡು. ಸ್ಮಶಾನದ ಭಸ್ಮವನ್ನು ನಿತ್ಯವೂ ತಂದು ನೈವೇದ್ಯ ಮಾಡಿ ಆ ಪ್ರಸಾದವನ್ನು ತಿನ್ನು. ನೀನು ಯಾವುದನ್ನು ತಿನ್ನುವಿಯೋ ಅದನ್ನು ಈಶ್ವರನಿಗೆ ನಿವೇದನಮಾಡು, ಎಂದನು. ಬೇಡನಿಗೆ ಈತನೇ ಗುರುವಾದನು. ಬೇಡನು ಮನೆಗೆ ಬಂದು ಆ ಲಿಂಗವನ್ನು ಹೆಂಡತಿಗೆ ತೋರಿಸಿ ಪ್ರಿಯಳೇ, ಈ ಲಿಂಗವು ನನಗೆ ಪ್ರಸನ್ನವಾಯಿತು. ಗುರು ನಿರೂಪದಂತೆ ಏಕಚಿತ್ತದಿಂದರ್ಚಿಸುವೆನು, ಎಂದು ಚಿತಿಭಸ್ಮವನ್ನು ನಿತ್ಯವೂ ತಂದು ನೈವೇದ್ಯಮಾಡುತ್ತಿದ್ದನು. ಹೀಗೆ ಕೆಲವು ಕಾಲ ಕಳೆಯಲು ಒಂದು ದಿನ ಈತನಿಗೆ ಆ ಊರಿನಲ್ಲಿ ಚಿತಿಭಸ್ಮವು ಸಿಕ್ಕಲಿಲ್ಲ. ಹಳ್ಳಿಗಳಲ್ಲಿ ಹೋಗಿ ನೋಡಿದರೂ ಭಸ್ಮವು ಸಿಕ್ಕಲಿಲ್ಲ. ಈ ರೀತಿಯಿಂದ ಏಳು ಗ್ರಾಮಗಳನ್ನು ತಿರುಗಿ ಹಿಂದಕ್ಕೆ ಬಂದನು. ಚಿಂತೆಯಿಂದ ಹೆಂಡತಿಯನ್ನು ಕುರಿತು ಪ್ರಿಯಳೇ, ಭಸ್ಮವು ದೊರೆಯಲಿಲ್ಲ. ನಾನು ಸಾಯುವೆನು. ಶಿವಪೂಜೆಯು ನಿಂತಿತು. ಏಳು ಗ್ರಾಮಗಳಲ್ಲಿ ಹುಡುಕಿದರೂ ಭಸ್ಮ ಸಿಕ್ಕಲಿಲ್ಲ. ಗುರುವಾಕ್ಯವನ್ನು ಯಾರು ನಡೆಸುವುದಿಲ್ಲವೋ ಅವನು ರೌರವ ನರಕವನ್ನು ಹೊಂದುವನು; ಮತ್ತೂ ಸದಾ ದರಿದ್ರನಾಗಿ ಅಧೋಗತಿ ಹೊಂದುವನು; ಅಖಂಡ

ನರಕವಾಸವಾಗುವುದು, ಎಂದು ವೇದಶಾಸ್ತ್ರಗಳು ಹೇಳುವುವು. ಗುರುಭಕ್ತಿಯಿದ್ದವರು ಈ ಭವಸಾಗರವಂ ದಾಟುವರು. ಆದುದರಿಂದ ಪ್ರಾಣ ಬಿಡುವೆನು, ಎಂದನು. ಈ ವಚನವಂ ಕೇಳಿ ಆ ಬೇಡತಿಯು ಪ್ರಿಯನೇ, ಏಕೆ ಹೆದರುತ್ತೀಯೆ? ಚಿತಿಭಸ್ಮವನ್ನು ನಾನು ಕೊಡುವೆನು. ನನ್ನನ್ನು ಮನೆಯಲ್ಲಿ ಹಾಕಿ ಮನೆಗೆ ಬೆಂಕಿ ಹಾಕಿರಿ. ಇಲ್ಲಿ ಕಟ್ಟಿಗೆ ಬೇಕಾದಷ್ಟಿದೆ. ನನ್ನನ್ನು ಸುಟ್ಟುಬಿಡಿರಿ. ಚಿತಿಭಸ್ಮವನ್ನು ಈಶ್ವರನಿಗೆ ಅರ್ಪಿಸಿರಿ. ವ್ರತಭಂಗವಾಗಬಾರದು, ಎಂದು ಆನಂದದಿಂದ ಹೇಳಿದಳು. ಎಂದಾದರೂ ದೇಹವು ನಾಶವಾಗುವುದಲ್ಲವೇ? ಈ ಕಾರ್ಯಕ್ಕಾಗಿ ದೇಹವನ್ನು ಸಮರ್ಪಿಸುವೆನು, ಎಂದಳು. ಇದನ್ನು ಕೇಳಿ ಶಬರನು ಖಿನ್ನನಾಗಿ ಪ್ರಿಯಳೇ, ನಿನ್ನ ಪ್ರಾಣವನ್ನು ಹೇಗೆ ತೆಗೆಯಲಿ? ನೀನು ರತಿಯಂತಿರುವಿ; ಮತ್ತೂ ಪೂರ್ವವಯಸ್ಸಿನವಳಾಗಿದ್ದೀಯೆ; ಮಕ್ಕಳ ಸುಖವನ್ನು ನೋಡಲಿಲ್ಲ; ಸಂಸಾರಸುಖವನ್ನು ಅನುಭವಿಸಲಿಲ್ಲ; ನಿನ್ನಂ ಕೊಲ್ಲಲು ಮನಸ್ಸಿಲ್ಲ; ನಿನ್ನ ತಾಯಿತಂದೆಗಳು ನಿನ್ನಂ ರಕ್ಷಿಸೆಂದು ನನಗೆ ನಿರೂಪಿಸಿದ್ದರು; ಚಂದ್ರಸೂರ್ಯರ ಸಾಕ್ಷಿಯಾಗಿ ನಿನ್ನಂ ವರಿಸಿರುವೆನು; ನಿನ್ನಂ ರಕ್ಷಿಸುವೆನೆಂದು ಮನೆಗೆ ಕರೆತಂದಿರುವೆನು; ನಿನ್ನಂ ಸುಟ್ಟರೆ ಅನೇಕ ಪಾಪಗಳುಂಟಾಗಿ ಸ್ತ್ರೀಹತ್ಯಾ ದೋಷ ಬರುವುದು; ನೀನು ನನ್ನ ಪ್ರಾಣೇಶ್ವರಿಯು; ನಿನ್ನಂ ಕೊಲ್ಲುವು ದೆಂತು? ಈಶ್ವರನು ಹೇಗೆ ಸಂತೋಷಿಸುವನು; ಪುಣ್ಯವು ಹೋಗಿ ಪಾಪವುಂಟಾದೀತು. ನಿನ್ನ ತಾಯಿತಂದೆಗಳು ಸಂತೋಷಿಸುವರೇ? ನಿನ್ನ ಮಾತೆಯು ನನ್ನಂ ಸ್ತ್ರೀಘಾತಕಿಯೆನ್ನುವುದಿಲ್ಲವೇ? ನೀನು ಸುಂದರಿಯಾಗಿದ್ದೀಯೆ. ಈ ದೇಹಕ್ಕಾಗಿಯೇ ಭಕ್ತಿಯಿಂದ ವ್ರತ ಗಳನ್ನು ಮಾಡಬೇಕಲ್ಲವೇ? ನಿನ್ನಂ ಹೇಗೆ ಸುಡಲಿ? ಎಂದನು. ಆಗ ಆಕೆಯು ಪತಿಯೇ, ನೀವು ಅಜ್ಞಾನದಿಂದ ಹೀಗೆ ಹೇಳಬಾರದು. ದೇಹವು ಅಸ್ಥಿರವು. ಗಂಗಾನದಿಯ ನೊರೆಯ ಗುಳ್ಳೆಯಂತೆ ದೇಹವು ಶಾಶ್ವತವಾದುದಲ್ಲ; ಕ್ಷಣಭಂಗುರವಾದುದು. ಇದು ಸತ್ಯವು. ನನ್ನ ತಾಯಿತಂದೆಗಳು ನನ್ನನ್ನು ನಿಮಗೆ ದಾನಕೊಟ್ಟರು. ನಾನು ನಿಮ್ಮ ಅರ್ಧಾಂಗಿಯು. ಭೇದವಿಲ್ಲ. ನಾನೂ ನಿಮ್ಮ ದೇಹವೇ ಸರಿ. ನನ್ನಂ ದಹಿಸಲು ದೋಷವೆಲ್ಲಿ? ಭೂಮಿಯಲ್ಲಿರುವ ವಸ್ತುಗಳು ನಾಶ

ವಾಗುವುವು. ಈ ನನ್ನ ದೇಹವನ್ನು ಸಫಲಗೊಳಿಸಿರಿ. ಇದು ಈಶ್ವರನಂ ಹೊಂದುವುದು. ಅನುಮಾನಿಸದೆ ನನ್ನಂ ಸುಡಿರಿ. ನಾನು ಸಂತೋಷ ದಿಂದ ಹೇಳುವೆನು, ಎಂದಳು. ಶಬರನು ಸಂತೋಷಿಸಿ ಮನೆಯ ಬಾಗಿಲನ್ನು ಹಾಕಿ ದೊಡ್ಡದಾಗಿ ಬೆಂಕಿಯನ್ನು ಹತ್ತಿಸಿದನು. ಉರಿಯು ಆಕಾಶದ ವರೆಗೆ ಎದ್ದಿತು. ಶಬರಿಯ ದೇಹವು ಸುಟ್ಟಿತು. ಈ ಭಸ್ಮ ವನ್ನು ತೆಗೆದುಕೊಂಡು ಶಿವನಿಗೆ ನೈವೇದ್ಯಮಾಡಿದನು. ಶಿವಪೂಜೆ ಮಾಡಿ ಆನಂದಿತನಾದನು. ಸ್ತ್ರೀಯು ಸುಟ್ಟುಹೋದಳೆಂಬುವುದು ಈತನಿಗೆ ನೆನಪೇ ಇರಲಿಲ್ಲ. ಭಕ್ತಿಯಿಂದ ಶಿವಪೂಜೆಗೈದು ಪ್ರಸಾದ ವನ್ನು ಕೈಯಲ್ಲಿ ಹಿಡಿದು ನಿತ್ಯವೂ ಹೆಂಡತಿಗೆ ಕೊಡುತ್ತಿದ್ದಂತೆ ಈ ದಿನವೂ ತನ್ನ ಸತಿಯನ್ನು ಕರೆದನು. ದಯಾಶಾಲಿಯಾದ ಶಂಕರನು ಪ್ರಸನ್ನನಾದನು. ಆಗ ಶಬರಿಯು ಬಂದು ನಿಂತಿದ್ದಳು. ಮುಗುಳು ನಗೆಯಿಂದ ಪ್ರಸಾದವಂ ಗ್ರಹಿಸಿ ಮನೆಗೆ ಹೋದಳು. ಮನೆಯು ಮೊದಲಿದ್ದಂತೆಯೇ ಕಾಣಿಸಿತು. ಶಬರನು ವಿಸ್ಮಿತನಾದನು. ಹೆಂಡತಿ ಯನ್ನು ಮನೆಯಲ್ಲಿರಿಸಿ ಸುಟ್ಟೆನು. ಈಗ ಮನೆಯು ಮೊದಲಿದ್ದಂತೆಯೇ ತೋರುವುದು, ಎಂದು ಚಿಂತಿಸಿ, ಹೆಂಡತಿಯನ್ನು ಕರೆದು ಪ್ರಿಯಳೇ, ನಿನ್ನನ್ನು ಸುಟ್ಟೆನಷ್ಟೆ? ಮತ್ತೆ ಜೀವಿಸಿ ಬಂದುದು ಹೇಗೆ? ಎಂದು ಕೇಳಿದನು. ಆಗ ಆಕೆಯು ಸ್ವಾಮಿ, ನಾನು ಮನೆಯಲ್ಲಿರಲು ಮನೆಗೆ ಬೆಂಕಿಹಾಕಿದಿರಷ್ಟೆ? ಆಗ ನಾನು ನಿದ್ರಿತಳಾದೆನು. ಬಹಳವಾಗಿ ಚಳಿಯಾಯಿತು. ನಿಮ್ಮ ಮಾತನ್ನು ಕೇಳಿ ಎದ್ದು ಬಂದೆನು. ಇದು ದೇವತಾಕಾರ್ಯವೇ ಸರಿ. ಶಂಕರನು ಪ್ರಸನ್ನನಾದನು, ಎಂದಳು. ಆಗಲೇ ಶಂಕರನು ಪ್ರತ್ಯಕ್ಷನಾಗಿ ನಿಂತನು. ಈ ದಂಪತಿಗಳು ಪ್ರದಕ್ಷಿಣ ನಮಸ್ಕಾರಮಾಡಿ ಪಾದಂಗಳಿಗೆರಗಿದರು. ಶಿವನು ಭಕ್ತರೇ, ನಾನು ಮೆಚ್ಚಿದೆನು. ಬೇಡನೇ, ನಿನಗೆ ಸಂಸಾರದಲ್ಲಿ ಸುಖವುಂಟಾಗಲಿ. ನಿನಗೆ ರಾಜ್ಯವನ್ನಿತ್ತೆನು. ಬಳಿಕ ಪರದಲ್ಲಿ ಕೋಟಿ ಕಲ್ಪಗಳು ಸ್ವರ್ಗದಲ್ಲಿ ಸುಖವಾಗಿರು, ಎಂದು ವರವಿತ್ತನು, ಎಂದು ಸೂತರು ಋಷೀಶ್ವರರಿಗೆ ಹೇಳಿದರು. ಗುರುಚರಣಗಳಲ್ಲಿ ವಿಶ್ವಾಸವಿದ್ದವರಿಗೆ ಅದರಂತೆ ಫಲವುಂಟಾಗುವುದು, ಎಂದು ಗುರುಗಳು ಶಿಷ್ಯರಿಗೆ ಹೇಳಿದರು. ಆ ವಿಪ್ರನು ಭಕ್ತಿಯಿಂದ ಆ ಒಣಗಿದ ಅತ್ತಿಯ

ಗಿಡವನ್ನು ಸೇವಿಸುತ್ತಿದ್ದನು. ಭಾವವಿದ್ದಲ್ಲಿ ಸಿದ್ಧಿಯುಂಟೆಂಬುದು ಸತ್ಯವು. ದಯಾಮಯನಾದ ಗುರುವು ಎಂದಿನಂತೆ ಸಂಗಮಕ್ಕೆ ಹೊರಟರು. ಅಲ್ಲಿ ಕರ್ಮಾನುಷ್ಠಾನ ಮಾಡುತ್ತಿರಲು, ಈ ವಿಪ್ರನು ಗುರುದರ್ಶನಕ್ಕೆ ಬಂದನು. ಇವನನ್ನು ನೋಡಿ ಗುರುಗಳು ಮನದಲ್ಲಿ ಪ್ರಸನ್ನರಾಗಿ, ಕರದ ಕಮಂಡಲದಲ್ಲಿ ನೀರನ್ನು ತುಂಬಿ ಕರಕಮಲದಿಂದ ಆ ಕಾಷ್ಠಕ್ಕೆ ನೀರೆರೆದರು. ಆಗಲೇ ಆ ಕಾಷ್ಠವು ಚಿಗುರೊಡೆಯಿತು. ಅತ್ತಿಯ ಗಿಡವು ಕಾಣಿಸಿತು. ಚಿಂತಾಮಣಿಯು ಲೋಹಕ್ಕೆ ಸ್ಪರ್ಶವಾದರೆ ಚಿನ್ನವಾಗುವಂತೆ ಶ್ರೀಗುರು ಸುಧಾರಸದಿಂದ ಕಾಷ್ಠವು ಚಿಗುರಿ ಗಿಡವಾಯಿತು. ವಿಪ್ರನು ಸುಂದರದೇಹಿಯಾದನು. ತೊನ್ನು ತೊಲಗಿತು. ಆ ದ್ವಿಜನು ಆನಂದದಿಂದ ಸಾಷ್ಟಾಂಗ ನಮಸ್ಕಾರ ಮಾಡಿ ಸ್ತುತಿಸಲಾರಂಭಿಸಿದನು. ಹೇಗೆಂದರೆ:—

ಇಂದುಕೋಟಿ ತೇಜ ಕೀರ್ಣಸಿಂಧು ಭಕ್ತವತ್ಸಲಂ ।
ನಂದನಾತ್ರಿಸೂನು ದತ್ತಮಿಂದಿರಾಕ್ಷ ಶ್ರೀಗುರುಂ ॥
ಗಂಧಮಾಲ್ಯ ಅಕ್ಷತಾದಿ ವೃಂದದೇವ ವಂದಿತಂ ।
ವಂದಯಾಮಿ ನಾರಸಿಂಹ ಸರಸ್ವತೀಶ ಪಾಹಿಮಾಂ ॥ ೧ ॥

(ಕೋಟಿ ಚಂದ್ರನ ಕಾಂತಿಯಿಂದ ಕೂಡಿದವನಾದಂಥಾ, ಸಮುದ್ರದಂತಿರುವ ಭಕ್ತರಲ್ಲಿ ದಯವುಳ್ಳವನಾದ ಅತ್ರಿಪುತ್ರನಾದ ಇಂದಿರಾಕ್ಷನಾದಂಥಾ, ಗಂಧಾಕ್ಷತ ಪುಷ್ಪಾದಿಗಳಿಂದ ದೇವತೆಗಳ ಗುಂಪಿನಿಂದ ಪೂಜಿಸಲ್ಪಟ್ಟಂಥಾ ಗುರುಗಳಾದ ನರಸಿಂಹಸರಸ್ವತಿಗಳನ್ನು ವಂದಿಸುವೆನು. ನನ್ನನ್ನು ಪಾಲಿಸಿರಿ.)

ಮೋಹಪಾಶ ಅಂಧಕಾರ ಜಾತದೂರ ಭಾಸ್ಕರಂ ।
ಆಯತಾಕ್ಷ ಪಾಹಿ ಶ್ರೀಯವಲ್ಲಭೇಶ ನಾಯಕಂ ॥
ಸೇವ್ಯಭಕ್ತವೃಂದ ವರದ ಭೂಯೊ ಭೂಯೊ ನಮಾಮ್ಯಹಂ ।
ವಂದಯಾಮಿ ನಾರಸಿಂಹ ಸರಸ್ವತೀಶ ಪಾಹಿಮಾಂ ॥ ೨ ॥

(ಮೋಹಪಾಶವೆಂಬ ಕತ್ತಲೆಯನ್ನು ಹೋಗಲಾಡಿಸಲ್ಪಟ್ಟ ಸೂರ್ಯನಂತಿರುವ ವಿಸ್ತಾರವಾದ ಕಣ್ಣುಗಳುಳ್ಳವನೇ ರಕ್ಷಿಸು. ಒಡೆಯನಾದ ಶ್ರೀ ವಲ್ಲಭೇಶನೇ, ಭಕ್ತಸೇವ್ಯನೇ, ಭಕ್ತವರದಾತನೇ, ನೃಸಿಂಹ ಸರಸ್ವತಿಗಳೇ ನಿಮ್ಮಂ ವಂದಿಸುವೆನು.)

ಚಿತ್ತಜಾದಿವರ್ಗ ಷಟ್ಕಮತ್ತವಾರಣಾಂಕುಶಂ ।
ಸತ್ವಸಾರ ಶೋಭಿತಾತ್ಮ ದತ್ತಶ್ರೀಯುವಲ್ಲಭಂ ॥
ಉತ್ತಮಾವತಾರ ಭೂತಕರ್ತೃ ಭಕ್ತವತ್ಸಲಂ ।
ವಂದಯಾಮಿ ನಾರಸಿಂಹ ಸರಸ್ವತೀಶ ಪಾಹಿಮಾಂ ॥ ೩ ॥

(ಕಾಮಾದಿ ಅರಿಷಡ್ವರ್ಗವೆಂಬ ಮದಿಸಿದ ಆನೆಗೆ ಅಂಕುಶರೂಪನಾದ, ಸತ್ವಸಾರವಾದ ವೇದಾಂತಗಳಿಂದ ಶೋಭಿತನಾದಂಥಾ ಉತ್ತಮಾವತಾರ ಮಾಡಿದವರಾದ, ಭಕ್ತವತ್ಸಲರಾದ ನರಸಿಂಹಸರಸ್ವತಿಗಳೇ ವಂದಿಸುವೆನು, ರಕ್ಷಿಸಿರಿ.)

ವ್ಯೋಮ ವಾಯು ತೇಜ ಆಪ ಭೂಮಿ ಕರ್ತೃಮೀಶ್ವರಂ ।
ಕಾಮ ಕ್ರೋಧ ಮೋಹರಹಿತ ಸೋಮಸೂರ್ಯಲೋಚನಂ ॥
ಕಾಮಿತಾರ್ಥದಾತ ಭಕ್ತ ಕಾಮಧೇನು ಶ್ರೀಗುರುಂ ।
ವಂದಯಾಮಿ ನಾರಸಿಂಹ ಸರಸ್ವತೀಶ ಪಾಹಿಮಾಂ ॥ ೪ ॥

(ಪಂಚಭೂತಕರ್ತೃವಾದ ಈಶ್ವರನಾದ, ಕಾಮ, ಕ್ರೋಧ, ಮೋಹರಹಿತನಾದ, ಚಂದ್ರಸೂರ್ಯ ನೇತ್ರನಾದ, ಇಷ್ಟಾರ್ಥದಾತನಾದ, ಭಕ್ತರಿಗೆ ಕಾಮಧೇನುವಿನಂತಿರುವ ನೃಸಿಂಹಸರಸ್ವತಿಗಳನ್ನು ವಂದಿಸುವೆನು, ರಕ್ಷಿಸಿರಿ.)

ಪುಂಡರೀಕಾಯತಾಕ್ಷ ಕುಂಡಲೇಂದು ತೇಜಸಂ ।
ಚಂಡದುರಿತ ಖಂಡನಾರ್ಥ ದಂಡಧಾರಿ ಶ್ರೀಗುರುಂ ॥
ಮಂಡಲೀಕಮೌಳಿ ಮಾರ್ತಾಂಡಭಾಸಿತಾನನಂ ವರಂ ।
ವಂದಯಾಮಿ ನಾರಸಿಂಹ ಸರಸ್ವತೀಶ ಪಾಹಿಮಾಂ ॥ ೫ ॥

(ತಾವರೆಯಂತೆ ಕಣ್ಣುಳ್ಳ, ಚಂದ್ರನಂತಿರುವ ಕುಂಡಲಗಳ ಕಾಂತಿಯುಳ್ಳ, ಕ್ರೂರವಾದ ಪಾಪಗಳನ್ನು ಪರಿಹರಿಸುವುದಕ್ಕಾಗಿ ದಂಡಧಾರಿಯಾದ, ಶ್ರೀಗುರುವಾದ, ಚಂದ್ರಮೌಳಿಯಾದ, ಸೂರ್ಯನಂತೆ ಹೊಳೆಯುವ ಮುಖವುಳ್ಳ ನೃಸಿಂಹಸರಸ್ವತಿಗಳನ್ನು ವಂದಿಸುವೆನು.)

ವೇದಶಾಸ್ತ್ರ ತುಲ್ಯಪಾದಪಾದಿಮೂರ್ತಿ ಶ್ರೀಗುರುಂ ।
ನಾದಬಿಂದು ಕಲಾತೀತ ಕಲ್ಪಪಾದ ಸೇವಿತಂ ॥

ಸೇವ್ಯ ಭಕ್ತವೃಂದ ವರದ ಭೂಯೊ ಭೂಯೊ ನಮಾಮ್ಯಹಂ ।
ವಂದಯಾಮಿ ನಾರಸಿಂಹ ಸರಸ್ವತೀಶ ಪಾಹಿಮಾಂ ॥ ೬ ॥

(ವೇದಶಾಸ್ತ್ರಗಳಲ್ಲಿ ಉಕ್ತವಾದ ಪಾದಗಳುಳ್ಳ ಆದಿಮೂರ್ತಿಯಾದ ಶ್ರೀಗುರುವೇ, ನಾದಬಿಂದು ಕಲಾತೀತ ಕಲ್ಪಪಾದಗಳಿಂದ ಸೇವಿಸಲ್ಪಟ್ಟ ಭಕ್ತವರದನಾದ ನೃಸಿಂಹಸರಸ್ವತಿಯೇ ವಂದಿಸುವೆನು, ರಕ್ಷಿಸಿರಿ.)

ಅಷ್ಟಯೋಗ ತತ್ವನಿಷ್ಠ ತುಷ್ಟ ಜ್ಞಾನವಾರಿಧಿಂ ।
ಕೃಷ್ಣವೇಣಿ ತೀರವಾಸ ಪಂಚನದ್ಯ ಸಂಗಮಂ ॥
ಕಷ್ಟದೈನ್ಯದೂರ ಭಕ್ತ ತುಷ್ಟ ಕಾಮ್ಯದಾಯಕಂ ।
ವಂದಯಾಮಿ ನಾರಸಿಂಹ ಸರಸ್ವತೀಶ ಪಾಹಿಮಾಂ ॥ ೭ ॥

(ಅಷ್ಟಯೋಗನಿಷ್ಠನಾದ, ಜ್ಞಾನಸಮುದ್ರನಾದ, ಪಂಚಗಂಗಾ ಕೃಷ್ಣಾ ಸಂಗಮದಲ್ಲಿ ವಾಸಿಸುವವನಾದ, ಕಷ್ಟವನ್ನೂ, ಬಡತನವನ್ನೂ ದೂರಮಾಡುವವನಾದ, ಭಕ್ತಸಂತುಷ್ಟನಾಗಿ ಇಷ್ಟಾರ್ಥಗಳನ್ನು ಕೊಡುವವನಾದ ನೃಸಿಂಹಸರಸ್ವತಿಯೇ! ನಮಿಸುವೆನು, ಸಲಹಿರಿ.)

ನಾರಸಿಂಹಸರಸ್ವತೀಶ ನಾಮಮಷ್ಟಮೌಕ್ತಿಕಂ ।
ಹಾರಕೃತ್ಯ ಶಾರದೇನ ಗಂಗಾಧರಾಖ್ಯಸ್ವಾತ್ಮಜಂ ॥
ಧಾರಣೀಕ ದೇವ ದೀಕ್ಷ ಗುರುಮೂರ್ತಿ ತೋಷಿತಂ ।
ಪರಮಾತ್ಮಾನಂದಶ್ರೀಯು ಪುತ್ರಪೌತ್ರದಾಯಕಂ ॥ ೮ ॥

(ನೃಸಿಂಹಸರಸ್ವತಿಗಳ ಅಷ್ಟಕವೆಂಬ ಮುತ್ತಿನಹಾರವು ಗಂಗಾಧರ ನಂದನನಿಂದ ರಚಿತವಾದುದು. ಇದು ಬ್ರಾಹ್ಮಣರಲ್ಲಿ ದೀಕ್ಷಿತರಾದ ಗುರುಮೂರ್ತಿಗಳನ್ನು ಸಂತೋಷಗೊಳಿಸಲ್ಪಟ್ಟದ್ದಾಗಿದೆ. ಇದು ಪುತ್ರಪೌತ್ರಾದಿ ಐಶ್ವರ್ಯವನ್ನು ಕೊಡತಕ್ಕುದಾಗಿದೆ.)

ನಾರಸಿಂಹಸರಸ್ವತೀಶ ಅಷ್ಟಕಂ ಚ ಯಃ ಪಠೇತ್ ।
ಘೋರ ಸಂಸಾರಸಿಂಧು ತಾರಣಾಖ್ಯ ಸಾಧನಂ ॥
ಸಾರಜ್ಞಾನ ದೀರ್ಘ ಆಯುರಾರೋಗ್ಯಾದಿ ಸಂಪದಾಂ ।
ಚಾರುವರ್ಗ ಕಾಮ್ಯಲಾಭ ನಿತ್ಯಸೇವ್ಯ ಯಃ ಪಠೇತ್ ॥ ೯ ॥

ಈ ನೃಸಿಂಹಸರಸ್ವತ್ಯಷ್ಟಕವನ್ನು ಯಾರು ಪಠಿಸುವರೋ ಅವರು ಘೋರ ಸಂಸಾರಸಾಗರವನ್ನು ದಾಟುವರು. ಶ್ರೇಷ್ಠವಾದ ಜ್ಞಾನವನ್ನೂ, ಆಯುಸ್ಸನ್ನೂ, ಆರೋಗ್ಯವನ್ನೂ, ಸಂಪತ್ತನ್ನೂ ಚತುರ್ವಿಧ ಪುರುಷಾರ್ಥಗಳನ್ನೂ ಹೊಂದುವರು, ಎಂದೀ ಪರಿಯಿಂದ ಸ್ತುತಿಸಿದನು. ಶ್ರೀಹರಿಯು ದಯೆಗೈದನು. ಸ್ವಾಮೀ ಎಂದು ನಮಿಸಿದನು. ಶ್ರೀಗುರುನಾಥನು ಅಭಯಹಸ್ತದಿಂದ ಈತನನ್ನು ಎಬ್ಬಿಸಿದರು. ಎಲ್ಲರೂ ವಿಸ್ಮಿತರಾದರು. ಮತ್ತೂ ಗುರುವನ್ನು ವಂದಿಸಿ ಸ್ತುತಿಸಿದರು. ಗುರುಗಳು ಶಿಷ್ಯರೂ, ಗ್ರಾಮಸ್ಥರೂ, ವಿಪ್ರನೂ ಇವರೊಡನೆ ಮಠಕ್ಕೆ ಹೊರಟರು. ಆ ಗ್ರಾಮಸ್ಥರು ಗುರುಗಳಿಗೆ ಆರತಿಯನ್ನೆತ್ತಿದರು. ಶಿಷ್ಯರೊಡನೆ ಗುರುಗಳು ಮಠಕ್ಕೆ ಬಂದು ಕುಳಿತರು. ಆ ದಿನ ದೊಡ್ಡ ಸಮಾರಾಧನೆಯಾಯಿತು. ಗುರುವು ಆ ವಿಪ್ರನನ್ನು ಕುರಿತು ವಿಪ್ರನೇ, ಪುತ್ರಪೌತ್ರರು, ಪಶುಗಳು ಇವುಗಳಿಂದ ಕೂಡಿ ಅಭಿವೃದ್ಧಿಯನ್ನು ಹೊಂದುವವನಾಗು. ನಿನ್ನ ಹೆಸರು ಇನ್ನು ಮುಂದೆ ಯೋಗೀಶ್ವರನೆಂದು ಪ್ರಸಿದ್ಧವಾಗಲಿ. ಶಿಷ್ಯರಲ್ಲಿ ನೀನು ದೊಡ್ಡವನಾದೆ. ನೀನು ನಮ್ಮ ಭಕ್ತನು. ನಿನ್ನ ವಂಶದಲ್ಲಿ ಎಲ್ಲರೂ ವೇದಶಾಸ್ತ್ರ ಸಂಪನ್ನರಾಗುವರು, ಎಂದು ವರವಿತ್ತರು. ಬಳಿಕ ವಿಪ್ರನೇ, ನೀನು ನಿನ್ನ ಪತ್ನಿಯೊಡನೆ ಈ ಗ್ರಾಮದಲ್ಲಿಯೇ ಸಂತೋಷದಿಂದಿರು, ಎಂದು ಅವನಿಗೆ ವಿದ್ಯಾಸರಸ್ವತಿ ಎಂಬ ಮಂತ್ರವನ್ನು ಉಪದೇಶಿಸಿದರು. ನಿನಗೆ ಮೂವರು ಮಕ್ಕಳಾಗುವರು. ಅವರಲ್ಲೊಬ್ಬನು ಯೋಗಿಯಾಗಿ ನಮ್ಮನ್ನು ಸೇವಿಸುವನು. ನಿನ್ನ ವಂಶದವರೆಲ್ಲರೂ ನನ್ನ ದಾಸರಾಗುವರು, ಎಂದು ವರವಿತ್ತರು. ಅವನಿಗೆ ಗುರುವು ನಿರೂಪಿಸಿದಂತೆಯೇ ಆಯಿತು, ಎಂದು ಸಿದ್ಧರು ಹೇಳಿದರು, ಎಂದು ಸರಸ್ವತೀ ಗಂಗಾಧರನು ಹೇಳಿದನು. ಸಂಸಾರವನ್ನು ದಾಟಬೇಕಾದರೆ ಗುರುಚರಿತ್ರೆಯನ್ನು ಏಕಚಿತ್ತದಿಂದ ಕೇಳಬೇಕು. ಕುಷ್ಠರೋಗಿಯು ಗುರುಮಹಿಮೆಯಿಂದ ಉದ್ಧೃತನಾದನು. ಗುರುಮಹಿಮೆಯು ಅತ್ಯದ್ಭುತವಾಗಿ ಪ್ರಕಟವಾಯಿತು, ಎಂಬಲ್ಲಿಗೆ ಶುಷ್ಕಕಾಷ್ಠಸಂಜೀವನವೆಂಬ ನಾಲ್ವತ್ತನೇ ಅಧ್ಯಾಯವು ಮುಗಿದುದು.

## ೪೧ ನೇ ಅಧ್ಯಾಯ.

ನಾಮಧಾರಕನು ಎದ್ದು ನಿಂತು ಕೈಜೋಡಿಸಿ ವಂದಿಸಿ ಜಯ ಸಿದ್ಧಮುನಿಯೇ, ಭವತಾರಕನೇ, ನಾನಾ ಧರ್ಮಗಳಿಂದ ಕೂಡಿದ ಗುರುಚರಿತ್ರೆಯನ್ನು ನಿರೂಪಿಸಿದಿರಿ. ನಾನು ಧನ್ಯನಾದೆನು. ಮಹಾ ಜ್ಞಾನವನ್ನು ಪ್ರಕಾಶಗೊಳಿಸಿದಿರಿ. ಗುರುಸ್ಮರಣೆ ಎಂಬ ಅಮೃತ ರಸವನ್ನು ಪಾನಮಾಡಿಸಿದಿರಿ. ಸ್ವಾಮಿ, ನಮ್ಮ ವಂಶದವರು ಗುರು ಸೇವೆಯನ್ನು ಹೇಗೆ ಮಾಡಿದರು? ಇದನ್ನು ನಿರೂಪಿಸಿರಿ. ಮಹಾ ಜ್ಞಾನಿಗಳಾದ ಸಿದ್ಧಮುನಿಗಳೇ, ನಮ್ಮ ವಂಶದವರು ಗುರುವಿಗೆ ಹೇಗೆ ಶಿಷ್ಯರಾದರು, ಎಂದು ಕೇಳಿದನು. ಆಗ ಸಿದ್ಧರು ಶಿಷ್ಯನೇ ಕೇಳು, ಎಂದು ಹೇಳುವರು. ಅನೇಕ ಭಕ್ತರು ಗುರುದರ್ಶನಕ್ಕೆ ಬರುತ್ತಿದ್ದರು. ವೋಸರವೆಂಬ ಗ್ರಾಮದಲ್ಲಿ ನಿಮ್ಮ ವಂಶದವನಾದ ಸಾಯಂದೇವನೆಂಬವನು ಗುರುಪೂಜೆಯನ್ನು ಭಕ್ತಿಯಿಂದ ಮಾಡಿದನು. ಗುರುಗಳು ದಕ್ಷಿಣ ದೇಶಕ್ಕೆ ಬಂದರು. ಇವರ ಕೀರ್ತಿಯು ಬಹಳವಾಗಿ ಹರಡಿತು. ಗುರುದರ್ಶನಕ್ಕೆ ಬಂದ ಜನರು ಇಷ್ಟಾರ್ಥ ಗಳನ್ನು ಹೊಂದುತ್ತಿದ್ದರು. ಈ ರೀತಿಯಿಂದ ಗಾಣಗಾಪುರದಲ್ಲಿ ಗುರುಗಳಿರುತ್ತಿದ್ದರು. ನಿಮ್ಮ ಪೂರ್ವಜನಾದ ಸಾಯಂದೇವನು ಪ್ರಸಿದ್ಧ ಭಕ್ತನಾಗಿದ್ದನು. ಇವನು ಗುರುಮಹಿಮೆಯನ್ನು ಕೇಳಿ ಭಕ್ತಿಯಿಂದ ಗಾಣಗಾಪುರಕ್ಕೆ ಬಂದು ಗುರುಚರಣಂಗಳಲ್ಲಿ ಸಾಷ್ಟಾಂಗ ನಮಸ್ಕಾರಮಾಡಿ, ತಲೆಯ ಕೂದಲುಗಳಿಂದ ಗುರುಪಾದವನ್ನು ಗುಡಿಸುವವನಾಗಿ ಕೈಗಳನ್ನು ಜೋಡಿಸಿ ಒಮ್ಮನದಿಂದ ಗುರುಗಳನ್ನು ಸ್ತುತಿಸಿದನು. ಗುರುವರ್ಯರೇ, ನಾನು ಧನ್ಯನಾದೆನು; ನನ್ನ ಜನ್ಮವು ಧನ್ಯವು; ನನ್ನ ಪಿತೃಗಳು ಕೃತಾರ್ಥರಾದರು; ನನ್ನ ಕೋಟಿ ಜನ್ಮದ ಪಾಪಗಳು ಹೋದುವು. ಜಯ ಗುರುಮೂರ್ತಿಯೇ, ವಿಶ್ವಪತಿಯೇ, ಪರಮಾತ್ಮನೇ, ಪರಂಜ್ಯೋತಿಯೇ, ಶ್ರೀ ನೃಸಿಂಹ ಸರಸ್ವತಿಯೇ, ನಿಮ್ಮ ಚರಣಗಳ ಮಹಿಮೆಯನ್ನು ವರ್ಣಿಸಲು ನನಗೆ ಶಕ್ತಿಯಿಲ್ಲ. ಭಕ್ತವತ್ಸಲನೇ! **ಚರಣಂ ಪವಿತ್ರಂ ವಿತತಂ ಪುರಾಣಂ** ಎಂದು ಶೃತಿಗಳು ಹೇಳುವುವು. ನಿಮ್ಮ ಚರಣಗಳಿದ್ದಲ್ಲಿ ಸರ್ವ

ತೀರ್ಥಗಳಿರುವವು. ತ್ರಿಮೂರ್ತಿಸ್ವರೂಪರಾಗಿ ಕಾಣುತ್ತಿರುವಿರಿ. ನೀವೇ ಕೇವಲ ಪರಬ್ರಹ್ಮರು. ಕರದ ದಂಡ ಕಮಂಡಲಗಳಲ್ಲಿರುವ ಅಮೃತವನ್ನು ಪ್ರೋಕ್ಷಿಸಲು ಹೆಣವು ಎದ್ದಿತು. ಶರಣಾಗತ ರಕ್ಷಣೆಗಾಗಿ ದಂಡವನ್ನು ಧರಿಸಿರುವಿರಿ. ಪಾಪವನ್ನೂ, ಬಡತನವನ್ನೂ ನಿವಾರಿಸಿ ಭಕ್ತರನ್ನು ರಕ್ಷಿಸುವಿರಿ. ರುದ್ರಾಕ್ಷಿಮಾಲೆಯನ್ನೂ, ಭಸ್ಮವನ್ನೂ ಧರಿಸಿ ವ್ಯಾಘ್ರಾಜಿನದಲ್ಲಿ ಕುಳಿತಿರುವಿರಿ. ಅಮೃತಮಯವಾದ ದೃಷ್ಟಿಯು ಚಂದ್ರನಂತೆಯೂ, ಕ್ರೂರದೃಷ್ಟಿಯು ಅಗ್ನಿಸೂರ್ಯರಂತೆಯೂ ಇರುವುದು. ಭಕ್ತರಿಗೆ ಚತುರ್ವಿಧ ಪುರುಷಾರ್ಥಗಳನ್ನು ಕೊಡುವಿರಿ. ನೀವೇ ರುದ್ರನು ಸತ್ಯವು. ವಿಷ್ಣುರೂಪದಿಂದ ರಕ್ಷಿಸುತ್ತಾ ಪೀತಾಂಬರವಂ ಧರಿಸಿರುವಿರಿ. ನಿಮ್ಮ ಚರಣವೇ ಸರ್ವತೀರ್ಥವು. ಭಕ್ತಾಭಿಮಾನಿಯೇ! ಬಂಜೆಗೆ ಮಗನನ್ನು ಕೊಟ್ಟಿರಿ. ಒಣಮರವನ್ನು ಚಿಗುರಿಸಿದಿರಿ. ಗೊಡ್ಡೆಮ್ಮೆಯನ್ನು ಕರೆಯಿಸಿದಿರಿ. ಬ್ರಾಹ್ಮಣ ಸಮಾರಾಧನೆಯಲ್ಲಿ ಅನ್ನವನ್ನು ಅಕ್ಷಯಮಾಡಿದಿರಿ. ತ್ರಿವಿಕ್ರಮ ಯತಿಗೆ ವಿಶ್ವರೂಪ ತೋರಿಸಿದಿರಿ. ಪತಿತನಿಂದ ವೇದವನ್ನು ಹೇಳಿಸಿದಿರಿ. ಅಪಾರ ಮಹಿಮರೇ, ಭಕ್ತರಕ್ಷಣೆಗಾಗಿ ಅವತರಿಸಿದ ನರಹರಿಯೇ, ನನ್ನನ್ನು ರಕ್ಷಿಸಿರಿ, ಎಂದು ನಾನಾ ವಿಧದಿಂದ ಸ್ತುತಿಸಿ, ವಂದಿಸಿ, ಸದ್ಗದಿತ ಕಂಠವುಳ್ಳವನಾಗಿ ರೋಮಾಂಚವುಳ್ಳವನಾದನು. ಆನಂದಾಶ್ರುವು ಸುರಿಯುತ್ತಿತ್ತು. ಸಂತೋಷದಿಂದ ನವವಿಧ ಭಕ್ತಿಯಿಂದ ಶ್ರೀಗುರುವನ್ನು ಸ್ತುತಿಸಿದನು. ಶ್ರೀಗುರುವು ಸಂತೋಷಿಸಿ, ಸಾಯಂದೇವನನ್ನು ಸಮಾಧಾನಮಾಡಿ ತಲೆಯ ಮೇಲೆ ಹಸ್ತವನ್ನಿಟ್ಟು ಎಲೈ ಪರಮಭಕ್ತನೇ, ನಿನ್ನ ಸ್ತುತಿಯನ್ನು ಕೇಳಿ ಮನಸ್ಸು ಮೆಚ್ಚಿತು. ನಿನ್ನ ವಂಶದವರೆಲ್ಲರೂ ನನ್ನ ದಾಸರಾಗಿರಲಿ, ಎಂದು ವರವಿತ್ತು ಸಂತೋಷಿಸಿ ಶಿಷ್ಯನೇ, ಸಂಗಮಕ್ಕೆ ಹೋಗಿ ಸ್ನಾನಮಾಡಿ, ಅಶ್ವತ್ಥಪೂಜೆ ಮಾಡಿ, ಮಠಕ್ಕೆ ಭೋಜನಕ್ಕೆ ಬಾ, ಎಂದು ಹೇಳಿ ಸ್ನಾನಕ್ಕೆ ಹೊರಟರು. ವಿಪ್ರನು ಸ್ನಾನಮಾಡಿ ಬಂದು ಗುರುವನ್ನು ಷೋಡಶೋಪಚಾರದಿಂದ ಪೂಜಿಸಿದನು; ಮತ್ತು ಪಕ್ವಾನ್ನಗಳನ್ನು ಭಿಕ್ಷೆಮಾಡಿಸಿದನು. ಭಕ್ತವತ್ಸಲನಾದ ಗುರುವು ಈ ವಿಪ್ರನನ್ನೂ, ಶಿಷ್ಯರನ್ನೂ ಒಂದೇ ಪಙ್ಕ್ತಿಯಲ್ಲಿ ಹತ್ತಿರದಲ್ಲಿ

ಕೂರಿಸಿದರು. ಗುರುವಿಗೆ ಊಟವಾಗಿ ಆನಂದದಿಂದ ಕುಳಿತರು. ಬಳಿಕ ಸಾಯಂದೇವನನ್ನು ಕುರಿತು ಎಲೈ ವಿಪ್ರನೇ, ನಿನ್ನ ದೇಶವು ಯಾವುದು? ನಿನ್ನ ಕುಟುಂಬವೆಲ್ಲಿದೆ? ಎಂದು ಕೇಳಿದರು. ಆಗ ಆತನು ಸ್ವಾಮಿಾ, ನೀವು ಸಂತೋಷದಿಂದ ನನ್ನ ಸಂಗತಿಯನ್ನು ಕೇಳಿದಿರಿ. ಅದನ್ನು ಬಿನ್ನವಿಸುವೆನು. ನನ್ನ ಮಕ್ಕಳೂ, ಬಂಧುಗಳೂ ಕ್ಷೇಮವಾಗಿದ್ದಾರೆ. ನಾನು ಉತ್ತರಕಾಂಚಿಯಲ್ಲಿರುವೆನು. ತಮ್ಮ ಕರುಣದಿಂದ ಕ್ಷೇಮವಾಗಿದ್ದೇನೆ. ನಾನೂ, ನನ್ನ ಬಂಧುಗಳೂ ಸಂಸಾರಯಾತನೆಯನ್ನನುಭವಿಸುವೆವು. ನಿಮ್ಮ ಸೇವೆಯನ್ನು ಮಾಡ ಬೇಕೆಂದು ಇಷ್ಟವಿದೆ. ತಮ್ಮ ಸೇವೆಯಲ್ಲಿರುವೆನೆಂದು ನಿರ್ಧರಿಸಿರು ವೆನು, ಎಂದನು. ಇದನ್ನು ಕೇಳಿ ಗುರುವು ಸಕ್ಕು ಸಾಯಂದೇವನೇ, ನಮ್ಮ ಸೇವೆಯು ಕಠಿಣವು. ನಾವು ಅನೇಕ ಸ್ಥಳಗಳಲ್ಲಿರುವೆವು. ಒಂದು ಕಾಲದಲ್ಲಿ ಕಾಡಿನಲ್ಲಿಯೂ, ಒಂದು ಕಾಲದಲ್ಲಿ ಗ್ರಾಮ ದಲ್ಲಿಯೂ ಇರುವೆವು. ನಮ್ಮಿಂದ ನಿನಗೆ ಕಷ್ಟವಾದೀತು. ಅದನ್ನು ಸಹಿಸುವುದು ಅಸಾಧ್ಯವು, ಎಂದರು. ಆಗ ಇದನ್ನು ಕೇಳಿ ಆತನು ಸ್ವಾಮಿಾ, ಗುರುಸೇವೆ ಮಾಡಿದವನಿಗೆ ಸಂಸಾರದಿಂದ ಬಿಡುಗಡೆ ಯಾಗುವುದು. ಅವನಿಗೆ ದುಃಖವೆಲ್ಲಿ? ಶ್ರೀಗುರುವು ಸೇವಕರಿಗೆ ಪುರುಷಾರ್ಥಗಳನ್ನು ಕೊಡಲು ಶಕ್ತರು. ಗುರುಭಕ್ತಿಯು ಮುಖ್ಯ ವಾಗಿದ್ದವನಿಗೆ ಯಮಭಯವಿಲ್ಲ, ಎಂದು ಸಾಯಂದೇವನು ಭಕ್ತಿಯಿಂದ ಬಿನ್ನವಿಸಿದನು. ಶ್ರೀಗುರುವು ಸಂತೋಷಿತರಾದರು. ಎಲೈ ವಿಪ್ರನೇ, ದೃಢಭಕ್ತಿಯಿದ್ದರೆ ಈ ಸಂಸಾರವನ್ನು ದಾಟುವಿ. ಸ್ಥಿರಚಿತ್ತದಿಂದ ಮೂರು ತಿಂಗಳು ಸೇವೆಮಾಡಲು ಸರ್ವಸಿದ್ಧಿಯಾಗುವುದು, ಎಂದರು. ಗುರುಗಳು ಸಂಗಮಕ್ಕೆ ಹೊರಟರು. ಸಾಯಂದೇವನು ಸೇವೆಗೆ ನಿಂತನು. ಭಕ್ತರ ಅಂತಃಕರಣವನ್ನು ನೋಡುವುದಕ್ಕಾಗಿ ಶಿಷ್ಯರೊಡನೆ ಸಂಗಮಕ್ಕೆ ಬಂದರು. ಆ ದಿನ ರಾತ್ರಿ ಗುರುವು ಅಶ್ವತ್ಥವೃಕ್ಷದ ಮೂಲದಲ್ಲಿ ಕುಳಿತು ಮಾತಾಡುತ್ತಿದ್ದರು. ಈ ಸಾಯಂದೇವನ ಮನಸ್ಸನ್ನು ಪರೀಕ್ಷಿಸಬೇಕೆಂದು ಯೋಚಿಸಿದರು. ಆಗ ಬಹಳವಾಗಿ ಗಾಳಿಯೆದ್ದಿತು. ಬಹಳ ಮಳೆ ಬಂದಿತು. ಮರಗಳು ಬಿದ್ದುಹೋದುವು. ಸಾಯಂದೇವನು ಹತ್ತಿರದಲ್ಲಿದ್ದು ಗುರುಗಳಿಗೆ ಬಟ್ಟೆಯನ್ನು ಹೊದಿಸಿ

ಮರದಡಿಯಲ್ಲಿ ಬಟ್ಟೆಯನ್ನು ಹಾಸಿದ್ದನು. ಮಳೆ ಗಾಳಿ ಬಹಳ ವಾಗಿತ್ತು. ಸಾಯಂದೇವನು ಭಕ್ತಿಯಿಂದ ನಿಂತು ಸೇವಿಸುತ್ತಿದ್ದನು. ಚಳಿಯು ಬಹಳವಾಗಿತ್ತು. ಆಗ ಶ್ರೀಗುರುವು ಆ ವಿಪ್ರನಂ ಕುರಿತು ನಮಗೆ ಚಳಿಯಾಗುತ್ತಿದೆ. ಕಾಯಿಸಿಕೊಳ್ಳುವುದಕ್ಕಾಗಿ ಮಠಕ್ಕೆ ಹೋಗಿ ಬೆಂಕಿಯನ್ನು ತೆಗೆದುಕೊಂಡು ಬಾ, ಎಂದರು. ಆತನು ಗುರುನಿರೂಪಹೊಂದಿ ಜ್ಞಾನಿಯಾದುದರಿಂದ ಆಗಲೇ ಬೆಂಕಿಗಾಗಿ ಹೊರಟನು.

ಆಗ ಗುರುವು ಸಾಯಂದೇವನೇ, ನೀನು ಹೋಗಿ ಬರುವಾಗ ಉಭಯ ಪಾರ್ಶ್ವಗಳಲ್ಲಿಯೂ ನೋಡಬೇಡ, ಎಂದರು. ಕತ್ತಲೆಯಿಂದ ದಾರಿಯು ಕಾಣದು. ಗುರ್ತಿನ ಮೇಲೆ ಹೊರಟನು. ಮಳೆ ಬರುತ್ತಿತ್ತು. ಭಕ್ತಿಯಿಂದ ಗುರುವಂ ನೆನೆಯುತ್ತಾ ಮಿಂಚಿನ ಬೆಳಕಿನಿಂದ ಗಾಣಗಾಪುರಿಗೆ ಬಂದನು. ಒಬ್ಬ ವೇಶ್ಯೆಯ ಮನೆಯಿಂದ ಬೆಂಕಿಯನ್ನು ಕೇಳಿ ಗಡಿಗೆಯಲ್ಲಿ ಹಾಕಿ ತೆಗೆದುಕೊಂಡು ಬರುತ್ತಿದ್ದನು. ಕಗ್ಗತ್ತಲೆಯಲ್ಲಿ ದಾರಿ ಕಾಣದು. ಮಿಂಚಿನ ಬೆಳಕಿನಿಂದ ಬರುತ್ತಾ ಗುರುಗಳು ಎಡಬಲಗಳಲ್ಲಿ ನೋಡಬೇಡವೆಂದರು. ಇದಕ್ಕೆ ಕಾರಣ ವೇನೆಂದು ಇಕ್ಕಡೆಗಳಲ್ಲಿ ನೋಡಲು ಅನೇಕ ಹಾವುಗಳು ಕಾಣಿಸಿದುವು. ಇವಕ್ಕೆ ಹೆದರಿ ಉತ್ತರಕ್ಕೆ ನೋಡಿದನು. ಮಹಾನಾಗಗಳು ಅದ್ಭುತವಾಗಿ ಕಾಣಿಸಿದುವು. ಎರಡು ಹೆಡೆಗಳೂ, ಐದು ಹೆಡೆಗಳೂ ಉಳ್ಳ ಹಾವುಗಳು ಓಡಿಬರುತ್ತಿದ್ದುವು. ವಿಪ್ರನು ಇವುಗಳನ್ನು ನೋಡಿ ಹೆದರುತ್ತಾ ಓಡಿಬರುತ್ತಾ ದಾರಿಯನ್ನು ಬಿಟ್ಟು ಕಾಡನ್ನು ಹೊಕ್ಕನು. ಎರಡು ಹಾವುಗಳು ಇವನೊಡನೆ ಬರುತ್ತಿದ್ದುವು. ಶ್ರೀಗುರುವನ್ನು ಒಂದೇ ಮನದಿಂದ ಧ್ಯಾನಿಸುತ್ತಾ ಸಂಗಮಕ್ಕೆ ಬಂದನು. ದೂರದಲ್ಲಿ ಶ್ರೀಗುರುವನ್ನು ಕಂಡನು. ಅಲ್ಲಿ ಸಾವಿರ ದೀಪಗಳ ಬೆಳಕು ಕಾಣಿಸಿತು. ವೇದಧ್ವನಿಯು ಕೇಳಬರುತ್ತಿತ್ತು. ಈತನು ಗುರುಗಳ ಹತ್ತಿರ ಬರಲು ಗುರುಗಳೊಬ್ಬರೇ ಕಾಣಿಸಿದರು. ಕತ್ತಲೆ ಹೋಯಿತು. ಪೂರ್ಣಿಮಾ ಚಂದ್ರನು ಕಾಣಿಸಿದನು. ಇವನು ಬೆಂಕಿಯನ್ನು ಹತ್ತಿಸಿದನು. ಬೆಳಕು ಹರಿಯಿತು. ವಿಪ್ರನು ಗುರುಗಳನ್ನು ಜತನ ವಾಗಿ ನೋಡುತ್ತಿದ್ದನು. ಎರಡು ಹಾವುಗಳು ಬಂದು ಗುರುಗಳನ್ನು

ವಂದಿಸಿ ಹೊರಟುಹೋದುವು. ಈ ವಿಪ್ರನು ಮೊದಲೇ ಹೆದರಿದ್ದನು. ಗುರುಗಳು ಶಿಷ್ಯನೇ, ನೀನು ಹೆದರಿದೆಯಾ? ನಿನ್ನ ರಕ್ಷಣೆಗಾಗಿ ಎರಡು ಸರ್ಪಗಳನ್ನು ಕಳುಹಿಸಿದ್ದೆವು. ಈಗ ನಿನಗೇನೂ ಭಯವಿಲ್ಲ. ನಮ್ಮ ಸೇವೆಯು ಕಠಿಣತೆಯನ್ನು ನೋಡಿದೆಯಾ? ವಿಚಾರಮಾಡಿ ನಮ್ಮ ಸೇವೆಯನ್ನು ಅಂಗೀಕರಿಸು. ಗುರುಭಕ್ತಿಯು ಕಠಿಣವು. ದೃಢಭಕ್ತಿಯಿಂದ ಸೇವಿಸುವ ಶಿಷ್ಯನು ಈ ಕಲಿಯುಗದಲ್ಲಿ ಯಾರೂ ಇಲ್ಲವು, ಎಂದರು. ಆಗ ನಾಯಂದೇವನು ಗುರುಚರಣಂಗಳಿಗೆರಗಿ ಸ್ವಾಮಿಾ, ಗುರುಭಕ್ತಿಯನ್ನು ನಿರೂಪಿಸಿರಿ. ನನ್ನ ಮನಸ್ಸು ಸ್ಥಿರ ವಾಗುವ ವರೆಗೆ ತಮ್ಮನ್ನು ಸೇವಿಸುವೆನು, ಎಂದನು. ಆಗ ಗುರುವು ಅಯ್ಯಾ ವಿಪ್ರನೇ, ಒಂದು ಕಥೆಯನ್ನು ಕೇಳು. ಪೂರ್ವದಲ್ಲಿ ಕೈಲಾಸ ದಲ್ಲಿ ಶ್ರೀಶಂಕರನು ಅರ್ಧಾಂಗಿಯಾದ ಪಾರ್ವತಿಗೆ ಒಂದು ಕಥೆಯನ್ನು ಹೇಳಿದನು. ಆಗ ಗಿರಿಜೆಯು ಸ್ವಾಮಿಾ, ಗುರುಭಕ್ತಿಯ ಪ್ರಕಾರ ವೆಂತು? ನಿರೂಪಿಸಿರಿ, ಎಂದು ಪ್ರಾರ್ಥಿಸಿದಳು. ಶಿವನು ಹೇಳಿದು ದೇನೆಂದರೆ:—ದೇವಿಯೇ, ಗುರುವೇ ಶಿವನಾಗಿದ್ದಾನೆ. ಏಕಚಿತ್ತದಿಂದ ಕೇಳು. ಗುರುಭಕ್ತಿಯಿಂದ ಇಷ್ಟಾರ್ಥಗಳೆಲ್ಲವೂ ಆ ಕ್ಷಣವೇ ಸಿದ್ಧಿಸುವುವು. ಅನೇಕ ಜಪಾನುಷ್ಠಾನಗಳಿಂದ ವಿಳಂಬದಿಂದ ಇಷ್ಟಾರ್ಥಗಳು ಸಿದ್ಧಿಸುವುವು. ತಪಸ್ಸೂ, ಯಜ್ಞಾದಿಗಳೂ ವಿಘ್ನ ವಿಲ್ಲದೆ ಸಾಧ್ಯವಾಗುವುದು ದುರ್ಲಭವು. ಯಾರಿಗೆ ನಿರ್ಮಲವಾದ ಗುರುಭಕ್ತಿಯಿರುವುದೋ ಅವರಿಗೆ ಯಜ್ಞ, ದಾನ, ತಪಸ್ಸುಗಳ ಫಲ ಗಳೂ, ಸರ್ವಸಿದ್ಧಿಯೂ ಉಂಟಾಗುವುವು. ಏಕಚಿತ್ತದಿಂದ ಗುರುಕುಲ ವಾಸಮಾಡಿ ಗುರುವನ್ನು ಆರಾಧಿಸಿದರೆ ಎಲ್ಲವೂ ಪ್ರಯಾಸವಿಲ್ಲದೆ ಸಿದ್ಧಿಸುವುವು. ಇದಕ್ಕೊಂದು ದೃಷ್ಟಾಂತವನ್ನು ಹೇಳುವೆನು. ತ್ವಷ್ಟೃಬ್ರಹ್ಮನಿಗೊಬ್ಬ ಮಗನಾದನು. ಇವನು ಸುಂದರನಾಗಿಯೂ, ಸರ್ವಧರ್ಮ ಕುಶಲನಾಗಿಯೂ, ಧೀರನಾಗಿಯೂ ಇದ್ದನು. ಉಪ ನಯನವಾದ ಮೇಲೆ ವಿದ್ಯಾಭ್ಯಾಸಕ್ಕಾಗಿ ಗುರುಗಳ ಮನೆಯಲ್ಲಿದ್ದನು. ಈ ವಟುವು ನಾನಾ ವಿಧವಾಗಿ ಗುರುಸೇವೆ ಮಾಡುತ್ತಾ ಇರಲು ಒಂದಪೂರ್ವ ಸಂಗತಿಯು ನಡೆಯಿತು. ಹೀಗಿರಲೊಂದು ದಿನ ಬಹಳ ಮಳೆ ಬಂದಿತು. ಪರ್ಣಶಾಲೆಯಲ್ಲೆಲ್ಲಾ ಸೋರುತ್ತಿತ್ತು. ಆಗ

ಗುರುವು ಈ ಪಟುವಂ ಕುರಿತು ಶಿಷ್ಯನೇ, ಒಂದು ದೃಢವಾದ ಮನೆಯನ್ನು ಕಟ್ಟು. ಪರ್ಣಶಾಲೆಯು ಪ್ರತಿ ವರ್ಷವೂ ಜೀರ್ಣವಾಗುತ್ತಿದೆ. ಸದಾ ಜೀರ್ಣವಾಗದಂಥಾ, ಹರಿದು ಬೀಳದಂಥಾ ಮನೋಹರವಾದ ಮನೆಯನ್ನು ಕಟ್ಟು, ಎಂದು ನಿರೂಪಿಸಿದನು. ಗುರುಪತ್ನಿಯು ಶಿಷ್ಯನೇ, ಹೊಲಿಯದೇ ಇರುವುದಾಗಿಯೂ, ನೇಯದಿರುವುದಾಗಿಯೂ, ವಿಚಿತ್ರವಾದ ಬಣ್ಣವುಳ್ಳದ್ದಾಗಿಯೂ, ನನ್ನ ದೇಹಕ್ಕೆ ಯೋಗ್ಯವಾಗಿಯೂ ಇರುವ ಒಂದು ಕುಪ್ಪಸವನ್ನು ನನಗೆ ತಂದು ಕೊಡೆಂದಳು. ಗುರುಪುತ್ರನು ಪಟುವೇ, ನೀರಿನ ಮೇಲೆ ಹಾಕಿಕೊಂಡು ನಡೆಯಬಹುದಾದ ಪಾದುಕೆಗಳನ್ನು ನನಗೆ ತಂದು ಕೊಡು. ಈ ಪಾದುಕೆಗಳಿಗೆ ಕೆಸರು ಹತ್ತಬಾರದು. ಇದು ನನ್ನ ಕಾಲಿಗೆ ಸರಿಯಾಗಿರಬೇಕು. ಇದನ್ನು ಹಾಕಿಕೊಂಡು ಎಲ್ಲಿಗೆ ಹೋಗಬೇಕೆಂದರೂ ಅಲ್ಲಿಗೆ ಒಯ್ಯುತಕ್ಕುದಾಗಿರಬೇಕು, ಎಂದನು. ಗುರುಕನ್ಯೆಯು ಅಯ್ಯಾ, ನೀನು ನನಗೆ ಶ್ರೇಷ್ಠವಾದ ಓಲೆಯನ್ನು ತರಬೇಕು. ಒಳ್ಳೆಯ ಚನ್ನೆಯ ಮಣೆಗಳನ್ನು ತರಬೇಕು. ಇದು ಆನೆಯ ಒಂದೇ ದಂತದಿಂದಾದುದಾಗಿ ಜೀರ್ಣವಾಗದಂತಿರಬೇಕು. ಸಕಲ ಪದಾರ್ಥಗಳೊಡನೆ ಇವುಗಳನ್ನು ತೆಗೆದುಕೊಂಡು ಹೋಗುವಂತಿರಬೇಕು. ಸದಾ ಹೊಸದಾಗಿ ತೋರುವುದಾಗಿಯೂ, ತನ್ನಷ್ಟಕ್ಕೇ ಪಾಕವಾಗುವುದಾಗಿಯೂ ಇರುವ ಮಡಕೆಗಳನ್ನು ತೆಗೆದುಕೊಂಡು ಬಾ. ಅಡಿಗೆ ಮಾಡುವಾಗ ನನಗೆ ಉಷ್ಣವು ತಗಲಬಾರದು. ಅಡುವ ಮಡಕೆಗಳಿಗೆ ಮಸಿಯು ಹತ್ತಬಾರದು. ಇಂಥವುಗಳನ್ನು ತರಬೇಕು, ಎಂದಳು. ಈತನು ಹಾಗಾಗಲೆಂದು ಹೇಳಿ ಒಪ್ಪಿ ಹೊರಟು ಕೂಡಲೆ ಕಾಡಿಗೆ ಹೋದನು. ಬಹಳವಾಗಿ ಚಿಂತಿಸಿ ಎಲ್ಲರ ಇಷ್ಟವಸ್ತುಗಳನ್ನು ಹೇಗೆ ಸಂಪಾದಿಸಲಿ? ಎಂದು ಗುರುಚರಣವನ್ನು ಧ್ಯಾನಿಸುತ್ತಿದ್ದನು. ಗುರುಗಳ ಇಷ್ಟವನ್ನು ನೆರವೇರಿಸದಿದ್ದರೆ ಗುರುಗಳು ಕೋಪಿಸುವರು. ಈಗ ಯಾರನ್ನು ಮರೆಹೊಗಲಿ? ಯಾರು ನನ್ನ ಜೀವವನ್ನುಳಿಸುವರು? ಗುರುವಲ್ಲದೆ ಕೃಪೆಯುಳ್ಳವರು ಯಾರಿರುವರು? ಗುರುವಿನ ಮಾತನ್ನು ನಡೆಸದಿದ್ದರೆ ಶಾಪಕೊಡುವರೆಂದು ಎಲ್ಲವನ್ನೂ ಒಪ್ಪಿಕೊಂಡು ಬಂದನು. ಈಗ ಆತನು ತನಗೇನು ಗತಿ?

ಯಾರ ಹತ್ತಿರ ಹೋಗಲಿ? ನಾನು ಅಶಕ್ತ ಬಾಲಕನು. ನಾನು ಅಜ್ಞಾನದಿಂದ ಏಕೆ ಒಪ್ಪಿದೆನು? ಗುರುವಾಕ್ಯವೇ ನನಗೆ ಕಾರಣವು. ಜೀವವನ್ನಾದರೂ ಕೊಟ್ಟು ಗುರ್ವಾಜ್ಞೆಯನ್ನು ನಡೆಯಿಸುವೆನು, ಎಂದು ಚಿಂತಿಸುತ್ತಾ ಆ ಕಾಡಿನಲ್ಲಿ ಹೋಗುತ್ತಾ ಬಹಳವಾಗಿ ಬಳಲಿದನು. ಮುಂದೆ ಹೋಗುವಾಗ ಅವಧೂತನೊಬ್ಬನು ಬಂದು ಎಲೈ ಬಾಲಕನೇ, ನೀನು ಎಲ್ಲಿಗೆ ಹೋಗುವಿ? ನೀನು ಚಿಂತಿಸುತ್ತಿರುವಂತೆ ತೋರುವುದು. ಏನು ಹೇಳು, ಎಂದು ಕೇಳಿದನು. ಅವನು ಅವಧೂತನಿಗೆ ಸಾಷ್ಟಾಂಗ ವಂದನೆಮಾಡಿ ಸ್ವಾಮಿಾ, ನಾನು ಚಿಂತಾ ಸಾಗರದಲ್ಲಿ ಮುಳುಗಿದ್ದೇನೆ. ನನ್ನಂ ರಕ್ಷಿಸಿರಿ. ದಯಾನಿಧಿಗಳೇ, ನನಗೆ ದರ್ಶನವಿತ್ತಿರಿ. ದನವು ತನ್ನ ಕರುವನ್ನು ತೃಪ್ತಿಪಡಿಸುವಂತೆ ನನ್ನಂ ತೃಪ್ತಿಪಡಿಸಲು ನೀವು ಬಂದಿರಿ. ದುಃಖಿಯಾದ ನಾನು ನಿಮ್ಮಂ ನೋಡಲು ನನ್ನ ಮನಸ್ಸು ನಿರ್ಮಲವಾಯಿತು. ಚಕೋರಪಕ್ಷಿಯು ಬೆಳದಿಂಗಳನ್ನು ನೋಡಿ ಸಂತೋಷಪಡುವಂತೆ ನಿಮ್ಮ ಪಾದಗಳನ್ನು ನೋಡಿ ಆನಂದಿತನಾದೆನು. ಪೂರ್ವಸುಕೃತದಿಂದ ತಮ್ಮ ದರ್ಶನವಾಯಿತು. ತಮ್ಮ ಹೆಸರೇನು? ಎಲ್ಲಿಂದ ಬಂದಿರಿ? ಈ ಮನುಷ್ಯರಿಲ್ಲದ ವನದಲ್ಲಿ ತಮ್ಮ ದರ್ಶನವಾಯಿತು. ನೀವು ಈಶ್ವರಾಂಶರಾಗಿದ್ದೀರಿ. ಅಥವಾ ಗುರುಗಳೇ ದಯೆಗೈದರೋ? ನಿಮ್ಮನ್ನು ನೋಡಿ ನನ್ನಂತಃಕರಣವು ಸ್ಥಿರವಾಯಿತು. ಸತ್ವಗುಣಪ್ರಿಯರಾಗಿಯೂ, ಭಕ್ತರಲ್ಲಿ ಪ್ರೀತಿಯುಳ್ಳವರಾದ ನೀವು ನನ್ನನ್ನು ರಕ್ಷಿಸಿರಿ. ನಾನು ನಿಮ್ಮ ದಾಸನೆಂದು ವಂದಿಸಿದನು. ಈ ತಪಸ್ವಿಯು ಈ ಬಾಲಕನನ್ನೆಬ್ಬಿಸಿ ಆಲಿಂಗಿಸಿ ಸಮಾಧಾನಮಾಡಿ ಇವನ ಸಂಗತಿಯನ್ನೆಲ್ಲವನ್ನೂ ಕೇಳಿದನು. ಈ ವಟುವು ಸ್ವಾಮಿಾ, ಮೇಲೆ ಹೇಳಿದ ವಸ್ತುಗಳೆಲ್ಲವೂ ಯಾತರಿಂದ ಸಾಧ್ಯವಾದೀತು? ಬ್ರಹ್ಮಚಾರಿಯಾದ ನಾನು ಚಿಂತಾರ್ಣವದಲ್ಲಿ ಮುಳುಗಿದೆನು. ನೀವು ಹೇಳುವಂತೆ ಮಾಡುವೆನು, ಎಂದು ವಂದಿಸಿದನು. ಅವಧೂತನು ಇವನಿಗೆ ಅಭಯವನ್ನು ಕೊಟ್ಟು ನಿನ್ನ ಕಾರ್ಯ ಸಾಧನೆಯಾಗುವ ಯುಕ್ತಿಯನ್ನು ಹೇಳುವೆನು. ಶ್ರೀ ಕಾಶೀಕ್ಷೇತ್ರದಲ್ಲಿ ವಿಶ್ವೇಶ್ವರ ಸ್ವಾಮಿಯನ್ನು ಆರಾಧನೆ ಮಾಡುವವನಾಗು. ಪಂಚಕ್ರೋಶ ವಿಸ್ತೀರ್ಣವಾದ ಕಾಶೀಕ್ಷೇತ್ರದಲ್ಲಿ ವಿಷ್ಣು ಬ್ರಹ್ಮರು

ವರವಂ ಪಡೆದರು. ಬ್ರಹ್ಮನು ಸೃಷ್ಟಿಯನ್ನು ಮಾಡಲು ವರವಂ ಪಡೆದನು. ನೀನು ಕಾಶಿಗೆ ಹೋಗು. ನಿನ್ನ ಇಷ್ಟವು ಅಲ್ಲಿ ಸಿದ್ಧಿಯಾಗುವುದು. ಸಂದೇಹಪಡದೆ ಅಲ್ಲಿಗೆ ಹೋಗು. ಸರ್ವವಿದ್ಯೆಯೂ ಸಾಧ್ಯವಾಗುವುದು. ನೀನು ವಿಶ್ವಕರ್ಮನೇ ಆಗುವಿ. ಚತುರ್ವಿಧ ಪುರುಷಾರ್ಥಗಳೂ ಬೇಗ ಸಿದ್ಧಿಸುವುವು. ಇನ್ನಾವ ಸ್ವಾರ್ಥಬೇಕು. ದಯಾಳುವಾದ ಶಂಕರನಾಟವು ವಿಚಿತ್ರವಾದುದು. ಉಪಮನ್ಯುವೆಂಬ ಬಾಲಕನಿಗೆ ಕ್ಷೀರಸಮುದ್ರವನ್ನೇ ಕೊಟ್ಟನು. ಆನಂದವನವೆಂಬ ಹೆಸರುಳ್ಳ, ಸರ್ವೇಷ್ಟಗಳಂ ಪೂರ್ಣಗೊಳಿಸುವ ಶ್ರೀ ಕಾಶೀಕ್ಷೇತ್ರವು ಸರ್ವಧರ್ಮದ ರಾಶಿಯಾಗಿದೆ. ಸರ್ವಜಂತುಗಳಿಗೆ ಮೋಕ್ಷಸ್ಥಾನವಾಗಿದೆ. ಅಲ್ಲಿ ವಾಸಿಸಿದವರಿಗೂ, ದರ್ಶನಮಾಡಿದವರಿಗೂ ದೋಷಗಳು ಪರಿಹರಿಸುವುವು. ಇದರ ಮಹಿಮೆಯನ್ನು ಹೇಳುವುದೇನು? ಇಂಥಾ ಕ್ಷೇತ್ರವಿರಲಾಗಿ ಚಿಂತಿಸುವಿಯೇಕೆ? ಇದನ್ನು ವರ್ಣಿಸಲು ನನಗೆ ಶಕ್ಯವಲ್ಲ. ಕಾಶೀ ನಗರದ ತೀರ್ಥಗಳಲ್ಲಿ ಸಂಚರಿಸಿದವರಿಗೆ ಹಜ್ಜೆಹೆಜ್ಜೆಗೂ ಅಶ್ವಮೇಧ ಫಲವುಂಟಾಗಿ, ಪುರುಷಾರ್ಥಗಳು ಸಿದ್ಧಿಸುವುವು. ಇದರಲ್ಲಿ ಸಂದೇಹವಿಲ್ಲ, ಎಂದನು. ಈ ಮಾತನ್ನು ಕೇಳಿ ವಟುವು ಸಾಷ್ಟಾಂಗ ನಮಸ್ಕಾರಮಾಡಿ ಸ್ವಾಮಿಾ, ನಾನು ಕಾಡಿನಲ್ಲಿದ್ದೇನೆ. ಕಾಶಿಯಿರುವುದೆಲ್ಲಿ? ಆ ಆನಂದ ಕಾನನವು ಭೂಮಿಯಲ್ಲಿದೆಯೋ? ಸ್ವರ್ಗದಲ್ಲಿದೆಯೋ? ಪಾತಾಳದಲ್ಲಿದೆಯೋ? ಎಲ್ಲಿದೆ? ತಿಳಿಸಿರಿ. ನಾನು ಸಂಸಾರಸಾಗರದಲ್ಲಿ ಮುಳುಗಿದ್ದೇನೆ. ನನ್ನನ್ನು ಸಲಹಿ ಜ್ಞಾನೋಪದೇಶ ಮಾಡಿರಿ. ಕಾಶಿಗೆ ಯಾರು ಕರೆದುಕೊಂಡು ಹೋಗುವರು? ನೀವೇ ಅಲ್ಲಿಗೆ ಕರೆದುಕೊಂಡು ಹೋಗಿರಿ. ನಿಮಗೆ ಬೇರೆ ಕೆಲಸವಿದ್ದಲ್ಲಿ ನನಗೆ ಈಗ ಏಕೆ ಬುದ್ಧಿಯನ್ನು ಹೇಳಿದಿರಿ. ನಾನು ನಿಮ್ಮ ಬಾಲಕನು, ಎಂದು ವಂದಿಸಿದನು. ಆಗ ತಪಸ್ವಿಯು ಸಂತೋಷಿಸಿ ವಟುವೇ, ನಿನ್ನನ್ನು ಕಾಶಿಗೆ ಕರೆದುಕೊಂಡು ಹೋಗುವೆನು. ನಿನ್ನ ದೆಸೆಯಿಂದ ನನಗೆ ಯಾತ್ರಾಲಾಭವಾಗುವುದು. ಇದಕ್ಕಿಂತಲೂ ಲಾಭವು ಯಾವುದು? ಕಾಶೀವಾಸ ಮಾಡದಿರಲು ನರಜನ್ಮವು ವ್ಯರ್ಥವು. ನಿನಗಾಗಿ ಕಾಶೀಕ್ಷೇತ್ರದ ದರ್ಶನವಾಗುವುದು. ಹೋಗೋಣ ನಡೆ, ಎಂದು ಹೊರಟು ಆಗಲೇ ಮನೋವೇಗದಿಂದ

ಕಾಶಿಗೆ ಹೋಗಿ ಶ್ರೀ ವಿಶ್ವೇಶ್ವರನ ಹತ್ತಿರ ನಿಂತರು. ಆಗ ತಪಸ್ವಿಯು ಅಯ್ಯಾ ಬಾಲನೇ, ಈಗ ಇಲ್ಲಿ ಯಾತ್ರೆಮಾಡು, ಎಂದರು. ಬಾಲನು ಸ್ವಾಮಿಾ, ಈ ಯಾತ್ರೆಯ ಕ್ರಮವೆಂತು? ನಿರೂಪಿಸಿರಿ, ಎಂದು ಪ್ರಶ್ನೆಮಾಡಿದನು. ತಪಸ್ವಿಯು ಪಟುವೇ ಕೇಳು. ನಾವು ಮಣಿ ಕರ್ಣಿಕೆಯನ್ನು ನೋಡಿದೆವು. ಇಲ್ಲಿ ಸ್ನಾನಮಾಡಿ ವಿನಾಯಕನಂ ವಂದಿಸಿ ಪಾಂಚಾಳೇಶ್ವರನನ್ನು ಪೂಜಿಸಬೇಕು. ಬಳಿಕ ಮಹಾ ದ್ವಾರಕ್ಕೆ ಹೋಗಿ ವಿಶ್ವೇಶ್ವರದರ್ಶನ ಮಾಡಬೇಕು. ಬಳಿಕ ಮಣಿ ಕರ್ಣಿಕೆಯಲ್ಲಿ ಮತ್ತೆ ಸ್ನಾನಮಾಡಿ, ಮಣಿಕರ್ಣಿಕೇಶ್ವರನಂ ಪೂಜಿಸ ಬೇಕು. ಕಂಬಳೇಶ್ವರ, ವಾಸವೇಶ್ವರ, ಪರ್ವತೇಶ್ವರ, ಗಂಗಾಕೇಶವ, ಲಲಿತಾದೇವಿಯರನ್ನು ಅರ್ಚಿಸಬೇಕು. ಜರಾಸಂಧೇಶ್ವರ, ಸೋಮ ನಾಥ ಶೂಲಟಂಕೇಶ್ವರ, ವಾರಾಹೇಶ್ವರ, ಬ್ರಹ್ಮೇಶ್ವರ, ಅಗಸ್ತ್ಯೇಶ್ವರ ಕಶ್ಯಪರನ್ನೂ, ಹರಿಹರೇಶ್ವರ ವೈಜನಾಥರನ್ನೂ, ಧ್ರುವೇಶ್ವರನನ್ನೂ, ಗೋಕರ್ಣೇಶ್ವರನನ್ನೂ, ಹಾಟಕೇಶ್ವರ, ಕ್ಷೇಪತಟಾಕೇಶ್ವರ, ಕಿಂಕ ರೇಶ್ವರ, ಭಾರಭೂತೇಶ್ವರ, ಚಿತ್ರಗುಪ್ತೇಶ್ವರರನ್ನೂ, ಚಿತ್ರಘಂಟಿ ಯನ್ನೂ, ಪಾಶುಪತೇಶ್ವರನನ್ನೂ, ಕಾಳಿಕೆಯನ್ನೂ, ಪಿತಾಮಹೇಶ್ವರ ನನ್ನೂ, ಕಲ್ಲೇಶ್ವರ, ಚಂದ್ರೇಶ್ವರ, ವಿಶ್ವೇಶ್ವರರನ್ನೂ ಅರ್ಚಿಸಬೇಕು. ಬಳಿಕ ವಿಘ್ನೇಶ್ವರನನ್ನೂ, ಅಗ್ನೀಶ್ವರ, ನಾಗೇಶ್ವರ, ಹರಿಶ್ಚಂದ್ರರನ್ನೂ, ಚಿಂತಾಮಣಿ ವಿನಾಯಕನನ್ನೂ. ಸೋಮನಾಥ ವಿನಾಯಕನನ್ನೂ, ವಸಿಷ್ಠ, ವಾಮದೇವರನ್ನೂ ಪೂಜಿಸಬೇಕು. ಮುಂದೆ ತ್ರಿಸಂಧ್ಯೇಶ್ವರ ನನ್ನೂ, ಮನೋಹರನಾದ, ವಿಶಾಲಾಕ್ಷನಾದ ಧರ್ಮೇಶ್ವರನನ್ನೂ, ವಿಶ್ವಬಾಹು ವಿನಾಯಕನನ್ನೂ ಪೂಜಿಸಬೇಕು. ವೃದ್ಧಾದಿತ್ಯನನ್ನೂ, ಚತುರ್ವಕ್ತ್ರೇಶ್ವರನನ್ನೂ, ಬ್ರಹ್ಮೇಶ್ವರನನ್ನೂ ಅರ್ಚಿಸಬೇಕು. ಬಳಿಕ ಪ್ರಕಾಮೇಶ್ವರನನ್ನೂ, ಈಶಾನೇಶ್ವರನನ್ನೂ, ಚಂಡಿ ಚಂಡೀಶ್ವರರನ್ನೂ ಭಕ್ತಿಯಿಂದರ್ಚಿಸಬೇಕು. ಭವಾನೀಶಂಕರನನ್ನೂ, ಢುಂಡಿರಾಜ ನನ್ನೂ, ರಾಜರಾಜೇಶ್ವರನನ್ನೂ, ಲಾಂಗೂಲೇಶ್ವರನನ್ನೂ, ನಕುಲೇ ಶ್ವರರನ್ನೂ, ಪರಾನ್ನ ಪರದ್ರವ್ಯೇಶ್ವರನನ್ನೂ, ಮಹಾನಿಷ್ಕಳಂಕೇಶ್ವರ ನನ್ನೂ, ಮಾರ್ತಾಂಡೇಶ್ವರನನ್ನೂ, ಅಸುರೇಶ್ವರನನ್ನೂ, ತಾರಕೇಶ್ವರ ನನ್ನೂ, ಮಹಾಮನೋಹರನಾದ ಮಹಾಕಾಳೇಶ್ವರನನ್ನೂ, ದಂಡ

ಪಾಣಿಯುನ್ನೂ, ಮಹೇಶ್ವರನನ್ನೂ, ಮೋಕ್ಷೇಶ್ವರನನ್ನೂ, ವೀರಭದ್ರೇಶ್ವರನನ್ನೂ, ಅವಿಮುಕ್ತೇಶ್ವರನನ್ನೂ, ಮೋದಾದಿ ಪಂಚವಿನಾಯಕರನ್ನೂ, ಆನಂದಭೈರವನನ್ನೂ ಅರ್ಚಿಸಬೇಕು. ಬಳಿಕ ಮಹಾದ್ವಾರಕ್ಕೆ ಹೋಗಿ ಮದನಾರಿಯಾದ ವಿಶ್ವೇಶ್ವರನಂ ಪೂಜಿಸಬೇಕು. ಈ ರೀತಿಯಾಗಿ ಅಂತರ್ಗೃಹಯಾತ್ರೆ ಮಾಡಿ ಮುಕ್ತಿಮಂಟಪಕ್ಕೆ ಹೋಗಿ ಮುಂದಿನ ಶ್ಲೋಕವನ್ನು ಹೇಳಬೇಕು.

ಅಂತರ್ಗೃಹೇಷು ಯಾತ್ರೇಯಂ ಯಥಾವದ್ಯಾ ಮಯಾಕೃತಾ ।
ನ್ಯೂನಾತಿರಿಕ್ತಯಾ ಶಂಭುಃ ಪ್ರೀಯತಾ ಮನಯಾ ವಿಭುಃ ॥
ಇತಿ ಮಂತ್ರಂ ಸಮುಚ್ಚಾರ್ಯಕ್ಷಣಂ ವೈಮುಕ್ತಿಮಾನ್ ಭವೇತ್ ।
ವಿಶ್ರಮ್ಯಯಾ ಯಾದ್ಭವನಂ ನಿಷ್ಪಾಪಃ ಪುಣ್ಯಭಾಗ್ಭವೇತ್ ॥ ೧ ॥

ಎಂಬ ಮಂತ್ರವನ್ನು ಜಪಿಸಿ ವಿಶ್ವನಾಥನಂ ವಂದಿಸಿ, ಅಲ್ಲಿಂದ ದಕ್ಷಿಣ ಮಾನಸಯಾತ್ರೆಗೆ ಹೊರಡಬೇಕು. ಮಣಿಕರ್ಣಿಕೆಯು ಉತ್ತರ ವಾಹಿನಿಯಾದಲ್ಲಿ ಸ್ನಾನಮಾಡಿ ವಿಶ್ವನಾಥನನ್ನರ್ಚಿಸಿ ಯಾತ್ರೆಗೆ ಸಂಕಲ್ಪಿಸಬೇಕು. ಅಲ್ಲಿಂದ ಹೊರಟು ಮೋದಾದಿ ಪಂಚವಿನಾಯಕನಂ ಪೂಜಿಸಿ, ಧುಂಡಿರಾಜನನ್ನೂ, ಭವಾನೀಶಂಕರನನ್ನರ್ಚಿಸಿ, ದಂಡಪಾಣಿಯಂ ವಂದಿಸಿ, ವಿಶಾಲಾಕ್ಷನಂ ಭಕ್ತಿಯಿಂದರ್ಚಿಸಬೇಕು. ಧರ್ಮಕೂಪದಲ್ಲಿ ಸ್ನಾನಮಾಡಿ ಶ್ರಾದ್ಧವಿಧಿಯನ್ನು ಗೈದು ಧರ್ಮೇಶ್ವರನನ್ನೂ, ಗಂಗಾ ಕೇಶವರನ್ನೂ, ಲಲಿತಾದೇವಿಯನ್ನೂ ಅರ್ಚಿಸಿ, ಜರಾಸಂಧೇಶ್ವರನಂ ವಂದಿಸಿ, ಸೋಮನಾಥ ವರಾಹೇಶ್ವರರನ್ನು ಪೂಜಿಸಬೇಕು. ದಶಾಶ್ವಮೇಧ ತೀರ್ಥದಲ್ಲಿ ಸ್ನಾನಮಾಡಿ, ಪ್ರಯಾಗ ತೀರ್ಥದಲ್ಲಿ ಸ್ನಾನಮಾಡಬೇಕು. ಪ್ರಯಾಗೇಶ್ವರನನ್ನೂ, ದಶಾಶ್ವಮೇಧೇಶ್ವರನನ್ನೂ, ಶೀತಲೇಶ್ವರನನ್ನೂ ಅರ್ಚಿಸಬೇಕು. ದೇವಿಯನ್ನೂ, ಸರ್ವೇಶ್ವರನನ್ನೂ ಪೂಜಿಸುವುದು. ಧುಂಡಿರಾಜನನ್ನೂ, ತಿಲಭಾಂಡೇಶ್ವರನನ್ನೂ ಅರ್ಚಿಸುವುದು. ರೇವಾಕುಂಡದಲ್ಲಿಯೂ, ಮಾನಸಸರೋವರದಲ್ಲಿಯೂ ಸ್ನಾನಮಾಡಿ ಶ್ರಾದ್ಧತರ್ಪಣಗಳಂ ಮಾಡಬೇಕು. ಮಾನಸೇಶ್ವರನನ್ನರ್ಚಿಸಿ ಇಷ್ಟಾರ್ಥ ಹೊಂದಬೇಕು. ಕೇದಾರಕುಂಡದಲ್ಲಿ ಸ್ನಾನಮಾಡಿ ತರ್ಪಣಮಾಡಬೇಕು. ಕೇದಾರೇಶ್ವರನನ್ನೂ, ಹನುಮಂತೇಶ್ವರ, ರಾಮೇಶ್ವರರನ್ನೂ ಅರ್ಚಿಸಬೇಕು.

ಕೃಮಿಕುಂಡದಲ್ಲಿ ಸ್ನಾನಮಾಡಿ ಶ್ರಾದ್ಧಮಾಡಬೇಕು. ಸಿದ್ಧೇಶ್ವರನಂ ವಂದಿಸಿ, ಸ್ವಪ್ನಕುಂಡದಲ್ಲಿ ಸ್ನಾನಮಾಡಿ ಸ್ವಪ್ನೇಶ್ವರನಂ ಪೂಜಿಸಿ, ಸಂಗಮದಲ್ಲಿ ಸ್ನಾನಮಾಡಿ ಸಂಗಮೇಶ್ವರನನ್ನರ್ಚಿಸಿ, ಲೋಲಾರ್ಕ ಕೂಪದಲ್ಲಿ ಸ್ನಾನಮಾಡಿ ಅಲ್ಲಿ ಶ್ರಾದ್ಧಮಾಡಿ ಗತಿಪ್ರದೇಶ್ವರನನ್ನು ಅರ್ಚಿಸಬೇಕು. ಅರ್ಕವಿನಾಯಕನನ್ನೂ, ಪರಾಶರೇಶ್ವರನನ್ನೂ ಅರ್ಚಿಸುವುದು. ಸನ್ನಿಹತ್ಯಕುಂಡದಲ್ಲಿ ಸ್ನಾನಗೈದು, ಕುರುಕ್ಷೇತ್ರ ಕುಂಡದಲ್ಲಿ ಸ್ನಾನಮಾಡಬೇಕು. ಸುವರ್ಣಾದಿ ದಾನಮಾಡುವುದು. ಅಮೃತಕುಂಡದಲ್ಲಿ ಸ್ನಾನಮಾಡಿ ದುರ್ಗಾವಿನಾಯಕನನ್ನೂ, ದುರ್ಗಾ ದೇವಿಯನ್ನೂ, ಅರವತ್ತನಾಲ್ಕು ಯೋಗಿನಿಯರನ್ನೂ ಅರ್ಚಿಸಬೇಕು. ಕುಕ್ಕುಟದ್ವಿಜನಂ ವಂದಿಸಿ ಈ ಮಂತ್ರವನ್ನು ಹೇಳಬೇಕು.

ವಾರಾಣಸ್ಯಾಂ ದಕ್ಷಿಣೇ ಭಾಗೇ ಕುಕ್ಕುಟೋ ನಾಮ ವೈ ದ್ವಿಜಃ ||
ತಸ್ಯ ಸ್ಮರಣ ಮಾತ್ರೇಣ ದುಃಸ್ವಪ್ನಃ ಸುಖದೋ ಭವೇತ್ || ೧ ||

(ಕಾಶಿಯ ದಕ್ಷಿಣಭಾಗದಲ್ಲಿ ಕುಕ್ಕುಟದ್ವಿಜನಿರುವನು. ಈತ ನನ್ನು ಸ್ಮರಿಸಿದರೆ ದುಃಸ್ವಪ್ನವಾಗದೇ ಸುಸ್ವಪ್ನವಾಗುವುದು.) ಮುಂದೆ ಮಾಸೋಪವಾಸಿಯನ್ನು ಪೂಜಿಸಬೇಕು. ಗೌರೀ ಅಂಬೆಗೆ ಏಳು ಕವಡೆಗಳನ್ನು ಹಾಕಿ ವಂದಿಸಬೇಕು. ರೇಣುಕೆಯನ್ನರ್ಚಿಸ ಬೇಕು. ಶಂಖೋದ್ಧಾರಕುಂಡದಲ್ಲಿ ಶಂಖವಿಷ್ಣುವನ್ನು ಅರ್ಚಿಸ ಬೇಕು. ಕಾಮಾಕ್ಷೀಕುಂಡದಲ್ಲಿ ಸ್ನಾನಮಾಡಿ ಕಾಮಾಕ್ಷಿಯನ್ನು ಅರ್ಚಿಸಬೇಕು. ಅಯೋಧ್ಯಾಕುಂಡದಲ್ಲಿ ಸ್ನಾನಮಾಡಿ ಸೀತಾರಾಮ ಪೂಜೆಮಾಡಬೇಕು. ಲವಾಂಕುಶಕುಂಡದಲ್ಲಿ ಮಿಂದು ಲವಾಂಕುಶನಂ ಪೂಜಿಸಬೇಕು. ಲಕ್ಷ್ಮೀಕುಂಡದಲ್ಲಿ ಸ್ನಾನಮಾಡಿ ಲಕ್ಷ್ಮೀನಾರಾ ಯಣನನ್ನರ್ಚಿಸುವುದು. ಸೂರ್ಯಕುಂಡದಲ್ಲಿ ಸ್ನಾನಮಾಡಿ ಶ್ರಾದ್ಧ ಮಾಡುವುದು. ಸಾಂಬಾದಿತ್ಯನಂ ಪೂಜಿಸಿ ಮುಂದೆ ಹೋಗಿ ವೈಜನಾಥಕುಂಡದಲ್ಲಿ ಸ್ನಾನಮಾಡಿ ವೈಜನಾಥನನ್ನರ್ಚಿಸಿ, ಗೋದಾ ವರೀಕುಂಡದಲ್ಲಿ ಸ್ನಾನಮಾಡಿ ಗೌತಮೇಶ್ವರನನ್ನರ್ಚಿಸುವುದು. ಅಗಸ್ತ್ಯಕುಂಡದಲ್ಲಿ ಸ್ನಾನಮಾಡಿ ಅಗಸ್ತ್ಯೇಶ್ವರನನ್ನು ವಂದಿಸಿ ಶುದ್ಧ ಮನದಿಂದರ್ಚಿಸುವುದು. ಶುಕ್ರಕೂಪದಲ್ಲಿ ಸ್ನಾನಮಾಡಿ ಶುಕ್ರೇಶ್ವರ ನನ್ನರ್ಚಿಸುವುದು. ಮುಂದೆ ಅನ್ನಪೂರ್ಣೆಯನ್ನು ವಂದಿಸಿ ಪೂಜಿಸು

ವುದು. ಧುಂಡಿರಾಜನಂ ಪೂಜಿಸಿ, ಜ್ಞಾನವಾಪಿಯಲ್ಲಿ ಸ್ನಾನಮಾಡಿ ಜ್ಞಾನೇಶ್ವರನನ್ನರ್ಚಿಸಿ, ದಂಡಪಾಣಿಯನ್ನರ್ಚಿಸುವುದು. ಆನಂದ ಭೈರವನಂ ವಂದಿಸಿ, ಮಹಾದ್ವಾರಕ್ಕೆ ಬಂದು ಸಾಷ್ಟಾಂಗ ವಂದನೆ ಗೈದು ವಿಶ್ವನಾಥನನ್ನರ್ಚಿಸುವುದು. ಈ ರೀತಿಯಾದ ದಕ್ಷಿಣ ಮಾನಸ ಯಾತ್ರೆಯು ಶ್ರೇಷ್ಠವಾದುದು. ಈಗ ಉತ್ತರ ಮಾನಸಯಾತ್ರೆಯ ವಿಧಿಯಂ ಪೇಳುವೆನು. ಈ ಯಾತ್ರೆಗೆ ಸಂಕಲ್ಪಿಸಿ ಆನಂದದಿಂದ ಹೊರಡಬೇಕು. ಪಂಚಗಂಗೆಯಲ್ಲಿ ಸ್ನಾನಮಾಡಿದರೆ ಕೋಟಿ ಜನ್ಮದ ಪಾಪ ಪರಿಹಾರವಾಗುವುದು. ಇದು ಪುರಾಣಪ್ರಸಿದ್ಧವಾಗಿದೆ. ಪಂಚಗಂಗೆಯ ಹೆಸರನ್ನು ಕೇಳು, ಕಿರಣಾ, ಧೂತಪಾಪಾ, ಪುಣ್ಯ ಸರಸ್ವತೀ, ಗಂಗಾ, ಯಮುನಾ ಎಂಬೈದು ಹೆಸರುಂಟು. ಗಂಗೆಗೆ ತ್ರೇತಾಯುಗದಲ್ಲಿ ಧೂತಪಾಪಾ ಎಂದೂ, ದ್ವಾಪರದಲ್ಲಿ ಬಿಂದು ತೀರ್ಥವೆಂದೂ, ಕಲಿಯುಗದಲ್ಲಿ ಪಂಚಗಂಗೆಯೆಂದೂ ಹೆಸರಾಯಿತು. ಇದರಲ್ಲಿ ಸ್ನಾನಮಾಡಿದರೆ ಪ್ರಯಾಗದಲ್ಲಿ ಮಾಘ ಸ್ನಾನಮಾಡಿದ ಫಲದ ಕೋಟಿ ಗುಣ ಫಲವುಂಟಾಗುವುದು. ಪಂಚಗಂಗೆಯಲ್ಲಿ ಸ್ನಾನಮಾಡಿ ಬಿಂದುಮಾಧವನನ್ನೂ, ಗೋಪಾಲಕೃಷ್ಣನನ್ನೂ ಅರ್ಚಿಸ ಬೇಕು. ನೃಸಿಂಹಭುವನಕ್ಕೆ ಹೋಗಿ ಮಂಗಳಗೌರಿಯನ್ನು ವಂದಿಸಿ ಗಭಸ್ತ್ಯೇಶ್ವರನನ್ನು ಪೂಜಿಸಬೇಕು. ಮಯೂರಾದಿತ್ಯನಂ ಪೂಜಿಸಿ ಪಶ್ವೇಶ್ವರದರ್ಶನ ಮಾಡಬೇಕು. ಮುಕ್ತಿಮಂಟಪಕ್ಕೆ ಹೋಗಿ ಸಂಕಲ್ಪಮಾಡಿ ಉತ್ತರಮಾನಸಕ್ಕೆ ಹೊರಡಬೇಕು. ಅಲ್ಲಿಂದ ಹೊರಟು ಆದಿತ್ಯನಂ ಪೂಜಿಸಿ, ಅಮರ್ದಕೇಶ್ವರನನ್ನು ಪೂಜಿಸಬೇಕು. ಪಾಪ ಭಕ್ಷೇಶ್ವರನನ್ನೂ, ನವಗ್ರಹರನ್ನೂ, ಕಾಲಭೈರವ, ಕ್ಷೇತ್ರಪಾಲರ ನ್ನರ್ಚಿಸಬೇಕು. ಕಾಲಕೂಪದಲ್ಲಿ ಸ್ನಾನಗೈದು ಕಾಳೇಶ್ವರನನ್ನರ್ಚಿಸಿ ಹಂಸತೀರ್ಥದಲ್ಲಿ ಸ್ನಾನಮಾಡಿ ಶ್ರಾದ್ಧಾದಿಗಳನ್ನು ಮಾಡಬೇಕು. ಕೃತ್ತಿವಾಸೇಶ್ವರನನ್ನರ್ಚಿಸಿ, ಶಂಖವಾಪಿಯಲ್ಲಿ ಸ್ನಾನಮಾಡಿ ಆಚಮನ ಮಾಡಿ ರತ್ನೇಶ್ವರನನ್ನರ್ಚಿಸಿ, ಸೀತೇಶ್ವರ, ದಕ್ಷೇಶ್ವರ, ಚತುರ್ವಕ್ತ್ರೇ ಶ್ವರರನ್ನು ಅರ್ಚಿಸಿ, ವೃದ್ಧಕಾಳಕೂಪಕ್ಕೆ ಹೋಗಿ ಸ್ನಾನಮಾಡಿ ಕಾಳೇಶ್ವರನನ್ನೂ, ಅಪಮೃತ್ಯು ಈಶ್ವರನನ್ನೂ ಅರ್ಚಿಸಿ, ಮಂದಾಕಿನಿ ಯಲ್ಲಿ ಸ್ನಾನಮಾಡಿ ಮಧ್ಯಮೇಶ್ವರನನ್ನರ್ಚಿಸಿ, ಮುಂದೆ ಬಂದು

ಜಂಬುಕೇಶ್ವರನನ್ನೂ, ವಕ್ರತುಂಡನನ್ನೂ ಅರ್ಚಿಸಬೇಕು. ದಂಡಖಾತ ಕೂಪದಲ್ಲಿ ಸ್ನಾನಮಾಡಿ ಶ್ರಾದ್ಧಮಾಡಿ, ಮುಂದೆ ಭೂತಭೈರವ, ಈಶಾನೇಶ್ವರರನ್ನು ಅರ್ಚಿಸಿ, ಜೈಗೀಷವ್ಯ ಗುಹೆಯನ್ನು ವಂದಿಸಿ, ಮುಂದೆ ಬಂದು ಘಂಟಾಕುಂಡದಲ್ಲಿ ಸ್ನಾನಮಾಡಿ ವ್ಯಾಸೇಶ್ವರ, ಕಂದುಕೇಶ್ವರರನ್ನರ್ಚಿಸಿ, ಜ್ಯೇಷ್ಠವಾಪಿಯಲ್ಲಿ ಸ್ನಾನಮಾಡಿ ಜ್ಯೇಷ್ಠೇಶ್ವರನನ್ನರ್ಚಿಸುವುದು. ಮುಂದೆ ಸಪ್ತಸಾಗರದಲ್ಲಿ ಸ್ನಾನಮಾಡಿ ವಾಲ್ಮೀಕೇಶ್ವರನಂ ಪೂಜಿಸಿ, ಭೀಮೇಶ್ವರನನ್ನರ್ಚಿಸಬೇಕು. ಮಾತಾಪಿತೃಕುಂಡದಲ್ಲಿ ಶ್ರಾದ್ಧಮಾಡಿ, ಪಿಶಾಚಮೋಚನ ತೀರ್ಥಕ್ಕೆ ಹೋಗಿ ಕಪರ್ದೀಶ್ವರನನ್ನರ್ಚಿಸಿ, ಕರ್ಕೋಟವಾಪಿಯಲ್ಲಿ ಸ್ನಾನಮಾಡಿ ಕರ್ಕೋಟಕೇಶ್ವರನನ್ನರ್ಚಿಸಬೇಕು. ಮುಂದೆ ಈಶ್ವರಗಂಗೆಯಲ್ಲಿ ಸ್ನಾನಮಾಡಿ ಅಗ್ನೀಶ್ವರನಂ ಅರ್ಚಿಸುವುದು. ಚಕ್ರಕುಂಡದಲ್ಲಿ ಸ್ನಾನಮಾಡಿ ಶ್ರಾದ್ಧಮಾಡುವುದು. ಉತ್ತರಾರ್ಕನಂ ಪೂಜಿಸಿ, ಮತ್ಸ್ಯೋದರದಲ್ಲಿ ಸ್ನಾನಮಾಡಿ, ಓಂಕಾರೇಶ್ವರ, ಕಪಿಲೇಶ್ವರರಂ ಅರ್ಚಿಸಬೇಕು. ಋಣವಿಮೋಚನ ತೀರ್ಥದಲ್ಲಿಯೂ, ಪಾಪವಿಮೋಚನ ತೀರ್ಥದಲ್ಲಿಯೂ, ಕಪಾಲಮೋಚನ ತೀರ್ಥದಲ್ಲಿಯೂ ಸ್ನಾನಗೈದು, ಶ್ರಾದ್ಧ ತರ್ಪಣಗಳಂ ಮಾಡುವುದು. ಕುಲಸ್ತಂಭದ ಹತ್ತಿರ ಬಂದು ಭಕ್ತಿಯಿಂದರ್ಚಿಸುವುದು. ವೈತರಣೀ ತೀರ್ಥದಲ್ಲಿ ಸ್ನಾನಮಾಡಿ ಶ್ರಾದ್ಧಮಾಡುವುದು. ವಿಧಿಪೂರ್ವಕವಾಗಿ ಗೋದಾನಮಾಡಲು ಪುಣ್ಯವುಂಟು. ಕಪಿಲಧಾರೆಯಲ್ಲಿ ಸ್ನಾನಮಾಡಿ ಶ್ರಾದ್ಧಮಾಡುವುದು. ಕರುವಿನಿಂದ ಕೂಡಿದ ಹಸುವನ್ನು ದಾನಮಾಡಬೇಕು. ವೃಷಭಧ್ವಜನನ್ನರ್ಚಿಸಿ, ಜ್ವಾಲಾನರಸಿಂಹನಂ ವಂದಿಸಿ, ವರುಣ ಸಂಗಮಕ್ಕೆ ಬಂದು ಸ್ನಾನಮಾಡಿ ಶ್ರಾದ್ಧಮಾಡಬೇಕು. ಕೇಶವಾದಿತ್ಯನನ್ನರ್ಚಿಸಿ, ಆದಿಕೇಶವನನ್ನರ್ಚಿಸಿ, ಪ್ರಹ್ಲಾದತೀರ್ಥದಲ್ಲಿ ಸ್ನಾನಮಾಡಿ ಶ್ರಾದ್ಧಮಾಡುತ್ತಾ, ಪ್ರಹ್ಲಾದೇಶ್ವರನನ್ನು ಅರ್ಚಿಸಬೇಕು. ಕಪಿಲಧಾರೆಯಲ್ಲಿ ಸ್ನಾನಮಾಡಿ ತ್ರಿಲೋಚನೇಶ್ವರನನ್ನರ್ಚಿಸಿ, ಅಸಂಖ್ಯಾತೇಶ್ವರನನ್ನು ಅರ್ಚಿಸುವುದು. ಮುಂದೆ ಬಂದು ಮಹಾದೇವನನ್ನೂ, ದ್ರುಪದೇಶ್ವರನನ್ನೂ, ಗಂಗಾ, ಯಮುನಾ, ಸರಸ್ವತೀ ಲಿಂಗಗಳನ್ನೂ ಅರ್ಚಿಸಿ, ಕಾಮ್ಯತೀರ್ಥಕ್ಕೆ ಹೋಗಿ ಕಾಮ್ಯೇಶ್ವರನನ್ನರ್ಚಿಸಬೇಕು

ಗೋಪ್ರತಾರತೀರ್ಥದಲ್ಲಿಯೂ, ಪಂಚಗಂಗೆಯಲ್ಲಿಯೂ, ಮಣಿಕರ್ಣಿಕೆಯಲ್ಲಿಯೂ ಸ್ನಾನಮಾಡಿ, ಜಲಶಾಯಿಯಂ ಅರ್ಚಿಸಬೇಕು. ಹನುಮಂತನಂ ನಂದಿಸಿ, ಮೋದಾದಿ ಪಂಚವಿನಾಯಕರನ್ನು ವಂದಿಸುವುದು. ಅನ್ನಪೂರ್ಣೆಯನ್ನೂ, ಧುಂಡಿರಾಜನನ್ನೂ ಅರ್ಚಿಸಿ, ಜ್ಞಾನವಾಪಿಯಲ್ಲಿ ಸ್ನಾನಮಾಡಿ ಜ್ಞಾನೇಶ್ವರನನ್ನೂ, ದಂಡಪಾಣಿಯನ್ನೂ, ಮೋಕ್ಷಲಕ್ಷ್ಮೀವಿಲಾಸಿನಿಯನ್ನೂ, ಪಂಚಪಾಂಡವರನ್ನೂ, ದ್ರೌಪದೀದ್ರುಪದವಿನಾಯಕರನ್ನೂ, ಆನಂದಭೈರವನನ್ನೂ, ಅವಿಮುಕ್ತೇಶ್ವರನನ್ನೂ ಅರ್ಚಿಸಿ, ವಿಶ್ವನಾಥನ ಎದುರಿಗೆ ಬಂದು,

ಉತ್ತರಮಾನಸ ಯಾತ್ರೇಯಂ ಯಥಾವದ್ಯಾ ಕೃತಾಮಯಾ ||
ನ್ಯೂನಾತಿರಿಕ್ತಯಾಶಂಭುಃ ಪ್ರೀಯತಾ ಮನಯಾ ವಿಭುಃ || ೧ ||

(ಈ ಉತ್ತರಮಾನಸಯಾತ್ರೆಯು ನನ್ನಿಂದ ಮಾಡಲ್ಪಟ್ಟಿತು. ವಿಭುವಾದ ಪರಮೇಶ್ವರನು ಪ್ರಸನ್ನನಾಗಲಿ.) ಎಂಬೀ ಮಂತ್ರವಂ ಹೇಳಿ ಸಾಷ್ಟಾಂಗ ನಮಸ್ಕಾರಮಾಡಿ ಅಲ್ಲಿಂದ ಪಂಚಕ್ರೋಶ ಯಾತ್ರೆಗೆ ಹೊರಡಬೇಕು, ಎಂದು ಸಿದ್ಧರು ಈ ಚರಿತ್ರೆಯನ್ನು ಹೇಳಿದರು. ಇದನ್ನು ಕೇಳಲು ಪುರುಷಾರ್ಥಗಳೂ, ಇಹಪರ ಸುಖಗಳೂ ಉಂಟಾಗುವುವು, ಎಂದು ಸರಸ್ವತೀಗಂಗಾಧರನು ಹೇಳಿದನೆಂಬಲ್ಲಿಗೆ ಕಾಶೀಖಂಡದ ಯಾತ್ರಾನಿರೂಪಣೆಯೆಂಬ ನಲ್ವತ್ತೊಂದನೇ ಅಧ್ಯಾಯವು ಮುಗಿದುದು.

## ೪೨ ನೇ ಅಧ್ಯಾಯ.

ಬಳಿಕ ಸಂಕಲ್ಪಮಾಡಿ, ಸ್ವರ್ಗದ್ವಾರ ಭುವನಕ್ಕೆ ಹೋಗಿ ಗಂಗಾಕೇಶವರನ್ನರ್ಚಿಸಿ, ಹರಿಶ್ಚಂದ್ರ ಮಂಟಪಕ್ಕೆ ಹೋಗಬೇಕು. ಸ್ವರ್ಗದ್ವಾರವಾದ ಮಣಿಕರ್ಣಿಕಾ ತೀರ್ಥದಲ್ಲಿ ವಿಧಿಯಿಂದ ಸಂಕಲ್ಪಮಾಡಬೇಕು. ಮೊದಲು ದಿನ ಹವಿಸ್ಸನ್ನು ಭುಜಿಸಿರಬೇಕು. ಬೆಳಿಗ್ಗೆ ಶುಚಿಯಾಗಿ ಗಂಗೆಯಲ್ಲಿ ಸ್ನಾನಮಾಡಿ ಧುಂಡಿರಾಜನನ್ನು ಕುರಿತು ಪುನರ್ದರ್ಶನಕೊಡೆಂದು ಪ್ರಾರ್ಥಿಸಿ, ಗಂಗೆಯನ್ನು ವಂದಿಸಿ, ವಿಶ್ವನಾಥಾಲಯದಲ್ಲಿ ಭವಾನೀಶಂಕರನಂ ಪೂಜಿಸಬೇಕು. ಮತ್ತೆ ಮುಕ್ತಿ

ಮಂಟಪಕ್ಕೆ ಹೋಗಿ ವಂದಿಸಿ, ಧುಂಡಿರಾಜನಂ ಪೂಜಿಸಬೇಕು. ಮಹಾದ್ವಾರಕ್ಕೆ ಬಂದು ವಿಶ್ವೇಶ್ವರನನ್ನರ್ಚಿಸಿ, ಮೋದಾದಿ ಪಂಚ ವಿನಾಯಕರನ್ನೂ, ದಂಡಪಾಣಿಯನ್ನೂ ವಂದಿಸಬೇಕು. ಆನಂದ ಭೈರವನನ್ನೂ, ಮಣಿಕರ್ಣಿಕೆಯನ್ನೂ, ಈಶ್ವರಸಿದ್ಧಿವಿನಾಯಕರನ್ನೂ, ಅರ್ಚಿಸಬೇಕು. ಗಂಗಾಕೇಶವನಂ ಪೂಜಿಸಿ, ಲಲಿತಾದೇವಿಯಂ ವಂದಿಸಿ, ರಾಜಸಿದ್ಧೇಶ್ವರನನ್ನು ಧ್ಯಾನಿಸಿ, ದುರ್ಲಭೇಶ್ವರನನ್ನೂ, ಸೋಮನಾಥನನ್ನೂ ಅರ್ಚಿಸಬೇಕು. ಶೂಲಟಂಕೇಶ್ವರನನ್ನೂ, ವಾರಾಹೇಶ್ವರಿಯನ್ನೂ, ದಶಾಶ್ವಮೇಧವನ್ನೂ, ಬಂದೀದೇವಿಯನ್ನೂ, ಸರ್ವೇಶ್ವರನನ್ನೂ, ಕೇದಾರೇಶ್ವರನನ್ನೂ ಧ್ಯಾನಿಸಿ, ಹನುಮಂತೇಶ್ವರನನ್ನು ಅರ್ಚಿಸಬೇಕು. ಸಂಗಮೇಶ್ವರ ಲೋಲಾರ್ಕರನ್ನೂ, ಅರ್ಕ ವಿನಾಯಕರನ್ನೂ ಅರ್ಚಿಸಿ, ದುರ್ಗಾಕುಂಡದಲ್ಲಿ ಸ್ನಾನಮಾಡಬೇಕು. ಆರ್ಯಳಾದ ದುರ್ಗಾದೇವಿಯನ್ನೂ, ದುರ್ಗಾಗಣೇಶ್ವರನನ್ನೂ ಧ್ಯಾನಿಸಿ ಪುನರ್ದರ್ಶನಕೊಡೆಂದು ಪ್ರಾರ್ಥಿಸುವುದು. ಕರ್ದಮತೀರ್ಥದಲ್ಲಿ ಸ್ನಾನಮಾಡಿ ವಿಷ್ವಕ್ಸೇನ, ಈಶ್ವರ. ಕರ್ದಮೇಶ್ವರರನ್ನು ಅರ್ಚಿಸಬೇಕು. ಕರ್ದಮಕೂಪದಲ್ಲಿ ಸೋಮನಾಥನನ್ನರ್ಚಿಸಿ, ವಿರೂಪಾಕ್ಷ ಲಿಂಗವನ್ನರ್ಚಿಸಬೇಕು. ಮುಂದೆ ನೀಲಕಂಠನನ್ನರ್ಚಿಸಿ, ಭಕ್ತಿಯಿಂದ ಕರಗಳಂ ಜೋಡಿಸಿ ಕರ್ದಮೇಶ್ವರನಂ ಕುರಿತು ಪುನರ್ದರ್ಶನಕೊಡೆಂದು ಪ್ರಾರ್ಥಿಸಿ, ನಾಗನಾಥನಂ ಪೂಜಿಸಬೇಕು. ಮುಂದೆ ಚಾಮುಂಡಿಯನ್ನೂ, ಮೋಕ್ಷೇಶ್ವರನನ್ನೂ, ವರುಣೇಶ್ವರನನ್ನೂ ಪೂಜಿಸಬೇಕು. ವೀರಭದ್ರನನ್ನೂ, ದುರ್ಗಿಯನ್ನೂ, ವಿಕಟಾಕ್ಷದೇವಿಯನ್ನೂ, ಉನ್ಮತ್ತ ಭೈರವನನ್ನೂ, ವಿಮಳಾರ್ಜುನನನ್ನೂ, ಕಾಳಕೂಟದೇವನನ್ನೂ ಅರ್ಚಿಸಿ, ಮಹಾದೇವನನ್ನೂ, ನಂದಿಕೇಶ್ವರನನ್ನೂ, ಭೈರವನನ್ನೂ, ಭೃಂಗೇಶ್ವರನನ್ನೂ, ಗಣಪ್ರಿಯನನ್ನೂ ಅರ್ಚಿಸಬೇಕು. ವಿರೂಪಾಕ್ಷನಂ ವಂದಿಸಿ, ಯಕ್ಷೇಶ್ವರನನ್ನೂ, ವಿಮಲೇಶ್ವರನನ್ನೂ, ಭೀಮ ಚಂಡಶಕ್ತಿಯನ್ನೂ, ಚಂಡೀ ವಿನಾಯಕರನ್ನೂ, ರವಿರಕ್ತಾಕ್ಷ ಗಂಧರ್ವರನ್ನೂ, ಜ್ಞಾನೇಶ್ವರನನ್ನೂ, ಅಮೃತೇಶ್ವರನನ್ನೂ, ಸಾರ ಮನೋಹರ ಗಂಧರ್ವನನ್ನೂ ಭಕ್ತಿಯಿಂದರ್ಚಿಸುವುದು. ನರಕಾರ್ಣವವನ್ನು ದಾಟಲು ಭೀಮಚಂಡಿಯನ್ನು ಪುನರ್ದರ್ಶನಕೊಡೆಂದು

ಪ್ರಾರ್ಥಿಸುವುದು. ಏಕಪಾದ ವಿನಾಯಕನನ್ನೂ, ಭೈರವನನ್ನೂ, ಸಂಗಮೇಶ್ವರನನ್ನೂ, ಭೂತನಾಥ, ಸೋಮನಾಥ, ಕಾಲನಾಥ, ಕಪರ್ದೀಶ್ವರರನ್ನೂ ಅರ್ಚಿಸುವುದು. ನಾಗೇಶ್ವರ, ಕಾಮೇಶ್ವರ, ಗಣೇಶ್ವರ, ವಿಶ್ವೇಶ್ವರ, ಚತುರ್ಮುಖವಿನಾಯಕ, ದೇಹಲೀವಿನಾಯಕ, ಗಣೇಶಷೋಡಶಿಯನ್ನೂ, ಉದ್ದಂಡ ಗಣೇಶಷೋಡಶಿಯನ್ನೂ ಅರ್ಚಿಸಬೇಕು. ಉತ್ಕಲೇಶ್ವರ ಲಿಂಗವನ್ನೂ, ಏಕಾದಶರುದ್ರರನ್ನೂ ಅರ್ಚಿಸಬೇಕು. ತಪೋಭೂಮಿಗೆ ಹೋಗಿ ರಾಮೇಶ್ವರನನ್ನೂ, ಸೋಮನಾಥನನ್ನೂ ಅರ್ಚಿಸುವುದು. ಭರತೇಶ್ವರನನ್ನೂ, ಲಕ್ಷ್ಮೀಶ್ವರ, ಶತ್ರುಘ್ನೇಶ್ವರರನ್ನೂ, ಭೂಮಿದೇವಿಯನ್ನೂ, ನಕುಲೇಶ್ವರನನ್ನೂ ಅರ್ಚಿಸುವುದು. ಪುನರ್ದರ್ಶನಕೊಡೆಂದು ರಾಮೇಶ್ವರನನ್ನು ಅರ್ಚಿಸುವುದು. ಅಸಂಖ್ಯಾತ ವರುಣಾತೀರ್ಥವನ್ನೂ ವಂದಿಸಿ, ಅಸಂಖ್ಯಾತ ಲಿಂಗಗಳನ್ನು ಅರ್ಚಿಸಬೇಕು. ಮುಂದೆ ಸಿದ್ಧೇಶ್ವರನನ್ನೂ, ಮನೋಹರನಾದ ಪಶುಪಾಣಿ ವಿನಾಯಕನನ್ನೂ, ಸಿದ್ಧೇಶ್ವರನನ್ನೂ ಅರ್ಚಿಸುವುದು. ಶರಯೂಕೂಪದಲ್ಲಿಯೂ, ಕಪಿಲಧಾರೆಯಲ್ಲಿಯೂ ಸ್ನಾನ ಮಾಡಬೇಕು. ವೃಷಭಧ್ವಜನನ್ನೂ, ಜ್ವಾಲಾನರಸಿಂಹನನ್ನೂ ವಂದಿಸಿ ವರುಣಾಸಂಗಮದಲ್ಲಿ ಸ್ನಾನಮಾಡಿ ಶ್ರಾದ್ಧವನ್ನು ಮಾಡುವುದು. ಸಂಗಮೇಶ್ವರನನ್ನೂ, ಸರ್ವವಿನಾಯಕನನ್ನೂ, ಕೇಶವನನ್ನೂ, ಪ್ರಹ್ಲಾದೇಶ್ವರನನ್ನೂ ಅರ್ಚಿಸುವುದು. ಕಪಿಲಾತೀರ್ಥದಲ್ಲಿ ಸ್ನಾನ ಮಾಡಿ ತ್ರಿಲೋಚನೇಶ್ವರನನ್ನರ್ಚಿಸುವುದು. ಪಂಚಗಂಗಾತೀರದಲ್ಲಿ ಇರುವ ಮಹಾದೇವನನ್ನೂ, ಬಿಂದುಮಾಧವನನ್ನೂ, ಮಂಗಳಗೌರಿಯನ್ನೂ, ಗಭಸ್ತ್ಯೇಶ್ವರನನ್ನೂ, ವಸಿಷ್ಠ ವಾಮದೇವರನ್ನೂ, ಪರ್ವತೇಶ್ವರನನ್ನೂ, ಮಹೇಶ್ವರನನ್ನೂ, ಮುಂದೆ ವಿನಾಯಕನನ್ನೂ, ಸಪ್ತವರ್ಣೇಶ್ವರನನ್ನೂ, ಸರ್ವಗಣೇಶನನ್ನೂ ಅರ್ಚಿಸುವುದು. ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ ವಿಶ್ವೇಶ್ವರನಂ ನೆನೆದು, ಮಹಾದೇವನಂ ಅರ್ಚಿಸುವುದು. ಮುಕ್ತಿಮಂಟಪಕ್ಕೆ ಹೋಗಿ ವಂದಿಸಿ ವಿಷ್ಣುವನ್ನೂ, ದಂಡಪಾಣಿಯನ್ನೂ, ಧುಂಡಿರಾಜನನ್ನೂ, ಆನಂದ ಭೈರವನನ್ನೂ, ಆದಿತ್ಯೇಶ್ವರನನ್ನೂ, ಮೋದಾದಿ ಪಂಚವಿನಾಯಕರನ್ನೂ ಅರ್ಚಿಸುವುದು. ವಿಶ್ವೇಶ್ವರನಂ ಅರ್ಚಿಸಿ, ದೇವೀ ಸಮ್ಮುಖ

ದಲ್ಲಿ ಮೋಕ್ಷಲಕ್ಷ್ಮೀವಿಲಾಸಿನಿಯಂ ವಂದಿಸಿ ಮುಂದಿನ ಮಂತ್ರವಂ ಹೇಳುವುದು.

ಜಯ ವಿಶ್ವೇಶ ವಿಶ್ವಾತ್ಮನ್ ಕಾಶೀನಾಥ ಜಗತ್ಪತೇ ॥
ತ್ವತ್ಪ್ರಸಾನ್ಮಹಾದೇವ ಕೃತಾ ಕ್ಷೇತ್ರಪ್ರದಕ್ಷಿಣಾ ॥ ೧ ॥
ಅನೇಸ ಜನ್ಮಪಾಪಾನಿ ಕೃತಾನಿ ಮಮ ಶಂಕರ ॥
ಗತಾನಿ ಪಂಚಕ್ರೋಶಾತ್ಮಾ ಕೃತಾ ಲಿಂಗ ಪ್ರದಕ್ಷಿಣಾ ॥ ೨ ॥

ಜಯ ವಿಶ್ವಾತ್ಮನೇ, ವಿಶ್ವೇಶ್ವರನೇ, ಕಾಶೀನಾಥನೇ, ಜಗತ್ಪತಿಯೇ, ನಿನ್ನ ದಯೆಯಿಂದ ಕ್ಷೇತ್ರದ ಪ್ರದಕ್ಷಿಣೆಯು ಮಾಡಲ್ಪಟ್ಟಿತು. ॥ ೧ ॥ ನನ್ನ ಅನೇಕ ಜನ್ಮಗಳ ಪಾಪಗಳು ಪಂಚಕ್ರೋಶಸ್ಥವಾದ ಲಿಂಗಗಳ ಪ್ರದಕ್ಷಿಣೆಯಿಂದ ನಾಶವಾದುವು. ॥ ೨ ॥ ಎಂಬ ಮಂತ್ರವನ್ನು ಹೇಳಿ ಶಿವಧ್ಯಾನಮಾಡಿ ಮುಕ್ತಿಮಂಟಪಕ್ಕೆ ಬಂದು ಎಂಟು ಬಾರಿ ವಂದಿಸಬೇಕು. ಮೋಕ್ಷಲಕ್ಷ್ಮೀವಿಲಾಸಸ್ಥಾನದಲ್ಲಿ ಮುಕ್ತಿಮಂಟಪವಂ ವಂದಿಸಿ, ಆನಂದಮಂಟಪಕ್ಕೆ ಹೋಗಿ ಮುಂದೆ ವೈರಾಗ್ಯಮಂಟಪಕ್ಕೆ ಹೋಗಬೇಕು. ಇನ್ನೊಂದು ವಿಧ ಹೇಗೆಂದರೆ:—ನರನು ಶುಚಿಯಾಗಿ ಚಕ್ರಪುಷ್ಕರಣಿಯಲ್ಲಿ ಸ್ನಾನಮಾಡಿ ದೇವ ಪಿತೃತರ್ಪಣವಂ ಕೊಟ್ಟು ವಿಪ್ರರನ್ನು ಪೂಜಿಸಬೇಕು. ಅಲ್ಲಿಂದ ಹೊರಟು ದ್ರುಪದಾದಿತ್ಯೇಶ್ವರನನ್ನು ಪೂಜಿಸಿ, ದಂಪತೀಶ್ವರನನ್ನು ನಮಿಸಿ, ಶ್ರೀ ವಿಷ್ಣುವಂ ಪೂಜಿಸಬೇಕು. ದಂಡಪಾಣಿಯನ್ನು ವಂದಿಸಿ ಮಹೇಶ್ವರನಂ ಪೂಜಿಸಿ, ಅಲ್ಲಿಂದ ಹೊರಟು ಧುಂಡಿರಾಜನಂ ಅರ್ಚಿಸುವುದು. ಜ್ಞಾನವಾಪಿಯಲ್ಲಿ ಸ್ನಾನಮಾಡಿ ನಂದಿಕೇಶ್ವರನಂ ಅರ್ಚಿಸಿ, ತಾರಕೇಶ್ವರನನ್ನೂ, ಮಹಾಕಾಳೇಶ್ವರನನ್ನೂ ಪೂಜಿಸಿ, ದಂಡಪಾಣಿ ವಿನಾಯಕನನ್ನು ಅರ್ಚಿಸಬೇಕು. ವಿಶ್ವೇಶ್ವರಯಾತ್ರೆ ಮಾಡಬೇಕು. ಓಂಕಾರೇಶ್ವರನನ್ನು ನಿತ್ಯವೂ ಪೂಜಿಸಬೇಕು. ಪ್ರತಿಪದೆಯಲ್ಲಿ ಮತ್ಸ್ಯೋದರತೀರ್ಥದಲ್ಲಿ ಸ್ನಾನಮಾಡಿ ತ್ರಿಲೋಚನ ಮಹಾದೇವನನ್ನು ಅರ್ಚಿಸಬೇಕು. ಈ ಯಾತ್ರೆಯನ್ನು ಚೌತಿಯ ದಿನ ಮಾಡಬೇಕು. ಕಾಂಚೀವಾಸ ಲಿಂಗವನ್ನರ್ಚಿಸಬೇಕು. ಪಂಚಮಿಯಲ್ಲಿ ರತ್ನೇಶ್ವರನನ್ನೂ, ಷಷ್ಠಿಯಲ್ಲಿ ಚಂದ್ರೇಶ್ವರನನ್ನೂ, ಸಪ್ತಮಿಯಲ್ಲಿ ಕೇದಾರೇಶ್ವರನನ್ನೂ, ಅಷ್ಟಮಿಯಲ್ಲಿ ಧರ್ಮೇಶ್ವರನನ್ನೂ, ನವಮಿ

ಯಲ್ಲಿ ವಿಶ್ವೇಶ್ವರನನ್ನೂ ದರ್ಶನಮಾಡಿ, ದಶಮಿಯಲ್ಲಿ ಕಾಮೇಶ್ವರ ನನ್ನೂ, ಏಕಾದಶಿಯಲ್ಲಿ ವಿಶ್ವೇಶ್ವರನನ್ನೂ, ದ್ವಾದಶಿಯಲ್ಲಿ ಮಣಿ ಕರ್ಣಿಕೇಶ್ವರನನ್ನೂ, ತ್ರಯೋದಶಿಯಲ್ಲಿ ಅವಿಮುಕ್ತೇಶ್ವರನನ್ನೂ ಅರ್ಚಿಸುವುದು. ಚತುರ್ದಶಿಯಲ್ಲಿ ವಿಶ್ವೇಶ್ವರನಂ ಅರ್ಚಿಸಬೇಕು. ಕಾಶೀವಾಸಿಯಾದ ನರನು ಈ ರೀತಿಯಿಂದ ಯಾತ್ರೆ ಮಾಡಬೇಕು. ಇದು ಶುಕ್ಲಪಕ್ಷದಲ್ಲಿ ಮಾಡತಕ್ಕ ಕ್ರಮವು. ಕೃಷ್ಣಪಕ್ಷದಲ್ಲಿ ಯಾತ್ರಾ ಕ್ರಮವೆಂತೆಂದರೆ:—ಚತುರ್ದಶಿಯಲ್ಲಿ ಆರಂಭಿಸುವುದು. ವರುಣಾನದಿಯಲ್ಲಿ ಸ್ನಾನಮಾಡಿ ಶೈಲೇಶ್ವರದರ್ಶನಮಾಡಿ, ಸಂಗಮೇ ಶ್ವರನಂ ಅರ್ಚಿಸಿ, ಸಂಗಮದಲ್ಲಿ ಸ್ನಾನಮಾಡುವುದು. ಸ್ವರ್ಗತೀರ್ಥ ದಲ್ಲಿ ಸ್ನಾನಮಾಡಿ ಸ್ವರ್ಗೇಶ್ವರನನ್ನರ್ಚಿಸುವುದು. ಮಂದಾಕಿನಿಯಲ್ಲಿ ಮಧ್ಯಮೇಶ್ವರನನ್ನರ್ಚಿಸುವುದು. ಮಣಿಕರ್ಣಿಕೆಯಲ್ಲಿ ಸ್ನಾನಮಾಡಿ ಈಶಾನೇಶ್ವರನನ್ನರ್ಚಿಸಿ, ಹಿರಣ್ಯಗರ್ಭನನ್ನರ್ಚಿಸುವುದು. ಧರ್ಮ ಕೂಪದಲ್ಲಿ ಸ್ನಾನಮಾಡಿ ಗೋಪದ್ಮೇಶ್ವರನನ್ನರ್ಚಿಸುವುದು. ಕಪಿಲ ಧಾರೆಯಲ್ಲಿ ಸ್ನಾನಮಾಡಿ ವೃಷಭಧ್ವಜನನ್ನು ಸಪ್ತಮಿಯಲ್ಲಿ ಅರ್ಚಿಸಿ, ಉಪಶಾಂತಿಕೂಪದಲ್ಲಿ ಸ್ನಾನಮಾಡಿ ಉಪಶಾಂತೇಶ್ವರನಂ ಅರ್ಚಿಸು ವುದು. ಪಂಚಚೂಡ ಹ್ರದದಲ್ಲಿ ಸ್ನಾನಗೈದು ಶಿವನಂ ನೆನೆದು, ಜ್ಯೇಷ್ಠೇಶ್ವರನನ್ನರ್ಚಿಸುವುದು. ಚತುಸ್ಸಮುದ್ರಕೂಪದಲ್ಲಿ ಸ್ನಾನ ಗೈದು ಸಮುದ್ರೇಶ್ವರನನ್ನರ್ಚಿಸುವುದು. ದೇವಕೂಪದಲ್ಲಿ ಸ್ನಾನ ಮಾಡಿ ಶುಕ್ರೇಶ್ವರನಂ ಅರ್ಚಿಸುವುದು. ದಂಡಖಾತ ತೀರ್ಥದಲ್ಲಿ ಸ್ನಾನಮಾಡಿ ವ್ಯಾಘ್ರೇಶ್ವರನನ್ನರ್ಚಿಸುವುದು. ಶೌನಕೇಶ್ವರ ತೀರ್ಥ ದಲ್ಲಿ ಸ್ನಾನಮಾಡಿ ಶೌನಕೇಶ್ವರನನ್ನರ್ಚಿಸುವುದು. ಜಂಬುಕೇಶ್ವರ ತೀರ್ಥದಲ್ಲಿ ಸ್ನಾನಮಾಡಿ ಜಂಬುಕೇಶ್ವರನನ್ನು ಪೂಜಿಸುವುದು. ಶುಕ್ಲ ಕೃಷ್ಣಪಕ್ಷಗಳ ಚತುರ್ದಶಿಗಳಲ್ಲಿ ಈ ಲಿಂಗವನ್ನರ್ಚಿಸುವುದು. ಮೋಕ್ಷೇಶ್ವರ, ಪರ್ವತೇಶ್ವರ, ಪಶುಪತೀಶ್ವರ, ಗಂಗೇಶ್ವರ, ನರ್ಮ ದೇಶ್ವರ, ಭಕ್ತೇಶ್ವರ, ಗಭಸ್ತ್ಯೇಶ್ವರ, ಮಧ್ಯಮೇಶ್ವರ, ತಾರಕೇಶ್ವರ ಲಿಂಗಗಳನ್ನರ್ಚಿಸುವುದು. ನಿತ್ಯವೂ ಏಕಾದಶ ಲಿಂಗಗಳ ಯಾತ್ರೆ ಯನ್ನು ಮಾಡುವುದು. ಇವು ಯಾವವೆಂದರೆ:—ಅಗ್ನಿಧ್ರುವೇಶ ಊರ್ವಶೀಶ್ವರ, ನಕುಲೇಶ್ವರ, ಆಷಾಢೇಶ್ವರ, ಭಾರಭೂತೇಶ್ವರ,

ಲಾಂಗೂಲೇಶ್ವರ, ತ್ರಿಪುರಾಂತಕ, ಮನಃಪ್ರಕಾಮೇಶ್ವರ, ಪ್ರೀತೀ ಶ್ವರ, ಮಂದಾನಿಲೇಶ್ವರ, ತಿಲಪರ್ಣೇಶ್ವರನಂ ಅರ್ಚಿಸುವುದು. ಈಗ ಶಕ್ತಿ ದೇವತೆಯ ಯಾತ್ರೆಯು ಹೇಗೆಂದರೆ:—ಶುಕ್ಲಪಕ್ಷದ ತೃತೀಯೆ ಯಲ್ಲಿ ಎಂಟು ಯಾತ್ರೆ ಮಾಡುವುದು. ಗೋಪ್ರೇಕ್ಷ ತೀರ್ಥದಲ್ಲಿ ಸ್ನಾನ ಮಾಡಿ ಭಾಳನೇತ್ರೆಯನ್ನು ಭಕ್ತಿಯಿಂದರ್ಚಿಸಿ ಜ್ಯೇಷ್ಠವಾಪಿ ಯಲ್ಲಿ ಸ್ನಾನ ಮಾಡಿ ಜ್ಯೇಷ್ಠ ಗೌರಿಯನ್ನೂ ಶೃಂಗಾರ ಸೌಭಾಗ್ಯ ಗೌರಿಯನ್ನೂ ಅರ್ಚಿಸುವುದು. ವಿಶಾಲಗಂಗೆಯಲ್ಲಿ ಸ್ನಾನ ಮಾಡಿ ವಿಶಾಲ ಗೌರಿಯನ್ನರ್ಚಿಸುವುದು. ಲಲಿತಾ ತೀರ್ಥದಲ್ಲಿ ಸ್ನಾನಗೈದು ಲಲಿತಾ ದೇವಿಯನ್ನರ್ಚಿಸುವುದು. ಭವಾನೀ ತಿರ್ಥದಲ್ಲಿ ಸ್ನಾನ ಮಾಡಿ ಭವಾನಿಯಂ ಅರ್ಚಿಸುವುದು. ಬಿಂದು ತೀರ್ಥದಲ್ಲಿ ಸ್ನಾನ ಮಾಡಿ ಮಂಗಳ ಗೌರಿಯಂ ಅರ್ಚಿಸುವುದು. ಬಳಿಕ ಲಕ್ಷ್ಮೀ ಪೂಜೆ ಮಾಡಬೇಕು. ಚತುರ್ಥಿಯಲ್ಲಿ ಗಣಪತಿಯನ್ನು ವಿಘ್ನವಂ ಪರಿಹರಿಸೆಂದು ಪ್ರಾರ್ಥಿಸಿ ಮೋದಕವನ್ನು ನೈವೇದ್ಯ ಮಾಡುವುದು. ಮಂಗಳ ಭಾನುವಾರಗಳಲ್ಲಿ ಭೈರವ ಸ್ವಾಮಿಯ ದರ್ಶನ ಮಾಡಿ ಷಷ್ಠಿ ಯಲ್ಲಿ ಯಾತ್ರೆ ಮಾಡಬೇಕು. ಸಪ್ತಮಿ ಭಾನುವಾರ ಶ್ರೀ ಸೂರ್ಯ ನಾರಾಯಣ ಯಾತ್ರೆಯನ್ನೂ ಅಷ್ಟಮಿ ನವಮಿಗಳಲ್ಲಿ ಚಂಡಿಯ ಯಾತ್ರೆಯನ್ನೂ ಮಾಡುವುದು. ಪ್ರತಿ ದಿನವೂ ಮಾಡುವ ಅಂತರ್ಗೃಹ ಯಾತ್ರೆಯ ಕ್ರಮವು ಕಾಶೀ ಖಂಡದಲ್ಲಿ ಹೇಳಿದೆ. ಈ ರೀತಿ ವಿಶ್ವೇ ಶ್ವರ ಯಾತ್ರೆ ಮಾಡಿ ತಮ್ಮ ಹೆಸರಿನಿಂದ ಲಿಂಗವಂ ಪ್ರತಿಷ್ಠಿಸುವುದು. ಕಾಶೀ ಯಾತ್ರೆಯ ವಿಧಿಯು ಈ ರೀತಿಯಾಗಿದೆ. ನೀನು ಯಾತ್ರೆ ಗೈಯಲು ನಿನ್ನಿಷ್ಟ ಸಿದ್ಧಿಯಾಗುವುದು. ನೀನು ಮನಸ್ಸಿನಲ್ಲಿ ಶ್ರೀ ಗುರುವನ್ನು ಧ್ಯಾನಿಸಿದರೆ ಗುರುವು ನಿನಗೆ ಒಲಿಯುವನು ಎಂದು ಹೇಳಿ ಆ ತಾಪಸಿಯು ಅಂತರ್ಧಾನನಾದನು. ಬಳಿಕಾ ವಟುವು ಆಹಾ! ಈತನೇ ನನ್ನ ಗುರುವೂ ಅಥವಾ ಈಶ್ವರನೂ ಆಗಿರಬೇಕು. ನನ್ನಲ್ಲಿ ಬೇಗ ದಯೆಯುಳ್ಳವನಾದನು. ನನ್ನ ಕಾರ್ಯವು ಸಿದ್ಧಿಸುವುದು. ಗುರುವನ್ನು ನಾನು ಆರಾಧಿಸದಿದ್ದರೂ ಪ್ರೀತಿಯಿಂದ ನನಗೆ ದರ್ಶನ ವಿತ್ತನು. ಗುರುಭಕ್ತಿಯಿಂದ ಸಕಲೇಷ್ಟಗಳು ಉಂಟಾಗುವುವು ದೇವತೆಗಳು ತಮ್ಮನ್ನು ಪೂಜಿಸಿ ತೃಪ್ತಿಪಡಿಸಿದ ಹೊರತು ನಮ್ಮ

ಇಷ್ಟಾರ್ಥಗಳನ್ನು ಕೊಡರು. ಗುರುಕೃಪೆಯಿಂದ ಶಿವನು ಪ್ರಸನ್ನ ನಾಗುವನು. ಯಜ್ಞ, ದಾನ, ತಪಸ್ಸುಗಳು ಆಯಾಸಕಾರಿಗಳು. ಆಯಾಸವಿಲ್ಲದೆ ಗುರುವರನು ದರ್ಶನವಿತ್ತನು ಎನ್ನುತ್ತಾ ಗುರುವಂ ನೆನೆದು ಆತನು ವಿಧಿಯುಕ್ತವಾಗಿ ಭಕ್ತಿಯಿಂದ ಯಾತ್ರೆಗೈದನು. ನಂತರ ವ್ಯೋಮಕೇಶನು ಪ್ರಸನ್ನನಾಗಿ ಇವನೆದುರಿಗೆ ಬಂದು ನಿಂತನು ಬ್ರಹ್ಮಚಾರಿಯೇ ನಿನಗೇನು ಬೇಕು ? ಕೇಳೆನ್ನಲು ಈತನು ತನ್ನ ವೃತ್ತಾಂತವಂ ಹೇಳಿದನು. ಗುರುಗಳೂ ಗುರುಪತ್ನಿಯೂ ಗುರು ಪುತ್ರಿಯೂ ಕೇಳಿದ ಸಂಗತಿಯನ್ನು ವಿಜ್ಞಾಪಿಸಿದನು. ಆಗ ಶಂಕರನು ವಟುವೇ ನೀನು ಕೇಳಿದ ವರಗಳನ್ನು ಕೊಟ್ಟೆನು. ನೀನು ಸಕಲ ವಿದ್ಯಾ ಕುಶಲನಾಗು. ನೀನು ಗುರುಭಕ್ತಿಯುಳ್ಳವನಾದೆ. ಇದರಿಂದ ನಾನು ತೃಪ್ತನಾದೆನು. ನಿನಗೆ ಸಕಲ ವಿದ್ಯೆಗಳೂ ತಿಳಿಯಲಿ. ನೀನು ವಿಶ್ವಕ ರ್ಮನಾಗುವಿ.ನಿನಗೆ ಚತುರ್ವಿಧಪುರುಷಾರ್ಥಗಳುಂಟಾಗುವುವು. ಸರ್ವ ಸೃಷ್ಟಿಯನ್ನು ಮಾಡಲು ಶಕ್ತನಾದೆ. ವರವಿತ್ತೆನು ಎಂದನು. ಆ ತ್ವಷ್ಟೃ ಪುತ್ರನು ವರವನ್ನು ಹೊಂದಿ ತನ್ನ ಹೆಸರಿನಿಂದ ಲಿಂಗವನ್ನು ಸ್ಥಾಪಿಸಿ ಅಲ್ಲಿಂದ ಹೊರಟನು. ಶೂಲಪಾಣಿಯು ಪ್ರಸನ್ನನಾದುದರಿಂದ ಈತನು ಜಾಣ್ಮೆಯಿಂದ ಗುರುವು ಕೇಳಿದ ವಸ್ತುಗಳನ್ನೆಲ್ಲವನ್ನೂ ನಿರ್ಮಿಸಿ ತೆಗೆದು ಕೊಂಡು ಗುರುಸನ್ನಿಧಿಗೆ ಬಂದನು. ಗುರುಗಳಿಗೂ ಗುರುಪತ್ನಿಗೂ ಗುರುಪುತ್ರರಿಗೂ ಅವರು ಕೇಳಿದ ವಸ್ತುಗಳನ್ನು ಕೊಟ್ಟು ಗುರುಚರ ಣಗಳಿಗೆ ವಂದಿಸಿದನು. ಆಗ ಶ್ರೀ ಗುರುವು ಹರ್ಷಿಸಿ ಈತನನ್ನಾ ಲಿಂಗಿಸಿ ಜ್ಞಾನನಿಧಿಯಾದ ಶಿಷ್ಯನೇ ನಿನ್ನ ಭಕ್ತಿಗೆ ಮೆಚ್ಚಿದೆನು. ನೀನು ಸರ್ವ ವಿದ್ಯಾ ಕುಶಲನಾಗಿ ಅಷ್ಟೈಶ್ವರ್ಯವಂತನಾಗು. ನಿನ್ನ ವಂಶ ದಲ್ಲಿ ತ್ರಿಮೂರ್ತಿಗಳು ಹುಟ್ಟಲಿ ನಮಗೆ ಮನೆಯನ್ನು ರಚಿಸಿದೆ. ವಿಚಿತ್ರ ವಸ್ತುಗಳನ್ನು ಕೊಟ್ಟೆ. ಚಿರಂಜೀವಿಯಾಗು. ನಿನ್ನಹೆಸರು ಆಚಂದ್ರಾರ್ಕ ವಾಗಿರಲಿ. ನಿನ್ನ ಜಾಣ್ಮೆಯು ತ್ರಿಲೋಕಗಳಲ್ಲಿ ಹರಡಲಿ. ಚೌ ಷಷ್ಠಿ ವಿದ್ಯೆಗಳಲ್ಲಿ ಜ್ಞಾನಿಯಾದೆ. ಅಷ್ಟಸಿದ್ಧಿಗಳೂ ನಿನಗೆ ಉಂಟಾಗಲಿ. ನವನಿಧಿಗಳೂ ನಿನಗೆ ವಶವಾಗಲಿ. ಚಿಂತೆಯೂ ಕಷ್ಟವೂ ನಿನಗೆ ಎಂದಿಗೂ ಬಾರದು. ಎಂದು ವರವಿತ್ತರು. ಈ ಶಿಷ್ಯನು ಈ ರೀತಿ ವರವಂ ಪಡೆದು ಹೊರಟು ಹೋದನು ಎಂದು ಈಶ್ವರನು ಪಾರ್ವತಿಗೆ ಹೇಳಿ

ದನು. ಗುರುಭಕ್ತಿಯು ಸ್ವಭಾವವೇರೀತಿಯಾಗಿರುವುದು. ಗುರು ಭಕ್ತಿಯಿದ್ದವರಿಗೆ ಸರ್ವೇಷ್ಟಗಳು ಉಂಟಾಗುವುವು. ಈ ಭವಸಾಗರವಂ ದಾಟಲು ತ್ರಿಮೂರ್ತಿಗಳ ಅವತಾರರಾದ ಶ್ರೀ ಗುರುವರ್ಯರೇ ಸಮರ್ಥರಾಗಿರುವರು. ತ್ರಿಮೂರ್ತಿಗಳೂ ಇದಕ್ಕಾಗಿಯೇ ಗುರು ವನ್ನು ಭಜಿಸುವರು. ಗುರುವಿಲ್ಲದೆ ಸಿದ್ಧಿಯುಂಟಾಗದು.

ಯಸ್ಯ ದೇವೇ ಪರಾಭಕ್ತಿಃ ಯಥಾ ದೇವೇ ತಥಾ ಗುರೌ ॥
ತಸ್ಮೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥ ೧ ॥

ದೇವರಲ್ಲಿರುವಂತೆ ಭಕ್ತಿಯು ಗುರುವಿನಲ್ಲಿರಬೇಕು. ಮಹಾತ್ಮ ರಲ್ಲಿ ಇಂಥಾ ಭಕ್ತಿಯು ಪ್ರಕಾಶಿಸುತ್ತವೆ. ಎಂದು ಶಂಕರನು ಪಾರ್ವ ತಿಗೆ ಹೇಳಿದನೆಂದು ಶ್ರೀ ಗುರುವು ಆ ವಿಪ್ರನಿಗೆ ಹೇಳಿದರು. ಕತ್ತ ಲೆಗೆ ಸೂರ್ಯೋದಯವಾದಂತೆ ಚಿಂತೆಯೆಂಬ ಕತ್ತಲೆಗೆ ಗುರುಕೃಪೆಯೇ ಜ್ಯೋತಿಸ್ವರೂಪವಾದುದು. ಆ ದ್ವಿಜನು ಆನಂದದಿಂದ ಗುರುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಇಂಥಾ ಬುದ್ಧಿಯನ್ನು ಕೊಡುವ ತಾವು ದಯಾಮಯರಾಗಿದ್ದೀರಿ. ಅಪೂರ್ವ ಕಥೆಗಳನ್ನೂ ಕಾಶೀ ಯಾತ್ರಾ ವಿಧಿಯನ್ನೂ ನಿರೂಪಿಸಿದಿರಿ. ಇದನ್ನು ನಿರೂಪಿಸುವಾಗ ತಮ್ಮೊಡನೆ ನಾನೂ ಕಾಶಿಗೆ ಹೋಗಿದ್ದೆನು. ನೀವು ಕಾಶೀಯಾತ್ರೆಯ ವಿವರವನ್ನು ಹೇಳುವಾಗ ನಾನು ನಿದ್ರೆಯಲ್ಲಿದ್ದಂತೆ ಇದ್ದೆನು. ಜಯ ಪರಮ ಪುರುಷನೇ, ಪರಾತ್ಮನೆ, ಪರಮಹಂಸನೇ, ಭಕ್ತ ಜನ ಮನೋಹರನೇ ನಮ್ಮ ಪೂರ್ವಜರು ಸ್ತುತಿಸಿದ ಸ್ತೋತ್ರಗಳನ್ನು ಕೇಳಿರಿ.

ಆದೌ ಬ್ರಹತ್ವಮೇಕ ಮೇವ ಜಗತಾಂ ವೇದಾತ್ಮಮೂರ್ತಿಂ ವಿಭೋ ಪಶ್ಚಾತ್ ಕ್ಷೋಣಿತಲೇ ವಿನಾಶಿ ದಿತಿಜೇ ಕೃತ್ವಾವತಾರಂ ಪ್ರಭೋ ॥ ಹತ್ವಾ ದೈವ್ಯಮನೇಕ ಧರ್ಮ ರಚಿತಾ ಭೂತ್ವಾತ್ಮ ಜೋಽತ್ರೇ ಗೃಹೇ ವಂದೇಹಂ ನರಕೇಸರೀ ಸರಸ್ವತೀ ಶ್ರೀಪಾದ ಯುಗ್ಮಾಂಬುಜಂ ॥ ೧ ॥

ಭೂಪೇವಾಖಿಲಮಾನುಷಂ ವಿದುಜನಾ ಬಾಧಾಯಮಾನಃ ಕಲಿಃ ವೇದಾಯುಷ್ಯಮನೇಕ ವರ್ಣಮನುಜಾ ಭೇದಾದಿಭೂತೋ

ನ್ನತಿಂ ಥೇತ್ವಾ ಧರ್ಮತಮಾಂಧಕಾರಹರಣಜ್ಞಾನಪ್ರದೀಪೋಜ್ವಲಂ ವಂದೇಹಂ ನರಕೇಸರೀ ಸರಸ್ವತೀ ಶ್ರೀಪಾದಯುಗ್ಮಾಂಬುಜಂ ॥ ೨ ॥

ಧ್ಯಾತಸ್ತ್ವಂ ಹರಿ ಮನೇಕಯಾತಿ ಗುರವೇ ಜಾತಾಗ್ರುಜನ್ಮಾ ವಿಭೋಹೇತುಃ ಸರ್ವವಿಭೋ ಜನಾಯ ಹರಣಂ ಜ್ಯೋತಿಸ್ವರೂಪಂ ಜಗತ್ ॥ ಚಾತುರ್ಥಾಶ್ರಮುಸ್ಥಾಪಿತಂ ಕ್ಷಿತಿತಲೇ ಪಾತುಃ ಸದಾ ಸೇವ್ಯಯಂ ವಂದೇಹಂ ನರಕೇಸರೀ ಸರಸ್ವತೀ ಶ್ರೀಪಾದಯುಗ್ಮಾಂಬುಜಂ ॥ ೩ ॥

ಚರಿತಂ ಚಿತ್ರಮನಂತಕೀರ್ತಿಮತುಲಂ ಪರಿಭೂತಭೂಮಂಡಲೇ ಮೂಕಂ ವಾಕ್ಯಾದಿವಾಂಧಕಸ್ಯನಯನಂ ವಂಧ್ಯಾಂಚ ಪುತ್ರಂ ದದತ್ ಸೌಭಾಗ್ಯಂ ವಿಧವಾಚ ದಾಯಕಶ್ರಿಯಂ ದತ್ವಾಚ ಭಕ್ತಂ ಜನಂ ವಂದೇಹಂ ನರಕೇಸರೀ ಸರಸ್ವತೀ ಶ್ರೀಪಾದಯುಗ್ಮಾಂಬುಜಂ ॥ ೪ ॥

ದುರಿತಾಘೋರ ದರಿದ್ರುದಾವ ತಿಮಿರಹರಣಂ ಜಗಜ್ಯೋತಿಷಂ ಸುರಧೇನು ಸುರಪಾದಪಾರತಜನಾ ಕರುಣಾದಿ ಭಕ್ತಾರ್ತಿಹಂ ॥ ನರಸಿಂಹ ಸರಸ್ವತೀಶ ವಿಭೋ ಶರಣಾಗತಂ ರಕ್ಷಣಂ ವಂದೇಹಂ ನರಕೇಸರೀ ಸರಸ್ವತೀ ಶ್ರೀಪಾದಯುಗ್ಮಾಂಬುಜಂ ॥ ೫ ॥

ಗುರುಮೂರ್ತಿ ಚರಣಾರವಿಂದಯುಗಳಂ ಸ್ಮರಣಂ ಕೃತೋ ನಿತ್ಯಂ ಸೌಚರಿತಂ ಕ್ಷೇತ್ರಮನೇಕತೀರ್ಥ ಸಫಲಂ ಸರಿದಾದಿ ಭಾಗೀರಥೀ ತುರಗಾದಿ ಮೇಧಸಹಸ್ರುಗೌ ವಿದುಜನಾಃ ಸವ್ಯಾತ್‌ದದಂ ತ್ವಾತ್‌ಫಲಂ ವಂದೇಹಂ ನರಕೇಸರೀ ನರಹರೀ ಶ್ರೀಪಾದಯುಗ್ಮಾಂಬುಜಂ ॥ ೬ ॥

ನೋಶಕ್ಯಂ ತವನಾಮಮಂಗಲಸ್ತ್ರವಂ ವೇದಾಗಮಾಗೋಚರಂ ಪಾದದ್ವಂದ್ವ ಹೃದಯುಜ್ವರಾಂ ತರಜಲಂ ನಿಧಾಯತ್ವ ಪಿಪ್ರಾಕೃತಂ ಭೂಯೋ ಭೂಯಃ ಸ್ಮರನ್ನಮಾಮಿ ಮನಸಾ ಶ್ರೀ ಸದ್ಗುರೋ ಪಾಹಿಮಾಂ ವಂದೇಹಂ ನರಕೇಸರೀ ಸರಸ್ವತೀ ಶ್ರೀಪಾದಯುಗ್ಮಾಂಬುಜಂ ॥ ೭ ॥

ಭಕ್ತಾನಾಂ ತಾರಣಾಯ ಸರ್ವಜಗತಾಂ ದೀಕ್ಷಾಂದದನ್ ಯೋಗಿನಾಂ ಸುಕ್ಷೇತ್ರಂ ಸುರಗಾಣಗಸ್ಥಿತಂ ಪ್ರಮೋದತ್ವಾ

ಚತುಷ್ಕಾವುದಾ ಸ್ತುತ್ವಾ ಭಕ್ತಿ ಸರಸ್ವತೀ ಗುರುಪದಂ ಜಿತ್ವಾದ್ಯ ಘೋಷಾದಿಕಂ ವಂದೇಹಂ "ನರಕೇಸರೀ ಸರಸ್ವತೀ ಶ್ರೀಪಾದ ಯುಗ್ಮಾಂಬುಜಂ ॥ ೮ ॥

ಏವಂ ಶ್ರೀಗುರುನಾಥ ಅಷ್ಟಕಮಿದಂ ಸ್ತೋತ್ರಂ ಪಠೇನ್ನಿತ್ಯಶಃ ತೇಜೋವರ್ಚ ಬಲೋನ್ನತಿ ಶ್ರಿಯಕರಂ ಆಸುದ ಸಂವರ್ಧನಂ ಪುತ್ರಾಪತ್ಯಮನೇಕ ಸಂಪದಕರಂ ದೀರ್ಘಾಯುರಾರೋಗ್ಯದಂ ವಂದೇಹಂ ನರಕೇಸರೀ ಸರಸ್ವತೀ ಶ್ರೀಪಾದಯುಗ್ಮಾಂಬುಜಂ ॥ ೯ ॥

ಎಂದು ಸ್ತುತಿಸಿ ಸಾಷ್ಟಾಂಗ ವಂದನೆಗೈದು ಸದ್ಗದಿತ ಕಂಠನಾಗಿ ರೋಮಾಂಚವುಳ್ಳವನಾಗಿ ತ್ರಿಮೂರ್ತಿ ರೂಪನೇ! ಜಗದ್ಗುರುವೇ! ನರರೂಪ ಧಾರಕನೇ! ನನಗೆ ಪರಮಾರ್ಥವೂ ಚತುರ್ವಿಧ ಪುರುಷಾರ್ಥಗಳೂ ಉಂಟಾದುವು ನೀನು ವಿಶ್ವನಾಥನು ಸತ್ಯವು ಎಂದು ವಿಜ್ಞಾಪಿಸಿದನು. ಶ್ರೀ ಗುರುವು ಆ ವಿಪ್ರನಂ ಕುರಿತು ಅಯ್ಯಾ ವಿಪ್ರನೇ ನಿನಗೆ ಕಾಶೀ ಕ್ಷೇತ್ರವನ್ನು ತೋರಿಸಿದೆವು ನಿನ್ನ ವಂಶದಲ್ಲಿ ಇಪ್ಪತ್ತೊಂದು ತಲೆಯ ವರೆಗೆ ಎಲ್ಲರಿಗೂ ಯಾತ್ರಾ ಫಲವುಂಟಾಗುವುದು. ನೀನು ನಮ್ಮ ನಿಜಭಕ್ತನಾಗಿದ್ದೀಯೆ ನಮ್ಮ ಸೇವೆಯನ್ನು ಮಾಡುತ್ತಿರು. ನೀನು ಆ ಮ್ಲೇಂಛನಂ ವಂದಿಸಬೇಡ. ನಿನ್ನ ಸ್ತ್ರೀ ಪುತ್ರರನ್ನು ಕರೆದುಕೊಂಡು ಬಾ. ಎಂದಾಜ್ಞಾಪಿಸಿ ಶ್ರೀ ಗುರುವು ಮಠಕ್ಕೆ ಹೋದರು. ಗುರುದರ್ಶನದಿಂದ ಭಕ್ತರಿಗೆ ಆನಂದವಾಯಿತು ಸಾಯಂದೇವನು ಗುರು ನಿರೂಪ ಹೊಂದಿ ಹೊರಟು ಹೋಗಿ ತನ್ನ ಪತ್ನೀ ಪುತ್ರರೊಡನೆ ಹೊರಟು ಗಾಣಗಾಪುರಿಗೆ ಬಂದು ಶ್ರೀ ಗುರುವಂ ವಂದಿಸಿ ಭಕ್ತಿಯಿಂದ ಸ್ತುತಿಸಿದನು. ಹೇಗೆಂದರೆ:— ಚಂದ್ರಮೌಳಿಯೇ, ತ್ರಿಮೂರ್ತಿ ರೂಪನೇ, ಅಜ್ಞಾನಿಗಳಿಗೆ ನರನಾಗಿ ಕಾಣಿಸುವಿರಿ. ನಿಮ್ಮ ಮಹಿಮೆಯಂ ವರ್ಣಿಸಲು ಯಾರು ಶಕ್ತರು. ಆದಿ ಪುರುಷನೇ ಕೃಪಾನಿಧಿಯೇ ಚಂದ್ರೋದಯವಾಗಲು ಚಕೋರ ಪಕ್ಷಿಗೆ ಸಂತೋಷವಾಗುವಂತೆ ನಿಮ್ಮ ಚರಣಗಳನ್ನು ನೋಡಲು ಆನಂದವಾಯಿತು. ಪೂರ್ವ ಜನ್ಮದ ಪಾಪರಾಶಿಯು ಈಗ ನಾಶವಾಯಿತು. ಧನ್ಯನಾದೆನು. ಚಿಂತಾಮಣಿಯ ಸ್ಪರ್ಶದಿಂದ ಲೋಹವು ಚಿನ್ನವಾಗುವಂತೆಯೂ ಜಾಂಬೂ ನದಿಯಲ್ಲಿ ಬಿದ್ದ ಮಣ್ಣು ಚಿನ್ನ

ವಾಗುವಂತೆಯೂ ಮಾನಸ ಸರಸ್ಸಿಗೆ ಹೋದ ಕಾಗೆಯು ಹಂಸೆ ಯಾಗುವಂತೆಯೂ ತಮ್ಮ ದರ್ಶನದಿಂದ ಧನ್ಯನಾದೆನು.

ಗಂಗಾಪಾಪಂ ಶಶೀತಾಪಂ ದೈತ್ಯಂ ಕಲ್ಪತರುಸ್ತಥಾ ॥
ಪಾಪಂ ತಾಪಂ ಚ ದೈನ್ಯಂ ಚ ಹರಂತಿ ಗುರುದರ್ಶನಂ ॥ ೧ ॥

(ಗಂಗೆಯು ಪಾಪವನ್ನೂ ಚಂದ್ರನು ತಾಪವನ್ನೂ ಕಲ್ಪತರುವು ದೀನತ್ವವನ್ನೂ ಹೋಗಲಾಡಿಸುವುದು. ಗುರು ದರ್ಶನದಿಂದ ಪಾಪವೂ ತಾಪವೂ ದೈನ್ಯವೂ ಕೂಡ ಪರಿಹರಿಸುವುದು.) ದೈನ್ಯ ಕಾನನವು ಗುರು ದರ್ಶನದಿಂದ ಸಹ ಮೂಲವಾಗಿ ನಾಶವಾಗುವುದು. ಗುರುವು ಚತುರ್ವಿಧ ಪುರುಷಾರ್ಥಗಳನ್ನು ಕೊಡುವನೆಂದು ವೇದಗಳು ಹೇಳು ವುವು. ಇದು ಅನುಭವ ಸಿದ್ಧವಾಯಿತು ಎಂದು ಆನಂದದಿಂದ ಗಾನ ಮಾಡಿದನು. ಇವನು ಅನೇಕ ರಾಗಗಳಿಂದ ಗಾನ ಮಾಡಿದನು. ಕನ್ನಡ ರಾಗದಲ್ಲಿಯೂ ಗಾನಮಾಡಿದನು. ಹೇಗೆಂದರೆ:—

ರಾಗ (ಮೋಹನ) ಆದಿತಾಳ

ಶಿವನೆ ನಿಮ್ಮ ಸೇವಕನಯ್ಯ ಎಂಬಂತೆ.

ಕಂಡೆ ನಾನಿಂದು ಶ್ರೀ ಗುರುವರನಂ। ನೃಸಿಂಹ ಸರಸ್ವತಿಯಂ ॥ ಕಂಡೆನೀಗ ಭೂಮಂಡಲದೊಡೆಯನ ದಂಡ ಕಮಂಡಲ ಚಂದದಿ ಪಿಡಿದಿಹ ॥ ಪಲ್ಲವಿ ॥

ದುಷ್ಟ ಜನರುಗಳ ಶಿಕ್ಷಿಸುತ್ತಿರುವ ಶಿಷ್ಟರ ರಕ್ಷಿಸುವ । ಕಷ್ಟ ನಷ್ಟಗಳ ಪರಿಹರಿಸುವ ಇಷ್ಟಗಳನ್ನೀವ। ಸೃಷ್ಟಿಯೊಳ್ ಭಕ್ತರ ತಟ್ಟನೆ ಪೊರೆಯುವ ದಿಟ್ಟಶ್ರೀ ನರಹರಿ ಸರಸ್ವತಿ ಗುರುವನು ॥ ೧ ॥

ರಜಕನಾದವಗೆ ರಾಜ್ಯವನಿತ್ತು ನಿಜಸುಖವನೆ ಕೊಟ್ಟು । ಭಜಕ ರಾದವರೊಳು ನೀಮನವಿಟ್ಟು ಅಜ ಪದವಿಯ ಕೊಟ್ಟು । ಈ ಜಗದೊಳು ವರಗಾಣಗಾ ಪುರದೊಳು ಸೋಜಿಗದಿಂದಲೆ ತೇಜದಿ ತೋರುವ ॥ ೨ ॥

ದತ್ತಾತ್ರೇಯನೆಂಬ ಶ್ರೀಗುರುವರನೆ ನುತಿಸುವೆ ನಿನ್ನನ್ನೆ । ಸುತ್ತ ತೀರ್ಥಗಳ ಚರಿಸುತ್ತಿರುವ । ಎತ್ತಲು ವಾಸಿಸುವ । ಕೃತ್ತಿವಾಸ ವರ ಉತ್ತಮರೂಪನೆ । ಅತ್ರಿಯ ಕಟ್ಟಿಗೆ ಚಿಗುರಿಸಿ ತೋರಿದ ॥ ೩ ॥

ಪರಮ ಕರುಣಾಳು ಶ್ರೀಪಾದ ಗುರು । ಪೊರೆಯ್ಯೆ ನೀ ಬೇಗ । ವರನಾರಿಗಾಗ ಪತಿಯನು ಕೊಡುತ । ಹಿತಬೋಧೆಯ ನೀಡುತ । ಕರಕರೆ ಪರಿಹರಿಸುತ್ತಲೆ ಬೇಗನೆ ವರ ಸಿರಿ ಸುಖ ಜ್ಞಾನವ ನಿತ್ತಿಹ ॥ ೪ ॥

ಲಕ್ಷ ಭಜಕರಿಗೆ ಜ್ಞಾನವನಿತ್ತು ಆಕ್ಷಣ ಸುಖವಿತ್ತು । ಭಿಕ್ಷಾವೃತ್ತಿಗೆ ಪೋಗುತ್ತಲಾಗ ಈಕ್ಷಿಸಿ ವರ ಸತಿಯಂ । ಆ ಕ್ಷಣ ದೊಳು ಗೊಡ್ಡೆಮ್ಮೆಯ ಹಾಲನು ಈಕ್ಷಿಸಿ ಕರೆಸುತ ಮಹಿಮೆಯ ತೋರಿದ ॥ ೫ ॥

ಅಂದು ಜಡ ಬ್ರಾಹ್ಮಣನಾಗಲೆ ಬರಲು ಅಂದದೊಳವನಿಂದ । ಚಂದದಿಂದೈದು ಸಾಸಿರ ಜನರಂ । ಆನಂದದಿ ಭುಂಜಿಸಿದ । ಅಂದಾ ವಿಪ್ರರು ವಾದಕೆ ಬರಲು ಚಂದದಿ ಪತಿತಸಿಂದ್ವೇದವ ಬೋಧಿಸಿ ॥ ೬ ॥

ಎಂದೀ ಪರಿಯಿಂದ ಸ್ತುತಿಸಿದನು. ಈ ದ್ವಿಜನು ಭಾದ್ರಪದ ಶುದ್ಧ ಚತುರ್ದಶಿಯ ದಿನ ಬಂದು ಭಕ್ತಿಯಿಂದ ಗುರುಚರಣಗಳಲ್ಲಿ ವಂದಿಸಿ ಸದ್ಗದಿತ ಕಂಠನಾಗಿ ಸ್ತುತಿಸಿದನು. ಅಂಜಲಿಬದ್ಧನಾಗಿ ಚಂದ್ರ ಮೌಳಿಯೇ, ತ್ರಿಮೂರ್ತಿರೂಪನೇ, ನಿಮ್ಮ ಮಹಿಮೆಯು ತಿಳಿಯ ಲಾರದು. ಎಂದು ನುತಿಸಿದನು. ನಾಮಧಾರಕನೇ, ಕೇಳು. ಗುರುವು ನಿಮ್ಮ ಪೂರ್ವಜನಾದ ಆ ಸಾಯಂದೇವನನ್ನು ಕುರಿತು ಅವನ ಮನೆ ಯವರ ಕುಶಲವನ್ನು ಕೇಳಲು, ಆತನು ಗುರುಗಳಿಗೆ ಎಲ್ಲವನ್ನೂ ವಿಸ್ತಾರವಾಗಿ ನಿರೂಪಿಸಿದನು. ಆತನಿಗೆ ನಾಲ್ವರು ಪುತ್ರರಿದ್ದರು. ಹಿರಿಯ ಮಗನು ನಾಗನಾಥನು. ಇವನ ತಲೆಯಲ್ಲಿ ಗುರುವು ಹಸ್ತ ವನ್ನಿಟ್ಟು ಭಕ್ತನೇ, ನಿನ್ನ ಈ ಹಿರಿಯ ಮಗನು ಪೂರ್ಣಾಯುವಾಗಲಿ. ಇವನ ಸಂತತಿಯು ಬೆಳೆಯಲಿ. ಈತನು ನಮ್ಮ ಭಕ್ತನು. ನೀನು ಮ್ಲೇಂಛನನ್ನು ಸೇವಿಸದೇ ಧನಿಕನಾಗಿರು. ಮ್ಲೇಂಛನಂ ಸೇವಿಸಿದರೆ ಜೀವಕ್ಕೆ ಹಾನಿಯಾದೀತು. ಈ ನಿನ್ನ ಮಗನಾದ ನಾಗನಾಥನು ನಮ್ಮ ನಿಜಭಕ್ತನು. ಇವನು ಕೀರ್ತಿವಂತನಾಗುವನು. ನೀನು ಬೇಗ ಹೋಗಿ ಸಂಗಮದಲ್ಲಿ ಸ್ನಾನಮಾಡಿ ಬಾ, ಎಂದಾಜ್ಞಾಪಿಸಿದರು. ಆ ದಿನ ಗ್ರಾಮಸ್ಥರು ಶ್ರೀಗುರುವನ್ನು ಅರ್ಚಿಸಿದರು. ಸಾಯಂ ದೇವನು ತನ್ನ ಪುತ್ರಕಳತ್ರರೊಡನೆ ಸ್ನಾನಮಾಡಿ, ಅಶ್ವತ್ಥನಂ ಪೂಜಿಸಿ,

ಮಠಕ್ಕೆ ಬಂದನು. ಗುರುಗಳು ಎಲ್ಲಾ ವಿಪ್ರರನ್ನು ಕುರಿತು ಅಯ್ಯಾ, ನೀವು ಎಲ್ಲರೂ ಈ ದಿನ ಅನಂತಚತುರ್ದಶಿಯಾದುದರಿಂದ ಅನಂತನನ್ನು ಪೂಜಿಸಿರಿ, ಎಂದರು. ಬಳಿಕ ವಿಪ್ರರು ಸ್ವಾಮಿಾ ಗುರುವರ್ಯರೇ, ನೀವೇ ಅನಂತರೂಪರಾಗಿದ್ದೀರಿ. ತಮ್ಮ ಚರಣಸೇವೆಯೇ ವ್ರತವು, ಎಂದರು. ಆಗ ಗುರುವು ವಿಪ್ರರೇ, ಕೌಂಡಿನ್ಯ ಋಷೀಶ್ವರನು ಈ ಅನಂತನ ವ್ರತವನ್ನು ಮಾಡಿದನು, ಎಂದರು, ಬಳಿಕ ವಿಪ್ರರು ವಂದಿಸಿ ಸ್ವಾಮಿಾ, ಅನಂತನ ವ್ರತವನ್ನು ಹೇಗೆ ಆಚರಿಸಬೇಕು? ಪೂರ್ವದಲ್ಲಿ ಯಾರು ಈ ವ್ರತಮಾಡಿದರು? ಈ ಕಥಾಮೃತವನ್ನು ನಿರೂಪಿಸಿರಿ. ಈ ವ್ರತದಿಂದೇನು ಲಾಭವು, ಎಂದು ಕೇಳಿದರು. ಗುರುಗಳು ಈ ವ್ರತಮಹಿಮೆಯಂ ಹೇಳತೊಡಗಿದರು, ಎಂದು ಸರಸ್ವತೀಗಂಗಾಧರನು ಗುರುಚರಿತ್ರೆಯನ್ನು ಹೇಳಿದನು. ಇದನ್ನು ಕೇಳಿದವರು ಭವ ಸಾಗರವಂ ದಾಟುವರು, ಎಂಬಲ್ಲಿಗೆ ಗುರುಚರಿತ್ರಾಮೃತದಲ್ಲಿ ಶ್ರೀ ಕಾಶೀಕ್ಷೇತ್ರ ಮಹಿಮಾ ವರ್ಣನೆ ಎಂಬ ನಲವತ್ತೆರಡನೇ ಅಧ್ಯಾಯವು ಪೂರ್ಣವಾದುದು.

## ೪೩ ನೇ ಅಧ್ಯಾಯ.

ಶ್ರೀಗುರುವು ಅನಂತವ್ರತೋಪಾಖ್ಯಾನವಂ ಹೇಳುವರೆಂತೆಂದರೆ:— ವಿಪ್ರರೇ, ಕೇಳಿರಿ. ಪೂರ್ವದಲ್ಲಿ ಅನಂತವ್ರತವನ್ನು ಅನೇಕರು ಮಾಡಿದರು. ಯುಧಿಷ್ಠಿರನು ಈ ವ್ರತವನ್ನು ಮಾಡಿ ರಾಜ್ಯವನ್ನು ಹೊಂದಿದನು. ಹೇಗೆಂದರೆ:—ಕೌರವರು ಜೂಜಿನಲ್ಲಿ ಪಾಂಡವರಂ ಸೋಲಿಸಿ ರಾಜ್ಯವನ್ನಪಹರಿಸಿದರು. ಆಗ ಪಾಂಡವರು ೧೨ ವರ್ಷಗಳು ಕಾಡಿಗೆ ಹೋದರು. ಆ ಘೋರಾರಣ್ಯದಲ್ಲಿ ಪಾಂಡವರು ಬಂದು ಕಷ್ಟ ಪಡುತ್ತಾ ಶ್ರೀಹರಿಯನ್ನು ನೆನೆಯುತ್ತಿದ್ದರು. ಕೌರವರು ನಾನಾ ವಿಧದಿಂದ ಪಾಂಡವರಿಗೆ ಕಪಟದಿಂದ ವಿಘ್ನಮಾಡಿದರು. ಇವರಿಗೆ ತೊಂದರೆಯಂ ಕೊಡಲು ದೂರ್ವಾಸರನ್ನು ಕಳುಹಿಸಿದರು. ಶ್ರೀ ಹರಿಯು ಇವರನ್ನು ಎಲ್ಲಾ ಕಡೆಯಲ್ಲೂ ಪಾಲಿಸಿದನು. ಪಾಂಡವರು ನಾನಾ ವ್ರತಗಳನ್ನು ಮಾಡಿ, ನಾನಾ ತೀರ್ಥಗಳಲ್ಲಿ ಸಂಚರಿಸಿ ಕಷ್ಟ

ಪಡುತ್ತಿದ್ದರು. ಇವರ ಕಷ್ಟವಂ ನೋಡಿ ಭಕ್ತವತ್ಸಲನಾದ ನಾರಾಯಣನು ಪಾಂಡವರ ಬಳಿಗೆ ಬಂದನು. ಧರ್ಮಜನು ಇವನನ್ನು ನೋಡಿ ಸಾಷ್ಟಾಂಗ ನಮಸ್ಕಾರಮಾಡಿ ತನ್ನ ಕೇಶಗಳಿಂದ ಶ್ರೀಹರಿಚರಣ ಧೂಳಿಯನ್ನು ಗುಡಿಸಿದನು. ಅರ್ಘ್ಯ, ಪಾದ್ಯ, ಗಂಧಾಕ್ಷತ ಪುಷ್ಪಾದಿಗಳಿಂದ ಅರ್ಚಿಸಿದನು. ಜಯ ಭಕ್ತವತ್ಸಲನೇ, ಹೃಷೀಕೇಶನೇ, ಅನಂತನಾರಾಯಣನೇ, ಭವಸಾಗರತಾರಕನೇ, ಕೃಪಾಳುವೇ, ಲಕ್ಷ್ಮೀಶನೇ, ಕ್ಷೀರಾಬ್ಧಿವಾಸನೇ, ವಾಸುದೇವ ಪರಮಾತ್ಮನೇ, ಪರಂಜ್ಯೋತಿಯೇ, ಉತ್ಪತ್ತಿ, ಸ್ಥಿತಿ, ಲಯಗಳನ್ನು ಮಾಡುವವನೇ, ವಿಶ್ವರಕ್ಷಕನೇ, ಅಣುರೇಣು ತೃಣಕಾಷ್ಠಗಳಲ್ಲಿ ಪರಿಪೂರ್ಣನಾದವನೇ, ದುಷ್ಟನಿಗ್ರಹ ಶಿಷ್ಟರಕ್ಷಣ ಮಾಡುವವನೇ, ಭೂಭಾರಹರಣೆಗಾಗಿ ಅವತರಿಸಿರುವವನೇ, ಭಾರರೂಪನಾದ ನನ್ನನ್ನೇಕೆ ಇಟ್ಟಿರುವಿ? ಪಾಂಡವರೇ ನನ್ನ ಪ್ರಾಣವೆಂದು ಹೇಳಿಕೊಳ್ಳುತ್ತಾ ನಮ್ಮನ್ನು ಕಾಡಿನಲ್ಲಿಟ್ಟು ಕಷ್ಟಪಡಿಸುವಿಯೇಕೆ? ನೀನು ಕರುಣತೋರಿದವರನ್ನು ಸಲಹುತ್ತೀಯೆ. ನಮ್ಮನ್ನೇಕೆ ಕಷ್ಟಪಡಿಸುವಿ? ನಿನ್ನ ಹೊರತು ಯಾರಲ್ಲಿ ನಮ್ಮ ದುಃಖವನ್ನು ಹೇಳಿಕೊಳ್ಳೋಣ? ನಮ್ಮನ್ನೇಕೆ ಉಪೇಕ್ಷಿಸುವಿ? ಎಂದನು. ಬಳಿಕ ಭೀಮನು ಬಂದು ಕೃಷ್ಣನ ಚರಣಂಗಳಂ ಪಿಡಿದು ವಂದಿಸಿ ಸ್ವಾಮೀ, ನಿಮ್ಮ ಕೃಪೆಯಿದ್ದರೂ ನಾವು ಕಾಡಿನಲ್ಲಿ ಅತಿಯಾಗಿ ಕಷ್ಟಪಡುವೆವು. ನೀನು ಪಾಂಡವರಿಗೆ ಪ್ರಾಣದಂತಿರುವಿ. ನಮ್ಮ ಮಾನವನ್ನು ರಕ್ಷಿಸು, ಎಂದನು. ನಕುಲ ಸಹದೇವರೂ, ದ್ರೌಪದಿಯೂ ಶ್ರೀಕೃಷ್ಣನಂ ವಂದಿಸಿದರು. ನೀನೇ ನಮ್ಮ ರಕ್ಷಕನು. ಆದರೂ ನಾವು ಕಾಡಿನಲ್ಲಿರುವೆವು. ನಮ್ಮ ಹಗೆಗಳು ರಾಜ್ಯವಾಳುವರು. ನಮಗೆ ನಿನ್ನ ಕರುಣೆಯಿಂದುಪಯೋಗವೇನು? ನಾವು ಬಹಳವಾಗಿ ಕಷ್ಟಪಡುತ್ತಿದ್ದೇವೆ. ನಮಗೆ ಯಾವಾಗ ರಾಜ್ಯವು ಬರುವುದು? ಇದಕ್ಕೆ ಉಪಾಯವೇನು? ಎಂದು ಪ್ರಾರ್ಥಿಸಿದರು. ಆಗ ಶ್ರೀಹರಿಯು ಧರ್ಮಜನೇ, ಕೇಳು. ಉತ್ತಮವಾದ ಅನಂತವ್ರತವನ್ನು ನೀನು ಮಾಡು. ಕಲಾ, ಕಾಷ್ಠ, ಮುಹೂರ್ತ, ದಿನ, ರಾತ್ರಿ, ಪಕ್ಷಮಾಸ, ಯುಗ, ಕಲ್ಪಗಳೂ, ಚಂದ್ರಸೂರ್ಯರೂ, ಅಷ್ಟವಸುಗಳೂ,

ದ್ವಾದಶಾದಿತ್ಯರೂ, ಏಕಾದಶರುದ್ರರೂ, ಸಪ್ತಸಮುದ್ರಗಳೂ, ಸಪ್ತ ಋಷಿಗಳೂ, ಪರ್ವತಗಳೂ, ವೃಕ್ಷವೂ, ಆಕಾಶವೂ, ನಕ್ಷತ್ರಗಳೂ, ಅನಂತನೂ ನಾನೇ ಆಗಿದ್ದೇನೆ. ಅಣುರೇಣು ತೃಣಕಾಷ್ಠಗಳಲ್ಲಿ ಪೂರ್ಣನಾಗಿರುವೆನು. ಧರ್ಮಜನೇ, ನಾನೇ ಅನಂತನೆಂದು ತಿಳಿ. ವಿಧಿಪೂರ್ವಕವಾಗಿ ಈ ವ್ರತವನ್ನು ಮಾಡು, ಎಂದನು. ಆಗ ಧರ್ಮಜನು ಕೈಗಳನ್ನು ಜೋಡಿಸಿ ಸ್ವಾಮಿ, ಆ ವ್ರತ ವಿಧಿಯೇನು? ದಾನವೇನು? ಪೂಜೆಯು ಹೇಗೆ? ಯಾವ ದಿನ ಈ ವ್ರತಮಾಡಬೇಕು? ಎಂಬುದನ್ನು ವಿಸ್ತಾರವಾಗಿ ನಿರೂಪಿಸಿರಿ, ಎಂದು ಕೇಳಿದನು. ಆಗ ಕೃಷ್ಣನು ಧರ್ಮಜನೇ, ಈ ವ್ರತವನ್ನು ಭಾದ್ರಪದ ಶುದ್ಧ ಚತುರ್ದಶಿಯ ದಿನ ಮಾಡಬೇಕು. ಇದರಿಂದ ರಾಜ್ಯಲಾಭವಾಗುವುದು. ಕೃತ ಯುಗದಲ್ಲಿ ಸುಮಂತನೆಂಬ ವಿಪ್ರನು ಈ ವ್ರತವಂ ಮಾಡಿದನು. ವಸಿಷ್ಠಗೋತ್ರದವನಾದಿವನು ಭೃಗುಕನ್ಯೆಯಾದ ದೀಕ್ಷಾ ಎಂಬ ಪತ್ನಿಯನ್ನು ವರಿಸಿದ್ದನು. ಇವನಿಗೆ ಸುಶೀಲೆಯೆಂಬ ಪುತ್ರಿಯಿದ್ದಳು. ಈಕೆಯು ಮನೆಯನ್ನು ಅಲಂಕರಿಸುತ್ತಾ, ಪಂಚವರ್ಣದ ರಂಗವಲ್ಲಿ ಗಳನ್ನು ಹಾಕುತ್ತಾ, ಸ್ವಸ್ತಿಕ, ಶಂಖ, ಪದ್ಮ, ಚಕ್ರ, ಗದಾದಿಗಳನ್ನು ರಚಿಸುತ್ತಾ ದೇವತಾರ್ಚನೆಗೆ ಉಪಕರಣಗಳನ್ನು ಒದಗಿಸುತ್ತಿದ್ದಳು. ಹೀಗಿರಲೊಂದು ದಿನ ಸುಮಂತಪತ್ನಿಯು ಮೃತಳಾದಳು. ಸುಮಂತ ನಿಗೆ ಭಾರ್ಯಾವಿಯೋಗದಿಂದ ಸರ್ವಕರ್ಮಗಳೂ ನಿಂತವು. ಇದಕ್ಕಾಗಿ ಮತ್ತೊರ್ವ ನಾರಿಯನ್ನು ವರಿಸಿದನು. ಈಕೆಯು ಕರ್ಕಶಿಯೆಂಬ ಹೆಸರುಳ್ಳವಳಾಗಿಯೂ, ದುಶ್ಶೀಲೆಯಾಗಿಯೂ, ನಿತ್ಯವೂ ಜಗಳವಾಡು ವವಳಾಗಿದ್ದಳು. ಮಗಳಾದ ಸುಶೀಲೆಯು ಪ್ರಾಪ್ತಯೌವನೆ ಯಾದಳು. ಈಕೆಯನ್ನು ಯೋಗ್ಯ ವರನಿಗೆ ಕೊಟ್ಟು ಮದುವೆಮಾಡ ಬೇಕೆಂದು ಯೋಚಿಸುತ್ತಿದ್ದನು. ಹೀಗಿರಲೊಂದು ದಿನ ಕೌಂಡಿನ್ಯ ನೆಂಬ ಋಷಿಯು ಬಂದು, ಈ ಕನ್ಯೆಯನ್ನು ತನಗೆ ಮದುವೆಮಾಡಿ ಕೊಡೆಂದು ಕೇಳಿದನು. ಸುಮಂತನು ಈತನಿಗೆ ಮಗಳನ್ನು ಕೊಟ್ಟು ಮದುವೆಗೈದನು. ಆಷಾಢ, ಶ್ರಾವಣ ಮಾಸಗಳಲ್ಲಿ ಈ ಕೌಂಡಿನ್ಯನು ಮಾವನ ಮನೆಯಲ್ಲಿದ್ದನು. ಈ ಕರ್ಕಶಿಯು ಈ ಸವತಿಯ ಮಗಳಲ್ಲಿ ವೈರವನ್ನಿಟ್ಟಿದ್ದಳು. ಕೌಂಡಿನ್ಯನು ತನ್ನ ಆಶ್ರಮಕ್ಕೆ ಸತಿಯೊಡನೆ

ಹೊರಟು ಹೋಗುವೆನೆಂದು ಹೇಳಿದನು. ಸುಮಂತನು ಅತಿಯಾಗಿ ದುಃಖಿಸಿದನು. ಈ ಕರ್ಕಶಿಯು ನನಗೆ ಹೆಂಡತಿಯಲ್ಲ, ವೈರಿಯು. ಈಗ ಮುದ್ದು ಮಗಳು ದೂರ ಹೊರಡುವಳು. ಎಂಥಾ ಪಾಪಿಯನ್ನು ಲಗ್ನವಾದೆನು! ಯಾರ ಮಂದಿರದಲ್ಲಿ ಶಾಂತಳಾದ ಕಾಂತೆಯಿಲ್ಲವೋ ಅವರಿಗೆ ಕಾಡು ದೂರದಲ್ಲಿಲ್ಲ. ನಾನು ಸಂಸಾರಸಾಗರದಲ್ಲಿ ಮುಳುಗಿ ದೆನು. ನನ್ನ ಕರ್ಮವು ನಡೆಯದು. ಈ ಮಗಳೂ, ಅಳಿಯನೂ ಹತ್ತಿರದಲ್ಲಿರಲು ನನಗೆ ಸಂತೋಷವು, ಎಂದು ಚಿಂತಿಸಿದನು. ಕೌಂಡಿನ್ಯನು ಅಯ್ಯಾ, ಇಬ್ಬರು ತಪಸ್ವಿಗಳು ಒಂದು ಮನೆಯಲ್ಲಿರ ಬಾರದು. ಇದರಿಂದ ಧರ್ಮಹಾನಿಯಾಗುವುದು. ಬೇರೆ ಸ್ಥಳಕ್ಕೆ ಹೋಗಿ ಅಲ್ಲಿ ತಪಸ್ಸುಮಾಡುವೆನು. ನಿಮ್ಮ ಮನೆಗೆ ಹತ್ತಿರದಲ್ಲಿಯೇ ಆಶ್ರಮ ಮಾಡಿಕೊಂಡಿದ್ದು ಆಗಾಗ ನಿಮ್ಮ ದರ್ಶನಕ್ಕೆ ಬರುವೆ ನೆಂದನು. ಆಗ ಸುಮಂತನು ಕೌಂಡಿನ್ಯನೇ, ಹನ್ನೆರಡು ದಿನಗಳಿದ್ದು ಬಳಿಕ ಹೊರಡೆನ್ನಲು, ಇವನು ಅದರಂತೆಯೇ ಇದ್ದು ಮೂರನೇ ದಿನ ಹೊರಡುವವನಾದನು. ಆಗ ಸುಮಂತನು ಕರ್ಕಶಿಯೊಡನೆ ಎಲೌ ಸ್ತ್ರೀಯಳೇ, ಮಗಳು ಪತಿಯೊಡನೆ ಬೇರೆ ಹೊರಡುವಳು! ಈ ದಂಪತಿಗಳಿಗೆ ಔತಣ ಮಾಡಿಸಬೇಕು. ಗೋಧಿಯನ್ನು ಕೊಡೆಂದನು. ಆಗ ಕರ್ಕಶಿಯು ಓಡಿ ಹೋಗಿ ಬಾಗಿಲನ್ನು ಹಾಕಿಕೊಂಡು ಅಗುಳಿ ಹಾಕಿದಳು. ಏನು ಮಾಡಿದರೂ ಬಾಗಿಲನ್ನು ತೆರೆಯಲಿಲ್ಲ. ಸುಮಂತನು ತಲೆಯನ್ನು ಹೊಡೆದುಕೊಂಡು ಅಡಿಗೆ ಮನೆಗೆ ಹೋಗಿ ಗೋಧಿಯನ್ನು ತಂದು ಮಗಳಿಗೆ ಕೊಟ್ಟು ಕಳುಹಿಸಿದನು. ಕೌಂಡಿನ್ಯನು ಸತಿಯೊಡನೆ ರಥದಲ್ಲಿ ಕುಳಿತು ಹೊರಟನು. ಮಧ್ಯಾಹ್ನ ದಲ್ಲಿ ಒಂದು ನದಿಯಲ್ಲಿ ನಿತ್ಯಕರ್ಮವಂ ಮಾಡುತ್ತಿದ್ದನು. ಆ ನದೀ ತೀರದಲ್ಲಿ ಸ್ತ್ರೀಯರು ರಕ್ತವಸ್ತ್ರವನ್ನುಟ್ಟು ಅಲ್ಲಿ ಬೇರೆ ಬೇರೆಯಾಗಿ ಅನಂತನಂ ಅರ್ಚಿಸುತ್ತಿದ್ದರು. ಈ ಸುಶೀಲೆಯು ಅಲ್ಲಿಗೆ ಹೋಗಿ ಎಲೌ ಸ್ತ್ರೀಯರಿರಾ, ನೀವು ಈಗ ಯಾವ ವ್ರತವಂ ಮಾಡುವಿರಿ? ಎಂದು ಕೇಳಿದಳು. ಆಗ ಅವರು ಅಮ್ಮಾ, ನಾವು ಅನಂತವ್ರತ ಮಾಡುವೆವು. ಇದನ್ನು ಮಾಡಿದರೆ ಸಕಲೇಷ್ಟಗಳುಂಟಾಗುವುವು, ಎಂದರು. ಆಗ ಸುಶೀಲೆಯು ಅಮ್ಮಾ, ಈ ವ್ರತವಿಧಿಯನ್ನು ನನಗೆ

ವಿಸ್ತಾರವಾಗಿ ಹೇಳಿರಿ, ಎಂದು ಕೇಳಿದಳು. ಆಗ ಅವರು ಸುಶೀಲೆಯೇ ಕೇಳು. ಭಾದ್ರಪದ ಶುಕ್ಲ ಚತುರ್ದಶಿಯಲ್ಲಿ ಈ ವ್ರತಮಾಡಬೇಕು. ಕೆಂಪಾದ ಪಟ್ಟೆಯ ದಾರದಿಂದ ಅನಂತದಾರ ಮಾಡಿ ನದಿಯಲ್ಲಿ ಸ್ನಾನ ಮಾಡಿ ದಿವ್ಯಾಂಬರವನ್ನುಟ್ಟು ಕುಂಕುಮವನ್ನಿಟ್ಟು ಗಂಗಾ ಯಮುನೆ ಎಂಬ ಎರಡು ಕಲಶಗಳಲ್ಲಿ ನೀರನ್ನು ತುಂಬಿ ತಂದು ಪಂಚಪಲ್ಲವ ರತ್ನ ಸಹಿತವಾಗಿ ಷೋಡಶೋಪಚಾರ ಪೂಜೆಮಾಡಬೇಕು. ಶೇಷರೂಪಿ ಯಾದ ದರ್ಭಗ್ರಂಥಿಯನ್ನು ಅರ್ಚಿಸಬೇಕು. ಎರಡು ಕಲಶಗಳಲ್ಲಿ ನೂತನ ವಸ್ತ್ರವನ್ನಿಟ್ಟು ಅಷ್ಟದಳ ಪದ್ಮವಂ ಬರೆದು ಕಲಶದ ಮೇಲಿಡ ಬೇಕು. ಇದರ ಮುಂದೆ ಪಂಚವರ್ಣದ ರಂಗವಲ್ಲಿಯಲ್ಲಿ ಶಂಖ ಪದ್ಮಾದಿಗಳಂ ಬರೆಯುವುದು. ಈ ದರ್ಭೆಯ ಶೇಷನನ್ನು ಶೇಷಶಾಯಿ ವಿಷ್ಣುವೆಂದರಿತು ಅರ್ಚಿಸುವುದು. ಸಪ್ತಫಣಿಯುಳ್ಳ ಶೇಷನಲ್ಲಿ ವಿಷ್ಣುವು ಸದಾ ಇರುವುದರಿಂದಲೇ ಅನಂತನೆಂದು ಹೆಸರಾಯಿತು. ಪಿಂಗಲಾಕ್ಷನಾದ ಶಂಖ, ಚಕ್ರ, ಗದಾ, ಪದ್ಮಗಳಂ ಧರಿಸಿದವನಾದ ದೇವನಂ ಧ್ಯಾನಿಸಬೇಕು. ಓಮ್ನಮೋ ಭಗವತೆ ಎಂಬ ಮಂತ್ರದಿಂದ ದರ್ಭಗ್ರಂಥಿಯನ್ನರ್ಚಿಸಬೇಕು. ಹೊಸದಾದ ದಾರವನ್ನು ತರಬೇಕು. ಅನಂತಗುಣರತ್ನಾಯ ಎಂಬ ಮಂತ್ರದಿಂದ ಕಲಶದ ಮೇಲೆ ಹೊಸ ದಾರವನ್ನಿಡಬೇಕು. ಪುರುಷಸೂಕ್ತದಿಂದಲೂ, ಅತೊದೇವಾ ಎಂಬ ಮಂತ್ರದಿಂದಲೂ ಷೋಡಶೋಪಚಾರ ಪೂಜೆಮಾಡಬೇಕು. ಸಂಸಾ ರೇತಿ ಮಂತ್ರದಿಂದ ಬಲಗೈಯಲ್ಲಿ ದಾರವನ್ನು ಕಟ್ಟಬೇಕು. ನಮಸ್ತೇ ವಾಸುದೇವ ಎಂಬ ಮಂತ್ರದಿಂದ ಜೀರ್ಣದಾರವನ್ನು ವಿಸರ್ಜಿಸ ಬೇಕು. ದಾತಾಚ ವಿಷ್ಣು ಭಗವಾನ್ ಎಂದು ಗೋಧಿಯನ್ನೂ, ತುಪ್ಪವನ್ನೂ ಒಂದೊಂದು ಸೇರನ್ನು ಫಲಸಹಿತವಾಗಿ ದಾನ ಕೊಡಬೇಕು. ಹೋಳಿಗೆ ಪಾಯಸಗಳಲ್ಲಿ ಅರ್ಧವನ್ನು ವಿಪ್ರರಿಗೆ ಕೊಡಬೇಕು. ಅರ್ಧವನ್ನು ತಾನು ಭುಜಿಸಬೇಕು. ಹೀಗೆ ೧೪ ವರ್ಷ ವ್ರತಮಾಡಿ ಉದ್ಯಾಪನೆಮಾಡಿ ೧೪ ಕಲಶಗಳನ್ನು ದಾನಮಾಡಿ ಬ್ರಾಹ್ಮಣ ಭೋಜನ ಮಾಡಿಸಬೇಕು. ಹೀಗೆ ಮಾಡಲು ಚತುರ್ವಿಧ ಪುರುಷಾರ್ಥಗಳೂ, ಇಷ್ಟಾರ್ಥಗಳೂ ಸಿದ್ಧಿಸುವುವು. ಸಮ್ಮಂತೆಯೇ ನೀನೂ ಈ ವ್ರತವನ್ನು ಮಾಡು, ಎಂದು ೧೪ ಗಂಟುಗಳುಳ್ಳ ದಾರವಂ

ಕೊಟ್ಟು ಈಕೆಯಿಂದ ಅನಂತವ್ರತವನ್ನು ಮಾಡಿಸಿದರು. ಗೋಧಿಯ ಬಾಗಿಸವನ್ನೂ ಕೊಡಿಸಿದರು. ಸುಶೀಲೆಯು ಬಳಿಕ ಸ್ತ್ರೀಯರ ಸಿರೂಪಹೊಂದಿ ಮನೆಗೆ ಬಂದಳು.

ಕೌಂಡಿನ್ಯನೂ, ಸುಶೀಲೆಯೂ ಗಾಡಿಯಲ್ಲಿ ಕುಳಿತು ಅಮರಾವತೀ ನಗರಕ್ಕೆ ಬಂದರು. ಆ ನಗರಾಧಿಪತಿಯು ತಪೋಸಿಧಿಯಾಗಿದ್ದನು. ಈ ದಂಪತಿಗಳು ಈ ನಗರವಂ ಹೊಕ್ಕು ಶ್ರೀಮದನಂತನ ಪ್ರಸಾದದಿಂದ ಐಶ್ವರ್ಯವಂತರಾಗಿ ಸುಖವಾಗಿದ್ದರು. ಹೀಗಿರಲೊಂದು ದಿನ ಕೌಂಡಿನ್ಯನು ತನ್ನ ಪತ್ನಿಯ ಕರದಲ್ಲಿ ಕಟ್ಟಿರುವ ದಾರವನ್ನು ನೋಡಿ ಇದೇನು! ಇದನ್ನೇಕೆ ಕಟ್ಟಿದ್ದೀಯೆ, ಎಂದು ಕೇಳಿದನು. ಸುಶೀಲೆಯು ನಾಥನೇ, ಇದು ಅನಂತನ ದಾರವು. ಈ ಅನಂತನ ದಯೆಯಿಂದಲೇ ನಮಗೆ ಐಶ್ವರ್ಯವುಂಟಾಗಿದೆ. ನಾನು ಅನಂತನ ವ್ರತವನ್ನು ಮಾಡಿದಂದಿನಿಂದಲೂ ದೇವಾನುಗ್ರಹದಿಂದ ಅದೃಷ್ಟವಂತರಾದಿರಿ, ಎಂದಳು. ಕೌಂಡಿನ್ಯನು ಸಿಟ್ಟಿನಿಂದ ಆಕೆಯ ಕರದಲ್ಲಿರುವ ದಾರವನ್ನು ಕಿತ್ತು ಬೆಂಕಿಯಲ್ಲಿ ಹಾಕಿದನು. ಎಲ್ಲಿಯ ಅನಂತನು? ನಾನು ಮಾಡಿದ ತಪಸ್ಸಿನಿಂದ ಅದ್ಭುತವಾದ ಐಶ್ವರ್ಯವುಂಟಾಯಿತು. ನನ್ನ ವಶೀಕರಣಕ್ಕಾಗಿ ಈ ದಾರವನ್ನು ಕಟ್ಟಿಕೊಂಡು ಅನಂತನೆಂದು ಹೇಳುವೆ, ಎಂದನು. ಸುಶೀಲೆಯು ಹಾಹಾ ಎನ್ನುತ್ತಾ ಓಡಿಹೋಗಿ ಬೆಂಕಿಯಲ್ಲಿ ಬಿದ್ದ ದಾರವನ್ನು ತೆಗೆದು ಹಾಲಿನಲ್ಲಿ ಹಾಕಿದಳು. ಅನಂತನ ದಾರವನ್ನು ಬೆಂಕಿಯಲ್ಲಿ ಹಾಕಿದುದರಿಂದ ಈತನ ಐಶ್ವರ್ಯವು ಹಾನಿಯಾಗಿ ದರಿದ್ರನಾದನು. ಆ ನಗರದಲ್ಲಿ ಎಲ್ಲರೂ ಹಗೆಗಳಾದರು. ಗೋಧನವಸ್ತ್ರಗಳೆಲ್ಲವನ್ನೂ ಕಳ್ಳರು ಕದ್ದೊಯ್ದರು. ಮನೆಯು ಸುಟ್ಟುಹೋಯಿತು. ಅನಂತನ ಕೋಪದಿಂದ ಎಲ್ಲವೂ ಹೋಯಿತು. ಆಗ ಆತನು ನನಗೆ ಅನಂತನು ಕೋಪಿಸಿದನು. ಮದಾಂಧನಾಗಿ ಅನಂತನದಾರವನ್ನು ಅಗ್ನಿಯಲ್ಲಿ ಹಾಕಿದೆನು. ಇನ್ನು ನಾನು ಶ್ರೀಮದನಂತನನ್ನು ನೋಡುವ ವರೆಗೆ ಅನ್ನ ನೀರನ್ನು ತೆಗೆದುಕೊಳ್ಳುವುದಿಲ್ಲವೆಂದು ನಿರ್ಧರಿಸಿ ಹೆಂಡತಿಯೊಡನೆ ಘೋರವನವನ್ನು ಹೊಕ್ಕು ಹಾ ಹಾ ಅನಂತನೇ! ಎನ್ನುತ್ತಾ ಹೂವು ಕಾಯಿಗಳಿಂದ ಕೂಡಿದ ಮಾವಿನ ಮರವಂ ನೋಡಿದನು.

ಕೀಟಗಳೂ, ಹಕ್ಕಿಗಳೂ ಯಾವುವೂ ಆ ಮರದಲ್ಲಿರಲಿಲ್ಲ. ಆ ಮರವಂ ನೋಡಿ ಎಲೈ ಮರವೇ, ಅನಂತನನ್ನು ಕಂಡೆಯಾ? ಎಂದು ಕೇಳಿದನು. ಆ ಮರವು ವಿಪ್ರನೇ, ನಾನು ಅನಂತನಂ ನೋಡಲಿಲ್ಲ. ನೀನು ಅನಂತನಂ ನೋಡಿದ್ದರೆ ಹೇಳೆಂದಿತು. ಕೌಂಡಿನ್ಯನು ಮುಂದೆ ಹೋಗಿ ಕರುವಿನಿಂದ ಕೂಡಿದ ಹಸುವನ್ನು ನೋಡಿ ಎಲೆ ಹಸುವೇ, ಅನಂತನಂ ನೋಡಿದೆಯಾ, ಎಂದು ಕೇಳಿದನು. ಹಸುರು ಹುಲ್ಲಿನಲ್ಲಿ ತಿರುಗುತ್ತಿದ್ದರೂ ಈ ದನಕರುಗಳಿಗೆ ಹುಲ್ಲು ಸಿಕ್ಕುತ್ತಿರಲಿಲ್ಲ. ಆಗ ಆ ಹಸುವು ನಾನು ಅನಂತನಂ ನೋಡಲಿಲ್ಲ. ನೀನು ನೋಡಿದ್ದರೆ ಹೇಳು, ಎಂದಿತು. ಇವನು ಮುಂದೆ ಹೋಗಲು ಒಂದು ದೊಡ್ಡ ಎತ್ತನ್ನು ನೋಡಿದನು. ಅದನ್ನು ಕುರಿತು ಅನಂತನಂ ಕಂಡೆಯಾ, ಎಂದು ಕೇಳಿದನು. ಅದು ನೋಡಲಿಲ್ಲವೆಂದಿತು. ಮುಂದೆ ಒಂದು ಕೊಳವನ್ನು ನೋಡಿ ಅನಂತನಂ ಕಂಡೆಯಾ, ಎಂದು ಕೇಳಿದನು. ಅದರಲ್ಲಿ ನೀರು ತುಂಬಿತ್ತು. ಆದರೂ ಹಕ್ಕಿಗಳಿರಲಿಲ್ಲ. ಕಮಲ ಕುಮುದಾದಿ ಪುಷ್ಪಗಳು ಕೊಳದಲ್ಲಿ ಹೊಳೆಯುತ್ತಿದ್ದುವು. ಮುಂದೆ ಹೋಗಲು ಒಂದು ಕತ್ತೆಯನ್ನೂ, ಒಂದು ಆನೆಯನ್ನೂ ಕಂಡು ಕೇಳಿದನು. ಅವು ಅನಂತನಂ ನೋಡಲಿಲ್ಲವೆಂದವು. ಅನಂತ–ಅನಂತ ಎನ್ನುತ್ತಾ ನೆಲದಲ್ಲಿ ಬಿದ್ದನು. ಇಷ್ಟರಲ್ಲಿ ಒಬ್ಬ ಮುದುಕನು ಹತ್ತಿರ ಬಂದು ಇವನನ್ನೆಬ್ಬಿಸಿ, ನಾನು ಅನಂತನಂ ತೋರಿಸುವೆನು, ಎಂದು ಕರೆದುಕೊಂಡು ಬಂದು ಒಂದು ಬಿಲವನ್ನು ಹೊಕ್ಕನು. ಅಲ್ಲೊಂದಪೂರ್ವವಾದ ನಗರಿಯನ್ನು ಕಂಡು ಆಶ್ಚರ್ಯವುಳ್ಳವನಾದನು. ಅಲ್ಲಿಗೆ ಕರೆದೊಯ್ದು ರತ್ನಖಚಿತವಾದ ಸಿಂಹಾಸನದಲ್ಲಿ ಕುಳಿತು ನಿಜ ಸ್ವರೂಪವನ್ನು ತೋರಿಸಿದನು. ಕೌಂಡಿನ್ಯನು ನಿಜರೂಪವಂ ನೋಡಿ ಶ್ರೀಮದನಂತನ ಚರಣಂಗಳಲ್ಲಿ ತಲೆಯನ್ನಿಟ್ಟು ಕೈಗಳಂ ಜೋಡಿಸಿ ಸ್ತುತಿಸಿದನು. ಗೋವಿಂದನೇ, ಶ್ರೀವತ್ಸನೇ, ಸಚ್ಚಿದಾನಂದನೇ ನಮಸ್ಕಾರವು. ನಿನ್ನಂ ನೆನೆದರೆ ಪಾಪ ದುಃಖಗಳು ನಾಶವಾಗುವುವು. ನೀನು ವರೇಣ್ಯನಾದ ಯಜ್ಞಪುರುಷನಾಗಿ ತ್ರಿಮೂರ್ತಿರೂಪನಾಗಿದ್ದೀಯೆ. ನಿನ್ನ ದರ್ಶನದಿಂದ ಸರ್ವದೋಷಗಳೂ ಪರಿಹರಿಸುವುವು. ವೈಕುಂಠವಾಸನೇ ನಮಸ್ಕಾರವು.

ನಾರಾಯಣನೇ, ಲಕ್ಷ್ಮೀನಿವಾಸನೇ, ಜಗದ್ವ್ಯಾಪಿಯೇ, ಅನಂತ ಕೋಟಿ ಬ್ರಹ್ಮಾಂಡನಾಯಕನೇ, ನಾನು ಪಾಪಿಯೂ, ಪಾಪ ಕರ್ಮನೂ, ಪಾಪಾತ್ಮನೂ, ಪಾಪಸಂಭವನೂ, ಅಧರ್ಮಿಯೂ ಆಗಿದ್ದೇನೆ. ನಿನ್ನಲ್ಲಿ ಭಕ್ತಿಯನ್ನೂ, ಧರ್ಮದಲ್ಲಿ ಆಸಕ್ತಿಯನ್ನೂ ಕೊಡು. ದೇವರಾಜನೇ, ಪುಸ್ನಿಸು. ಅನಾಥನಾದ ನಾನು ನಿಮ್ಮ ಚರಣಂಗಳಂ ಮರೆಹೊಕ್ಕೆನು. ನನ್ನ ಜನ್ಮವು ಸಫಲವಾಯಿತು. ನನ್ನ ಜೀವನವು ಧನ್ಯವು. ನಿಮ್ಮ ಚರಣಕಮಲಗಳಂ ನೋಡಿದೆನು. ನಿಮ್ಮ ಪಾದಪದ್ಮದ ವಾಸನೆಯನ್ನು ಭ್ರಮರವಾಗಿ ಗ್ರಹಿಸುವೆನು, ಎಂದು ನುತಿಸಿದನು. ಭಕ್ತಜನ ಚಿಂತಾಮಣಿಯಾದ ಲಕ್ಷ್ಮೀಶನು ಧರ್ಮಬುದ್ಧಿಯನ್ನೂ, ಸಂಪತ್ತನ್ನೂ, ಶಾಶ್ವತ ವೈಕುಂಠವಾಸವನ್ನೂ ಇವನಿಗೆ ಕೊಟ್ಟನು. ಧರ್ಮಜನೇ, ಕೇಳು. ಆ ಕೌಂಡಿನ್ಯನು ಸ್ವಾಮಿಯೇ, ನಾನು ಬರುವ ದಾರಿಯಲ್ಲಿ ಮಾವಿನ ಮರವನ್ನು ಕಂಡೆನು. ಅದರಲ್ಲಿ ಫಲಪುಷ್ಪಗಳು ತುಂಬಿದ್ದರೂ ಯಾವ ಹಕ್ಕಿಗಳೂ ಅದರಲ್ಲಿರಲಿಲ್ಲ. ಮುಂದೆ ಬರಲು ಒಂದು ಹಸುವು ತನ್ನ ಕರುವಿ ನೊಂದಿಗೆ ಹುಲ್ಲುಗಾವಲಲ್ಲಿ ತಿರುಗಿದರೂ ಅದರ ಬಾಯಿಗೆ ಹುಲ್ಲು ಸಿಕ್ಕುತ್ತಿರಲಿಲ್ಲ. ನಿರ್ಮಲವಾದ ನೀರುಳ್ಳ ಎರಡು ಕೊಳಗಳನ್ನು ನೋಡಿದೆನು. ಅದರಲ್ಲಿ ಒಂದರ ನೀರು ಒಂದಕ್ಕೆ ಸೇರುತ್ತಿತ್ತು. ಅವುಗಳಲ್ಲಿ ನೀರುಹಕ್ಕಿಗಳಿರಲಿಲ್ಲ. ಮುಂದೆ ಒಂದು ಎತ್ತನ್ನು ನೋಡಿದೆನು. ಅದರ ಬಾಯಿಗೆ ಹುಲ್ಲು ಸಿಕ್ಕುತ್ತಿರಲಿಲ್ಲ. ಸದಾ ಉಪವಾಸವಾಗಿರುತ್ತದೆ. ಒಂದು ಆನೆಯನ್ನೂ, ಕತ್ತೆಯನ್ನೂ ನೋಡಿದೆನು. ಬಳಿಕ ವೃದ್ಧ ವಿಪ್ರನಂ ನೋಡಿದೆನು. ಇವುಗಳ ಸಂಗತಿಗಳೇನು? ದಯಮಾಡಿಟ್ಟು ಹೇಳಬೇಕೆಂದು ವಂದಿಸಿದನು. ದಯಾ ಮಯನಾದ ಶ್ರೀಹರಿಯು ವಿಪ್ರನೇ, ನೀನು ನೋಡಿದ ಮಾವಿನ ಮರವು ಪೂರ್ವದಲ್ಲೊಬ್ಬ ವಿಪ್ರನಾಗಿದ್ದನು. ಇವನು ವೇದಶಾಸ್ತ್ರ ಪುರಾಣಗಳನ್ನೋದಿದ್ದನು. ಆದರೆ ಶಿಷ್ಯರಿಗೆ ಪಾಠ ಹೇಳಲಿಲ್ಲ. ಈ ದುರಿತದಿಂದ ಮರವಾದನು. ನೀನು ನೋಡಿದ ಹಸುವು ಪೂರ್ವ ದಲ್ಲಿ ಬ್ರಾಹ್ಮಣನಾಗಿದ್ದು, ನಿಷ್ಫಲವಾದ ಭೂಮಿಯನ್ನು ಬ್ರಾಹ್ಮಣ ರಿಗೆ ದಾನಕೊಟ್ಟಿದ್ದನು. ಇದರಿಂದಲೇ ಇದಕ್ಕೆ ಹುಲ್ಲು ಸಿಕ್ಕದು.

ಆ ಎತ್ತು ಪೂರ್ವದಲ್ಲಿ ಧನಿಕ ವಿಪ್ರನಾಗಿದ್ದನು. ಇವನು ದಾನ ಮಾಡಲಿಲ್ಲ. ಇದರಿಂದ ಇದಕ್ಕೆ ಗ್ರಾಸವು ಸಿಕ್ಕಲಿಲ್ಲ. ನೀನು ನೋಡಿದ ಕೊಳಗಳು ಪೂರ್ವದಲ್ಲಿ ಅಕ್ಕತಂಗಿಯರಾಗಿದ್ದು, ಇವರು ದಾನಗಳನ್ನು ತಮ್ಮ ತಮ್ಮಲ್ಲಿಯೇ ಕೊಟ್ಟುಕೊಳ್ಳುತ್ತಿದ್ದರು. ಇದರಿಂದ ಕೊಳಗಳಾಗಿದ್ದಾರೆ. ಆ ಕತ್ತೆಯು ಕ್ರೋಧವು, ಆನೆಯು ಮದವು. ನೀನು ಶುದ್ಧಮನದಿಂದ ವೃದ್ಧ ವಿಪ್ರನಾದ ನನ್ನಂ ನೋಡಿದೆ. ನೀನು ನೋಡಿರುವುಗಳನ್ನೆಲ್ಲವನ್ನೂ ಬಿಡುಗಡೆಮಾಡಿ, ಅವಕ್ಕೆ ಅಖಿಲೈಶ್ವರ್ಯವನ್ನು ಕೊಟ್ಟೆನು. ಅಂತ್ಯದಲ್ಲವರು ಸ್ವರ್ಗಕ್ಕೆ ಹೋಗಲಿ. ನೀನು ಪುನರ್ವಸುವಿನಂತೆ ಪ್ರಕಾಶಿಸುತ್ತಾ ನಕ್ಷತ್ರ ರೂಪನಾಗಿರು, ಎಂದು ವರವಿತ್ತು ಅಂತರ್ಧಾನನಾದನು. ಕೌಂಡಿನ್ಯನು ವರವನ್ನು ಹೊಂದಿ ಬಹುಕಾಲ ರಾಜ್ಯವನ್ನಾಳಿ ಅಂತ್ಯದಲ್ಲಿ ಸ್ವರ್ಗಕ್ಕೆ ಹೋದನು, ಎಂದು ಧರ್ಮರಾಯನಿಗೆ ಶ್ರೀಕೃಷ್ಣನು ಹೇಳಿದನು. ಧರ್ಮಜನು ಭಕ್ತಿಯಿಂದ ಈ ಅನಂತನವ್ರತವನ್ನು ಮಾಡಿ ಬೇಗ ರಾಜ್ಯವನ್ನು ಹೊಂದಿದನು. ಅನೇಕ ಋಷಿಗಳು ಈ ವ್ರತವನ್ನು ಮಾಡಿ ಇಷ್ಟಾರ್ಥಗಳಂ ಪಡೆದರು. ಈ ವ್ರತವು ಉತ್ತಮವಾದುದು. ಇದನ್ನು ನೀನು ಮಾಡು. ನಿನ್ನ ಹಿರಿಯ ಮಗನಿಗೆ ಈ ವ್ರತವನ್ನುಪ ದೇಶಿಸು. ಕೌಂಡಿನ್ಯನು ಈ ವ್ರತವಂ ಮಾಡಿ ಸರ್ವಸೌಖ್ಯವನ್ನು ಹೊಂದಿದನು. ಇದರಿಂದ ಅನಂತ ಪುಣ್ಯವುಂಟು. ಭಕ್ತಿಯಿಂದ ವ್ರತವಂ ಮಾಡು, ಎಂದರು. ಆ ದ್ವಿಜನು ಗುರುನಿರೂಪದಂತೆ ಈ ವ್ರತವಂ ಮಾಡಿ ಗುರುಪೂಜೆಗೈದನು. ನೀರಾಜನವನ್ನೆತ್ತಿ ಗೀತ, ವಾದ್ಯ, ನೃತ್ಯಗಳಿಂದ ಭಕ್ತಿಯಿಂದ ಗುರುವನ್ನು ಪೂಜಿಸಿ ವಿಪ್ರರಿಗೆ ಭೋಜನ ಮಾಡಿಸಿದರು. ಗುರುಗಳು ಸಂತೋಷಿಸಿದರು. ಈ ದ್ವಿಜನು ಗುರುಗಳನ್ನು ಅರ್ಚಿಸಿ ತನ್ನ ಗ್ರಾಮಕ್ಕೆ ಹೋದನು. ನಿನ್ನ ವಂಶೀಯನಾದ ಸಾಯಂದೇವನಿಗೆ ಗುರುಗಳು ಪ್ರಸನ್ನರಾದರು. ಇದನ್ನು ಕೇಳಿ ಸಮಾಧಾನವಾಯಿತೇ, ಎಂದು ಕೇಳಿದರೆಂದು ಸರಸ್ವತೀಗಂಗಾಧರನು ಪೇಳಿದನೆಂಬಲ್ಲಿಗೆ ಗುರುಚರಿತ್ರೆಯಲ್ಲಿ ಅನಂತ ಕಥಾನಿರೂಪಣೆಯೆಂಬ ನಲವತ್ತಮೂರನೇ ಅಧ್ಯಾಯವು ಮುಗಿದುದು.

# ೪೪ ನೇ ಅಧ್ಯಾಯ.

ಸಿದ್ಧರು ಹೇಳುವರು. ಶಿಷ್ಯನೇ, ಕೇಳು. ಅನೇಕ ಭಕ್ತರು ಗುರುವನ್ನು ಸೇವಿಸುತ್ತಿದ್ದರು. ಒಬ್ಬ ನೇಯಿಗೆಯವನು ನಿತ್ಯವೂ ಗುರುವನ್ನು ವಂದಿಸುತ್ತಿದ್ದನು. ಇವನು ಮೂರು ಜಾವದ ವರೆಗೂ ತನ್ನ ಮನೆಗೆಲಸವಂ ಮಾಡಿ ಬಂದು, ಶ್ರೀಗುರು ಮಠದ ರಾಜಾಂಗಣ ವನ್ನು ಗುಡಿಸಿ ದೂರದಿಂದ ವಂದಿಸುತ್ತಿದ್ದನು. ಹೀಗೆ ಕೆಲವು ದಿನ ಗಳಾದುವು. ಶಿವರಾತ್ರಿಯು ಸಮೀಪಿಸಿತು. ಈ ತಂತುಕನ ತಾಯಿ ತಂದೆಗಳೂ, ಇತರರೂ ಯಾತ್ರೆಗೆ ಹೊರಟರು. ಇವನನ್ನು ಯಾತ್ರೆಗೆ ಬಾರೆಂದು ಕರೆದರು. ಆತನವರನ್ನು ಕುರಿತು ಅಯ್ಯಾ, ನೀವು ಮೂರ್ಖರು. ನನಗೆ ಶ್ರೀಪರ್ವತವು ಇಲ್ಲಿಯೇ ಇದೆ. ಶ್ರೀಗುರುವೇ ಮಲ್ಲಿಕಾರ್ಜುನನು. ಗುರುಮಠವೇ ಶ್ರೀಪರ್ವತವು. ನಾನು ಇಲ್ಲಿಂದ ಬರುವುದಿಲ್ಲ. ಗುರುಚರಣಂಗಳನ್ನು ಬಿಡಲಾರೆನೆಂದನು. ನಗರದವರೆಲ್ಲರೂ ಇವನನ್ನು ಹಾಸ್ಯಮಾಡಿ ಹೊರಟುಹೋದರು. ಇವನೊಬ್ಬನೇ ಉಳಿದನು. ಶ್ರೀಗುರುದರ್ಶನಕ್ಕೆ ಬಂದನು. ಶ್ರೀ ಗುರುವು ಇವನನ್ನು ಕುರಿತು ತಂತುಕನೇ, ನೀನೇಕೆ ಯಾತ್ರೆಗೆ ಹೋಗಲಿಲ್ಲ, ಎಂದು ಕೇಳಿದರು. ಆಗ ಅವನು ಸ್ವಾಮೀ, ನನಗೆ ತಮ್ಮ ಚರಣದರ್ಶನವೇ ಯಾತ್ರೆಯು. ನಾನಾ ತೀರ್ಥಯಾತ್ರೆಗಳೂ ತಮ್ಮ ಚರಣಗಳಲ್ಲಿವೆ. ಮೂರ್ಖನು ಪಾಷಾಣದರ್ಶನಕ್ಕೆ ಹೋಗ ಬೇಕು, ಎಂದು ವಂದಿಸಿದನು. ಶ್ರೀ ಶಿವರಾತ್ರಿಯ ದಿವಸ ಎರಡನೇ ಜಾವದಲ್ಲಿ ಗುರುಗಳು ಸಂಗಮಕ್ಕೆ ಹೋದರು. ಈತನೂ ಸ್ನಾನ ಮಾಡಿ ಗುರುವಂ ವಂದಿಸಿ, ಭಕ್ತಿಯಿಂದ ಕೈಗಳನ್ನು ಜೋಡಿಸಿ ನಿಂತು ಕೊಂಡನು. ತಂತುಕನೇ, ನಿಮ್ಮ ಮನೆಯವರೆಲ್ಲರೂ ಯಾತ್ರೆಗೆ ಹೋದರು. ನೀನೊಬ್ಬನೇ ಯಾತ್ರಾವಿನೋದವನ್ನು ನೋಡಲು ಹೋಗಲಿಲ್ಲ, ಎಂದರು. ಆಗ ಆತನು ಸ್ವಾಮೀ, ತಮ್ಮ ಚರಣ ದರ್ಶನವೇ ಯಾತ್ರೆಯು, ಎಂದರಿಕೆಗೈದನು. ಗುರುವು ಇವನ ಮನೋಭಾವವಂ ತಿಳಿದು ಈತನನ್ನು ಹತ್ತಿರ ಕರೆದು ಕುಳ್ಳಿರಿಸಿ ನಿನಗೆ ಶ್ರೀಪರ್ವತವನ್ನು ತೋರಿಸುವೆವು. ಕಣ್ಣು ಮುಚ್ಚಿಕೊಂಡು ಪಾದುಕೆ

ಯನ್ನು ಗಟ್ಟಿಯಾಗಿ ಹಿಡಿದುಕೋ, ಎಂದು ಹೇಳಿ ಮನೋವೇಗದಿಂದ ಅವನನ್ನು ಕರೆದುಕೊಂಡು ಹೊರಟು ಒಂದು ಕ್ಷಣಕಾಲದಲ್ಲಿಯೇ ಶ್ರೀಪರ್ವತಕ್ಕೆ ಹೋಗಿ ಪಾತಾಳಗಂಗೆಯಲ್ಲಿಳಿಸಿ ಕಣ್ಣನ್ನು ತೆರೆ, ಎಂದರು. ಒಂದು ಕ್ಷಣಕಾಲ ನಿದ್ರಾವಸ್ಥೆಯಲ್ಲಿದ್ದಂತೆಯೂ, ಎಚ್ಚರದಲ್ಲಿದ್ದಂತೆಯೂ ಇದ್ದವನಾಗಿ, ಇದೇನು ಸ್ವಪ್ನವೋ, ಸತ್ಯವೋ ಎಂದನು. ಶ್ರೀಗುರುವು ಶಿಷ್ಯನೇ, ಏಕೆ ಭ್ರಮಿಸುವಿ? ಕ್ಷೌರ, ಸ್ನಾನಾದಿಗಳಿಗೆ ಹೋಗು, ಎಂದು ನಿರೂಪಿಸಿದರು. ಗುರುನಿರೂಪದಂತೆ ಆತನು ಸ್ನಾನಕ್ಕೆ ಹೋಗಿ, ಅಲ್ಲಿ ತಾಯಿತಂದೆಗಳನ್ನೂ, ಗ್ರಾಮಸ್ಥರನ್ನೂ ನೋಡಿದನು. ಅವರು ಎಲೈ, ನೀನು ಯಾವ ದಾರಿಯಿಂದ ಬಂದೆ? ನಮಗೆ ಕಾಣಿಸದೆ ಅಡಗಿಕೊಂಡು ಬರುವುದು ಯಾವ ಧರ್ಮವು? ಎಂದೆಲ್ಲರೂ ಕೇಳಿದರು. ಆಗಾತನು ತಾಯಿತಂದೆಗಳನ್ನು ಕುರಿತು ಅಯ್ಯಾ, ಈ ದಿನ ಎರಡನೇ ಜಾವದಲ್ಲಿ ಹೊರಟು ಒಂದು ಗಳಿಗೆಯಲ್ಲಿಯೇ ಗುರುಗಳೊಡನೆ ಬಂದೆನೆಂದನು. ಒಬ್ಬನು ಇವನ ಮಾತನ್ನು ಕೇಳಿ, ಇದು ಸುಳ್ಳೆಂದು ನಕ್ಕನು. ಈತನು ನಮ್ಮ ಹಿಂದೆ ಅಡಗಿದ್ದು ನಡೆದು ಬಂದು ಬಡಿವಾರ ತೋರಿಸಿ ಸುಳ್ಳು ಹೇಳುವನು, ಎಂದರು. ಆಗ ತಂತುಕನು ಯಾರೊಡನೆಯೂ ಮಾತಾಡದೆ ಕ್ಷೌರ ಸ್ನಾನಾದಿಗಳನ್ನು ಮಾಡಿ, ಗಂಧಾಕ್ಷತೆ, ಹೂವು, ಬಿಲ್ವಪತ್ರೆಗಳನ್ನು ತೆಗೆದುಕೊಂಡು ಹೋಗಿ ಲಿಂಗದ ಹತ್ತಿರ ಗುರುಗಳಿರಲು ಭಕ್ತಿಯಿಂದರ್ಚಿಸಿದನು. ಜನರೆಲ್ಲರೂ ಮಾಡುವ ಪೂಜೆಯನ್ನು ಲಿಂಗಸ್ಥಾನಸ್ಥರಾದ ಗುರುಗಳು ಗ್ರಹಿಸುತ್ತಿದ್ದರು. ತಂತುಕನು ಇದನ್ನು ನೋಡಿ ಶ್ರೀಗುರುವೇ ಶಂಕರನೆಂದು ತಿಳಿದು ಪ್ರಸಾದವನ್ನು ಗ್ರಹಿಸಿ ಗುರುಸನ್ನಿಧಿಗೆ ಬಂದನು. ಆಗ ಶ್ರೀಗುರುವು ಇವನಂ ಕುರಿತು ತಂತುಕನೇ, ನೀನು ಇಲ್ಲಿರುವೆಯಾ? ಅಥವಾ ಊರಿಗೆ ಬರುವಿಯಾ? ಎಂದು ಕೇಳಿದರು. ಇದನ್ನು ಕೇಳಿ ತಂತುಕನು ಮಹಾಸ್ವಾಮಿಾ! ಈ ದಿನ ಒಂದು ಆಶ್ಚರ್ಯವನ್ನು ಕಂಡೆನು. ಜನರೆಲ್ಲರೂ ದೇವಾಲಯದಲ್ಲಿ ಕುಳಿತು ತಮ್ಮ ಚರಣಗಳನ್ನು ಅರ್ಚಿಸುವರು. ಅಲ್ಲಿ ಲಿಂಗವನ್ನು ಕಾಣಲಿಲ್ಲ. ಶ್ರೀಗುರುವು ಹತ್ತಿರದಲ್ಲಿರಲು ಇಷ್ಟು ದೂರ ಕಷ್ಟಪಟ್ಟು ಏತಕ್ಕೆ ಇಲ್ಲಿಗೆ ಜನರು ಬರುವರು? ನೀವಾದರೋ

ಕೇವಲ ಪರಮೇಶ್ವರರಾಗಿ ಕಾಣಿಸುವಿರಿ. ನಾವು ನರರು. ನಿಮ್ಮ ಮಹಿಮೆಯು ಅಪಾರವಾದುದು. ಗೋಪ್ಯರೂಪಿಗಳಾಗಿದ್ದೀರಿ. ಜನರು ಮೂಢರಾಗಿ ಇಲ್ಲಿಗೇಕೆ ಬರುವರು? ಇದನ್ನು ನನಗೆ ವಿಸ್ತಾರವಾಗಿ ಹೇಳಬೇಕು, ಎಂದು ವಿಜ್ಞಾಪಿಸಿದನು. ಶ್ರೀಗುರುವು ಭಕ್ತನೇ, ಕೇಳು. ಈಶ್ವರನು ಸರ್ವತ್ರ ಪೂರ್ಣನಾಗಿರುವನು. ತ್ರಿಭುವನದಲ್ಲಿ ಈ ಸ್ಥಾನಮಹಿಮೆಯು ಪೂಜ್ಯವಾಗಿದೆ, ಎಂದು ನಿರೂಪಿಸಿದರು. ತಂತುಕನು ಸ್ವಾಮಿಾ, ನೀವೇ ಪೂರ್ಣಬ್ರಹ್ಮರಾಗಿದ್ದೀರಿ. ಈ ಸ್ಥಾನ ಮಹಿಮೆಯನ್ನು ನಿರೂಪಿಸಿರಿ, ಎಂದು ಕೇಳಿದನು. ಇದನ್ನು ಗುರುಗಳು ಹೇಳುವರು. ಶಿಷ್ಯನೇ, ಕೇಳು. ಪೂರ್ವದಲ್ಲಿ ಕಿರಾತದೇಶದಲ್ಲಿ ವಿಮರ್ಷಣನೆಂಬ ಶೂರನಾಗಿಯೂ, ಶತ್ರುವನ್ನು ಗೆದ್ದವನಾಗಿಯೂ ಇರುವ ರಾಜನಿದ್ದನು. ಇವನಿಗೆ ಬೇಟೆಯಲ್ಲಿ ಬಹಳ ಇಷ್ಟವು. ಸದಾಕಾಲದಲ್ಲಿಯೂ ಚಂಚಲನಾಗಿಯೂ, ಸ್ತ್ರೀಯರಲ್ಲಿ ಆಸಕ್ತನಾಗಿಯೂ, ಸರ್ವಮಾಂಸಭಕ್ಷಕನಾಗಿಯೂ, ಗ್ರಾಹ್ಯಾಗ್ರಾಹ್ಯ ವಿಚಾರಮಾಡದೆ ದುರಾಚಾರಿಯಾಗಿದ್ದರೂ, ನಿತ್ಯವೂ ಈಶ್ವರಪೂಜೆಯನ್ನು ಭಕ್ತಿಯಿಂದ ಮಾಡುತ್ತಿದ್ದನು. ಶಿವರಾತ್ರಿಯಲ್ಲಿ ಹರ್ಷದಿಂದ ಗೀತನೃತ್ಯಗಳಿಂದ ಭಕ್ತಿಪೂರ್ವಕವಾಗಿ ಶಿವನನ್ನರ್ಚಿಸುತ್ತಿದ್ದನು. ಸುಲಕ್ಷಣೆಯಾಗಿಯೂ, ಸುಗುಣೆಯಾಗಿಯೂ, ಪತಿವ್ರತೆಯಾಗಿಯೂ ಇರುವ ಕುಮುದ್ವತಿಯು ಪತಿಯು ಪರದಾರರತನಾದರೂ ಈಶ್ವರಭಕ್ತಿಯುಳ್ಳವಳಾಗಿ ಶಿವನನ್ನು ಅರ್ಚಿಸುತ್ತಿದ್ದಳು. ಒಂದು ದಿನ ಈಕೆಯು ಪತಿಯಂ ಕುರಿತು ಪ್ರಾಣೇಶ್ವರನೇ, ನನ್ನ ವಿನಂತಿಯೊಂದಿದೆ. ನಾನು ಹೇಳುವುದನ್ನು ಕೇಳಿ ಮನ್ನಿಸಿರಿ. ನೀವು ದುರಾಚಾರಿಗಳಾಗಿಯೂ, ಸರ್ವವನ್ನು ಭಕ್ಷಿಸುತ್ತಾ, ಪರಸ್ತ್ರೀಯರಲ್ಲಿ ಆಸಕ್ತರಾಗಿದ್ದೀರಿ. ಆದರೂ ಶಿವನಲ್ಲಿ ಭಕ್ತಿಯುಂಟಾದುದು ಹೇಗೆ? ಸಿಟ್ಟಾಗದೆ ತಟ್ಟನೆ ಹೇಳಿರೆಂದಳು. ರಾಣಿಯೇ ಈಗ ನನಗೆ ಜ್ಞಾನೋದಯವಾಯಿತು. ನನ್ನ ಪೂರ್ವಜನ್ಮದ ಕಥೆಯಂ ಕೇಳು. ಪೂರ್ವದಲ್ಲಿ ನಾನು ಒಬ್ಬ ಕುರುಬನ ಮನೆಯಲ್ಲಿ ನಾಯಿಯಾಗಿ ಹುಟ್ಟಿದ್ದೆನು. ಒಂದು ಶಿವರಾತ್ರಿಯ ದಿನದಲ್ಲಿ ಆ ನಗರಿಯ ಜನರೆಲ್ಲರೂ ಶಿವಾಲಯಕ್ಕೆ ಪೂಜೆಗೋಸುಗ ಬಂದರು. ಅಲ್ಲಿ ಏನಾದರೂ ತಿಂಡಿಯು ಸಿಕ್ಕುವುದೆಂದರಿದು

ತಿರುಗುತ್ತಾ ಹೋದೆನು. ಜನರು ಉತ್ಸಾಹದಿಂದ ಶಿವನನ್ನರ್ಚಿಸು ತ್ತಿದ್ದರು. ನಾನಾ ವಾದ್ಯಗಳನ್ನು ಬಾಜಿಸುತ್ತಿದ್ದರು. ಎಲ್ಲರೂ ಗರ್ಭಗೃಹದಲ್ಲಿ ಆರತಿಯನ್ನು ಹಿಡಿದು ಪ್ರದಕ್ಷಿಣೆಮಾಡುತ್ತಿದ್ದರು. ದೇವಾಲಯದ ಬಾಗಿಲಿಗೆ ಹೋದೆನು. ಜನರು ನನ್ನನ್ನು ನೋಡಿ ಕೋಲಿನಿಂದಲೂ, ಕಲ್ಲುಗಳಿಂದಲೂ ಹೊಡೆಯತೊಡಗಿದರು. ದ್ವಾರ ಪಾಲಕನೂ ಓಡಿ ಬಂದು ಹೊಡೆಯಲು ಯತ್ನಿಸಿದನು. ಹೊರಗೆ ಹೋಗಲು ದಾರಿಯಿರಲಿಲ್ಲ. ಬಾಗಿಲಿನಿಂದಲೇ ಹೊರಗೆ ಹೋಗುವೆ ನೆಂದು ಬಂದೆನು. ಜನರು ನನ್ನನ್ನು ಹಿಂಬಾಲಿಸಿದರು. ದೇವಾಲಯ ದಲ್ಲಿ ನಾನು ಪ್ರದಕ್ಷಿಣಾಕಾರವಾಗಿ ಸುತ್ತಿದೆನು. ಅಡಗಲು ದಾರಿ ಯಿಲ್ಲ. ಎಂಜಲನ್ನು ತಿನ್ನುವೆನೆಂದು ದೇವಾಲಯಕ್ಕೆ ಹೋಗಿದ್ದೆನು. ನನ್ನನ್ನು ಹೊಡೆಯುವರೆಂದು ಮೂರು ಬಾರಿ ಪ್ರದಕ್ಷಿಣಾಕಾರವಾಗಿ ತಿರುಗಿ, ಅಂತರ್ಗೃಹದಲ್ಲಿ ಆಗುವ ಶಿವಪೂಜೆಯನ್ನು ನೋಡಿದೆನು. ನನ್ನನ್ನು ಎಲ್ಲರೂ ಹೊಡೆದು ಹೊರಗೆ ಎಳೆದು ಹಾಕಿದರು. ನಾನು ಪ್ರದಕ್ಷಿಣೆ ಮಾಡಿದುದರಿಂದಲೂ, ಶಿವಪೂಜೆಯನ್ನು ನೋಡಿದ ಪುಣ್ಯ ದಿಂದಲೂ ಈ ಜನ್ಮದಲ್ಲಿ ರಾಜನಾಗಿ ಹುಟ್ಟಿದೆನು. ಪ್ರಾಣೇಶ್ವರಿಯೇ, ಆ ದಿನ ಶಿವರಾತ್ರಿಯಾಗಿತ್ತು. ತಿನ್ನುವುದಕ್ಕೆ ಎಂಜಲೇನೂ ಸಿಕ್ಕಲಿಲ್ಲ. ಉಪವಾಸವಾಗಿದ್ದು ಪ್ರಾಣ ಬಿಟ್ಟೆನು. ಆ ದೇವಾಲಯದಲ್ಲಿ ಹತ್ತಿ ಸಿರುವ ದೀಪಮಾಲೆಗಳ ಪ್ರಕಾಶವನ್ನು ನೋಡುತ್ತಾ, ದೇವಾಲಯ ದ್ವಾರದಲ್ಲಿ ಪ್ರಾಣ ಬಿಟ್ಟೆನು. ಈ ಪುಣ್ಯದಿಂದಲೇ ನನಗೆ ಜ್ಞಾನ ವುಂಟಾಯಿತು. ಶಿವರಾತ್ರಿ ಮಹಿಮೆಯನ್ನು ಕೇಳು. ಈ ರೀತಿಯಿಂದ ನಾನು ಪೂರ್ವದಲ್ಲಿ ನಾಯಿಯಾಗಿದ್ದೆನು. ಆದುದರಿಂದ ಆ ಸ್ವಾಭಾ ವಿಕ ಗುಣದಿಂದ ಸರ್ವಮಾಂಸವನ್ನು ತಿನ್ನುವುದರಲ್ಲಿ ನನಗೆ ಇಚ್ಛೆ ಯುಂಟಾಗಿದೆ, ಎಂದನು. ಪುನಃ ಆಕೆಯು ಸ್ವಾಮಿಾ, ನಿಮ್ಮ ಪೂರ್ವಜನ್ಮದ ಕಥೆಯನ್ನು ಹೇಳಿದಿರಿ. ನೀವು ಸರ್ವಜ್ಞರು. ನನ್ನ ಜನ್ಮವೃತ್ತಾಂತವನ್ನು ನಿರೂಪಿಸಿರಿ, ಎಂದು ಚರಣಂಗಳಲ್ಲಿ ವಂದಿಸಿದಳು. ಆಗ ಆತನು ಪ್ರಾಣಕಾಂತೆಯೇ, ಕೇಳು. ನೀನು ಮೊದಲ ಜನ್ಮದಲ್ಲಿ ಹೆಣ್ಣು ಪಾರಿವಾಳವಾಗಿದ್ದೆ. ಹೀಗಿರಲೊಂದು ದಿನ ಆಹಾರಕ್ಕಾಗಿ ಸುತ್ತುತ್ತಿರುವಾಗ ಒಂದು ಮಾಂಸದ ತುಂಡನ್ನು ಕೊಕ್ಕಿನಲ್ಲಿ ಹಿಡಿದು

ಆಕಾಶದಲ್ಲಿ ಹಾರಾಡುತ್ತಿದ್ದೆ. ಆಗ ನಿನ್ನನ್ನು ನೋಡಿ ಆ ನಿನ್ನ ಮಾಂಸದ ತುಂಡನ್ನು ತೆಗೆದುಕೊಳ್ಳುವೆನೆಂದು ಒಂದು ಗಿಡಗವು ಹಾರಿ ಬಂದಿತು. ಆಗ ನೀನು ವೇಗವಾಗಿ ಓಡುತ್ತಾ ಒಂದು ದೊಡ್ಡ ಕಾಡಿನಲ್ಲಿ ಹಾರಿಹೋಗುತ್ತಿದ್ದೆ. ಗಿಡಗವು ನಿನ್ನನ್ನು ಹಿಂಬಾಲಿಸು ತ್ತಿತ್ತು. ನೀನು ಮುಂದೆ ಮುಂದೆ ವನಾಂತರದಲ್ಲಿಯೂ ತಿರುಗಿ ಶ್ರೀಗಿರಿ ಪರ್ವತದ ಮೇಲೆ ಹೋದೆ. ಅಲ್ಲಿಗೂ ಗಿಡಗ ಬಂದಿತು. ನೀನು ಆ ದೇವಾಲಯದ ಸುತ್ತಲೂ ಪ್ರದಕ್ಷಿಣಾಕಾರವಾಗಿ ಹಾರುತ್ತಾ ಬಹಳ ದೂರದಿಂದ ಹಾರಿ ಬಂದುದರಿಂದ ಕಂಠಗತಪ್ರಾಣಳಾಗಿ ಆ ದೇವಾಲಯ ಶಿಖರದಲ್ಲಿ ಕುಳಿತುಕೊಳ್ಳಲು, ಆ ಗಿಡಗವು ಬಂದು ನಿನ್ನನ್ನು ಕೊಕ್ಕಿನಿಂದ ಹೊಡೆದು ಆ ನಿನ್ನ ಮಾಂಸದ ಗೋಳವನ್ನು ತೆಗೆದುಕೊಂಡು ಹೋಯಿತು. ಆಗ ನೀನು ಸತ್ತುಹೋದೆ. ಆ ಪ್ರದಕ್ಷಿಣೆಮಾಡಿದ ಪುಣ್ಯದಿಂದ ಈಗ ನೀನು ರಾಜಪತ್ನಿಯಾದೆ, ಎಂದು ಹೇಳಿದನು. ಮತ್ತೆ ಆಕೆಯು ನಾಥನೇ ನಿಮ್ಮ ನಿರೂಪದಿಂದ ಶಿವಪೂಜೆಯಂ ಮಾಡುವೆನು. ನನ್ನ ಮುಂದಿನ ಜನ್ಮದ ವಿಚಾರವನ್ನು ತಿಳಿಸಿರಿ, ಎಂದು ಬೇಡಿಕೊಂಡಳು. ಆಗ ರಾಜನು ಪ್ರಿಯಳೇ, ನಿನ್ನ ಮುಂದಿನ ಜನ್ಮದ ಕಥೆಯನ್ನು ಕೇಳು.

ನಾನು ಮುಂದಿನ ಜನ್ಮದಲ್ಲಿ ಸಿಂಧೂದೇಶದ ರಾಜನಾಗುವೆನು. ಆಗಲೂ ನೀನು ಸೃಂಜಯ ರಾಜಪುತ್ರಿಯಾಗಿ ಹುಟ್ಟಿ ನನ್ನ ರಾಣಿ ಯಾಗುವಿ. ಮೂರನೇ ಜನ್ಮದಲ್ಲಿ ನಾನು ಸೌರಾಷ್ಟ್ರ ರಾಜನಾಗು ವೆನು. ನೀನು ಕಳಿಂಗ ರಾಜಪುತ್ರಿಯಾಗಿ ಹುಟ್ಟಿ ನನ್ನ ಪತ್ನಿಯಾಗುವಿ. ನಾಲ್ಕನೇ ಜನ್ಮದಲ್ಲಿ ಗಾಂಧಾರ ರಾಜನಾಗುವೆನು. ಆಗ ನೀನು ಮಗಧ ರಾಜಪುತ್ರಿಯಾಗಿ ಹುಟ್ಟಿ ನನ್ನ ರಾಣಿಯಾಗುವಿ. ಐದನೇ ಜನ್ಮದಲ್ಲಿ ಅವಂತಿಯ ರಾಜನಾಗುವೆನು. ನೀನು ದಶಾರ್ಣವದೇಶದ ರಾಜನ ಪುತ್ರಿಯಾಗಿ ನನ್ನ ರಾಣಿಯಾಗುವಿ. ಆರನೇ ಜನ್ಮದಲ್ಲಿ ಅನಂತನೆಂಬ ರಾಜನಾಗುವೆನು. ಆಗ ನೀನು ಯಯಾತಿ ರಾಜಕನ್ಯೆ ಯಾಗಿ ನನ್ನ ರಾಣಿಯಾಗುವಿ. ಏಳನೇ ಜನ್ಮದಲ್ಲಿ ಪಾಂಡ್ಯರಾಜ ನಾಗುವೆನು. ಆಗ ನಾನು ಜ್ಞಾನಿಯಾಗಿಯೂ, ಚಂದ್ರನಂತೆ ಮುಖ ವುಳ್ಳವನಾಗಿಯೂ, ಪದ್ಮವರ್ಣವುಳ್ಳವನಾಗಿಯೂ, ಮದನನಂತೆ ರೂಪ

ವುಳ್ಳವನಾಗಿಯೂ ಇರುವೆನು. ಆಗ ನೀನು ವೈದರ್ಭ ರಾಜಪುತ್ರಿ ಯಾಗಿ ಹುಟ್ಟಿ, ಸುವರ್ಣಪ್ರತಿಮೆಯಂತೆ ಸುಂದರಿಯಾಗಿ ಸುಮತಿ ಯೆಂಬ ಹೆಸರುಳ್ಳವಳಾಗುವಿ. ಆಗ ನಿನ್ನನ್ನು ಸ್ವಯಂವರದಲ್ಲಿ ನಳನು ದಮಯಂತಿಯನ್ನು ವರಿಸಿದಂತೆ ವರಿಸುವೆನು. ಆಗ ಬಹುಕಾಲ ನಾನು ರಾಜ್ಯವಾಳುವೆನು. ಸಾವಿರ ಯಾಗಗಳನ್ನು ಮಾಡಿ, ಸರ್ವ ದೇಶದ ರಾಜರನ್ನು ಗೆದ್ದು, ಮಂತ್ರಶಾಸ್ತ್ರಗಳನ್ನು ಕಲಿತು, ದೇವ ದ್ವಿಜಾರ್ಚನೆ ಮಾಡಿ, ವಿಪ್ರರಿಗೆ ಅಗ್ರಹಾರಗಳನ್ನು ದಾನವಾಗಿ ಕೊಡುವೆನು. ಮುಪ್ಪಿನಲ್ಲಿ ರಾಜ್ಯವನ್ನು ಪುತ್ರನಿಗೆ ಕೊಟ್ಟು, ಬಳಿಕ ಆಶ್ರಮವನ್ನು ಗ್ರಹಿಸಿ ಅಗಸ್ತ್ಯರಲ್ಲಿ ಬ್ರಹ್ಮಜ್ಞಾನವನ್ನು ಹೊಂದಿ ಬಳಿಕ ಮೋಕ್ಷಹೊಂದುವೆನು. ಆಗ ದೇಹಾವಸಾನಕಾಲದಲ್ಲಿ ನಿನ್ನೊಡನೆ ದಿವ್ಯ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಹೋಗುವೆವು. ಶಿವಪೂಜೆಯ ಮಹಿಮೆಯು ಶ್ರೇಷ್ಠವಾದುದು. ಶಿವರಾತ್ರಿಯ ವ್ರತವೂ ಶ್ರೇಷ್ಠವಾದುದು. ಶ್ರೀಶೈಲದ ಮಹಾತ್ಮೆಯನ್ನು ಯಾರು ವರ್ಣಿಸುವರು? ಎಂದು ರಾಜನು ರಾಣಿಗೆ ಹೇಳಿದನು. ರಾಣಿಯೊಡನೆ ಶಿವರಾತ್ರಿಯಲ್ಲಿ ಶ್ರೀಶೈಲ ಯಾತ್ರೆಯನ್ನು ಮಾಡಿದನು, ಎಂದು ಗುರು ಗಳು ತಂತುಕನಿಗೆ ಹೇಳಿದರು. ಆ ರಾಜನು ಶಿವರಾತ್ರಿಯ ವ್ರತವನ್ನು ಮಾಡಿ ಏಳು ಜನ್ಮಗಳಲ್ಲಿ ರಾಜನಾಗಿ, ಅಂತ್ಯದಲ್ಲಿ ಸ್ವರ್ಗವಂ ಹೊಂದಿ ದನು. ಈ ರೀತಿಯಾಗಿ ಶ್ರೀಶೈಲ ಮಹಿಮೆಯು ಇರುವುದು. ಗಾಣಗಾಪುರದ ಭೀಮಾತೀರದಲ್ಲಿರುವ ಕಲ್ಲೇಶ್ವರನು ಮಲ್ಲಿಕಾರ್ಜುನ ನಿಗೆ ಸಮಾನನು. ಅವನನ್ನರ್ಚಿಸು. ಸಂಗಮೇಶ್ವರನನ್ನು ಹಗಲು ರಾತ್ರಿಯಲ್ಲಿಯೂ ಪೂಜಿಸು. ಸಂದೇಹಿಸದಿರು, ಎಂದು ನಿರೂಪಿಸಿ ದರು. ಆಗ ತಂತುಕನು ಸ್ವಾಮಿಾ, ನನ್ನನ್ನು ಏಕೆ ಚಾಳಿಸುವಿರಿ. ನಾನು ಮಲ್ಲಿಕಾರ್ಜುನನ ಪೂಜೆಗೆ ಹೋಗಿ ಲಿಂಗಸ್ಥಾನದಲ್ಲಿ ನಿಮ್ಮನ್ನು ನೋಡಿದೆನು. ಎಲ್ಲಾ ಕಡೆಯಲ್ಲೂ ನೀವು ಒಬ್ಬರೇ ವ್ಯಾಪಕರಾಗಿರು ವಿರಿ. ಕಲ್ಲೇಶ್ವರ, ಸಂಗಮೇಶ್ವರರನ್ನು ಪೂಜಿಸೆನ್ನುವುದೇಕೆ? ಎಂದನು. ಈ ಮಾತನ್ನು ಕೇಳಿ ಗುರುವು ನಕ್ಕು ಭಕ್ತನೇ, ನಮ್ಮ ಪಾದುಕೆ ಗಳನ್ನು ಹಿಡಿದು ಕಣ್ಣುಗಳನ್ನು ಮುಚ್ಚಿಕೊ, ಎಂದರು. ಆಗಲೇ ಸಂಗಮಕ್ಕೆ ಬಂದರು. ಇಷ್ಟರಲ್ಲಿಯೇ ಗಾಣಗಾಪುರದಲ್ಲಿ ಶ್ರೀಗುರು

ವನ್ನು ನೋಡಿ, ನಾನು ಗಂಗಾತೀರಕ್ಕೆ ಎಲ್ಲಿ ಹೋಗಿದ್ದೆನು, ಎಂದು ವಿಸ್ಮಿತನಾದನು. ಒಬ್ಬನು ಈ ಗುರುಗಳು ಸಂಗಮದಲ್ಲಿದ್ದಾರೆಂದೂ, ಒಬ್ಬನು ಅಲ್ಲಿಲ್ಲವೆಂದೂ, ಎಲ್ಲಿಗೆ ಹೋದರೆಂದೂ ಹೇಳುತ್ತಿದ್ದರು. ತಂತುಕನನ್ನು ಮನೆಗೆ ಕಳುಹಿಸಿ ಗುರುಗಳು ಮಠಕ್ಕೆ ಹೋದರು. ತಂತುಕನು ಗ್ರಾಮಕ್ಕೆ ಬಂದನು. ಜನರು ಇವನಂ ನೋಡಿ ಏಲೈ, ನೀನು ಕ್ಷೌರವನ್ನೇಕೆ ಮಾಡಿಸಿದೆ? ಎಂದು ಕೇಳಿದರು. ಆಗ ಆತನು ಅಯ್ಯಾ, ನಾನು ಶ್ರೀಶೈಲಕ್ಕೆ ಹೋಗಿದ್ದೆನು, ಎಂದು ದೇವರ ಪ್ರಸಾದ ಹಾರವನ್ನೂ, ವಿಭೂತಿಯನ್ನೂ ತೋರಿಸಿದನು. ಆಗ ಜನರು ಇವನು ಎರಡು ಜಾವಕ್ಕೆ ಮೊದಲು ಮನೆಯಲ್ಲಿದ್ದನು. ಇವನು ಶ್ರೀಪರ್ವತಕ್ಕೆ ಹೋದುದು ಹೇಗೆ? ಎಂದು ವಿಸ್ಮಿತರಾದರು. ಒಬ್ಬನು ಇದು ಸುಳ್ಳೆಂದೂ, ಒಬ್ಬನು ಸತ್ಯವೆಂದೂ ಹೇಳಿದರು. ಆಗ ತಂತುಕನು ಅಯ್ಯಾ, ಶ್ರೀಗುರುಗಳು ವಾಯುವೇಗದಿಂದ ಶ್ರೀಪರ್ವತಕ್ಕೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಈಗ ಇವರು ಸಂಗಮದಲ್ಲಿರುವರು. ಶಿಷ್ಯರನ್ನು ಕರೆಯಲು ನನ್ನನ್ನು ಕಳುಹಿಸಿದರು, ಎಂದನು. ಒಬ್ಬನು ಇದು ಸತ್ಯವೆಂದೂ, ಒಬ್ಬ ಮೂಢನು ಇದು ಸುಳ್ಳೆಂದೂ ಹೇಳಿದರು. ತಂತುಕನು ಶಿಷ್ಯರಿಗೆ ಗುರುಗಳ ಆಜ್ಞೆಯನ್ನು ತಿಳಿಸಿದನು. ಎಲ್ಲರೂ ಸಂಗಮಕ್ಕೆ ಬಂದರು. ಸಂಗಮದಲ್ಲಿ ಪೂಜೆಯಾಯಿತು. ಈ ಸಂಗತಿಯನ್ನು ಸುಳ್ಳೆಂದು ಹೇಳುವವರು ದುರಿತಗಳನ್ನು ಹೊಂದುವರು. ಯಾತ್ರಿಕರೆಲ್ಲರೂ ಹದಿನೈದು ದಿನಗಳ ಮೇಲೆ ಊರಿಗೆ ಬಂದರು. ಇವರು ಗುರುಗಳೂ, ತಂತುಕನೂ ಶ್ರೀಗಿರಿಗೆ ಬಂದಿದ್ದರೆಂದು ಜನರಿಗೆ ಹೇಳಿದರು. ಆಗ ಆ ಭಕ್ತರಿಗೆ ಆನಂದವಾಯಿತು, ಎಂದು ಸಿದ್ಧರು ಶಿಷ್ಯನೇ, ಗುರುಮಹಿಮೆಯು ಹೀಗಿರುವುದು, ಎಂದರು. ಸರಸ್ವತೀ ಗಂಗಾಧರನು ಗುರುಚರಿತ್ರೆಯನ್ನು ಪೇಳಿದನೆಂಬಲ್ಲಿಗೆ ಶಿವರಾತ್ರಿಯ ಮಹಿಮಾವರ್ಣನೆ ಎಂಬ ನಲವತ್ತಾಲ್ಕನೇ ಅಧ್ಯಾಯವು ಮುಗಿದುದು.

## ೪೫ ನೇ ಅಧ್ಯಾಯ.

ನಾಮಧಾರಕನು ಸ್ವಾಮೀ ಸಿದ್ಧಮುನಿಗಳೇ, ನಮ್ಮ ಭಾಗ್ಯವು ಅತಿಯಾದುದು. ಪರಬ್ರಹ್ಮಸ್ವರೂಪವಾದ ಗುರುಚರಿತ್ರೆಯನ್ನು

ಕೇಳಿದೆನು. ನಿಮ್ಮ ದಯೆಯಿಂದ ಗುರುಕಥಾಮೃತದ ಪಾನವು ನನಗಾಗಿ, ಸಕಲೇಷ್ಟಗಳೂ ಲಭಿಸಿದುವು. ಭವತಾರಕರಾದ ತಮ್ಮ ಸಂದರ್ಶನವಾದುದರಿಂದ ನನ್ನ ದೈನ್ಯವು ಹೋಯಿತು. ಸರ್ವಾಭೀಷ್ಟ ಸುಖಗಳುಂಟಾದುವು. ಶ್ರೀಗುರುವು ಸಂಗಮದಲ್ಲಿರುವಾಗ ಮುಂದೇ ನಾಯಿತು? ಎಂಬುದನ್ನು ದಯೆಯಿಟ್ಟು ನಿರೂಪಿಸಿರಿ, ಎಂದರಿಕೆ ಗೈದನು. ಆಗ ಸಿದ್ಧರು ಹೇಳುವರು. ಮುಂದೊಂದು ವಿಚಿತ್ರ ಸಂಗತಿಯು ನಡೆಯಿತು. ಏನೆಂದರೆ, ನಂದಿ ಎಂಬೊಬ್ಬ ವಿಪ್ರನು ಸರ್ವಾಂಗದಲ್ಲಿಯೂ ಬಿಳಿಯ ತೊನ್ನುಳ್ಳವನಾಗಿ ತುಳಜಾಪುರಕ್ಕೆ ಹೋಗಿ ಮೂರು ವರ್ಷಕಾಲ ಉಪವಾಸಮಾಡಿ ದೇವಿಯನ್ನರ್ಚಿಸಿ ದನು. ಒಂದು ದಿನ ಸ್ವಪ್ನದಲ್ಲಿ ವಿಪ್ರನೇ, ಚಂದಲಾಪರಮೇಶ್ವರಿಯ ದರ್ಶನಮಾಡು, ಎಂದು ದೇವಿಯು ಆಜ್ಞಾಪಿಸಿದಳು. ಇದರಂತೆ ವಿಪ್ರನು ಚಂದಲಾಪರಮೇಶ್ವರಿಯ ಸ್ಥಾನಕ್ಕೆ ಹೋಗಿ ಅಲ್ಲಿ ಏಳು ತಿಂಗಳು ಉಪವಾಸದಿಂದಿದ್ದು ಪುನಶ್ಚರಣೆಗೈದು ಬಹು ಕಷ್ಟಪಟ್ಟನು. ಆಗಲೂ ವಿಪ್ರನೇ, ಗಾಣಗಾಪುರಿಗೆ ಹೋಗಿ ತ್ರಿಮೂರ್ತ್ಯಂಶರಾದ ಶ್ರೀಗುರುಗಳ ದರ್ಶನಕ್ಕೆ ಹೋಗು, ಎಂದು ಸ್ವಪ್ನವಾಯಿತು. ಆಗ ಈತನು ಆಹಾ! ಚೆನ್ನಾಯಿತು! ಆರು ತಿಂಗಳು ನಿನ್ನನ್ನರ್ಚಿಸಿ ಕಷ್ಟ ಪಟ್ಟೆನು. ದೇವಿಯೇ, ನಿನ್ನ ಕೈಯಿಂದ ನನ್ನ ಇಷ್ಟವನ್ನು ಕೊಡಲು ಆಗಲಿಲ್ಲ. ಜಗನ್ಮಾತೆಯಾದ ತುಳಜಾಭವಾನಿಯನುಜ್ಞೆಯಂತೆ ನಿನ್ನ ದರ್ಶನಕ್ಕೆ ಬಂದೆನು. ನಿನ್ನ ದೇವತ್ವವು ಗೊತ್ತಾಯಿತು. ನರರ ಹತ್ತಿರ ಹೋಗೆನ್ನುವಿ. ನಿನ್ನಿಂದೇನೂ ಆಗದು. ದೇವಿಯೇ, ವಿಶ್ವಾಸ ದಿಂದ ನಿನ್ನಲ್ಲಿಗೆ ಬಂದೆನು. ನೀನು ನರರ ಹತ್ತಿರ ಕಳುಹುವಿ. ನಿನ್ನ ದೇವತ್ವದ ಗಡಿಯು ತಿಳಿಯಿತು. 'ಇದು ನನ್ನ ಭಾಗ್ಯವು! ನರರ ಹತ್ತಿರ ಹೋಗೆನ್ನಲು ನಿನಗೆ ನಾಚಿಕೆಯಾಗಲಿಲ್ಲವೇ? ಏಳು ತಿಂಗಳು ಉಪವಾಸವಾಗಿದ್ದು ನಿನ್ನ ದೇವತ್ವವನ್ನು ಗುರ್ತಿಸಿದೆನು. ಮೊದಲೇ ಇಷ್ಟು ಹೇಳಿದ್ದರೆ ನನಗಿಷ್ಟು ಕಷ್ಟವಾಗುತ್ತಿರಲಿಲ್ಲ. ಪರಮೇಶ್ವರಿ ಯೆಂದರಿತು ಮನಸ್ಸಿನಲ್ಲಿ ದುರಾಶೆಹೊಂದಿದ್ದೆನು, ಎಂದು ದುಃಖಿಸಿ ಪುನಃ ಪುನಶ್ಚರಣೆಮಾಡುತ್ತಾ ಪ್ರಾಣಬಿಡುವೆನೆಂದು ನಿರ್ಧರಿಸಿದನು. ಪುನಃ ಸ್ವಪ್ನದಲ್ಲಿ ದೇವಾಲಯದ ಅರ್ಚಕರಲ್ಲಿ ಒಂದು ವಿಪ್ರನೇ, ನೀನು

ಗಾಣಗಾಪುರಿಗೆ ಹೋಗು. ಇಲ್ಲದಿರಲು ನಿನ್ನನ್ನು ದೇವಿಯನುಜ್ಞೆಯಂತೆ ದೇವಾಲಯದ ಹೊರಕ್ಕೆ ಹಾಕುವೆವು. ದೇವಾಲಯದಲ್ಲಿರಗೊಡೆವು. ದೇವಿಯಲ್ಲಿ ಫಲ ತೋರಿಸದಿರು. ದೇವಿಯ ನಿರೂಪದಂತೆ ನಡೆ, ಎಂದು ಸ್ವಪ್ನವಾಯಿತು. ಆ ವಿಪ್ರನು ಪಾರಣೆಗೈದು ಅಲ್ಲಿಂದ ಹೊರಟು ಗಾಣಗಾಪುರಿಗೆ ಬಂದು ಗುರುಗಳೆಲ್ಲಿರುವರೆಂದು ವಿಚಾರಿಸಿದನು. ನಿನ್ನೆ ಶಿವರಾತ್ರಿಯು. ಗುರುಗಳು ಸಂಗಮದಲ್ಲಿರುವರು. ಈ ದಿನ ಪಾರಣೆಗೆ ಮಠಕ್ಕೆ ಬರುವರು, ಎಂದು ಜನರು ಹೇಳಿದರು. ಇಷ್ಟರಲ್ಲಿಯೇ ಗುರುಗಳು ಮಠಕ್ಕೆ ಬಂದರು. ಇವನು ದೂರದಲ್ಲಿ ನಿಂತಿದ್ದನು. ಭಕ್ತರು ಗುರುರಾಜರವರೇ, ಒಬ್ಬ ಕುಷ್ಠರೋಗಿಯು ತಮ್ಮ ದರ್ಶನಕ್ಕೆ ಬಂದಿರುವನು, ಎಂದರಿಕೆಗೈದರು.

ಆಗ ಗುರುಗಳು ಈ ವಿಪ್ರನು ಸಂದೇಹಮನದಿಂದ ಬಂದಿರುವನು, ಎಂದರಿತು ಆತನನ್ನು ಮಠಕ್ಕೆ ಬರಹೇಳು, ಎಂದರು. ಆತನು ಭಕ್ತರ ಮಾತಿನಂತೆ ಬಂದು ಗುರುಗಳನ್ನು ಕಂಡು ದೂರದಲ್ಲಿಯೇ ಸಾಷ್ಟಾಂಗ ನಮಸ್ಕಾರ ಮಾಡಿದನು. ಆಗ ಶ್ರೀಗುರುವು ಅಯ್ಯಾ ವಿಪ್ರನೇ, ನೀನು ದೇವಿಯ ಹತ್ತಿರ ಹೋಗದೆ ನರರಾದೆಮ್ಮ ಹತ್ತಿರ ಬಂದುದೇಕೆ? ಸಂದೇಹದಿಂದಲೇ ಬಂದರೆ ಕಾರ್ಯಸಿದ್ಧಿಯು ಹೇಗಾದೀತು? ಎಂದು ಕೇಳಿದರು. ಈ ಮಾತನ್ನು ಕೇಳಿ ವಿಪ್ರನು ಮಹಾಸ್ವಾಮಿ, ನನ್ನ ಮನಸ್ಸಿಗೆ ಸಾಕ್ಷಿಯು ದೊರೆಯಿತು. ಮನ್ನಿಸಿರಿ, ಎಂದು ವಂದಿಸಿದನು. ಸ್ವಾಮಿ! ನಾನು ತಮೋಗುಣಾನ್ವಿತನು; ಅಜ್ಞಾನಿಯು; ಮಂದಮತಿಯು; ತಮ್ಮ ಪಾದದರ್ಶನದಿಂದ ಶುದ್ಧನಾದೆನು; ಈ ದಿನವು ಸುದಿನವು; ತಮ್ಮ ದರ್ಶನದಿಂದ ಧನ್ಯನಾದೆನು; ನಾನು ಪಾಪಿಯು; ಪಾಪಸಂಭವನು; ನಿಮ್ಮಂ ಮರೆಹೊಕ್ಕೆನು; ನೀವು ಭಕ್ತಾಧಾರರು; ಶರಣಾಗತ ವಜ್ರಪಂಜರರು; ನೃಸಿಂಹಸರಸ್ವತಿಗಳೆಂಬ ಬಿರುದುಳ್ಳವರು; ಈ ದಿನ ನನ್ನ ದುಷ್ಕರ್ಮವು ಹೋಯಿತು; ಪರಬ್ರಹ್ಮನನ್ನು ನೋಡಿದೆನು; ನನ್ನ ಇಷ್ಟವು ಫಲಿಸಿತು. ಕೃಪಾಸಾಗರರೇ! ಯತಿರಾಜರೇ! ಭಕ್ತಜನ ಕಾಮಧೇನುವೇ! ನರಜನ್ಮದಲ್ಲಿ ಉದಿಸಿದ ನಿಮ್ಮ ಪಾರವನ್ನು ತಿಳಿದವರ್ಯಾರು? ತ್ರಿಮೂರ್ತಿರೂಪರೇ! ಸಗರಕುಲದವರನ್ನು ಪಾವನಮಾಡಲು ಗಂಗೆಯು ಭೂಮಿಗಿಳಿದು

ಬಂದಂತೆ, ಭಕ್ತರನ್ನು ಭವಸಾಗರದಿಂದ ಮುಕ್ತರನ್ನಾಗಿ ಮಾಡಲು ಅವತರಿಸಿರುವಿರಿ. ಪೂರ್ವದಲ್ಲಿ ಅಹಲ್ಯೆಯು ಕಲ್ಲಾಗಿದ್ದು ಶ್ರೀರಾಮ ಪಾದಸ್ಪರ್ಶದಿಂದ ದಿವ್ಯರೂಪೆಯಾದಂತೆ, ಈ ದಿನ ನಾನು ನಿಮ್ಮ ಪಾದದರ್ಶನದಿಂದ ಧನ್ಯನಾದೆನು. ವಿವಾಹವಾದ ಬಳಿಕ ನನಗೆ ದೇಹದಲ್ಲಿ ಕುಷ್ಠರೋಗವುಂಟಾಗಿದೆ. ನನ್ನ ಪತ್ನಿಯು ನನ್ನನ್ನು ಮುಟ್ಟಬೇಡವೆಂದು ತವರುಮನೆಯಲ್ಲಿರುವಳು. ನನ್ನ ತಾಯಿ ತಂದೆಗಳು ನನ್ನನ್ನು ಮನೆಯಿಂದ ಹೊರಡಿಸಿದರು. ದುಃಖದಿಂದ ನಾನು ಸಂಸಾರವಂ ಬಿಟ್ಟು ಬಂದೆನು. ತುಳಜಾಪುರಿಯಲ್ಲಿದ್ದು ಅತಿ ಕಷ್ಟಪಟ್ಟೆನು. ಅಲ್ಲಿ "ವಿಪ್ರನೇ, ಚಂದಲಾಪರಮೇಶ್ವರಿಯ ಸ್ಥಾನಕ್ಕೆ ಹೋಗು. ಇಲ್ಲಿ ನಿನ್ನ ಇಷ್ಟ ಸಿದ್ಧಿಯಾಗದು" ಎಂದು ಸ್ವಪ್ನವಾಯಿತು. ಚಂದಲಾಪರಮೇಶ್ವರಿಯ ಹತ್ತಿರ ಬಂದೆನು. ಅಲ್ಲಿಯೂ ಸ್ವಪ್ನವಾಗಿ ತಮ್ಮ ಸನ್ನಿಧಿಗೆ ಬಂದೆನು. ನನ್ನಲ್ಲಿ ದೇವಿಯು ನಿರ್ದಯಳಾದಳು. ನಾನು ಪಾಪಿಯೂ, ಕುಷ್ಠಿಯೂ ಆದುದರಿಂದ ಜನರು ನನ್ನ ಮುಖವಂ ನೋಡರು. ಇನ್ನು ನನಗೆ ಮರಣವೇ ವಿಹಿತವು. ಆಶಾಪಾಶವು ನನ್ನಂ ಬಿಡದು. ಈ ದೇಹದ ಇಚ್ಛೆಯು ನನಗಿಲ್ಲವು. ನಿಮ್ಮಂ ಮರೆಹೊಕ್ಕೆನು. ದೇವಿಯರು ಚಾಳಿಸಿದಂತೆ ನನ್ನನ್ನು ಚಾಳಿಸಬೇಡಿರಿ. ನನ್ನ ಇಷ್ಟವನ್ನುಂಟುಮಾಡಿಸುವಿರಾ, ಇಲ್ಲವೇ ಬೇಗ ತಿಳಿಸಿರಿ. ನಿಮ್ಮೆದುರಿನಲ್ಲಿ ಪ್ರಾಣ ಬಿಡುವೆನು, ಎಂದನು. ಈ ಮಾತನ್ನು ಕೇಳಿ ಗುರುವು ನಕ್ಕು, ಸೋಮನಾಥ ನೆಂಬವನನ್ನು ಕರೆದು, ಇವನನ್ನು ಸಂಗಮಕ್ಕೆ ಕರೆದುಕೊಂಡು ಹೋಗಿ ಸಂಕಲ್ಪವಂ ಹೇಳಿಸಿ, ಪುಷ್ಕರತೀರ್ಥದಲ್ಲಿ ಸ್ನಾನಮಾಡಿಸಿ, ಅಶ್ವತ್ಥಪ್ರದಕ್ಷಿಣೆ ಮಾಡಿಸಿ, ಅವನ ಬಟ್ಟೆಯನ್ನು ತೆಗೆಯಿಸಿ ಹೊಸ ಬಟ್ಟೆಯನ್ನು ಕೊಟ್ಟು ಬೇಗ ಪಾರಣೆಗೆ ಕರೆದುಕೊಂಡು ಬಾ, ಎಂದು ನಿರೂಪಿಸಿದರು. ಆ ವಿಪ್ರನು ಇದರಂತೆ ಈತನಿಗೆ ಸ್ನಾನಮಾಡಿಸಿದನು. ಆಗ ಇವನ ದೇಹವು ಬೇರೆ ವರ್ಣವಾಯಿತು. ಅಶ್ವತ್ಥಪ್ರದಕ್ಷಿಣೆ ಮಾಡಲು ದೇಹವು ಸುವರ್ಣದಂತಾಯಿತು. ಇವನು ಹಳೆಯ ಬಟ್ಟೆಯನ್ನು ಬಿಸುಟು ಹೊಸ ಬಟ್ಟೆಯನ್ನುಟ್ಟನು. ಇವನು ಹಳೆ ಬಟ್ಟೆಯನ್ನು ಭೂಮಿಗೆ ಹಾಕಲು ಆ ಭೂಮಿಯು ಚೌಳುಭೂಮಿ

ಯಾಯಿತು. ನಂದಿಯು ಗುರುಸನ್ನಿಧಿಗೆ ಬಂದು ಗುರುಗಳನ್ನು ವಂದಿಸಿದನು. ಜನರು ವಿಸ್ಮಿತರಾದರು. ನಂದಿಯು ಹರ್ಷದಿಂದ ಗುರುಚರಣಗಳಲ್ಲಿ ಹೊರಳಾಡಿ ಸ್ತುತಿಸಿದನು. ಆಗ ಗುರುವು ವಿಪ್ರನೇ, ನಿನ್ನ ಇಷ್ಟವಾಯಿತೇ? ದೇಹವು ಹೇಗಿದೆ? ನೋಡಿಕೋ, ಎಂದರು. ಆಗ ಆತನು ನೋಡಿಕೊಂಡನು. ದೇಹವು ಚೆನ್ನಾಗಿತ್ತು. ಮೊಳಕಾಲಿನಲ್ಲಿ ಮಾತ್ರ ಕುಷ್ಠವು ಉಳಿದಿತ್ತು. ಆಗ ಅದನ್ನು ನೋಡಿ ಹೆದರಿ ಸ್ವಾಮಿ, ನಿಮ್ಮ ಕರುಣೆಯುಂಟಾದರೂ ಈ ರೀತಿಯಿಂದ ಸ್ವಲ್ಪ ರೋಗವು ಉಳಿಯಲು ಕಾರಣವೇನು? ಮಹಾತ್ಮರೇ, ದಯ ಮಾಡಿರೆಂದು ಬಿನ್ನವಿಸಿದನು. ಆಗ ಗುರುವು ಎಲೈ ವಿಪ್ರನೇ, ನರನಾದ ನಾನು ಏನನ್ನು ಮಾಡಿಯಾನೆಂಬ ಸಂಶಯಮನದಿಂದ ನೀನಿಲ್ಲಿಗೆ ಬಂದಿರುತ್ತಿ. ಇದರಿಂದ ಸ್ವಲ್ಪ ರೋಗವು ಉಳಿಯಿತು. ನೀನು ಸದಾ ನಮ್ಮನ್ನು ಸ್ತುತಿಸುತ್ತಿರು. ಜಾಗ್ರತೆಯಿಂದ ರೋಗವು ನಿಶ್ಚಯವಾಗಿ ಗುಣವಾಗುವುದು. ನೀನು ಕವಿತ್ವವನ್ನು ಮಾಡೆಂದು ನಿರೂಪಿಸಿದರು. ಆಗ ವಿಪ್ರನು ಸ್ವಾಮಿ, ನನಗೆ ಓದಲು ಬಾರದು. ಕಾವ್ಯಜ್ಞಾನವಿಲ್ಲ. ಕವಿತ್ವವನ್ನು ಹೇಗೆ ಮಾಡಲಿ? ಎಂದು ವಂದಿಸಿದನು. ಆಗ ಗುರುವು ವಿಪ್ರನ ಬಾಯಿಯನ್ನು ತೆರೆದು ನಾಲಿಗೆಗೆ ವಿಭೂತಿಯನ್ನು ಪ್ರೋಕ್ಷಿಸಿದರು. ಆಗ ಆತನಿಗೆ ಜ್ಞಾನೋದಯವಾಯಿತು. ಆ ವಿಪ್ರನು ಗುರುಚರಣಗಳಲ್ಲಿ ತಲೆಯನ್ನಿಟ್ಟು ನಿಂತು ಸ್ತುತಿಸುವನು. ಸ್ವಾಮಿ, ಮಾಯಾಪಾಶದಿಂದ ಸುತ್ತಲ್ಪಟ್ಟ ನಾನು ಸಂಸಾರಸಾಗರದಲ್ಲಿ ಮುಳುಗಿ ನಿಮ್ಮ ಪಾದಂಗಳನ್ನು ನೆನೆಯದೆ ಮರೆತೆನು. ಸಂಸಾರವು ಮಾಯಾಜಾಲವು. ನಾನಾ ಜನ್ಮಗಳಲ್ಲಿ ಹುಟ್ಟಿದೆನು. ನಿಮ್ಮ ನಾಮವು ನೆನಪಾಗಲಿಲ್ಲ. ನಾನು ಮಂದ ಮತಿಯು. ಸ್ವೇದಜ, ಅಂಡಜ, ಉದ್ಭಿಜಗಳ ಯೋನಿಗಳಲ್ಲಿ ಹುಟ್ಟಿದೆನು. ಇವುಗಳಲ್ಲಿ ವಿಪ್ರಜನ್ಮವು ಅತಿ ವಿಶೇಷವಾದುದು. ಗುರುಭಕ್ತಿಯಿಲ್ಲದವನ ಜನ್ಮವು ವ್ಯರ್ಥವು. ತಾಯಿಯ ಶೋಣಿತವೂ, ತಂದೆಯ ವೀರ್ಯವೂ ಸೇರಿ ತಾಯಿಯ ಗರ್ಭದಲ್ಲಿ ತಡೆಯಲ್ಪಟ್ಟು, ಐದು ದಿನಗಳು ಬುದ್ಬುದಾಕಾರವಾಗುವುದು. ಹದಿನೈದು ದಿನಗಳ ಮೇಲೆ ಒಂದು ರಸವಾಗಿ ಪಂಚತತ್ವರೂಪವಾಗಿ, ಒಂದು ತಿಂಗಳಲ್ಲಿ

ಪಿಂಡವಾಗಿ, ಎರಡು ತಿಂಗಳಲ್ಲಿ ತಲೆಯೂ, ಕಾಲುಗಳೂ, ಮೂರು ತಿಂಗಳಲ್ಲಿ ಸರ್ವಾವಯುವವೂ, ನವದ್ವಾರಗಳೂ ಉಂಟಾಗುವುವು. ಪಂಚತತ್ವಗಳಾದ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶಗಳಿಂದ ಪ್ರಾಣವುಂಟಾಯಿತು. ಐದನೇ ತಿಂಗಳಲ್ಲಿ ಚರ್ಮ, ರೋಮಗಳೂ, ೬ನೇ ತಿಂಗಳಲ್ಲಿ ಉಚ್ಛ್ವಾಸವೂ, ೭ನೇ ತಿಂಗಳಲ್ಲಿ ಕಣ್ಣು, ನಾಲಿಗೆ, ಮೂಗು, ಮೇದಸ್ಸು, ಮಜ್ಜಾಸರಗಳು ದೃಢವಾದುವು. ಈ ರೀತಿಯಿಂದ ಒಂಭತ್ತು ತಿಂಗಳು ಜನನೀ ಗರ್ಭದಲ್ಲಿ ರಕ್ತಮಲಮೂತ್ರಗಳಲ್ಲಿದ್ದು ಕಷ್ಟಪಟ್ಟೆನು. ತಾಯಿಯು ಪಸಿ, ಉಪ್ಪು, ಹುಳಿ, ಖಾರಗಳನ್ನು ಮನಬಂದಂತೆ ತಿನ್ನಲು ಬಹು ದುಃಖಪಟ್ಟೆನು. ಆಗಲೂ ನಿಮ್ಮ ಸ್ಮರಣೆಯಾಗಲಿಲ್ಲ. ಯೋನಿಯಿಂದ ಹುಟ್ಟಿದೆನು. ಆಗ ನನ್ನ ಹಣೆಯಲ್ಲಿ ಆಯುಸ್ಸು ಬರೆಯಲ್ಪಟ್ಟಿತ್ತು. ಇದರಲ್ಲಿ ಅರ್ಧವು ನಿದ್ರೆಯಲ್ಲಿ ಹೋಯಿತು. ಉಳಿದ ಆಯುಷ್ಯದ ಮೂರು ಭಾಗಗಳಲ್ಲಿ ಬಾಲ್ಯ, ಯೌವನ, ವಾರ್ಧಿಕಗಳೆಂದು ಮೂರು ವಿಧಗಳು. ಬಾಲ್ಯದಲ್ಲಿ ಬಹು ಕಷ್ಟವು. ನನ್ನನ್ನು ತೊಟ್ಟಿಲಲ್ಲಿ ಹಾಕಿದರು. ಮಲಮೂತ್ರದಲ್ಲಿ ಹೊರಳಾಡಿದೆನು. ಈ ದುಃಖವನ್ನು ಜ್ಞಾಪಿಸಿಕೊಂಡರೆ ಹೃದಯವು ಒಡೆದುಹೋಗುವುದು. ಗುರುನಾಥನೇ, ಏನು ಹೇಳಲಿ? ನಾನಾ ದುಃಖವನ್ನನುಭವಿಸಿದೆನು. ಮಲಮೂತ್ರಗಳಲ್ಲಿ ಹೊರಳಾಡುತ್ತಾ, ನನ್ನ ಮಲವನ್ನು ನಾನೇ ತಿನ್ನುತ್ತಾ, ಅಜ್ಞಾನಾಂಧಕಾರದಲ್ಲಿ ಮುಚ್ಚಲ್ಪಟ್ಟೆನು. ಒಂದು ಸಾರಿ ಹೊಟ್ಟೆನೋವಿನಿಂದ ಅಳಲು ತಾಯಿಯು ಸ್ತನ್ಯಕೊಡುತ್ತಿದ್ದಳು, ಹಸಿವೆಯಾದರೆ ಹೊಟ್ಟೆ ನೋವೆಂದು ಬಾಯಿಯಲ್ಲಿ ಬೆರಳಿಟ್ಟು ಔಷಧಿಯಂ ಕುಡಿಸುವಳು. ಹೀಗೆ ಹಸಿವೆಯಿಂದ ಪೀಡಿತನಾಗಿರಲು ತೊಟ್ಟಿಲಲ್ಲಿಟ್ಟು ಹಾಡುತ್ತಾ ತೂಗುವಳು. ಮುಖಕ್ಕೆ ಎಣ್ಣೆಯನ್ನು ಹಚ್ಚಿ ಮಂತ್ರಿಸಿ ರಕ್ಷೆ ಕಟ್ಟುವಳು. ನನ್ನ ಹಸಿವೆಯನ್ನರಿಯಳು. ತೊಟ್ಟಿಲಲ್ಲಿಟ್ಟು ತೂಗುವಳು. ಹಾಸಿಗೆಯಲ್ಲಿರುವಾಗ ಚೇಳು ಕುಟುಕಲು ನಾನು ಅಳುತ್ತಿರಲು, ತೊಟ್ಟಿಲಲ್ಲಿಟ್ಟು ಸುಮ್ಮನಿರೆಂದು ಚೇಳಿನ ವಿಷವೆಂದರಿಯದೆ ಸ್ತನ್ಯಕೊಡುವಳು; ಆಗ ಸ್ತನ್ಯವನ್ನು ಪಾನಮಾಡದಿರಲು ತೊಟ್ಟಿಲಲ್ಲಿ ಮತ್ತೆ ಮಲಗಿಸುವಳು; ಆಗ ಪುನಃ ಚೇಳು ಕುಟುಕುವುದು;

ಇದರಿಂದ ನನಗೆ ಪ್ರಾಣಾಂತ್ಯ ದುಃಖವುಂಟಾಗುವುದು. ತಾಯಿಯು ಹುಳಿ, ಉಪ್ಪು, ಖಾರವನ್ನು ತಿನ್ನಲು ತಾಯಿಯ ಸ್ತನ್ಯವು ಹುಳಿಯಾಗಿಯೂ ಇರುತ್ತಿತ್ತು. ತಾಯಿಯು ನನಗೆ ಔಷಧಿಯನ್ನು ಹಾಕುತ್ತಿದ್ದಳು. ಇದರಿಂದ ನನಗೆ ಕಣ್ಣುನೋವಾಗುತ್ತಿತ್ತು. ಆಗ ನನ್ನ ಕಣ್ಣಿಗೆ ಕುಂಕುಮವನ್ನೂ, ಲವಣಕ್ಷಾರವನ್ನೂ ಹಾಕುತ್ತಿದ್ದಳು. ಬಾಲ್ಯದಲ್ಲಿ ಈ ರೀತಿ ಕಷ್ಟಪಟ್ಟು ಹನ್ನೆರಡು ವರ್ಷಗಳನ್ನು ಕಳೆದೆನು. ಆಗ ನಿಮ್ಮನ್ನು ನೆನೆಯಲಿಲ್ಲ. ಇದರಿಂದ ಪೂರ್ವಜನ್ಮದ ಸ್ಮರಣೆಯು ನನಗಾಗಲಿಲ್ಲ. ಆಯುಷ್ಯದ ದ್ವಿತೀಯಭಾಗದಲ್ಲಿ ಯೌವನದಲ್ಲಿ ಶರೀರವು ಮದನಬಾಧೆಯಿಂದ ವ್ಯಾಪ್ತವಾಗಿ, ದೀಪಕ್ಕೆ ಪತಂಗವು ಬೀಳುವಂತೆ ಮದಿಸಿತ್ತು. ಆಗ ತಂದೆತಾಯಿಗಳನ್ನೂ, ಗುರುವಿಪ್ರರನ್ನೂ ನಿಂದಿಸುತ್ತಾ, ಕುಲಾಕುಲ ವಿಚಾರಮಾಡದೆ ಪರಸ್ತ್ರೀಯಲ್ಲಾಸಕ್ತನಾಗಿ, ಮುದುಕರನ್ನು ಹಳಿಯುತ್ತಾ, ವಿನೋದ ಮಾಡುತ್ತಾ ಕೊಬ್ಬಿ ನಿಮ್ಮ ಚರಣಂಗಳನ್ನು ನೆನೆಯಲಿಲ್ಲ. ತಿಂಡಿಯಾಸೆಗಾಗಿ ಏನಾನು ಪ್ರಾಣಬಿಡುವಂತೆ ಮದನಬಾಣ ಪೀಡಿತನಾಗಿ ಇಂದ್ರಿಯವಶನಾದೆನು. ನಾನಾ ವರ್ಣದ ಸ್ತ್ರೀಯರನ್ನು ಸಂಗ್ರಹಿಸಿ ಪರಸಿರಿಯನ್ನಪಹರಿಸಿ ಸಿದ್ಧಸಾಧುಗಳನ್ನು ನಿಂದಿಸಿದೆನು. ಆಗ ನನಗೆ ಕಣ್ಣೇ ಕಾಣಲಿಲ್ಲ. ಈ ರೀತಿ ಕಾಮದಿಂದ ಕೊಬ್ಬಿ ಹಿಂದುಮುಂದರಿಯದೆ ಪತಂಗವು ದೀಪಕ್ಕೆ ಬೀಳುವಂತೆ ಮದನಬಾಣದಿಂದ ಸುತ್ತಲ್ಪಟ್ಟು, ಒಳ್ಳೆಯ ಬುದ್ಧಿವಾದವನ್ನು ಕೇಳದೇ, ನಿಮ್ಮ ಚರಣವಂ ನೆನೆಯದೆ ಕಾಲ ಕಳೆದೆನು. ಇನ್ನೇ ವೃದ್ಧಾವಸ್ಥೆಯಲ್ಲಿ ಸ್ತ್ರೀಪುತ್ರರಿಂದ ನಿಂದಿತನಾಗಿ, ಕಫ ಕೆಮ್ಮುಗಳಿಂದ ಕೂಡಿ ದೇಹವು ನಡುಗುತ್ತಾ ಕೂಡಲು ನರೆದಿರಲು, ತಿಂಡಿಯನ್ನಗಿಯಲು ಹಲ್ಲುಗಳಿಲ್ಲದೆ, ಕಿವಿ ಕೇಳದೆ, ಕಣ್ಣಾಣದೆ ನಾನಾ ಕಷ್ಟದಿಂದ ಇರುವಾಗ ನಿಮ್ಮಂ ನೆನೆಯಲಿಲ್ಲ. ಗುರುನಾಥರೇ, ಈ ಸಂಸಾರಸಾಗರದಿಂದ ನನ್ನಂ ದಾಟಿಸಿರಿ. ಮಂದಮತಿಯಾದ ನಾನು ನಿಮ್ಮ ಚರಣಗಳ ಗುರುತಿಯದೆ, ನೀವು ನಾರಾಯಣಾವತಾರರಾಗಿಯೂ, ವಿಶ್ವತಾರಕರಾಗಿಯೂ, ತ್ರಿಮೂರ್ತ್ಯಂಶರಾಗಿಯೂ, ಪರಬ್ರಹ್ಮರೂಪರಾಗಿರುವುದನ್ನು ಅರಿಯಲಿಲ್ಲ. ದಿವಾಂಧರಾದ ನರರು ನಿಮ್ಮ ಮಹಿಮೆಯನ್ನರಿಯರು. ನೀವು ವಿಶ್ವ

ಪಾಲಕರಾಗಿರುವಿರಿ. ಕಿಂಕರನಾದ ನನ್ನನ್ನು ಈ ಭವದಿಂದ ದಾಟಿಸಿರಿ, ಎಂದಾನಂದದಿಂದ ಸ್ತುತಿಸುತ್ತಿರಲು ಜನರು ಈ ವಿಚಿತ್ರವನ್ನು ನೋಡುತ್ತಿದ್ದರು. ಆಗ ನಂದಿಯು ಅಲ್ಲಿ ಸೇರಿದ ಜನರನ್ನು ಕುರಿತು ಜನರೇ, ನಾನು ಹೇಳುವುದನ್ನು ಕೇಳಿರಿ. ಶ್ರೀಗುರುಗಳು ಪರಬ್ರಹ್ಮಸ್ವರೂಪರು. ನಾನು ಮಹಾಪಾಪಿಯಾದರೂ ಗುರುದರ್ಶನಮಾತ್ರದಿಂದ ಈಗ ಪಾಪವಿಲ್ಲದವನಾದೆನು. ಗುರುಕೃಪೆಯುಂಟಾಗಿ, ಹುಲ್ಲುಬಣವೆಗೆ ಬೆಂಕಿ ಬಿದ್ದು ಸುಟ್ಟಂತೆ ಪಾಪವು ಸುಟ್ಟುಹೋಯಿತು. **ಚರಣಂ ಪವಿತ್ರಂ ವಿತತಂ ಪುರಾಣಂ** ಎಂದು ವೇದಶಾಸ್ತ್ರಗಳು ಹೇಳುವವು. ಗುರುಸೇವೆಯೇ ಸೇವೆಯು. ಗುರುವು ಹೊರತು ಬೇರೆ ದೇವರಿಲ್ಲ. ಗುರುಚರಣಂಗಳಂ ವಂದಿಸಿದರೆ ಬ್ರಹ್ಮನು ನಮ್ಮ ಹಣೆಯಲ್ಲಿ ಬರೆದ ಬರಹದಂತೆ ಸ್ಥಿರವಾದ ಇಷ್ಟಾರ್ಥವುಂಟಾಗುವದು. ಕಾಮಧೇನುಸ್ವರೂಪರಾದ ನೃಸಿಂಹಸರಸ್ವತಿಗಳೆಂಬ ಗುರುವರ್ಯರು ಹತ್ತಿರದಲ್ಲಿರಲು ನೀವು ಏಕೆ ಗುರ್ತಿಸಲಿಲ್ಲ. ಗುರುಗಳನ್ನು ಭಜಿಸಿರಿ. ಇಹಸುಖವನ್ನೂ, ಪರದಲ್ಲಿ ವೈಕುಂಠಲೋಕವನ್ನೂ ಹೊಂದಿಸುವ ಈ ಗುರುವರ್ಯರನ್ನು ವಂದಿಸಿರಿ. ನಿಮಗೆ ಸುಖವುಂಟಾಗುವುದು. ಇದು ಸತ್ಯವು, ಎಂದು ಸ್ತುತಿಸಲು ಗುರುಗಳು ಹರ್ಷಿತರಾಗಿ ಇವನಿಗೆ ಕವೀಶ್ವರನೆಂದು ಹೆಸರಿಟ್ಟು ನಿರೂಪಿಸಿದರು. ಆಗ ನಂದಿಯ ಮೊಳಕಾಲಿನಲ್ಲಿದ್ದ ರೋಗಶೇಷವು ಹೋಯಿತು. ನಂದಿಯು ಹರ್ಷಿತನಾಗಿ ಗುರುವನ್ನು ಸೇವಿಸುತ್ತಿದ್ದನು, ಎಂದು ಸಿದ್ಧರು ಹೇಳಿದರು. ಗುರುಚರಿತ್ರೆಯನ್ನು ಕೇಳಿದರೆ ಸಕಲೇಷ್ಟಗಳುಂಟಾಗುವವು, ಎಂಬಲ್ಲಿಗೆ ನಲವತ್ತೈದನೇ ಅಧ್ಯಾಯವು ಮುಗಿದುದು.

## ೪೬ ನೇ ಅಧ್ಯಾಯ.

ನಾಮಧಾರಕನು ಸಿದ್ಧರನ್ನು ಕುರಿತು ಸ್ವಾಮಿಾ, ಹಿಂದಿನ ಕಥೆಯಲ್ಲಿ ನಿರೂಪಿಸಿದಂತೆ ಮತ್ತಾವ ಕವಿಯು ಬಂದು ಗುರುವಿಗೆ ಶಿಷ್ಯನಾದನು, ಎಂಬುದನ್ನು ದಯವಿಟ್ಟು ನಿರೂಪಿಸಿರಿ, ಎಂದು ಬೇಡಿಕೊಂಡನು. ಆಗ ಸಿದ್ಧರು ಹೇಳುವರು. ಈ ಚರಿತ್ರೆಯು ಅಲೌಕಿಕ

ವಾದುದು. ಗುರುಗಳು ಗಾಣಗಾಪುರದಲ್ಲಿರಲು ಇವರ ಮಹಿಮೆಯು ಪ್ರಸಿದ್ಧವಾಯಿತು. ಅನೇಕರು ಶಿಷ್ಯರಾದರು. ಹೀಗಿರಲೊಂದು ದಿನ ಒಬ್ಬ ಭಕ್ತನು ಗುರುಗಳನ್ನು ಹಿಪ್ಪರಗಿ ಎಂಬ ತಮ್ಮ ಗ್ರಾಮಕ್ಕೆ ಕರೆದುಕೊಂಡು ಹೋಗಿ ಬಹಳವಾಗಿ ಅರ್ಚಿಸಿದನು. ಆ ಗ್ರಾಮದಲ್ಲಿ ಕಲ್ಲೇಶ್ವರನೆಂಬ ದೇವಾಲಯವಿತ್ತು. ಅಲ್ಲಿ ನರಕೇಸರಿ ಎಂಬ ದ್ವಿಜನು ಆ ಲಿಂಗಸೇವೆ ಮಾಡುತ್ತಾ ನಿತ್ಯವೂ ಹೊಸದಾಗಿ ಐದು ಕವಿತ್ವಗಳನ್ನು ಮಾಡುತ್ತಿದ್ದನು. ಈತನು ಕಲ್ಲೇಶ್ವರನೆಂಬ ಶಬ್ದ ಹೊರತು ಇನ್ನ್ಯಾವ ಶಬ್ದವನ್ನೂ ಆಡುತ್ತಿರಲಿಲ್ಲ. ಏಕಚಿತ್ತದಿಂದ ಶಿವನನ್ನು ಸೇವಿಸುತ್ತಿದ್ದನು. ಜನರೆಲ್ಲರೂ ಈ ದ್ವಿಜನಂ ಕುರಿತು ಎಲೈ ವಿಪ್ರನೇ, ನಿನ್ನ ಕವಿತ್ವವು ಪ್ರಸಿದ್ಧವಾಗಿದೆ. ಗುರುಗಳಿಗೆ ಕವಿತ್ವದಲ್ಲಿ ಪ್ರೀತಿಯಾದುದರಿಂದ ಗುರುಸ್ತುತಿ ಮಾಡು, ಎಂದರು. ಆಗ ಆತನು ಅಯ್ಯಾ, ನನ್ನ ನಾಲಿಗೆಯನ್ನು ಕಲ್ಲೇಶ್ವರನಿಗೆ ಮಾರಿದ್ದೇನೆ. ದೇವಪೂಜೆಯು ಅಪಾರವಾಗಿದೆ. ನರಸ್ತುತಿಯಂ ಮಾಡುವುದಿಲ್ಲ, ಎಂದು ಹೇಳಿ ದೇವರ ಪೂಜೆಗೆ ಹೊರಟನು. ಈತನು ದೇವರ ಪೂಜೆ ಮಾಡಿದೊಡನೆ ನಿದ್ರಿಸಿದನು. ನಿತ್ಯವೂ ಪೂಜೆಮಾಡಿ ಶಿವನಂ ಕುರಿತು ಕವಿತ್ವ ಮಾಡುತ್ತಿದ್ದನು. ಆ ದಿನ ಅದೆಲ್ಲವನ್ನೂ ಮರೆತು ದೇವಾಲಯದಲ್ಲಿ ನಿದ್ರಿಸುತ್ತಿದ್ದನು. ಆಗ ಸ್ವಪ್ನದಲ್ಲಿ ಆ ಲಿಂಗದ ಮೇಲೆ ಶ್ರೀಗುರುಗಳು ಕುಳಿತಂತೆಯೂ, ತಾನು ಸಂತೋಷದಿಂದರ್ಚಿಸಿದಂತೆಯೂ, ಲಿಂಗವು ಕಾಣದೇ ಗುರುವೇ ಕಾಣಿಸಿದಂತೆಯೂ, ಆಗ ಗುರುಗಳು ಹರ್ಷಿತರಾಗಿ ಎಲೈ ದ್ವಿಜನೇ, ನರರಲ್ಲಿ ಭಕ್ತಿಯಿಲ್ಲದ ನೀನು ನಮ್ಮನ್ನರ್ಚಿಸುವುದೇಕೆ? ಎಂದು ಹೇಳಿದಂತೆಯೂ, ತಾನು ಷೋಡಶೋಪಚಾರ ಪೂಜೆ ಮಾಡಿದಂತೆಯೂ ಸ್ಥಿರಮನದಿಂದ ಸ್ವಪ್ನ ಕಂಡು, ಎಚ್ಚತ್ತು ವಿಸ್ಮಯ ಹೊಂದಿ, ನೃಸಿಂಹಸರಸ್ವತಿಗಳು ತ್ರಿಮೂರ್ತಿಗಳ ಅವತಾರರಾಗಿದ್ದಾರೆ. ಇವರ ದರ್ಶನಮಾಡಬೇಕೆಂದು ನಿರ್ಧರಿಸಿ ಗುರುಗಳ ಹತ್ತಿರ ಬಂದು ಗುರುಚರಣಂಗಳಲ್ಲಿ ಸಾಷ್ಟಾಂಗ ನಮಸ್ಕಾರಮಾಡಿದನು. ಸ್ವಾಮಿಾ, ನಾನು ಅಜ್ಞಾನಿಯು. ನಿಮ್ಮ ಮಹಿಮೆಯನ್ನರಿಯೆನು. ಲೋಕ ಮಾಯೆಯಿಂದ ಮೋಹಿತನಾಗಿ ನಿಮ್ಮ ಗುರುತರಿಯದಿದ್ದೆನು. ಈಗ ನೀವು ಸಾಕ್ಷಾತ್ತಾದ ನಿರ್ಗುಣಸ್ವರೂಪರೆಂದು ತಿಳಿದೆನು. ನೀವೇ

ಕಲ್ಲೇಶ್ವರರಾಗಿದ್ದೀರಿ. ಜಗದ್ಗುರುಗಳೆಂದು ಸ್ಥಿರವಾಗಿ . ತಿಳಿದೆನು. ವಿಶ್ವಾಧಾರನೇ, ಶರಣಾಗತ ವಜ್ರಪಂಜರನೇ, ನಿಮ್ಮ ಚರಣಗಳಲ್ಲಿ ಭ್ರಮರಸ್ವರೂಪನಾಗಿ ಬಂದೆನು. ನವನಿಧಿಗಳು ಹತ್ತಿರದಲ್ಲಿರಲು ಕಾಡಿನಲ್ಲಿ ತಿರುಗುವುದೇಕೆ? ಮನೆಗೆ ಕಾಮಧೇನು ಬಂದಿರಲು ದೈನ್ಯ ವೆಲ್ಲಿಯದು? ಪೂರ್ವದಲ್ಲಿ ಅನೇಕ ಮುನಿಗಳು ಕಷ್ಟಪಟ್ಟು ತಪಸ್ಸು ಮಾಡಿದರೂ ಅವರಿಗೆ ನೀವು ದರ್ಶನಕೊಡಲಿಲ್ಲ ತಪಸ್ಸನ್ನು ಮಾಡ ದಿದ್ದರೂ ನನಗೆ ದರ್ಶನವಿತ್ತಿರಿ. ನನ್ನ ಇಷ್ಟಾರ್ಥ ಪೂರ್ಣವಾಯಿತು. ಕಲ್ಲೇಶ್ವರನು ಒಲಿದನು. ನೀವೇ ಕಲ್ಲೇಶ್ವರರಾಗಿದ್ದೀರಿ, ಎಂದು ಮನದಲ್ಲಿ ನಿರ್ಧರಿಸಿದ್ದೇನೆ. ನನ್ನಲ್ಲಿ ದಯೆಯನ್ನು ತೋರಿಸಿರಿ, ಎಂದು ವಂದಿಸಿದನು. ಆಗ ಶ್ರೀಗುರುವು ಎಲೈ ವಿಪ್ರನೇ, ನಮ್ಮನ್ನು ನಿತ್ಯವೂ ನೀನು ನಿಂದಿಸುತ್ತಿರುವಿ. ಈ ದಿನ ಭಕ್ತಿಯಿಂದೇಕೆ ನಮ್ಮ ಹತ್ತಿರ ಬಂದೆ? ಎಂದು ಕೇಳಿದರು. ಆಗ ವಿಪ್ರನು ಸ್ವಾಮಿಾ, ಅಜ್ಞಾನಾಂಧ ರಾದ ನಮಗೆ ಜ್ಯೋತಿರ್ಮಯರಾದ, ಆನಂದಮೂರ್ತಿಗಳಾದ ನೀವು ದರ್ಶನವಿತ್ತಿರಿ. ನಾನು ಕಲ್ಲೇಶ್ವರನನ್ನು ಪೂಜಿಸಿದ ಪುಣ್ಯದಿಂದ ನಿಮ್ಮನ್ನು ನೋಡಿದೆನು. ಲಿಂಗಸ್ಥಾನದಲ್ಲಿ ನಿಮ್ಮನ್ನು ನೋಡಿ ಅರ್ಚಿಸಿದೆನು. ಸ್ವಪ್ನದಲ್ಲಿ ಲಿಂಗಸ್ಥಾನದಲ್ಲಿ ತಮ್ಮ ಚರಣಗಳನ್ನು ನೋಡಿದೆನು. ನನ್ನ ಅಂತಃಕರಣವು ಸ್ಥಿರವಾಯಿತು. ತಮ್ಮ ಶಿಷ್ಯ ವರ್ಗದಲ್ಲಿ ನನ್ನನ್ನು ಸೇರಿಸಬೇಕು, ಎಂದು ಆ ದ್ವಿಜವರ್ಯನು ವಿಜ್ಞಾಪಿಸಿ, ಅಪಾರವಾಗಿ ಸ್ತುತಿಸಿ, ಗುರುಗಳನ್ನು ಷೋಡಶೋಪ ಚಾರ ಪೂಜೆಮಾಡಿ ಕವಿತ್ವ ಮಾಡಿದನು. ಮಾನಸಪೂಜೆಯ ವಿಧಾನವು ಹೀಗಿರುವುದು, ಎಂದು ಶ್ರೀಗುರುಗಳು ಈ ಸ್ವಪ್ನರೀತಿಯನ್ನು ಜನರಿಗೆ ಹೇಳುವವರಾದರು. ಪ್ರತ್ಯಕ್ಷವಾಗಿ ನಾವು ಇಲ್ಲದ್ದರೂ, ಈತನು ಸ್ವಪ್ನಾವಸ್ಥೆಯಲ್ಲಿ ನಮ್ಮನ್ನು ನೋಡಿ ಕವಿತ್ವಮಾಡಿದನು, ಎಂದು ಸರ್ವರಿಗೂ ಹೇಳಿ ಈ ಕವಿಗೆ ಅನೇಕ ವಸ್ತ್ರಗಳನ್ನು ಕೊಡಿಸುವವ ರಾದರು. ಆಗ ಆತನು ಗುರುಚರಣಂಗಳಂ ವಂದಿಸಿ, ನಾನು ತಮ್ಮ ಶಿಷ್ಯನಾಗುವೆನೆಂದು ಬಿನ್ನವಿಸಿದನು. ಆಗ ಶ್ರೀಗುರುವು ಅವನನ್ನು ಕುರಿತು ವಿಪ್ರನೇ, ನಮಗಿಂತಲೂ ಕಲ್ಲೇಶ್ವರನೇ ಶ್ರೇಷ್ಠನು. ಅವನನ್ನು ನಿತ್ಯವೂ ಪೂಜಿಸು. ನಾವು ಅಲ್ಲಿಯೇ ಇರುವೆವು, ಎಂದು

ನಿರೂಪಿಸಿದರು. ಆ ವಿಪ್ರನು ಸ್ವಾಮಿಾ, ನಿಮ್ಮನ್ನು ಬಿಟ್ಟು ಕಲ್ಲೇಶ್ವರ ನನ್ನು ಅರ್ಚಿಸುವುದೇಕೆ? ನೀವೇ ತ್ರಿಮೂರ್ತಿಸ್ವರೂಪರಾಗಿ ಕಲ್ಲೇಶ್ವರ ರಾಗಿರುತ್ತೀರಿ. ಇದು ನಿಜವು. ನಿಮ್ಮ ಚರಣಂಗಳನ್ನು ಬಿಡೆನು, ಎಂದು ಬಿನ್ನವಿಸಿ, ಗುರುಗಳೊಡನೆ ಗಾಣಗಾಪುರಕ್ಕೆ ಬಂದು ಕವಿತ್ವ ವನ್ನು ಮಾಡುತ್ತಾ ಸೇವಿಸುತ್ತಿದ್ದನು. ಈ ರೀತಿಯಿಂದಿಬ್ಬರು ಕವೀಶ್ವರರು ಭಕ್ತಿಯಿಂದ ಬಂದು ಶಿಷ್ಯರಾಗಿದ್ದರು, ಎಂದು ಸಿದ್ಧರು ಹೇಳಿದರು, ಎಂದು ಸರಸ್ವತೀಗಂಗಾಧರನು ಪೇಳಿದನೆಂಬಲ್ಲಿಗೆ ಕಲ್ಲೇ ಶ್ವರ ಮಹಿಮೆಯೆಂಬ ನಲವತ್ತಾರನೇ ಅಧ್ಯಾಯವು ಮುಗಿದುದು.

## ೪೭ ನೇ ಅಧ್ಯಾಯ.

ಸಿದ್ಧರು ನಾಮಧಾರಕನೇ, ಗುರುಚರಿತ್ರೆಯನ್ನು ಕೇಳುವುದ ರಿಂದ ನೀನು ಪುತ್ರಪೌತ್ರರನ್ನು ಪಡೆದು ಐಶ್ವರ್ಯವಂತನಾಗಿರುವಿ. ಮುಂಗಥೆಯನ್ನು ಕೇಳು. ಗಾಣಗಾಪುರದಲ್ಲಿ ಗುರುಗಳಿರಲು ದೀಪಾವಳಿಯ ಹಬ್ಬವು ಬಂದಿತು. ಅನೇಕ ಶಿಷ್ಯರು ಗುರುಗಳನ್ನು ಭಿಕ್ಷೆಗೆ ಕರೆದರು. ಇವರಲ್ಲಿ ಪ್ರತಿಯೊಬ್ಬರೂ ಶ್ರೇಷ್ಠರಾಗಿದ್ದರು. ಒಬ್ಬೊಬ್ಬರ ಮನೆಯೂ ಒಂದೊಂದು ಕಡೆಯಲ್ಲಿತ್ತು. ಆಗ ಗುರುಗಳು ಶಿಷ್ಯರಿರಾ, ಎಲ್ಲರ ಮನೆಗೂ ನಾವು ಭಿಕ್ಷೆಗೆ ಬರುವುದೆಂತು? ನೀವೇ ವಿಚಾರಿಸಿರಿ. ಯಾರ ಮನೆಗೆ ಮೊದಲು ನಾವು ಬರಬೇಕು? ಹೇಳಿರಿ. ನಾವು ಶಿಷ್ಯಾಧೀನರು ಎಂದರು. ಆಗ ಶಿಷ್ಯರೆಲ್ಲರೂ ತಮ್ಮ ಮನೆಗೆ ಗುರುಗಳನ್ನು ಕರೆದೊಯ್ಯಬೇಕೆಂದು ಜಗಳವಾಡಿದರು. ಆಗ ಗುರು ಗಳು ಶಿಷ್ಯರೇ, ನೀವು ಏಕೆ ಜಗಳವಾಡುವಿರಿ? ನಾವು ಒಬ್ಬರ ಮನೆಗೆ ಬರುವೆವು, ಎಂದರು. ಆಗ ಶಿಷ್ಯರೆಲ್ಲರೂ ಕೈಜೋಡಿಸಿ ಸ್ವಾಮಿಾ, ಶಕ್ತರು ಅಶಕ್ತರೆಂದು ನೋಡದೆಯೂ, ಪಕ್ಷಪಾತ ಮಾಡದೆಯೂ ಎಲ್ಲರನ್ನೂ ಸಮವಾಗಿ ನೋಡಿರಿ. ದುರ್ಬಲರೆಂದು ಉಪೇಕ್ಷಿಸಿದರೆ ನಾವು ಗಂಗಾಪ್ರವೇಶಮಾಡುವೆವು. ಎಲ್ಲರನ್ನೂ ಸಮವಾಗಿ ನೋಡಿರಿ. ಶ್ರೀಕೃಷ್ಣನು ಕೌರವನ ಮನೆಯನ್ನು ಬಿಟ್ಟು ವಿದುರನ ಮನೆಗೆ ಬಂದು ಪ್ರೀತಿ ತೋರಿಸಿದಂತೆ ಮಾಡಬೇಡಿರಿ. ನಾವೆಲ್ಲರೂ

ನಿಮ್ಮ ದಾಸರು. ಯಾರಲ್ಲಿಯೂ ಉದಾಶೀನರಾಗಬೇಡಿರಿ. ನಿಮ್ಮ ಅನುಜ್ಞೆಯಂತೆ ನಾವು ನಡೆಯುವೆವು, ಎಂದು ಶಿಷ್ಯರೆಲ್ಲರೂ ವಂದಿಸಿ, ನಮ್ಮನ್ನು ನೋಡಿ ನಮ್ಮ ಇಷ್ಟವನ್ನು ಪೂರ್ತಿಮಾಡಿರಿ, ಎಂದು ಬಿನ್ನಯಿಸಿದರು. ಆಗ ಶ್ರೀಗುರುವು ಎಲ್ಲರನ್ನೂ ಕುರಿತು, ನಿಮ್ಮ ಮನೆಗೆ ಬರುವೆವು, ಚಿಂತಿಸದಿರಿ, ಎಂದರು. ಗುರುನಿರೂಪವಂ ಕೇಳಿ ಶಿಷ್ಯರೆಲ್ಲರೂ ಸ್ವಾಮಿನಾ, ಎಲ್ಲರ ಮನೆಗೂ ಬರುವೆವು, ಎನ್ನುವಿರಿ. ಇದನ್ನು ನಂಬುವುದೆಂತು? ಎಂದರು. ಆಗ ಶ್ರೀಗುರುವು ಆಲೋಚಿಸಿ ಈ ಶಿಷ್ಯರು ಅಜ್ಞಾನಿಗಳಾಗಿದ್ದಾರೆ, ಎಂದರಿತು ಒಬ್ಬೊಬ್ಬರನ್ನೇ ಕರೆದು ಶಿಷ್ಯನೇ, ನಾವು ನಿಮ್ಮ ಮನೆಗೆ ಬರುವೆವು, ಯಾರಿಗೂ ಹೇಳದಿರು, ಎಂದು ಪ್ರತಿಯೊಬ್ಬನಿಗೂ ಹೇಳಿ ಸಂಶಯಪಡದಿರಿ, ಎಂದು ಹೇಳಿ ಕಳುಹಿಸಿದರು. ಆಗ ಈ ಏಳು ಜನ ಶಿಷ್ಯರೂ ಗುರುಗಳು ನಮ್ಮ ಮನೆಗೆ ಬರುವರೆಂದು ತಿಳಿದುಕೊಂಡರು. ಇವರಲ್ಲಿ ಪ್ರತಿಯೊಬ್ಬರೂ ಒಬ್ಬರಿಗೂ ಹೇಳದೆ ಹೊರಟರು. ಶ್ರೀಗುರುವು ಮಠಕ್ಕೆ ಬಂದರು. ಆಗ ಒಂದು ವಿನೋದವುಂಟಾಯಿತು. ಆ ಗ್ರಾಮದಲ್ಲಿರುವ ಭಕ್ತರು ಈ ಕೌತುಕವನ್ನು ಕೇಳಿ ಎಲ್ಲರೂ ಕೈಗಳನ್ನು ಜೋಡಿಸಿ, ನಮ್ಮನ್ನು ಇಲ್ಲಿಯೇ ಬಿಟ್ಟು ಹೊರಟುಹೋಗುವಿರಾ? ಎಂದು ಕೇಳಿದರು. ಆಗ ಶ್ರೀಗುರುವು ಭಕ್ತರೇ, ನಾವು ಎಲ್ಲಿಯೂ ಹೋಗುವುದಿಲ್ಲ, ಚಿಂತಿಸದಿರಿ, ಇಲ್ಲಿಯೇ ಇರುವೆವು, ಎಂದರು. ಆಗ ಗುರುವು ದೀಪಾವಳಿಯ ತ್ರಯೋದಶಿಯ ರಾತ್ರಿಯಲ್ಲಿ ಮಂಗಳಸ್ನಾನ ಮಾಡಬೇಕಷ್ಟೆ? ಆಗ ಅಪಾರಮಹಿಮೆಯುಳ್ಳ ನಾರಾಯಣನ ಅಂಶೀಭೂತರಾದ ಗುರುಗಳು ಎಂಟು ರೂಪಗಳುಳ್ಳವರಾಗಿ, ಏಳು ಜನ ಶಿಷ್ಯರ ಮನೆಗೂ ಹೋಗಿ, ಗಾಣಗಾಪುರದಲ್ಲಿಯೂ ಇದ್ದರು. ಈ ರೀತಿಯಿಂದ ದೀಪಾವಳಿಯಲ್ಲಿ ಎಲ್ಲಾ ಸ್ಥಳಗಳಲ್ಲಿಯೂ ಪೂಜೆಯನ್ನು ಸ್ವೀಕರಿಸಿ, ಒಂದೇ ಮೂರ್ತಿಯುಳ್ಳವರಾದರು. ಈ ಗುಟ್ಟನ್ನು ಯಾರೂ ತಿಳಿಯಲಿಲ್ಲ. ಕಾರ್ತೀಕ ಶುದ್ಧ ಪೂರ್ಣಿಮೆಯಲ್ಲಿ ಜನರೆಲ್ಲರೂ ಗುರುಮಠಕ್ಕೆ ದೀಪಾರಾಧನೆಗಾಗಿ ಬಂದರು. ಎಲ್ಲರೂ ಗುರುಗಳನ್ನು ವಂದಿಸಿದರು. ಅವರಲ್ಲಿ ಪ್ರತಿಯೊಬ್ಬರೂ ಕಳೆದ ದೀಪಾವಳಿಯಲ್ಲಿ ಗುರುಗಳು ತಮ್ಮ ತಮ್ಮ ಮನೆಗೆ ಬಂದಿದ್ದರೆಂದು ಎಲ್ಲರೂ

ಜಗಳವಾಡುತ್ತಿದ್ದರು. ತಮ್ಮ ಮನೆಗೆ ಬಂದುದು ನಿಜವೆಂತಲೂ, ನಿಮ್ಮ ಮನೆಗೆ ಬಂದುದು ನಿಜವಲ್ಲವೆಂತಲೂ, ತಾವು ಕೊಟ್ಟ ವಸ್ತ್ರವು ಗುರುಗಳ ಹತ್ತಿರ ಗುರ್ತಿಗೋಸ್ಕರ ಇರುವುದೆಂತಲೂ ಹೇಳಿದರು. ಗ್ರಾಮಸ್ಥರು ಗುರುಗಳು ತಮ್ಮ ಗ್ರಾಮದಲ್ಲಿಯೇ ಇದ್ದು ದೀಪಾವಳಿಯ ಹಬ್ಬವನ್ನು ಮಾಡಿದರೆಂತಲೂ ಹೇಳಿದರು. ಜನರೆಲ್ಲರೂ ಆಶ್ಚರ್ಯಹೊಂದಿ ಗುರುಮಹಿಮೆಯು ಅಪಾರವಾದುದು. ಇವರು ವೇದಮೂರ್ತಿಗಳು. ಇವರ ಮಹಿಮೆಯು ತಿಳಿಯಲಾಗದು. ತ್ರಿಮೂರ್ತಿರೂಪರಾದ, ವಿಶ್ವವ್ಯಾಪಕರಾದ ಗುರುವರ್ಯರೇ! ನಿಮ್ಮ ಚರಣಂಗಳನ್ನು ವರ್ಣಿಸಲು ಶಕ್ತರಲ್ಲ, ಎಂದು ಸ್ತುತಿಸಿ ದೀಪಾರಾಧನೆ ಮಾಡಿ ಭಕ್ತಿಯಿಂದ ವಿಪ್ರಭೋಜನ ಮಾಡಿಸಿದರು. ಗುರು ಮಹಿಮೆಯು ಪ್ರಸಿದ್ಧವಾಯಿತು. ಕಲ್ಪವೃಕ್ಷವು ಹತ್ತಿರದಲ್ಲಿರಲು ಕಿವುಡ ಮೂಕರು ಅದನ್ನು ಗುರ್ತಿಸಲಾರದೆ ಕಷ್ಟಪಡುವರು. ಜನರೇ ಗುರುಗಳನ್ನು ಭಜಿಸಿರಿ. ನಿಮ್ಮಿಷ್ಟವು ಸಿದ್ಧಿಸುವುದು. ಇದು ನಂಬ ತಕ್ಕುದಾಗಿದೆ. ಅಮೃತವು ಸಿಕ್ಕಿರಲು ಹುಳಿಕಾರವುಳ್ಳ ನೀರುಸಾರು ಮೂರ್ಖರಿಗೆ ರುಚಿಸುವುದು. ಜ್ಞಾನಿಗಳಾದ ಭಕ್ತರಿಗೆ ಗುರು ನಾಮಾಮೃತವು ರುಚಿಸುವುದು. ಗುರುಗಳನ್ನು ಎಲ್ಲರೂ ಸೇವಿಸಿರಿ. ಗುರುಗಳು ತ್ರಿಮೂರ್ತಿಸ್ವರೂಪರು. ಶಾಸ್ತ್ರಗಳು ಈ ರೀತಿ ಹೇಳುವುದೆಂದು ನಾನು ಡಂಗುರವನ್ನು ಹೊಡೆಯಿಸುವೆನು. ಗುರು ವಿನಹ ಗತಿಯಿಲ್ಲ. ಗುರುಗಳನ್ನು ನರರೆಂದು ಹೇಳಿದವರು ಮುಂದೆ ಹಂದಿಯಾಗಿ ಹುಟ್ಟುವರು. ವೇದಶಾಸ್ತ್ರಗಳಲ್ಲಿ ಹೇಳಿರುವುದನ್ನು ಕೇಳಿರಿ. ಸಂಸಾರಸಾಗರವನ್ನು ದಾಟುವುದಕ್ಕೆ ಗುರುಸಹಾಯ ಹೊರತಾಗಿ ಬೇರೆ ಗತಿಯಿಲ್ಲ. ಈ ಸಂಸಾರವನದಲ್ಲಿ ಗುರುಸೇವೆಯೆಂಬ ಅಮೃತವನ್ನು ಎಲ್ಲರೂ ಹೊಂದಿರಿ. ನಿಮಗೆ ಅಮರತ್ವವುಂಟಾದೀತು. ಗುರುಗಳು ತ್ರಿಮೂರ್ತಿಗಳ ಅಂಶೀಭೂತರಾಗಿ ಗಾಣಗಾಪುರಿಯಲ್ಲಿ ಪ್ರಸಿದ್ಧಿಹೊಂದಿರುವರು. ಜನರು ಅಲ್ಲಿಗೆ ಹೋಗಿ ಸೇವಿಸಿದರೆ ಇಷ್ಟಾರ್ಥಗಳನ್ನು ಆಗಲೇ ಹೊಂದುವರು. ಪ್ರಶಸ್ತಮನದಿಂದ ಅಲ್ಲಿಗೆ ಹೋಗಿರಿ, ಎಂದರೆಂಬಲ್ಲಿಗೆ ಗುರುಚರಿತ್ರೆಯಲ್ಲಿ ೪೭ನೇ ಅಧ್ಯಾಯವು ಮುಗಿದುದು.

# ೪೮ ನೇ ಅಧ್ಯಾಯ.

ಸಿದ್ಧರು ನಾಮಧಾರಕನೇ, ಕೇಳು. ಗುರುಚರಿತ್ರೆಯನ್ನು ವಿಸ್ತಾರವಾಗಿ ಹೇಳುವೆನು. ಗಾಣಗಾಪುರಿಯಲ್ಲಿ ಗುರುಗಳ ಖ್ಯಾತಿಯು ಬಹಳವಾಯಿತು. ಒಬ್ಬ ಶೂದ್ರನು ಗುರುಗಳು ನಿತ್ಯವೂ ಸಂಗಮಕ್ಕೆ ಸ್ನಾನಕ್ಕೆ ಹೋಗುವಾಗ ದಾರಿಯಲ್ಲಿರುವ ಹೊಲದಲ್ಲಿ ನಿಂತಿದ್ದು ಓಡಿ ಬಂದು ಸಾಷ್ಟಾಂಗ ವಂದನೆಗೈದು ಹೋಗುತ್ತಿದ್ದನು. ಮಧ್ಯಾಹ್ನದಲ್ಲಿ ಗುರುಗಳು ಹಿಂದಿರುಗಿ ಬರುವಾಗಲೂ ಗುರು ಚರಣಂಗಳಲ್ಲಿ ವಂದಿಸುತ್ತಿದ್ದನು. ಹೀಗೆ ಕೆಲವು ದಿನಗಳು ಭಕ್ತಿಯುಳ್ಳವನಾಗಿದ್ದನು. ಆಗ ಗುರುಗಳು ಸುಮ್ಮನೆ ನಿಂತಿರುತ್ತಿದ್ದರು. ಒಂದು ದಿನ ಗುರುಗಳು ಅಯ್ಯಾ ಭಕ್ತನೇ, ನೀನು ನಿತ್ಯವೂ ನಮ್ಮನ್ನು ಏಕೆ ವಂದಿಸುತ್ತಾ ಕಷ್ಟಪಡುತ್ತೀಯೆ? ನಿನ್ನ ಇಷ್ಟವೇನು? ಎಂದು ಕೇಳಿದರು. ಆಗ ಶೂದ್ರನು ತನ್ನ ಹೊಲದಲ್ಲಿ ಜೋಳದ ಬೆಳೆಯು ಹೆಚ್ಚಾಗಿ ಬೆಳೆಯಬೇಕೆಂದು ಬೇಡಿಕೊಂಡನು. ಆಗ ಗುರುಗಳು ಅಯ್ಯಾ ಭಕ್ತನೇ, ನಾವು ಹೇಳುವುದನ್ನು ಕೇಳಿ ಅದರಂತೆ ಮಾಡು ವಿಯಾ? ಎಂದು ಕೇಳಿದರು. ಆಗ ಶೂದ್ರನು ಸ್ವಾಮಿಾ, ಗುರು ವಾಕ್ಯವೇ ನಮಗೆ ಕಾರಣವು. ಬೇರೆ ಅಭಿಪ್ರಾಯವಿಲ್ಲ, ಎಂದು ಬಿನ್ನವಿಸಿದನು. ಆಗ ಗುರುಗಳು ಭಕ್ತನೇ, ಕೇಳು. "ನಾವು ಸಂಗಮದಿಂದ ಹಿಂದಿರುಗಿ ಬರುವಷ್ಟರಲ್ಲಿ ನಿನ್ನ ಹೊಲದಲ್ಲಿರುವ ಪೈರೆಲ್ಲವನ್ನೂ ಕೊಯ್ದುಬಿಡು" ಎಂದು ಹೇಳಿ ಸಂಗಮಕ್ಕೆ ಹೋದರು. ಆ ಶೂದ್ರನು ಗುರುವಾಕ್ಯವೇ ಕಾರಣವೆಂದರಿತು ಆ ಗ್ರಾಮದ ಅಧಿಕಾರಿಯ ಹತ್ತಿರ ಬಂದು ಸ್ವಾಮಿಾ, ಕಳೆದ ವರ್ಷದಂತೆಯೇ ನಿಮಗೆ ಧಾನ್ಯವನ್ನು ಕೊಡುವೆನು. ಇದಕ್ಕೆ ಒಪ್ಪಿಗೆಯ ಪತ್ರವನ್ನು ಕೊಡಿಸಿರಿ, ಎಂದು ಬೇಡಿದನು. ಆಗ ಆ ಅಧಿಕಾರಿಯು ನಿನ್ನ ಹೊಲದಲ್ಲಿ ಹೆಚ್ಚು ಬೆಳೆಯಾಗಿದೆ. ಹೆಚ್ಚಾಗಿ ಗುತ್ತಿಗೆಯನ್ನು ಕೊಡಬೇಕು, ಎಂದನು. ಆಗ ಶೂದ್ರನು ಕಳೆದ ವರ್ಷದ ದ್ವಿಗುಣದಷ್ಟು ಧಾನ್ಯವನ್ನು ಕೊಡುವೆನು, ಎಂದು ಪತ್ರವನ್ನು ಬರೆದು ಕೊಟ್ಟನು. ಅಧಿಕಾರಿಯು ಒಪ್ಪಿಗೆಯ ಪತ್ರವನ್ನು ಕೊಟ್ಟನು.

ಒಳಿಕ ಶೂದ್ರನು ಸಂತೋಷದಿಂದ ಆ ಹೊಲವನ್ನು ಕೊಯ್ಯಲು ಜನರನ್ನು ನೇಮಿಸಿದನು. ಆ ಜನರು ಹೊಲವನ್ನು ಕೊಯ್ಯುತ್ತಿರಲು ಆ ಶೂದ್ರನ ಹೆಂಡತಿಮಕ್ಕಳು ಇವರನ್ನು ಕೊಯ್ಯಬೇಡಿರೆಂದು ತಡೆದರು. ಅವರನ್ನು ಶೂದ್ರನು ಕಲ್ಲುಗಳಿಂದ ಹೊಡೆದನು. ಇವರು ಓಡಿ ಬಂದು ರಾಜಾಸ್ಥಾನದಲ್ಲಿ ಅಡ್ಡಬಿದ್ದು ಸ್ವಾಮಿಾ, ಈ ಜನರೆಲ್ಲರೂ ಕೋಮಲವಾದ ಜೋಳದ ಪೈರನ್ನು ಕೊಯ್ಯುತ್ತಿರಲು ಇದಕ್ಕೆ ನಾವು ಅಡ್ಡಿಮಾಡಿದೆವು. ಇದಕ್ಕಾಗಿ ನಮ್ಮನ್ನು ಕಲ್ಲುಗಳಿಂದ ಹೊಡೆದರು. ಇದರಿಂದ ನಮ್ಮ ಜೀವನವು ಹೋಯಿತು. ನಮಗೆ ತಿನ್ನುವುದಕ್ಕೆ ಒಂದು ತಿಂಗಳ ತಿಂಡಿಯು ಇದೆ, ಎಂದು ಹೇಳಿದರು. ಅಧಿಕಾರಿಯು ಅವರನ್ನು ಕುರಿತು ನಮ್ಮ ಹೊಲವನ್ನು ಕೊಯ್ಯುಬಿಟ್ಟಿರಾ? ನಮಗೆ ದ್ವಿಗುಣವಾಗ ಬೆಳೆಯನ್ನು ಕೊಡಬೇಕಾಗಿದೆ. ಈಗ ಬೆಳೆಯನ್ನು ಕೊಯ್ಯಬೇಡವೆಂದು ಹೇಳಿಕಳುಹಿಸಿದನು. ಶೂದ್ರನು ಕೇಳಲಿಲ್ಲ. ಈ ಸಂಗತಿಯನ್ನು ಆಳುಗಳಿಂದ ತಿಳಿದು ಆ ಶೂದ್ರನು ಅಯ್ಯಾ, ಅಧಿಕಾರಿಗೆ ಹೆದರಿಕೆಯುಂಟಾಗಿದ್ದರೆ ನಮ್ಮ ದನಗಳನ್ನು ಆತನ ಮನೆಯ ಬಾಗಿಲಲ್ಲಿ ತಂದು ಕಟ್ಟುವೆನು. ನಾನು ಪತ್ರವನ್ನು ಬರೆದು ಕೊಟ್ಟಿಲ್ಲವೇ? ಎಂದು ಹೇಳಿದನು. ಆ ದೂತರು ಬಂದು ಈ ವಿಷಯವನ್ನು ಅಧಿಕಾರಿಗೆ ಹೇಳಿದರು. ಆಗ ಅಧಿಕಾರಿಯು ಆ ದೂತರನ್ನು ಕುರಿತು ನಮಗೆ ಚಿಂತೆ ಏಕೆ? ಅವನು ಕೊಯ್ದ ಬೆಳೆಯಲ್ಲಿ ಅಪಾರವಾದ ಧಾನ್ಯವಿದೆ, ಎಂದನು. ಆ ಶೂದ್ರನು ಆ ಪೈರನ್ನು ಕೊಯ್ದು ದಾರಿಯಲ್ಲಿ ಬಂದು ನಿಂತನು. ಗುರುಗಳು ಹಿಂತಿರುಗಿ ಬರಲು ಈತನು ವಂದಿಸಿ ಕೊಯ್ದ ಹೊಲವನ್ನು ತೋರಿಸಿದನು. ಆಗ ಗುರುಗಳು ಅಯ್ಯಾ, ನಾವು ವಿನೋದಕ್ಕಾಗಿ ಹೇಳಿದರೆ ಅದೇ ನಿಜವೆಂದರಿತು ಹೊಲವನ್ನು ಕೊಯ್ಯಿಸಿದೆಯಾ? ಎಂದರು. ಈ ಮಾತನ್ನು ಕೇಳಿ ಆತನು ಸ್ವಾಮಿಾ, ನಿಮ್ಮ ವಾಕ್ಯವೇ ನಮಗೆ ಕಾಮಧೇನುವಾಗಿದೆ, ಎಂದನು. ಆಗ ಗುರುಗಳು ಮನಸ್ಸಿನಲ್ಲಿ ಈ ರೀತಿ ನಿಶ್ಚಯವಿರುವುದರಿಂದ ನಿನಗೆ ಅತಿಯಾಗಿ ಬೆಳೆಯುಂಟಾಗುವುದು, ಚಿಂತಿಸದಿರು, ಎಂದು ಹೇಳಿ ಗುರುಗಳು ಮಠಕ್ಕೆ ಬಂದರು. ಎಲ್ಲರೂ ತಮ್ಮ ತಮ್ಮ ಮನೆಗೆ ಬಂದರು. ಈ ಶೂದ್ರನ ಹೆಂಡತಿಮಕ್ಕಳು ತಮ್ಮ ಗ್ರಾಸವು ಹೋಯಿ

ತೆಂದು ಅಳುತ್ತಿದ್ದರು. ಆ ಶೂದ್ರನು ಎಲ್ಲರನ್ನೂ ಸಮಾಧಾನಮಾಡಿ ಚಿಂತಿಸದೇ ಸುಖವಾಗಿರಿ. ಗುರುಕೃಪೆಯಿಂದ ಎಲ್ಲಾ ಸುಖವೂ ಉಂಟಾಗುವುದು. ಗುರುವಚನವೇ ಕಾಮಧೇನುವಿಗೆ ಸಮಾನವು. ಒಂದಕ್ಕೆ ಸಾವಿರದಷ್ಟು ಲಾಭವಾಗುವುದು. ಸ್ಥಿರಮನದಿಂದಿರುವುದು. ನಮಗೆ ಹಾನಿಯಿಲ್ಲ. ಗುರುಕೃಪೆಯಿದ್ದರೆ ದೈನ್ಯವೆಲ್ಲಿರುವುದು. ನವ ನಿಧಿಗಳೂ ನಮಗೆ ಸಿದ್ಧಿಸುವುವು. ಗುರುಗಳನ್ನು ನರರೆನ್ನಬಾರದು. ಗುರುಗಳು ಶಿವಸ್ವರೂಪರಾಗಿದ್ದಾರೆಂದು ನಂಬಿರಿ. ಇದರ ಕಾರಣವು ಮುಂದೆ ಗೊತ್ತಾಗುವುದು, ಎಂದು ಹೆಂಡತಿಮಕ್ಕಳನ್ನೂ, ಇಷ್ಟಜನ ಬಂಧುಜನಗಳನ್ನೂ ಸಮಾಧಾನಮಾಡುತ್ತಿದ್ದನು. ಹೀಗೆ ಎಂಟು ದಿನಗಳು ಕಳೆಯಲು ಬಿರುಗಾಳಿಯು ಬೀಸಿ ಪೈರೆಲ್ಲವೂ ನಾಶವಾದುವು. ಆ ಗ್ರಾಮದ ಪೈರು ಕೆಟ್ಟಿತು. ಶೂದ್ರನ ಜೋಳದ ಹೊಲವು ನೂರ ರಷ್ಟು ಬೆಳೆಯಿತು. ಆ ಶೂದ್ರಪತ್ನಿಯು ಹರ್ಷಿತಳಾಗಿ ಹೊಲಕ್ಕೆ ಪೂಜೆಗೆಂದು ಬಂದು ಬೆಳೆಯನ್ನು ನೋಡಿ ಆನಂದಿಸಿದಳು. ಅತಿಯಾದ ಬೆಳೆ ಬಂದಿರುವುದನ್ನು ನೋಡಿ ಜನರು ವಿಸ್ಮಿತರಾದರು. ಆಗ ಆ ಶೂದ್ರಪತ್ನಿಯು ಬಂದು ಪತಿಪಾದದಲ್ಲಿ ಬಿದ್ದು ಕೈಗಳಂ ಜೋಡಿಸಿ ಮೃದುನುಡಿಯಿಂದ ನಾಥನೇ, ನನ್ನನ್ನು ಮನ್ನಿಸಿರಿ. ನಾನು ಅಜ್ಞಾನದಿಂದ ಎಲ್ಲಿಯ ಗುರುವು? ಜೋಳದ ತೆನೆಗಳನ್ನು ಕೊಯ್ದು ದೇಕೆ? ಎಂದು ನಿಮ್ಮನ್ನು ನಿಂದಿಸಿದೆನು, ಎಂದು ವಿಜ್ಞಾಪಿಸಿದಳು. ಬಳಿಕ ಆತನು ತನ್ನ ಸತಿಯೊಡನೆ ಹೊಲದ ದೇವತೆಯನ್ನು ಪೂಜಿಸಿ ಗುರುದರ್ಶನಕ್ಕೆ ಬಂದು ಗುರುಗಳನ್ನು ವಂದಿಸಿ ನಿಂತುಕೊಂಡರು. ಬಹಳವಾಗಿ ಸ್ತುತಿಸಿದರು. ಜಯ ಗುರುಮೂರ್ತಿಯೇ, ನೀವು ನಮಗೆ ಕಾಮಧೇನುವಿನಂತಿರುವ ಕುಲದೈವವಾಗಿದ್ದೀರಿ. ನಿಮ್ಮ ವಚನಾಮೃತದಿಂದ ನಮ್ಮ ಇಷ್ಟಾರ್ಥವು ಪೂರ್ಣವಾಯಿತು. ನಿಮ್ಮನ್ನು ಮರೆಹೊಕ್ಕೆವು. ನಿಮಗೆ ಭಕ್ತವತ್ಸಲರೆಂಬ ಬಿರುದು ಪ್ರಸಿದ್ಧವಾಯಿತು. ಇದಕ್ಕೆ ದೃಷ್ಟಾಂತವನ್ನು ಕಂಡೆವು, ಎಂದು ಸ್ತುತಿಸಿದರು. ಆ ಶೂದ್ರಸ್ತ್ರೀಯು ನಾನಾ ವಿಧವಾಗಿ ಗುರುಪೂಜೆ ಮಾಡಿ ಆರತಿಯನ್ನೆತ್ತಿದಳು. ಆಗ ಶ್ರೀಗುರುವು ಪ್ರೀತಿಯಿಂದ ಎಲೌ ಸ್ತ್ರೀಯಳೇ, ನಿನ್ನ ಮನೆಯಲ್ಲಿ ಅಖಂಡೈಶ್ವರ್ಯವುಂಟಾಗಲಿ, ಎಂದು

ಅನುಗ್ರಹಿಸಿದರು. ಈ ದಂಪತಿಗಳು ಗುರುನಿರೂಪಹೊಂದಿ ಮನೆಗೆ ಹೋದರು. ತಿಂಗಳಾದ ಮೇಲೆ ಒಳ್ಳೇ ಬೆಳೆಯಾಯಿತು. ಕಳೆದ ವರ್ಷಕ್ಕಿಂತಲೂ ನೂರರಷ್ಟು ಬೆಳೆಯಾಯಿತು. ಆ ಶೂದ್ರನು ಆ ಅಧಿಕಾರಿಯನ್ನು ಕರೆಯಿಸಿ ಸ್ವಾಮಿಾ, ನಾನು ಹೋದ ವರ್ಷದ ಗುತ್ತಿಗೆಗಿಂತಲೂ ಎರಡರಷ್ಟು ಕೊಡುವೆನೆಂದು ಹೇಳಿದ್ದೆನಷ್ಟೆ? ನನಗೆ ಈ ಹೊಲದಲ್ಲಿ ನೂರರಷ್ಟು ಬೆಳೆ ಬಂದಿದೆ. ಆದುದರಿಂದ ಈ ಬೆಳೆಯಲ್ಲರ್ಧವನ್ನು ನಿಮಗೆ ಕೊಡುವೆನು. ಸಂದೇಹ ಬೇಡವೆಂದು ಹೇಳಿದನು. ಇದನ್ನು ಕೇಳಿ ಅಧಿಕಾರಿಯು ಅಯ್ಯಾ, ನೀನು ಗುರು ಭಕ್ತನು. ಗುರುಕೃಪೆಯಿಂದ ಬೆಳೆ ಹೆಚ್ಚಿದೆ. ಧರ್ಮಕ್ಕೆ ಹಾನಿ ಯನ್ನು ಮಾಡಲಾರೆನು. ನನಗೆ ಕೊಡುವಷ್ಟನ್ನೇ ಕೊಡು. ಉಳಿದು ದನ್ನು ಮನೆಗೆ ಒಯ್ದು ಸುಖವಾಗಿರು, ಎಂದನು. ಇದನ್ನು ಕೇಳಿ ಶೂದ್ರನು ರಾಜಾದಾಯವನ್ನು ಕೊಟ್ಟು ಉಳಿದುದನ್ನು ಮನೆಗೆ ಒಯ್ದನು. ನಾಮಧಾರಕನೇ, ಕೇಳು. ಗುರುಮಹಿಮೆಯು ಹೀಗಿರುವದು. ಗುರುಭಕ್ತಿಯಿದ್ದವರಿಗೆ ದೈನ್ಯವಿಲ್ಲ. ಸಕಲೇಷ್ಟ ಗಳುಂಟಾಗುವವು. ಅಖಂಡೈಶ್ವರ್ಯವುಂಟಾಗುವದು. ಎಲ್ಲರೂ ಗುರುವನ್ನು ಸೇವಿಸಬೇಕು, ಎಂದರು, ಎಂದು ಸರಸ್ವತೀಗಂಗಾಧರನು ಹೇಳಿದನೆಂಬಲ್ಲಿಗೆ ಶ್ರೀಗುರುಚರಿತ್ರಾಮೃತದಲ್ಲಿ ಭಕ್ತನಾದ ಶೂದ್ರನಿಗೆ ವರಪ್ರದಾನವೆಂಬ ನಲವತ್ತೆಂಟನೇ ಅಧ್ಯಾಯವು ಮುಗಿದುದು

## ೪೯ ನೇ ಅಧ್ಯಾಯ.

ನಾಮಧಾರಕನು ಸ್ವಾಮಿಾ ಸಿದ್ಧಮುನಿಗಳೇ, ನರವೇಷಧಾರಿ ಗಳಾದ ಗುರುಗಳು ಈ ಧರಣೀಮಂಡಲದಲ್ಲಿರುವ ತೀರ್ಥಗಳೆಲ್ಲವನ್ನೂ ಬಿಟ್ಟು ಈ ಗಾಣಗಾಪುರದಲ್ಲಿ ಏಕೆ ನಿಂತರು? ಇದರ ಮಹಿಮೆಯೇನು? ಎಂಬುದನ್ನು ನಿರೂಪಿಸಿರೆಂದು ವಂದಿಸಿದನು. ಈತನ ವಚನವಂ ಕೇಳಿ ಸಿದ್ಧರು ಸಂತೋಷದಿಂದ ನಿರೂಪಿಸಿದರು. ಶ್ರೋತೃಗಳಿರಾ, ಏಕಚಿತ್ತದಿಂದ ಕೇಳಿರಿ. ಆಶ್ವೀಜ ಬಹುಳ ಚತುರ್ದಶಿಯ ದಿವಸ ದೀಪಾವಳಿಯ ಹಬ್ಬವಷ್ಟೆ? ಶ್ರೀಗುರುಗಳು ಶಿಷ್ಯರಂ ಕುರಿತು

ಶಿಷ್ಯರಿರಾ, ಕೇಳಿರಿ. ಈ ದಿನ ಗಯಾ ಪ್ರಯಾಗ ಶ್ರೀ ಕಾಶೀಕ್ಷೇತ್ರ
ಗಳಿಗೆ ಹೋಗಿ ಸಂಸಾರದೊಡನೆ ಸ್ನಾನಮಾಡಿರಿ. ಯಾತ್ರೆಗೆ
ನಡೆಯಿರಿ, ಎಂದು ಆಜ್ಞಾಪಿಸಿದರು. ಈ ಗ್ರಾಮದ ಹತ್ತಿರದಲ್ಲಿರುವ
ಸಂಗಮಕ್ಕೆ ಹೋಗಿರಿ. ನಿಮಗೆ ಆಯಾಸವಿಲ್ಲ, ಎಂದರು. ಶಿಷ್ಯ
ರೆಲ್ಲರೂ ಸಂಗಮದಲ್ಲಿ ಸ್ನಾನಮಾಡಿದರು. ಆಗ ಗುರುಗಳು ಶಿಷ್ಯರಿರಾ,
ಕೇಳಿರಿ. ಈ ಭೀಮಾ ಅಮರಜಾ ಸಂಗಮವು ಪ್ರಯಾಗಕ್ಕೆ
ಸಮಾನವು. ಇಲ್ಲಿ ಗಂಗಾ, ಯಮುನಾ ನದಿಗಳು ಹರಿಯುವುವು.
ಇಲ್ಲಿ ನದಿಯು ಉತ್ತರವಾಹಿನಿಯಾಗಿದೆ. ಇಲ್ಲಿ ಸ್ನಾನಮಾಡಲು
ಕಾಶಿಗಿಂತಲೂ ನೂರರಷ್ಟು ಪುಣ್ಯವುಂಟು. ಇನ್ನೂ ಎಂಟು ತೀರ್ಥ
ಗಳಿವೆ, ಎಂದು ನಿರೂಪಿಸಿದರು. ಆಗ ಭಕ್ತರು ಸ್ವಾಮಿ ಗುರು
ವರ್ಯರೇ, ಈ ಅಮರಜಾ ನದಿಯು ಎಲ್ಲಿ ಹುಟ್ಟಿದೆ? ಎಂದು
ಕೇಳಿದರು.

ಆಗ ಗುರುಗಳು ಭಕ್ತರೇ, ಕೇಳಿರಿ. ಪೂರ್ವದಲ್ಲಿ ಜಲಂಧರನೆಂಬ
ಅಸುರನು ಸುರರೆಲ್ಲರನ್ನೂ ಗೆದ್ದನು. ಸುರರು ಸ್ವರ್ಗದಿಂದೋಡಿ
ಹೋದರು. ದೇವತೆಗಳಿಗೂ, ಅಸುರರಿಗೂ ಯುದ್ಧವಾಯಿತು.
ಅನೇಕ ದೇವತೆಗಳು ಮೃತರಾದರು. ಇಂದ್ರನು ಈಶ್ವರನನ್ನು ಮರೆ
ಹೊಕ್ಕು ಸ್ವಾಮಿ, ಜಲಂಧರ ದೈತ್ಯನು ನಮ್ಮನ್ನು ಸ್ವರ್ಗದಿಂದ
ಓಡಿಸಿದನು. ದೈತ್ಯರು ಅನೇಕ ಸುರರನ್ನು ಕೊಂದರು. ಈ ರಕ್ಕಸ
ನೊಡನೆ ಯುದ್ಧಮಾಡುವಾಗ ಅವನ ದೇಹದ ರಕ್ತವು ಭೂಮಿಗೆ
ಬಿದ್ದರೆ ಒಂದು ರಕ್ತಬಿಂದುವಿಗೆ ಒಬ್ಬ ರಾಕ್ಷಸನಂತೆ ಅನೇಕ ರಾಕ್ಷಸರು
ಹುಟ್ಟಿ ದೇವತೆಗಳೆಲ್ಲರನ್ನೂ ಕೊಂದರು. ನಮ್ಮನ್ನು ರಕ್ಷಿಸಿ, ದೇವತೆ
ಗಳನ್ನು ಬದುಕಿಸಿರಿ, ಎಂದು ವಿಜ್ಞಾಪಿಸಿಕೊಂಡನು. ಆಗ ಶಂಕರನು
ಅಮೃತಸಂಜೀವಿನೀ ಮಂತ್ರವನ್ನುಚ್ಚರಿಸಿ ಒಂದು ಕುಂಭವನ್ನು
ಮಂತ್ರಿಸಿ ಕೊಟ್ಟನು. ಇಂದ್ರನು ಈ ಮಂತ್ರೋದಕವನ್ನು ಒಯ್ದು
ಮೃತರಾದ ದೇವತೆಗಳ ಮೇಲೆ ಎರಚಲು ಸುರರೆಲ್ಲರೂ ಬದುಕಿ
ಸ್ವರ್ಗಕ್ಕೆ ಹೋದರು. ಉಳಿದ ಅಮೃತವನ್ನು ಇಂದ್ರನು ಒಯ್ಯು
ತ್ತಿರಲು ಈ ಅಮೃತಕುಂಭವು ಬಿದ್ದು ಭೂಮಿಯಲ್ಲಿ ಪ್ರವಹಿಸಿತು.
ಈ ಸಂಜೀವಿನೀ ನದಿಯು ಅಮರಜಾ ಎಂಬ ಹೆಸರುಳ್ಳದ್ದಾಯಿತು.

ಆದುದರಿಂದ ಈ ನದಿಯಲ್ಲಿ ಭಕ್ತಿಯಿಂದ ಸ್ನಾನಮಾಡಲು ಅವರಿಗೆ ಕಾಲಮೃತ್ಯುವಿನ ಭಯವಿಲ್ಲ. ಅಪಮೃತ್ಯುವೆಲ್ಲಿ ಬಂದೀತು? ಇಲ್ಲಿ ಸ್ನಾನಮಾಡಿದ ನರನು ಶತಾಯುಷಿಯಾಗುವನು. ಇವನಿಗೆ ರೋಗ ಭಯವಿಲ್ಲ. ಅಪಸ್ಮಾರಾದಿ ರೋಗಗಳು ನಾಶವಾಗುವವು. ಈ ನದಿಯು ಭೀಮರಥಿಗೆ ಸಂಗಮವಾಗಿದೆ. ಈ ನದಿಯಲ್ಲಿ ಕಾರ್ತೀಕ, ಮಾಘಮಾಸಗಳಲ್ಲಿ ಸ್ನಾನಮಾಡಲು ಇಹದಲ್ಲಿ ಸುಖವೂ, ಪರದಲ್ಲಿ ಮೋಕ್ಷವೂ ಆಗುವುದು. ಗ್ರಹಣಕಾಲದಲ್ಲಿಯೂ, ಸಂಕ್ರಮಣ ದಲ್ಲಿಯೂ, ಅಮಾವಾಸ್ಯೆ, ಸೋಮವಾರದಲ್ಲಿಯೂ ಸ್ನಾನಮಾಡಲು ಅನಂತ ಫಲವುಂಟು. ನಿತ್ಯವೂ ಸಾಧಿಸಿ ಸ್ನಾನಮಾಡಿದರೆ ಆ ನರನು ದೋಷಮುಕ್ತನಾಗಿಯೂ, ಶತಾಯುವಾಗಿಯೂ, ಧನಿಕನಾಗಿಯೂ ಸುಖಿಸುವನು. ಈ ಸಂಗಮ ಮಹಿಮೆಯು ಹೀಗಿರುವುದು. ಇಲ್ಲಿ ಅಶ್ವತ್ಥವೃಕ್ಷವಿರುವ ತೀರ್ಥದಲ್ಲಿ ಸ್ನಾನಮಾಡಲು ದೇಹವು ಮನೋ ಹರವಾಗುವುದು. ಈ ವೃಕ್ಷವು ಕಲ್ಪತರುವಿಗೆ ಸಮಾನವು. ಚಿಂತಿ ತಾರ್ಥಗಳು ಸಿದ್ಧಿಸುವವು. ಆದುದರಿಂದ ನಾವು ಇಲ್ಲಿರುವೆವು. ಈ ವೃಕ್ಷವನ್ನು ಸೇವಿಸಿದವರ ಮನೋರಥವು ಸಿದ್ಧಿಸುವುದು. ಸಂದೇಹವಿಲ್ಲ. ಇದನ್ನು ನೋಡಿದ ಮಾತ್ರದಿಂದಲೇ ಮುಕ್ತಿ ಯುಂಟಾಗುವುದು. ಇದನ್ನು ಅರ್ಚಿಸಿ ಸಂಗಮೇಶ್ವರನನ್ನು ಪೂಜಿಸಿ ದರೆ ಪುಣ್ಯವುಂಟು. ಶ್ರೀಪರ್ವತದಲ್ಲಿ ಮಲ್ಲಿಕಾರ್ಜುನನು ಹೇಗಿರು ವನೋ ಹಾಗೆ ಈ ಸಂಗಮದಲ್ಲಿ ರುದ್ರನು ಇರುವನು. ಇದಕ್ಕೆ ಭಕ್ತಿಯಿಂದ ಪ್ರದಕ್ಷಿಣೆಮಾಡಬೇಕು. ನಂದಿಕೇಶ್ವರನನ್ನೂ, ಚಂಡಿ ಯನ್ನೂ ವಂದಿಸಿ ಪೂರ್ಣಾನದಿಯನ್ನು ಬಲಕ್ಕೆ ಬಿಟ್ಟು ಮತ್ತೆ ಸೋಮ ಸೂತ್ರಕ್ಕೆ ಹೋಗಬೇಕು. ಹಿಂದಿರುಗಿ ಬಂದು ವೃಷಭನನ್ನು ವಂದಿಸಿ ಚಂಡಿಯನ್ನೂ ವಂದಿಸಿ ಸೋಮಸೂತ್ರಕ್ಕೆ ಬರಬೇಕು. ಈ ರೀತಿ ಮೂರು ಪ್ರದಕ್ಷಿಣೆಮಾಡಿ ವೃಷಭಸ್ಥಾನಕ್ಕೆ ಬಂದು ಶಿವದರ್ಶನ ಮಾಡಬೇಕು. ವಾಮಹಸ್ತದಲ್ಲಿ ವೃಷಭ ವೃಷಣವನ್ನು ಹಿಡಿದು ತರ್ಜನೀ ಅಂಗುಷ್ಠಾಂಗುಲಿಗಳಿಂದ ಶಿವಪೂಜೆಯನ್ನು ನೋಡಬೇಕು. ಹೀಗೆ ದರ್ಶನಮಾಡಿದ ನರನು ಇಂದ್ರನಾಗುವನು. ಧನಧಾನ್ಯ ಸಂಪತ್ತುಂಟಾಗಿ ಪುತ್ರಪೌತ್ರರಿಂದ ಕೂಡಿರುವನು. ಮುಂದಿರುವ

ತೀರ್ಥವು ವಾರಣಾಸೀ ತೀರ್ಥವು. ಇದು ಅರ್ಧ ಹರದಾರಿಯ ವರೆಗಿರುವುದು. ನಾಗೇಶಿ ಎಂಬ ಗ್ರಾಮದಿಂದ ಈ ತೀರ್ಥವು ಉದ್ಭವಿಸಿದೆ. ಇದರ ಆಖ್ಯಾನವೇನೆಂದರೆ ಇಲ್ಲಿ ಭರದ್ವಾಜಗೋತ್ರದ ವಿಪ್ರನೊಬ್ಬನಿದ್ದನು. ಇವನು ಸರ್ವಸಂಗವಿರಕ್ತನಾಗಿ, ಶಿವಭಕ್ತನಾಗಿ ಅನುಷ್ಠಾನಮಾಡುತ್ತಾ ಶಂಕರನಂ ಧ್ಯಾನಿಸುತ್ತಿದ್ದನು. ಇವನಿಗೆ ಚಂದ್ರಮೌಳಿಯು ಪ್ರಸನ್ನನಾದನು. ಸದಾಶಿವನು ಇವನ ಹತ್ತಿರದಲ್ಲಿ ಕಾಣಿಸುತ್ತಿದ್ದನು. ಇವನು ಸದಾ ಹರ್ಷಿತನಾಗಿ ತನ್ನ ದೇಹವನ್ನೇ ಮರೆತು ತಿರುಗುತ್ತಿದ್ದನು. ಜನರು ಇವನನ್ನು ನೋಡಿ ಪಿಶಾಚಿ ಎನ್ನುತ್ತಿದ್ದರು. ಇವನಿಗೆ ಇಬ್ಬರು ಸಹೋದರರಿದ್ದರು. ಒಬ್ಬನ ಹೆಸರು ಈಶ್ವರನೆಂದೂ, ಎರಡನೆಯವನ ಹೆಸರು ಪಾಂಡುರಂಗೇಶ್ವರನೆಂದೂ ಪ್ರಸಿದ್ಧವಾಗಿದೆ. ಇವರಿಬ್ಬರೂ ಕಾಶಿಯ ಯಾತ್ರೆಗೆ ಹೊರಟರು. ಇವನನ್ನು ಬಾರೆಂದು ಕರೆದರು. ಆಗ ಈತನು ಸಹೋದರರೇ, ಕಾಶಿಗೆ ಹೋಗಬೇಡಿರಿ. ವಿಶ್ವೇಶ್ವರನು ನನ್ನ ಹತ್ತಿರದಲ್ಲಿರುವನು. ಈಗಲೇ ನಿಮಗೆ ತೋರಿಸುವೆನು. ಕಾಶಿಗೆ ಹೋಗುವುದು ಕಷ್ಟವು. ಇಲ್ಲಿಯೇ ವಿಶ್ವೇಶ್ವರನಂ ತೋರಿಸುವೆನು, ಎಂದಾ ನದಿಯಲ್ಲಿ ಸ್ನಾನಮಾಡಿ ಧ್ಯಾನಸ್ಥನಾಗಲು ಶಂಕರನು ಸಾಕ್ಷಾತ್ತಾಗಿ ಅಲ್ಲಿಗೆ ಬಂದನು. ಈತನು ಶಂಕರನಂ ವಂದಿಸಿ ಸ್ವಾಮೀ, ನಮಗೆ ನಿತ್ಯವೂ ಶ್ರೀ ಕಾಶೀಕ್ಷೇತ್ರವೂ, ವಿಶ್ವೇಶ್ವರದರ್ಶನವೂ ಆಗಬೇಕೆಂದು ಪ್ರಾರ್ಥಿಸಿದನು. ಆಗಲೇ ಈ ಸ್ಥಳವು ಕಾಶೀಕ್ಷೇತ್ರವಾಯಿತು. ಮಣಿಕರ್ಣಿಕಾಕುಂಡವಾಯಿತು. ಈ ಕುಂಡದಲ್ಲಿ ವಿಶ್ವೇಶ್ವರನು ಕಾಣಿಸಿದನು. ಇಲ್ಲಿ ಒಂದು ಬಾಣ ಪ್ರಮಾಣದ ವರೆಗೆ ಈ ನದಿಯು ಉತ್ತರವಾಹಿನಿಯಾಗಿದೆ. ಈ ಕುಂಡದಿಂದ ಗಂಗಾನದಿಯು ಕಾಶಿಯಲ್ಲಿ ಹೊರಟಂತೆ ಗುರುತಾಗಿರುವುದು. ಈ ಸಂಗಮವು ಕಾಶಿಗೆ ಸಮವಾಯಿತು. ಈ ವಿಪ್ರನು ಸಹೋದರರೇ, ನಮ್ಮ ವಂಶದಲ್ಲಿ ಯಾರೂ ಕಾಶಿಗೆ ಹೋಗಬೇಡಿರಿ. ಇದೇ ಕಾಶಿ ಎಂದು ಶಂಕರನು ಹೇಳಿರುವನು. ನನ್ನ ಹೆಸರು ಗೋಸಾವಿ ಎಂದು ನಿರ್ಧರಿಸಿರಿ. ನೀವಿಬ್ಬರೂ ಪಂಡರಾಪುರಕ್ಕೆ ಹೋಗಿ ಪಾಂಡುರಂಗನಂ ಆರಾಧ್ಯರೆಂಬ ಹೆಸರಿನಿಂದರ್ಚಿಸಿರಿ. ಪ್ರತಿವರ್ಷವೂ ಕಾರ್ತೀಕದಲ್ಲಿ ಈ ತೀರ್ಥಕ್ಕೆ

ಬರಬೇಕು, ಎಂದನು, ಎಂದು ಶ್ರೀಗುರುವು ಭಕ್ತರಿಗೆ ಇದು ಕಾಶಿಗೆ ಸಮವೆಂದು ತಿಳಿಯಿರಿ. ಸಂದೇಹವಿಲ್ಲ. ಇದೇ ವಾರಣಾಸಿಯು, ಎಂದು ನಿರೂಪಿಸಿದರು. ಈ ಭಕ್ತರೆಲ್ಲರೂ ಅಲ್ಲಿ ಸ್ನಾನಮಾಡಿದರು. ಗುರುಗಳು ಮುಂದೆ ಹೊರಟರು. ಮುಂದೆ ಪಾಪವಿನಾಶಿನೀ ತೀರ್ಥವನ್ನು ತೋರಿಸಿ, ಭಕ್ತರೇ, ಇಲ್ಲಿ ಸ್ನಾನಮಾಡಿದರೆ ಬೆಂಕಿಯಿಂದ ಹುಲ್ಲು ಸುಡುವಂತೆ ಪಾಪ ನಾಶವಾಗುವುದು, ಎಂದರು. ಆಗ ಶ್ರೀಗುರುವು ತಮ್ಮ ತಂಗಿಯಾದ ರತ್ನಾಯಿಯನ್ನು ಕರೆಯಿಸಿ ತಂಗಿಯೇ, ನಿನ್ನ ಪಾಪಗಳನ್ನು ನೆನೆದುಕೊ. ನಿನ್ನ ಪಾಪವು ಅತಿಯಾಗಿದೆ, ಎಂದರು. ಆಗ ರತ್ನಾಯಿಯು ಶ್ರೀಗುರುವನ್ನು ವಂದಿಸಿ, ಸ್ವಾಮಿ, ನಾನು ಕೇವಲ ಅಜ್ಞಾನಿಯು. ನನಗೆ ಅಷ್ಟು ಜ್ಞಾನವೆಲ್ಲಿದೆ? ಜಗದಾತ್ಮನೇ, ವಿಶ್ವವ್ಯಾಪಕನೇ, ಜಗಜ್ಜ್ಯೋತಿಪ್ರಕಾಶಕನೇ, ನೀನೇ ಸರ್ವಜ್ಞನು. ನನ್ನ ಪಾಪಗಳನ್ನು ನಿರೂಪಿಸಿರಿ, ಎಂದು ಬೇಡಿದಳು. ಆಗ ಶ್ರೀಗುರುವು ತಂಗಿಯೇ, ಕೇಳು. ನೀನು ಪೂರ್ವದಲ್ಲಿ ಐದು ಬೆಕ್ಕುಗಳನ್ನು ಕೊಂದೆ. ಹೇಗೆಂದರೆ:—ಒಂದು ಹೆಣ್ಣು ಬೆಕ್ಕು ಬಸುರಾಗಿ ಒಂದು ಗುಡಾಣದಲ್ಲಿ ಮರಿಗಳನ್ನು ಹಾಕಿತು. ಅದನ್ನು ನೀನು ನೋಡದೆ ನೀರು ಹಾಕಿ ಮುಚ್ಚಿ ಬೆಂಕಿಯ ಮೇಲಿಟ್ಟುದರಿಂದ ಆ ಐದು ಬೆಕ್ಕುಗಳು ಸತ್ತುವು. ಈ ದೋಷದಿಂದಲೇ ಈಗ ನಿನಗೆ ಬಿಳಿಯ ತೊನ್ನಾಗಿದೆ, ಎಂದರು. ಆಗ ಆಕೆಯು ಗುರುಗಳಂ ವಂದಿಸಿ ದಯಮಾಡಿರಿ. ನಾನು ಬಹು ಪಾಪಗಳಂ ಮಾಡಿದರೂ ಈ ವಾರಣಾಶಿಯಲ್ಲಿ ಸ್ನಾನಮಾಡಲು ಪಾಪನಾಶವಾಗುವುದೆಂದು ನಿಮ್ಮ ದರ್ಶನಕ್ಕೆ ಬಂದೆನು. ಇನ್ನು ನನಗೆ ಜನ್ಮವು ಸಾಕು. ಈ ಜನ್ಮದಲ್ಲಿಯೇ ಪಾಪದ ಫಲವನ್ನನುಭವಿಸುವೆನು, ಎಂದಳು. ಆಗ ಗುರುಮೂರ್ತಿಯು ರತ್ನಾಯಿಯೇ, ಈ ಪಾಪವಿನಾಶಿನಿಯಲ್ಲಿ ಸ್ನಾನಮಾಡು. ಏಳು ಜನ್ಮದ ಪಾಪವು ಹೋಗುವುದು. ಸಂದೇಹವಿಲ್ಲ, ಎಂದರು. ರತ್ನಾಯಿಯು ಮೂರು ದಿನ ಸ್ನಾನಮಾಡಲು ಆಕೆಯ ಕುಷ್ಠವು ಹೋಯಿತು. ಈ ರೀತಿಯಾಗಿ ಪಾಪವಿನಾಶಿನಿಯಲ್ಲಿ ಸ್ನಾನಮಾಡಲು ಏಳುಜನ್ಮದ ಪಾಪನಾಶವಾಗುವುದು. ರತ್ನಾಯಿಯು ಈ ತೀರ್ಥದ ಹತ್ತಿರ ಮಠವನ್ನು ಕಟ್ಟಿಕೊಂಡು ಅಲ್ಲಿದ್ದಳು. ಇಲ್ಲಿಂದ

ಮುಂದೆ ಕೋಟಿತೀರ್ಥವಿದೆ. ಜಂಬೂದ್ವೀಪದಲ್ಲಿ ಮಹಿಮೆಯುಳ್ಳ ತೀರ್ಥಗಳೆಷ್ಟಿವೆಯೋ ಅಷ್ಟು ಮಹಿಮೆಯೂ ಈ ತೀರ್ಥದಲ್ಲಿದೆ. ಗ್ರಹಣಕಾಲದಲ್ಲಿಯೂ, ಸಂಕ್ರಾಂತಿ ಪರ್ವಣಿಗಳಲ್ಲಿಯೂ, ಅಮಾವಾಸ್ಯೆ ಪಾದ್ಯಗಳಲ್ಲಿಯೂ ಸ್ನಾನಮಾಡಬೇಕು. ಕರುಪಿನಿಂದ ಕೂಡಿದ ಹಸುವನ್ನು ದ್ವಿಜರಿಗೆ ದಾನಮಾಡಬೇಕು. ಇದರಿಂದ ಕೋಟಿ ಫಲವುಂಟು. ಸ್ನಾನದಿಂದ ಅನಂತ ಫಲವುಂಟು. ಈ ಎರಡು ತೀರ್ಥಗಳಲ್ಲಿ ಸ್ನಾನಮಾಡಬೇಕು. ಗಯೆಗೆ ಸಮವಾದ ರುದ್ರಪಾದತೀರ್ಥದಲ್ಲಿ ಸ್ನಾನಮಾಡಿ ಪಿತೃಕರ್ಮಗಳನ್ನು ಮಾಡಬೇಕು. ರುದ್ರಪಾದವನ್ನು ಅರ್ಚಿಸಲು ಜನ್ಮದ ಪಾಪನಾಶವಾಗುವುದು. ಮುಂದೆ ಚಕ್ರತೀರ್ಥವಿದೆ. ಇಲ್ಲಿಯೂ ಸ್ನಾನಮಾಡಲು ಬಹು ಪುಣ್ಯವುಂಟು. ಇಲ್ಲಿ ಕೇಶವದೇವನಿರುವನು. ಇಲ್ಲಿ ಸ್ನಾನಮಾಡಿದರೆ ಜ್ಞಾನವುಂಟಾಗುವುದು. ಅಸ್ಥಿಯು ಚಕ್ರಾಂಕಿತವಾಗುವುದು. ಇದು ದ್ವಾರಾವತಿಗೆ ಸಮವು. ಇಲ್ಲಿ ಸ್ನಾನಗೈದು ಕೇಶವನನ್ನರ್ಚಿಸಬೇಕು. ಈ ತೀರ್ಥವು ದ್ವಾರಕಿಗೆ ಚತುರ್ಗುಣವುಳ್ಳದ್ದು, ಎಂದರು. ಎಲ್ಲರೂ ಇಲ್ಲಿ ಸ್ನಾನದಾನಗಳನ್ನು ಮಾಡಿದರು. ಮುಂದೆ ಮನ್ಮಥದಹನ ತೀರ್ಥವಿದೆ. ಈ ಗ್ರಾಮದ ಪೂರ್ವಭಾಗದಲ್ಲಿ ಗೋಕರ್ಣದ ಮಹಾಬಲೇಶ್ವರನಿಗೆ ಸಮನಾದ ಕಲ್ಲೇಶ್ವರನಿರುವನು. ಇಲ್ಲಿ ಸ್ನಾನಗೈದು ಕಲ್ಲೇಶ್ವರನಂ ಅರ್ಚಿಸಲು ಅಷ್ಟೈಶ್ವರ್ಯವುಂಟಾದೀತು. ಆಷಾಢ, ಶ್ರಾವಣಗಳಲ್ಲಿ ಅಭಿಷೇಕಮಾಡಿ, ಕಾರ್ತೀಕದಲ್ಲಿ ದೀಪಾರಾಧನೆಮಾಡಲು ಅನಂತ ಪುಣ್ಯವಿದೆ, ಎಂದು ಎಂಟು ತೀರ್ಥಗಳ ಮಹಿಮೆಯನ್ನು ಗುರುಗಳು ನಿರೂಪಿಸಿದರು. ಆಗ ಭಕ್ತರು ಸ್ವಾಮಿಾ, ಈ ತೀರ್ಥಗಳ ಮಹಿಮೆಯಂ ಪೇಳಿ ನಮ್ಮನ್ನು ಧನ್ಯರನ್ನು ಮಾಡಿದಿರಿ. ಹತ್ತಿರದಲ್ಲಿ ಸರ್ವತೀರ್ಥಗಳಿರಲು ದೂರದ ಯಾತ್ರೆಯನ್ನು ಮಾಡುವುದೇಕೆ? ಎಂದರು. ಇದು ಪವಿತ್ರ ಸ್ಥಳಗಳೆಂದು ಎಲ್ಲರೂ ಅಲ್ಲಿ ಸ್ನಾನದಾನಗಳನ್ನು ಮಾಡಿದರು. ಬಳಿಕ ಎಲ್ಲರೂ ಗುರುಮಠಕ್ಕೆ ಬಂದರು. ಭಕ್ತರು ಹರ್ಷಿತರಾಗಿ ಸಮಾರಾಧನೆಮಾಡಿದರು. ಈ ತೀರ್ಥಮಹಿಮೆಯು ಈ ರೀತಿಯಾಗಿರುವುದು, ಎಂದು ಗುರುಗಳು ನನಗೆ ಹೇಳಿರುವುದನ್ನು ನಿನಗೆ ಹೇಳಿದೆನು, ಎಂದರು, ಎಂದು ಸರಸ್ವತೀ

ಗಂಗಾಧರನು ಜನರೇ, ಎಲ್ಲರೂ ಈ ಗಾಣಗಾಪುರ ಕ್ಷೇತ್ರಕ್ಕೆ ಹೋಗಿ ಸ್ನಾನದಾನಗಳನ್ನು ಮಾಡಿರಿ, ಎಂದು ಹೇಳಿದನು, ಎಂಬಲ್ಲಿಗೆ ಗುರು ಕಥಾಮೃತದಲ್ಲಿ ನಲವತ್ತೊಂಭತ್ತನೇ ಅಧ್ಯಾಯವು ಮುಗಿದುದು.

## ೫೦ ನೇ ಅಧ್ಯಾಯ.

ನಾಮಧಾರಕನೇ, ಮೊದಲು ರಜಕನ ಕಥೆಯನ್ನು ನಿರೂಪಿಸಿದೆ ನಷ್ಟೆ? ಈತನಿಗೆ ಮೆಚ್ಚಿ ಗುರುವರ್ಯರು ರಾಜ್ಯಪದವಿಯನ್ನಿತ್ತರು. ಈತನು ಮ್ಲೇಂಛನಾಗಿ ಹುಟ್ಟಿ ವೈದುರೀ ನಗರಿಯಲ್ಲಿ ರಾಜ್ಯ ವಾಳುತ್ತಾ ಪುತ್ರಪೌತ್ರರೊಂದಿಗೆ ಹರ್ಷವಾಗಿದ್ದನು. ಈ ಯವನ ರಾಜನು ಅಪಾರವಾದ ಚತುರಂಗಸೇನೆಯೊಡನೆ ಆಳುತ್ತಿದ್ದು ಭಕ್ತಿ ಯಿಂದ ದಾನಮಾಡುತ್ತಾ, ವಿಪ್ರರಲ್ಲಿ ಭಕ್ತಿಯಿಂದಿದ್ದು ದೇವಾಲಯ ಗಳನ್ನು ಹಾಳುಮಾಡಿಸದೇ ಇದ್ದನು. ಇವನ ಪುರೋಹಿತನು ರಾಜನೇ, ಮ್ಲೇಂಛರಾದ ನಾವು ದೇವಬ್ರಾಹ್ಮಣರನ್ನು ನಿಂದಿಸಬೇಕು. ಇವರನ್ನು ಸೇವಿಸಿದರೆ ಹೆಚ್ಚಾಗಿ ಪಾಪಗಳುಂಟಾಗುವುವು. ಜಾತಿ ಧರ್ಮದಂತೆ ನಡೆದರೆ ಅನಂತ ಪುಣ್ಯವುಂಟು. ಮಂದಮತಿಗಳಾದ ದ್ವಿಜರು ಕಲ್ಲುಗಳನ್ನು ದೇವರೆಂದು ಅರ್ಚಿಸುವರು. ಮರಗಿಡಗಳನ್ನು ಪೂಜಿಸುವರು. ಹಸುವನ್ನು ದೇವರೆನ್ನುವರು. ಭೂಮಿ, ಚಂದ್ರ, ಬೆಂಕಿ, ಸೂರ್ಯ, ನದಿಗಳನ್ನು ದೇವತೆಗಳೆನ್ನುವರು. ಮಂದಮತಿ ಗಳಾದ ವಿಪ್ರರು ನಿರಾಕಾರನಾದ ದೇವರನ್ನು ಸಾಕಾರನನ್ನಾಗಿ ತಿಳಿಯುವರು. ಇವರನ್ನು ಸೇವಿಸಿದರೆ ಅಧೋಗತಿಯಾಗುವುದು, ಎಂದರುಹಿದನು. ಇದನ್ನು ಕೇಳಿ ರಾಜನು ಕೋಪಿಸಿ ಅಯ್ಯಾ ಪುರೋಹಿತನೇ, ಸರ್ವೇಶ್ವರನು ಅಣುರೇಣುತೃಣಕಾಷ್ಠಗಳಲ್ಲಿ ತುಂಬಿರು ವನು. ಈಶ್ವರನು ಈ ಸ್ಥಾವರಜಂಗಮ ವಸ್ತುಗಳನ್ನು ನಿರ್ಮಿಸಿದನು. ಎಲ್ಲಾ ಜಾತಿಗಳ ಉತ್ಪತ್ತಿಯೂ ಪಂಚಭೂತಗಳಿಂದಾಗಿದೆ. ಎಲ್ಲರ ವೃದ್ಧಿಯೂ ಒಂದೇ ವಿಧವಾಗಿರುವುದು. ಕುಂಬಾರನು ಮಣ್ಣಿನಿಂದ ನಾನಾ ವಿಧ ಪಾತ್ರೆಗಳನ್ನು ಮಾಡುವುದಿಲ್ಲವೇ? ನಾನಾ ವರ್ಣದ ಹಸುಗಳ ಹಾಲು ಎಲ್ಲವೂ ಒಂದೇ ರೀತಿಯಾಗಿರದೇ? ಚಿನ್ನದಿಂದನೇಕ

ಒಡವೆಗಳನ್ನು ಮಾಡುವುದಿಲ್ಲವೇ? ದೇಹಗಳು ಭೇದವಾದರೂ ಪರಮಾತ್ಮನು ಪೂರ್ಣನಾಗಿಲ್ಲವೇ? ಎಲ್ಲಾ ಗದಿಗೆಗಳಲ್ಲಿಯೂ ಆಕಾಶವು ಕಾಣಿಸದೇ? ಒಂದು ದೀಪದಿಂದ ಸಾವಿರ ದೀಪಗಳನ್ನು ಹತ್ತಿಸಬಹುದು. ಈ ದೀಪಗಳಂತೆ ಎಲ್ಲರೂ ಇರುವರು. ಭೇದವೆಲ್ಲಿದೆ? ಒಂದು ದಾರದಲ್ಲಿ ನಾನಾ ಬಣ್ಣದ ಮಣಿಗಳನ್ನು ಪೋಣಿಸಿದಂತೆ ಭಿನ್ನಭಾವ ಹೊಂದಬಾರದು. ಭೂಮಿಯಲ್ಲಿ ನಾನಾ ಜಾತಿಗಳಿವೆ. ಎಲ್ಲರಿಗೂ ಹರಿಯೊಬ್ಬನೇ ಶ್ರೇಷ್ಠನು. ಭೇದವೆಣಿಸಬಾರದು. ವಿಪ್ರರು ಕಲ್ಲನ್ನು ದೇವರೆಂದು ಪೂಜಿಸುವರೆಂದು ಆಕ್ಷೇಪಿಸುವಿರಷ್ಟೆ? ಸರ್ವತ್ರ ವಿಶ್ವಾತ್ಮನು ಪೂರ್ಣನಾಗಿರುವನು. ಸ್ವಲ್ಪ ಬುದ್ಧಿಯುಳ್ಳವರಿಗೆ ಪ್ರತಿಮಾಪೂಜೆಯು ಉಕ್ತವಾಗಿದೆ. ಸ್ಥಿರ ಮನಸ್ಸಿಲ್ಲದವರು ಪ್ರತಿಮೆಯನ್ನು ಹರಿಯೆಂದರಿತು ಅರ್ಚಿಸುವರು. ವಿಪ್ರರನ್ನು ನೀವು ನಿಂದಿಸುವಿರಿ. ಜ್ಞಾನಿಗಳು ಯಾರನ್ನೂ ನಿಂದಿಸರು. ನಾನಾ ವಿಧಗಳಾದ ಜಾತಿಗಳು ತಮ್ಮ ಚಕ್ರಗಳಲ್ಲಿ ತಿರುಗುವುವು, ಎಂದು ರಾಜನು ಹೇಳಿದನು. ಪುಣ್ಯವಂತನಾದ ಈ ರಾಜನಿಗೆ ದೇವ ಬ್ರಾಹ್ಮಣರಲ್ಲಿ ಭಕ್ತಿಯಿತ್ತು. ಹೀಗಿರಲೊಂದು ದಿನ ರಾಜನಿಗೆ ತೊಡೆಯ ಮೇಲೊಂದು ಬಾವು ಎದ್ದಿತು. ಅನೇಕ ವೈದ್ಯರು ನಾನಾ ಔಷಧಿಗಳನ್ನು ಬಾವಿಗೆ ಲೇಪಿಸಿದರು. ಆದರೂ ಗುಣವಾಗದೆ ಅತಿಯಾಗಿ ದುಃಖಿಸುತ್ತಿದ್ದನು. ಹೀಗಿರಲು ಇತ್ತ ಶ್ರೀಗುರುವು ಗಾಣಗಾಪುರದಲ್ಲಿರುವಾಗ ಮ್ಲೇಂಛ ರಾಜನು ತಮ್ಮ ದರ್ಶನಕ್ಕೆ ಬರುವನು. ಅವನೊಡನೆ ಅನೇಕ ಮ್ಲೇಂಛರು ಬಂದು ವಿಪ್ರರನ್ನು ಬಾಧಿಸುವರು. ಆದುದರಿಂದ ನಾವು ಇಲ್ಲಿರಬಾರದು. ನಮ್ಮ ಮಹಿಮೆಯು ಪ್ರಸಿದ್ಧವಾಗಿರುವುದು. ಆದುದರಿಂದ ನಮ್ಮನ್ನು ನೋಡುವುದಕ್ಕಾಗಿ ಬರುವರು. ನಾವು ಗೋಪ್ಯವಾಗಿರಬೇಕು, ಎಂದು ಯೋಚಿಸಿ, ಈಶ್ವರಸಂವತ್ಸರದ ಸಿಂಹಮಾಸದಲ್ಲಿ ಗುರುವಿರುವಾಗ ಗೌತಮಿ ತೀರ್ಥಯಾತ್ರೆಗಾಗಿ ನಾವು ಹೋಗಬೇಕು, ಎಂದು ಶಿಷ್ಯರಿಗೆ ಹೇಳಿದರು. ಈ ಮಾತನ್ನು ಕೇಳಿ ಶಿಷ್ಯರು ಯವನರಾಜನು ಬಂದರೇನಾಗುವುದೋ, ಎಂದು ಚಿಂತಿಸುತ್ತಾ ಮತ್ತೂ ನೃಸಿಂಹಸರಸ್ವತಿಗಳೇ ನಮ್ಮನ್ನು ರಕ್ಷಿಸುವರು, ಎನ್ನುತ್ತಿದ್ದರು. ಈ ಯವನರಾಜನು

ಸ್ಫೋಟಕರೋಗಕ್ಕೆ ಎಷ್ಟು ಔಷಧಿಗಳನ್ನು ಮಾಡಿದರೂ ಗುಣವಾಗ ಲಿಲ್ಲ. ಆಗ ವಿಪ್ರರಂ ಕರೆಯಿಸಿ ಇದಕ್ಕೇನು ಮಾಡುವುದು? ಎಂದು ಕೇಳಿದನು. ವಿಪ್ರರು ರಾಜನೇ, ಕೇಳು. ಪೂರ್ವಜನ್ಮದ ಪಾಪವು ಈಗ ವ್ಯಾಧಿರೂಪವಾಗಿ ಪೀಡಿಸುವುದು. ತೀರ್ಥಯಾತ್ರೆ ಮಾಡಿ ದಾನಧರ್ಮಗಳನ್ನು ಮಾಡಬೇಕು. ಮತ್ತೂ ಸತ್ಪುರುಷರಂ ಸೇವಿಸ ಬೇಕು. ಸತ್ಪುರುಷರ ದರ್ಶನವಾಗಿ ಅವರ ದೃಷ್ಟಿಯೆಂಬ ಅಮೃತವು ಬಿದ್ದರೆ ವ್ಯಾಧಿಯು ಗುಣವಾಗುವುದು. ಸತ್ಪುರುಷರ ಕೃಪಾದೃಷ್ಟಿ ಯಿಂದ ಪೂರ್ವಜನ್ಮದ ಪಾಪಗಳು ಹೋಗುವುವು, ಎಂದರು. ಆಗ ರಾಜನು ಸ್ವಾಮಿಾ, ನನ್ನನ್ನು ಯವನನೆನ್ನದಿರಿ. ನಾನು ಬ್ರಾಹ್ಮಣ ದಾಸನು. ಪೂರ್ವಜನ್ಮದಲ್ಲಿ ಗುರುಸೇವೆಗೈದೆನು. ಆದರೆ ಪಾಪ ದಿಂದ ಯವನನಾದೆನು. ಯಾವ ಮಹಾತ್ಮರ ದರ್ಶನದಿಂದ ರೋಗ ಪರಿಹಾರವಾದೀತು? ಹೇಳಿರಿ, ಎಂದು ಕೇಳಿದನು.

ಆಗ ಒಬ್ಬ ವಿಪ್ರನು ಏಕಾಂತದಲ್ಲಿ ರಾಜನೇ, ನೀವು ಮ್ಲೇಂಛರು. ಎಲ್ಲರೂ ನಿಮ್ಮನ್ನು ನಿಂದಿಸುವರು. ಆದರೆ ನೀನು ಪಾಪವಿನಾಶಿನೀ ತೀರ್ಥಕ್ಕೆ ಹೋಗಿ ಅಲ್ಲಿ ಏಕಾಂತವಾಗಿ ಏಕಚಿತ್ತದಿಂದ ಸ್ನಾನ ಮಾಡು, ಎಂದನು. ಆ ರಾಜನಿದನ್ನು ಕೇಳಿ ಆ ತೀರ್ಥಕ್ಕೆ ಹೊರಟು ಬಂದು, ಎಲ್ಲಾ ಜನರನ್ನೂ ದೂರದಲ್ಲಿ ಬಿಟ್ಟು ತಾನೊಬ್ಬನೇ ಏಕಾಂತ ಸ್ಥಳಕ್ಕೆ ಹೋಗಿ ಅಲ್ಲೊಬ್ಬ ಯತಿಯಿರಲು ಭಕ್ತಿಯಿಂದ ಅವರನ್ನು ವಂದಿಸಿ ತನ್ನ ವ್ರಣವನ್ನು ತೋರಿಸಿ, ಇದಕ್ಕೆ ಉಪಶಮನವಾಗುವು ದೆಂತು? ಎಂದು ಕೇಳಿದನು. ಆಗ ಆ ಯತಿಯು ಅಯ್ಯಾ, ಮಹಾತ್ಮರ ಸಂದರ್ಶನದಿಂದ ಒಳ್ಳೇದಾಗುವುದು. ಇದಕ್ಕೊಂದು ಆಖ್ಯಾನವನ್ನು ಕೇಳು. ಪೂರ್ವದಲ್ಲಿ ಅವಂತೀ ನಗರದಲ್ಲಿ ಒಬ್ಬ ವಿಪ್ರನಿಗೆ ದುರಾ ಚಾರಿಯಾದ ಮಗನಿದ್ದನು. ಇವನು ಮದಿಸಿದವನಾಗಿ ಸರ್ವ ಸ್ತ್ರೀಯರಲ್ಲಿ ರಮಿಸುತ್ತಾ, ಸ್ನಾನ, ಸಂಧ್ಯಾದಿಗಳನ್ನು ಬಿಟ್ಟು ಪಿಂಗಳಾ ಎಂಬ ವೇಶ್ಯೆಯಲ್ಲಿ ಆಸಕ್ತನಾಗಿ ಆಕೆಯ ಮನೆಯಲ್ಲಿ ಅನ್ನವನ್ನು ತಿಂದು ದುರಾಚಾರಿಯಾಗಿದ್ದನು. ಹೀಗೆ ಆ ಸೂಳೆಯ ಮನೆಯಲ್ಲಿರು ವಾಗ ಅಲ್ಲಿಗೆ ಋಷಭಯೋಗಿಯು ಬಂದನು. ಆಗ ಆ ಸೂಳೆಯೂ, ಇವನೂ ಇವರನ್ನು ನೋಡಿ ಸಾಷ್ಟಾಂಗ ನಮಸ್ಕಾರಮಾಡಿ ಮನೆಗೆ

ಕರೆದೊಯ್ದು ಪೀಠದಲ್ಲಿ ಕುಳ್ಳಿರಿಸಿ ಷೋಡಶೋಪಚಾರ ಪೂಜೆಮಾಡಿ ಅರ್ಘ್ಯಪಾದ್ಯಗಳಂ ಕೊಟ್ಟು ಗಂಧಾಕ್ಷತೆಗಳನ್ನು ಹಚ್ಚಿ, ನಾನಾ ವಿಧ ಹೂವುಗಳನ್ನೂ, ಪರಿಮಳದ್ರವ್ಯಗಳನ್ನೂ ಸಮರ್ಪಿಸಿ, ಚರಣತೀರ್ಥವನ್ನು ಇಬ್ಬರೂ ತೆಗೆದುಕೊಂಡರು. ನಾನಾ ಪಕ್ವಾನ್ನಗಳಿಂದ ಅವರಿಗೆ ಭೋಜನ ಮಾಡಿಸಿದರು. ಅವರ ಕೈಯನ್ನು ತೊಳೆದು ಮಂಚದಲ್ಲಿ ಕುಳ್ಳಿರಿಸಿ ತಾಂಬೂಲವಂ ಕೊಟ್ಟು ಭಕ್ತಿಯಿಂದ ಇಬ್ಬರೂ ಇವರ ಚರಣಸೇವೆಯನ್ನು ಮಾಡುತ್ತಿದ್ದರು. ಆ ಯೋಗಿಯು ನಿದ್ರಿತನಾದನು. ಇಬ್ಬರೂ ನಿಂತಿದ್ದು ಇವರನ್ನು ಸೇವಿಸಿದರು. ಸೂರ್ಯೋದಯವಾದೊಡನೆಯೇ ಈ ತಾಪಸಿಯು ಇವರ ನಿರೂಪಹೊಂದಿ ಹೊರಟುಹೋದನು. ಈ ವಿಪ್ರನು ಈ ವೇಶ್ಯೆಯ ಮನೆಯಲ್ಲಿರಲು ಇವನಿಗೆ ಯೌವನವು ಹೋಗಿ ಮುಪ್ಪು ಬಂದಿತು. ಮುಂದೆ ಮೃತನಾದನು. ವೇಶ್ಯೆಯೂ ಸತ್ತಳು. ಇವನು ಮುಂದಿನ ಜನ್ಮದಲ್ಲಿ ದಶಾರ್ಣವ ದೇಶದ ರಾಜನಾದ ವಜ್ರಬಾಹುವಿನ ಹಿರಿಯ ಹೆಂಡತಿಯ ಹೊಟ್ಟೆಯಲ್ಲಿ ಹುಟ್ಟಿದನು. ಈ ರಾಜನ ಹಿರಿಯ ಹೆಂಡತಿಯು ಗರ್ಭಿಣಿಯಾದಾಗ ಈಕೆಯ ಸವತಿಯು ಮತ್ಸರದಿಂದ ಈಕೆಯು ಬಸುರಾದಳೆಂದರಿತು ಹಾವಿನ ವಿಷವಂ ತಂದು ಈ ರಾಣಿಗೆ ಕುಡಿಸಿದಳು. ಈ ವಿಷವು ಈಕೆಯ ಗರ್ಭವನ್ನು ಭೇದಿಸಿತು. ದೈವಯೋಗದಿಂದ ಆಕೆಯ ಗರ್ಭಸ್ಥ ಶಿಶುವು ಸಾಯದೇ ಮೈಯೆಲ್ಲಾ ವ್ರಣವುಳ್ಳದ್ದಾಗಿ ಜನಿಸಿತು. ವಿಷವು ಸರ್ವಾಂಗದಲ್ಲಿಯೂ ವ್ಯಾಪಿಸಿತ್ತು. ಈ ಶಿಶುವು ಹಗಲು ರಾತ್ರಿಯಲ್ಲೂ ಅಳುತ್ತಾ ಇತ್ತು. ರಾಜದಂಪತಿಗಳು ಬಹಳವಾಗಿ ದುಃಖಿಸಿದರು. ಅನೇಕ ಪ್ರಸಿದ್ಧರಾದ ವೈದ್ಯರನ್ನು ಕರೆಯಿಸಿ ಅಪಾರ ಧನವನ್ನಿತ್ತು ಶಿಶುವಿಗೆ ಔಷಧಿಯನ್ನು ಕೊಡಿಸಿದರು. ಆದರೂ ಗುಣವಾಗಲಿಲ್ಲ. ಮಗುವು ವ್ರಣಬಾಧೆಯಿಂದ ಅಳುತ್ತಿತ್ತು. ತಾಯಿಯು ರಾತ್ರಿಯಲ್ಲಿ ನಿದ್ರೆಮಾಡಲೇ ಇಲ್ಲ. ವ್ರಣಗಳಲ್ಲಿ ಹುಳುಗಳಾದುವು. ರಾಜನಿಗೆ ಬಹು ದುಃಖವಾಯಿತು. ಇದರಿಂದ ರಾಜನಿಗೂ ನಿದ್ರೆಯೇ ಇಲ್ಲ. ತಾಯಿಯೂ ಮಕ್ಕಳೂ ಅನ್ನನೀರನ್ನು ತೆಗೆದುಕೊಳ್ಳಲಿಲ್ಲ. ಶರೀರವು ಕ್ಷೀಣಿಸಿತು. ಈ ತಾಯಿಮಕ್ಕಳಿಬ್ಬರೂ ಜೀವಶವವಾಗಿದ್ದರು. ರೋಗ ನಾಶವಾಗಲಿಲ್ಲ. ಇವರನ್ನು ನೋಡಲು

ಅಸಹ್ಯದಿಂದ ನಮನವಾಡುವಂತಾಗುತ್ತಿತ್ತು. ರಾಜನು ಯೋಚಿಸಿ ಈ ಇಬ್ಬರನ್ನೂ ಅಡವಿಗೆ ಕಳುಹಿಸಿ ಬಿಟ್ಟು ಬಿಡುವೆನು. ಪಾಪಿಗಳ ಪಾಪವು ಅನುಭವಿಸಿದ ಹೊರತು ತೀರದು. ತಮ್ಮ ಪಾಪವನ್ನು ತಾವೇ ಅನುಭವಿಸಬೇಕು, ಎಂದರಿದು ತನ್ನ ಸಾರಥಿಯಂ ಕರೆದು ಸೂತನೇ, ನನ್ನ ಪತ್ನಿಯನ್ನೂ, ಪುತ್ರನನ್ನೂ ಕರೆದೊಯ್ದು ಜನರಿಲ್ಲದ ಕಾಡಿನಲ್ಲಿ ಬಿಟ್ಟು ಬಾ, ಎಂದಾಜ್ಞಾಪಿಸಿದನು. ಆತನು ಇದರಂತೆಯೇ ರಾಣಿಯನ್ನೂ, ಪುತ್ರನನ್ನೂ ರಥದಲ್ಲಿ ಕುಳ್ಳಿರಿಸಿಕೊಂಡು ಹೋದನು. ಈ ರಾಣಿಯ ದಾಸದಾಸಿಯರೂ, ತಾಯಿತಂದೆಗಳೂ, ಬಂಧುಗಳೂ ಈ ದುರಾಚಾರಿಯೂ, ಪಾಪಿಯೂ ಆದ ರಾಜನು ತನ್ನ ಸ್ತ್ರೀಪುತ್ರ ರನ್ನು ಕಾಡಿಗಟ್ಟಿದನೆಂದು ದುಃಖಿಸಿದರು. ನರಸಂಚಾರವಿಲ್ಲದ ಕಾಡಿ ಗೊಯ್ದು ಆ ತಾಯಿಮಕ್ಕಳನ್ನು ಬಿಟ್ಟು ಬಂದು ರಾಜನಿಗೆ ಅರುಹಿಸಿ ದನು. ರಾಜನು ಹರ್ಷಿತನಾಗಿ ತನ್ನ ಕಿರಿಯರಸಿಗೆ ಈ ವಿಚಾರವಂ ಪೇಳಿ ಆನಂದದಿಂದಿದ್ದನು. ಆ ತಾಯಿಮಕ್ಕಳು ಕಾಡಿನಲ್ಲಿ ಅನ್ನೋ ದಕವಿಲ್ಲದೆ ದುಃಖಪೀಡಿತರಾಗಿದ್ದರು. ಇಬ್ಬರ ದೇಹದಲ್ಲಿಯೂ ವ್ರಣಗಳು ದೊಡ್ಡದಾದುವು. ಆ ಮುಳ್ಗಾಡಿನಲ್ಲಿರಲು ಶಕ್ತರಾಗಲಿಲ್ಲ. ರಾಣಿಯು ಬಾಲನನ್ನೆತ್ತಿಕೊಂಡು ನಡೆಯುತ್ತಾ, ತನ್ನ ಪೂರ್ವದುರಿತ ಫಲವಿದು, ಎಂದು ದುಃಖಿಸಿದಳು. ಆ ಕಾಡಿನಲ್ಲಿ ನಾನಾ ಮೃಗ ಜಾತಿಗಳೂ, ಹುಲಿ, ಸಿಂಹಗಳೂ, ದೊಡ್ಡ ಸರ್ಪಗಳೂ ಸಂಚರಿಸು ತ್ತಿದ್ದುವು. ಹುಲಿಗಳು ತನ್ನನ್ನು ನೋಡಿದರೂ ಪಾಪಿಯೆಂದು ತನ್ನನ್ನು ತಿನ್ನಲಿಲ್ಲವೆಂದು ಭಾವಿಸಿ ಬೀಳುತ್ತೇಳುತ್ತಾ, ಚಿಂತಿಸುತ್ತಾ ಹೋಗುತ್ತಿದ್ದಳು. ಇವಳು ದಾಹಪೀಡಿತಳಾಗಿ ಹುಲಿ ಹಾವುಗಳಿಗೆ ಹೆದರಿದಳು. ಬೇತಾಳ, ಬ್ರಹ್ಮರಾಕ್ಷಸ, ಕಾಡಾನೆಗಳೂ, ಕರಡಿಗಳೂ ಆ ಕಾಡಿನಲ್ಲಿ ತಿರುಗುತ್ತಿದ್ದುವು. ಕೇಶಪಾಶವು ಬಿಚ್ಚಿ ಹೋಗಿ ಹೆಜ್ಜೆಯ ವರೆಗೂ ಇಳಿದಿರಲು, ಚರಣಂಗಳಲ್ಲಿ ಮುಳ್ಳುಗಳು ನಾಟಿರಲು, ಕಲ್ಲುಗಳು ತಗಲುತ್ತಿರಲು, ಆ ಕಾಡಿನಲ್ಲಿ ತಿರುಗುತ್ತಾ ಗೋಪಾಲಕ ರನ್ನು ನೋಡಿ ಅವರನ್ನು ಕುರಿತು ಅಯ್ಯಾ ಬಾಲಕರೇ, ನೀರನ್ನು ತಂದುಕೊಡಿರಿ, ಎಂದು ಕೇಳಿದಳು. ಆಗ ಅವರು ಅಮ್ಮಾ, ನಮ್ಮ ಮನೆಗೆ ಬಾರಮ್ಮಾ. ಅಲ್ಲಿ ಅನ್ನ ನೀರುಗಳು ದೊರೆಯುವುವು,

ಎಂದರು. ಇದರಂತೆ ಈಕೆಯು ಆ ಗೋಪುರ ಊರಿಗೆ ಹೋದಳು. ಆ ಊರವರೆಲ್ಲರೂ ಈಕೆಯಂ ನೋಡಿ ನೀನು ಯಾರಮ್ಮಾ, ಎಂದು ವಿಚಾರಿಸುತ್ತಿದ್ದರು. ಈಕೆಯು ಆ ಊರಿನಲ್ಲಿರುವ ಪದ್ಮಾಕರನೆಂಬ ಪುಣ್ಯವಂತನಾದ ವೈಶ್ಯನ ಮನೆಗೆ ಹೋದಳು. ಅವನ ದಾಸಿಯರು ಈಕೆಯಂ ಕಂಡು ತಮ್ಮ ಆ ವೈಶ್ಯಾಗ್ರಣಿಗೆ ತಿಳಿಸಿದರು. ಆ ವೈಶ್ಯನು ಈಕೆಯನ್ನು ಕರೆಯಿಸಿ ಈಕೆಯ ಸಂಗತಿಗಳೆಲ್ಲವನ್ನೂ ವಿಚಾರಿಸಿ ಒಂದು ಮನೆಯಲ್ಲಿರಿಸಿ ಅನ್ನವಸ್ತ್ರಗಳನ್ನಿತ್ತು ಸಲಹುತ್ತಿದ್ದನು. ಈ ತಾಯಿಮಕ್ಕಳ ಪ್ರಾಣಬಾಧೆಯು ಹೆಚ್ಚಿತು. ಈ ಮಗನು ಸತ್ತನು, ರಾಣಿಯು ಮೂರ್ಛೆಯಿಂದ ಭೂಮಿಯಲ್ಲಿ ಬಿದ್ದು ತನ್ನ ದುಷ್ಕರ್ಮವಂ ನೆನೆದು ದುಃಖಿಸಿದಳು. ಆ ವೈಶ್ಯಪತ್ನಿಯು ಈಕೆಯನ್ನು ನೋಡಿ ಸಮಾಧಾನಮಾಡಿದಳಾದರೂ ದುಃಖವು ಶಮನವಾಗಲಿಲ್ಲ. ಈಕೆಯು ಹಾ ರಾಜಪುತ್ರನೇ, ಚಂದಿರನಂತೆ ಮುಖವುಳ್ಳವನೇ, ನನ್ನ ಆನಂದ ಸಾಗರನೇ, ಏಕೆ ಮೌನದಿಂದಿರುವೆ? ತಾಯಿ, ತಂದೆ, ಪತಿ, ಬಂಧುಗಳನ್ನು ಬಿಟ್ಟು ಬಂದೆನು. ಆದರೂ ನಿನ್ನನ್ನು ನಂಬಿದ್ದೆನು. ನೀನೇ ನನ್ನನ್ನು ಸಲಹುತ್ತೀ, ಎಂದಿದ್ದೆನು. ನನ್ನನ್ನು ಅನಾಥಳನ್ನಾಗಿ ಮಾಡಿ ಬಿಟ್ಟು ಹೋದೆಯಾ? ನನ್ನಂ ರಕ್ಷಿಸುವವರಾರು? ಇನ್ನು ಪ್ರಾಣ ಬಿಡುವೆನು, ಎಂದು ಗಟ್ಟಿಯಾಗಿ ರೋದಿಸಿದಳು. ಅಲ್ಲಿ ಸೇರಿದ ನರನಾರಿಯರು ಈಕೆಯನ್ನು ನೋಡಿ ದುಃಖಿಸಿದರು. ಪುತ್ರಶೋಕವು ತಾಯಿತಂದೆಗಳನ್ನು ಭಸ್ಮಮಾಡುವುದಲ್ಲವೇ? ಈಕೆಯು ಹೀಗೆ ದುಃಖಿಸುತ್ತಿರಲು, ಪೂರ್ವಜನ್ಮದಲ್ಲಿ ಈಕೆಯಿಂದ ಸೇವಿತನಾದ ಋಷಭ ಯೋಗೀಶ್ವರನು ಜ್ಞಾನದೃಷ್ಟಿಯಿಂದರಿತು ಈಕೆಗೆ ಉಪಕಾರಮಾಡುವುದಕ್ಕಾಗಿ ಬಂದನು. ಆ ಪದ್ಮಾಕರನು ಇವರನ್ನು ನೋಡಿ ವಂದಿಸಿ ಅರ್ಘ್ಯಪಾದ್ಯಗಳನ್ನು ಕೊಟ್ಟು ಉತ್ತಮ ಪೀಠದಲ್ಲಿ ಕುಳ್ಳಿರಿಸಿದನು. ಈತನು ಈ ತರುಣಿಯು ಏಕೆ ರೋದಿಸುವಳು? ಎಂದು ಕೇಳಿದನು. ವೈಶ್ಯನು ಈಕೆಯ ಪುತ್ರನು ಮೃತನಾದುದರಿಂದ ದುಃಖಿಸುವಳು, ಎಂದರಿಕೆಗೈದನು. ಆಗ ಯೋಗಿಯು ಅಮ್ಮಾ, ಏಕೆ ದುಃಖಿಸುವೆ? ಈ ಸೃಷ್ಟಿಯಲ್ಲಿ ಹುಟ್ಟಿ ಸಾಯದಿರುವವನ್ಯಾರು? ಈ ದೇಹವು ಸ್ಥಿರವಲ್ಲ. ನದಿಯಲ್ಲಿರುವ ನೀರುಗುಳ್ಳೆಯಂತೆಯೂ, ನೊರೆಯಂತೆಯೂ

ವ್ಯಕ್ತಾವ್ಯಕ್ತವಾಗಿರುವುದು. ಪಂಚಭೂತಗಳಿಂದ ದೇಹವುಂಟಾಗುವುದು. ಈ ಪಂಚಭೂತಾಂಶವು ಅವುಗಳನ್ನು ಸೇರುವುದು. ಆಗ ಏನೂ ಇಲ್ಲವು. ವ್ಯರ್ಥವಾಗಿ ಏಕೆ ದುಃಖಿಸುತ್ತಿರುವಿ. ಕರ್ಮಾನುಗುಣವಾಗಿ ಕಾಲವು ನಮ್ಮನ್ನು ಕುಣಿಸುವುದು. ನಮ್ಮ ವಾಸನೆಯು ಈ ರೀತಿಯಾಗಿದೆ. ಮಾಯೆಯಿಂದ ಮಾಯೆ ಹುಟ್ಟುವುದು. ಇದರಿಂದ ಸತ್ವ, ರಜ, ತಮೋಗುಣಗಳು ಉಂಟಾಗುವುವು. ಈ ಗುಣಗಳಿಂದ ಮನುಷ್ಯಸ್ವಭಾವವು ಬದಲಾಯಿಸುವುದು. ಸತ್ವಗುಣದಿಂದ ದೇವನೂ, ರಜೋಗುಣದಿಂದ ಮನುಷ್ಯನೂ, ತಮೋಗುಣದಿಂದ ರಾಕ್ಷಸನೂ ಆಗ ಹುಟ್ಟುವರು. ಈ ದೇಹವು ಸ್ಥಿರವಲ್ಲವು. ಈ ಸಂಸಾರದಲ್ಲಿ ನರನು ತನ್ನ ಪೂರ್ವಕರ್ಮಾನುಸಾರವಾಗಿ ಸುಖದುಃಖಗಳನ್ನು ಹೊಂದುವನು. ಕೋಟಿ ವರ್ಷಗಳು ಜೀವಿಸಿದ ದೇವತೆಗಳೂ ಸ್ಥಿರವಾಗಿರುವುದಿಲ್ಲ. ಇನ್ನು ನರರ ಪಾಡೇನು? ಇದರಿಂದ ಜ್ಞಾನಿಗಳು ಹುಟ್ಟಿದರೆ ಸಂತೋಷಿಸದೆಯೂ, ಸತ್ತರೆ ದುಃಖಿಸದೆಯೂ ಇರುವರು. ಈ ದೇಹವಸ್ಥಿರವು. ಗರ್ಭವುಂಟಾದಾಗಲೇ ಅದಕ್ಕೆ ಮರಣವೆಂದು ತಿಳಿಯಬೇಕು. ಕೆಲವರು ಯೌವನದಲ್ಲಿಯೂ, ಕೆಲವರು ಮುಪ್ಪಿನಲ್ಲಿಯೂ ಸಾಯುವರು. ಪೂರ್ವಜನ್ಮದ ಕರ್ಮಾನುಸಾರವಾಗಿ ಸುಖದುಃಖಗಳುಂಟಾಗುವುವು. ಮಾಯೆಯಿಂದ ನರದೇಹಕ್ಕೆ ಮಗನೆನ್ನುವರು. ಬ್ರಹ್ಮನು ಹಣೆಯಲ್ಲಿ ಬರೆದ ಬರಹದಂತೆ ಎಲ್ಲವೂ ಆಗುವುವು. ಕಾಲಕರ್ಮವನ್ನು ಮೀರಲು ಯಾರಿಗೂ ಶಕ್ತಿಯಿಲ್ಲ. ಅಮ್ಮಾ, ಈ ಅನಿತ್ಯದೇಹಕ್ಕಾಗಿ ದುಃಖಿಸುವಿಯೇಕೆ? ನೀನು ಪೂರ್ವಜನ್ಮದಲ್ಲಿ ಯಾರಿಗೆ ಹೆಂಡತಿಯಾಗಿದ್ದೆ? ಯಾರಿಗೆ ತಾಯಿಯಾಗಿದ್ದೆ? ಯಾರಿಗೆ ತಂಗಿಯಾಗಿದ್ದೆ? ಹೇಳು. ಇದನ್ನೆಲ್ಲವನ್ನೂ ತಿಳಿದು ದುಃಖಿಸದಿರು. ನೀನು ಶಂಕರನನ್ನು ಮರೆಹೊಕ್ಕರೆ ಒಳ್ಳೇದಾಗುವುದು, ಎಂದು ಬೋಧಿಸಿದರು. ಆಗ ರಾಣಿಯು ಈ ಯೋಗಿಗಳಂ ವಂದಿಸಿ ಸ್ವಾಮಿ, ತಾಯಿತಂದೆ ಪತಿಯು ನೆಂಟರುಗಳನ್ನು ಬಿಟ್ಟು ರಾಜ್ಯಭ್ರಷ್ಟಳಾಗಿ ಬಂದೆನು. ನಾನು ಮಗನನ್ನು ಪ್ರಾಣವೆಂದು ನಂಬಿದ್ದೆನು. ಈತನಿಗೆ ಈ ಗತಿಯಾಯಿತು. ಈತನನ್ನು ಬಿಟ್ಟು ಹೇಗಿರಲಿ? ನನಗೂ ಮರಣವುಂಟಾಗಲಿ, ಎಂದು ಆ ಯೋಗಿಯ ಚರಣಂಗಳಲ್ಲಿ

ವಂದಿಸಿದಳು. ಇದನ್ನು ಕೇಳಿ ಯೋಗಿಯು ಕರುಣೆಯಿಂದ ಪೂರ್ವದ ಉಪಕಾರವಂ ನೆನೆದು ಪ್ರಸನ್ನನಾಗಿ ಭಸ್ಮವನ್ನು ಆ ಪ್ರೇತದ ಹಣೆಗೆ ಹಚ್ಚಲು ಮಗನಿಗೆ ಪ್ರಾಣ ಬಂದಿತು. ಎದ್ದು ಕುಳಿತನು. ಇವನ ದೇಹದ ವ್ರಣಗಳೆಲ್ಲವೂ ಹೋಗಿ ಸುವರ್ಣದಂತೆ ದೇಹವುಳ್ಳದ್ದಾಯಿತು. ರಾಣಿಯು ಸುತನೊಡನೆ ಆ ಯೋಗೀಶ್ವರನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದಳು. ಆಗಲಾ ಯೋಗಿಯು ಮತ್ತೆ ಭಸ್ಮವನ್ನು ಹಚ್ಚಿದನು. ಆಗ ಇಬ್ಬರ ದೇಹವೂ ಚಿನ್ನದಂತೆ ಹೊಳೆಯುತ್ತಿತ್ತು. ಯೋಗಿಯು ಪ್ರಸನ್ನನಾಗಿ ಎಲೌ ರಾಣಿಯೇ, ನಿನ್ನ ಮುಪ್ಪಿನಲ್ಲಿಯೂ ಈ ನಿನ್ನ ಸುತನು ತಾರುಣ್ಯವುಳ್ಳವನಾಗಿರಲಿ, ಎಂದು ವರವಿತ್ತರು. ಮತ್ತೂ ಈತನು ಭದ್ರಾಯುವೆಂಬ ಹೆಸರಿನಿಂದ ತಂದೆಗಿಂತಲೂ ಅಧಿಕನಾಗಿ ರಾಜ್ಯವಾಳುವನು, ಎಂದು ವರವಿತ್ತು ಅಲ್ಲಿಂದ ಹೊರಟುಹೋದರು. ರಾಜನೇ, ಕೇಳು. ಸತ್ಪುರುಷರ ಮಹಿಮೆಯು ಹೀಗಿರುವುದು. ಸತ್ಪುರುಷರ ಸೇವೆಮಾಡಲು ನಿನ್ನ ವ್ರಣವು ಹೋದೀತು. ಚಿಂತಿಸದೆ ಸ್ಥಿರಚಿತ್ತನಾಗಿರು, ಎಂದರು. ಈ ಯತಿಯ ವಚನವನ್ನು ಕೇಳಿ ರಾಜನು ವಂದಿಸಿ ಕೈಗಳನ್ನು ಜೋಡಿಸಿ ಸ್ವಾಮೀ, ಸತ್ಪುರುಷರೆಲ್ಲಿರುವರು? ನಿರೂಪಿಸಿರಿ. ನಾನು ಅಲ್ಲಿಗೆ ಹೋಗುವೆನು. ಅವರ ದರ್ಶನದಿಂದ ನನಗೆ ಒಳ್ಳೇದಾಗುವುದು, ಎಂದು ಬಿನ್ನವಿಸಿದನು. ಆಗಾ ಯತಿಯು ರಾಜನೇ, ಗಾಣಗಾಪುರದಲ್ಲಿ ಆ ಮಹಾತ್ಮರಿರುವರು. ಅವರ ದರ್ಶನಕ್ಕೆ ಹೋಗು. ಒಳ್ಳೇದಾಗುವುದು, ಎಂದನು. ರಾಜನು ಇದನ್ನು ಕೇಳಿ ಪಯಣಮಾಡಿ ಗಾಣಗಾಪುರಕ್ಕೆ ಬಂದನು. ಅಲ್ಲಿ ಗ್ರಾಮಸ್ಥರನ್ನು ಕುರಿತು ಗುರುಗಳೆಲ್ಲಿರುವರು? ಏನು ಮಾಡುವರು? ಎಂದು ಕೇಳಿದನು. ಆಗ ಗ್ರಾಮಸ್ಥರು ಈ ಯವನನು ಗುರುಗಳೆಲ್ಲಿರುವರೆಂದು ಕೇಳುವನು. ಇವನು ಏನು ಮಾಡುವನೋ ತಿಳಿಯದು, ಎಂದು ಚಿಂತಿಸಿ ಅಯ್ಯಾ, ಶ್ರೀಗುರುಗಳು ಈಗ ಇಲ್ಲಿ ಇಲ್ಲ, ಎಂದರು. ಯಾರೂ ಗುರುಗಳಿರುವ ಸ್ಥಳವನ್ನು ಹೇಳಲಿಲ್ಲ. ಆಗ ಇವನು ಕೋಪಿಸಿ ಅಯ್ಯಾ, ನಾನು ಗುರುದರ್ಶನಕ್ಕೆಂದು ಬಂದೆನು. ಅವರನ್ನು ತೋರಿಸಿರಿ, ಎಂದನು. ಒಬ್ಬನು ಅಯ್ಯಾ. ಶ್ರೀಗುರುಗಳು ಸಂಗಮದಲ್ಲಿ ಸ್ನಾನಮಾಡುತ್ತಿರುವರು. ಮಾಧ್ಯಾ

ಹ್ನಿಕ ಕರ್ಮವನ್ನು ಮುಗಿಸಿಕೊಂಡು ಊರಿಗೆ ಬರುವರು, ಎಂದನು. ರಾಜನಿದನ್ನು ಕೇಳಿ ಜನರೆಲ್ಲರನ್ನೂ ಬಿಟ್ಟು ತಾನು ಅಂದಣವನ್ನೇರಿ ಹೊರಟನು. ಈ ರಾಜನು ದೂರದಲ್ಲಿ ಶ್ರೀಗುರುಗಳಂ ನೋಡಿ ಅಂದಣವನ್ನಿಳಿದು ಪಾದಚಾರಿಯಾಗಿ ಹೋಗಿ ಅವರನ್ನು ವಂದಿಸಿ ನಿಂತಿದ್ದನು. ಆಗ ಶ್ರೀಗುರುವು ಅಯ್ಯಾ ನಮ್ಮ ದಾಸನಾದ ರಜಕನೇ, ಎಲ್ಲಿದ್ದೀಯೆ? ಬಹು ದಿನಗಳ ಮೇಲೆ ಕಾಣಿಸಿದೆ, ಎಂದು ಕೇಳಿದರು. ಆಗ ರಾಜನು ಪೂರ್ವಜನ್ಮ ಸ್ಮರಣೆಯುಂಟಾಗಿ ಸಾಷ್ಟಾಂಗ ನಮಸ್ಕಾರಮಾಡಿ ಚರಣಂಗಳಲ್ಲಿ ಬಿದ್ದು ರೋಮಾಂಚವುಳ್ಳವನಾಗಿ ಆನಂದದಿಂದ ಕೈಗಳಂ ಜೋಡಿಸಿ ನಾನಾ ವಿಧವಾಗಿ ಸ್ತುತಿಸಿ ಗುರುವರ್ಯರೇ ನನ್ನನ್ನು ಉಪೇಕ್ಷಿಸುವಿರೇಕೆ? ನಿಮ್ಮ ಚರಣಗಳಿಗೆ ದೂರನಾದೆನು. ನನ್ನನ್ನು ಕತ್ತಲೆಯಾದ ಸಂಸಾರಸಾಗರದಲ್ಲಿ ಏಕೆ ಮುಳುಗಿಸುವಿರಿ? ದುರ್ಬುದ್ಧಿಯಿಂದ ತಮ್ಮನ್ನು ಸೇವಿಸದೆ ದಿವಾಂಧನಾದೆನು. ನೀವು ಹತ್ತಿರದಲ್ಲಿರುತ್ತಿದ್ದರೂ ನಾನು ಗುರ್ತಿಸದೇ ತಮೋಗುಣದಿಂದ ಅಂಧನಾಗಿ ನಿಮ್ಮ ಚರಣಂಗಳನ್ನು ಮರೆತೆನು. ಭಕ್ತನನ್ನೇಕೆ ಉಪೇಕ್ಷಿಸುವಿರಿ? ಅಜ್ಞಾನಸಾಗರದಲ್ಲಿ ಏಕೆ ಹಾಕಿದಿರಿ? ನನ್ನನ್ನು ರಕ್ಷಿಸಿರಿ. ನನಗೆ ರಾಜ್ಯವು ಸಾಕು, ನಿಮ್ಮ ಚರಣಗಳನ್ನು ಸೇವಿಸುತ್ತಿರುವೆನು, ಎಂದು ಸ್ತುತಿಸಿದನು. ಇದನ್ನು ಕೇಳಿ ಶ್ರೀಗುರುವು ಅಯ್ಯಾ, ನಿನ್ನ ಇಷ್ಟವು ನೆರವೇರುವುದು, ಎಂದರು. ರಾಜನು ಸ್ವಾಮೀ, ನನಗೆ ಒಂದು ವ್ರಣವುಂಟಾಗಿದೆ. ಕೃಪಾದೃಷ್ಟಿಯಿಂದ ನೋಡಿರಿ, ಎಂದು ಬೇಡಿದನು. ಬಳಿಕ ಗುರುವು ನಕ್ಕು ರಾಜನೇ, ನಿನ್ನ ದೇಹದಲ್ಲಿ ವ್ರಣವಿಲ್ಲ, ಎಂದರು. ಆಗ ರಾಜನು ತನ್ನ ದೇಹವನ್ನು ನೋಡಿಕೊಂಡನು. ವ್ರಣವಿರಲಿಲ್ಲ. ವಿಸ್ಮಿತನಾಗಿ ಗುರುಚರಣಂಗಳಲ್ಲಿ ವಂದಿಸಿದನು. ರಾಜನು ಸ್ವಾಮೀ, ತಮ್ಮ ಅನುಗ್ರಹದಿಂದ ರಾಜ್ಯವನ್ನು ಹೊಂದಿ ಅಷ್ಟೈಶ್ವರ್ಯವನ್ನು ಭೋಗಿಸಿದೆನು. ಪುತ್ರಪೌತ್ರರನ್ನೂ ನೋಡಿದೆನು. ನನ್ನ ಐಶ್ವರ್ಯವನ್ನು ತಾವು ಬಂದು ನೋಡಬೇಕು. ನೀವು ಭಕ್ತವತ್ಸಲರೆಂಬ ಬಿರುದುಳ್ಳವರೆಂಬುದು ನಿರ್ಧರವಾಯಿತು. ನನ್ನ ಇಷ್ಟವು ನೆರವೇರಿತು. ಈ ಸಂಸಾರಭಾರವನ್ನು ಬಿಟ್ಟು ತಮ್ಮ ಪಾದಗಳಲ್ಲಿ ಲೀನನಾಗುವೆನು,

ಎಂದನು. ಆಗ ಶ್ರೀಗುರುವು ಅಯ್ಯಾ, ಯತಿಗಳಾದ ನಾವು ನಿನ್ನ ನಗರಕ್ಕೆ ಬರಬಾರದು. ಅಲ್ಲಿ ನಾನಾ ಪಾತಕಗಳಾಗುತ್ತಿನೆ. ನಿನ್ನ ನಗರದಲ್ಲಿ ಯುವನರಾದ ನೀವು ನಿತ್ಯವೂ ಗೋಹತ್ಯ ಮಾಡುವಿರಿ. ಜೀವಹಿಂಸೆಯಾಗುವುದು. ಮದ್ಯಪಾನ ಮಾಡುವಿರಿ. ಇವುಗಳನ್ನು ಈಗ ಬಿಡಬೇಕು, ಎಂದರು. ಇದಕ್ಕೆ ರಾಜನು ಒಪ್ಪಿ ಗುರುಗಳಿಗೆ ವಂದಿಸಿ ಸ್ವಾಮಿಾ, ನಾನು ಪೂರ್ವಜನ್ಮದಲ್ಲಿ ರಜಕನಾಗಿದ್ದೆನು. ನಾನು ತಮ್ಮ ಸೇವಕನು. ರಾಜ್ಯಸುಖವನ್ನು ಹೊಂದಿದೆನು. ಮ್ಲೇಂಛನಾಗಿ ಹುಟ್ಟಿದುದೇ ಒಂದು ಕೊರತೆಯಾಗಿದೆ. ನಿಮ್ಮ ದರ್ಶನದಿಂದ ಸಂತುಷ್ಟನಾದೆನು. ಪುತ್ರಪೌತ್ರರನ್ನು ತೋರಿಸಿ ತಮ್ಮ ಪಾದಸೇವೆಯಲ್ಲಿರುವೆನು, ಎಂದು ದೈನ್ಯದಿಂದ ಬಿನ್ನವಿಸಿದನು. ಶ್ರೀ ಗುರುವು ಮನದಲ್ಲಿ ಚಿಂತಿಸಿ ಮುಂದೆ ಆಗುವುದೇ ಹೀಗೆ. ಕಲಿಯುಗ ದಲ್ಲಿ ದುರ್ಜನರು ಹೀಗೆಯೇ ಬರುವರು. ಗೌತಮಾ ತೀರ್ಥಕ್ಕೆ ಹೋಗಿ ಅಲ್ಲಿ ಗೋಪ್ಯವಾಗಿರಬೇಕು, ಎಂದು ಹೊರಟರು. ರಾಜನು ಗುರುಗಳನ್ನು ತನ್ನ ಸುಖಾಸನದಲ್ಲಿ ಕುಳ್ಳಿರಿಸಿ ಇವರ ಪಾದುಕೆಗಳನ್ನು ಕರದಲ್ಲಿ ಪಿಡಿದು ಹಿಂದೆ ನಡೆದು ಹೋಗುತ್ತಿದ್ದನು. ಆಗ ಶ್ರೀಗುರುವು ಅಯ್ಯಾ, ನೀನೂ ರಥವನ್ನು ಹತ್ತುವವನಾಗು. ಬ್ರಾಹ್ಮಣರನ್ನು ಸೇವಿಸಿದರೆ ನಿನ್ನ ಜಾತಿಯವರು ನಿಂದಿಸುವರು, ಎಂದರು. ಆಗ ಇದನ್ನು ಕೇಳಿ ರಾಜನು ಸ್ವಾಮಿಾ, ನಾನು ರಜಕನು. ರಾಜನಲ್ಲ. ನಿಮ್ಮ ದೃಷ್ಟಿಯು ಬೀಳಲು ಲೋಹವೂ ಚಿನ್ನವಾಗುವುದು, ಎಂದನು. ಇಷ್ಟರಲ್ಲಿಯೇ ದಳವೆಲ್ಲವೂ ಸೇರಿತು. ನಾನಾ ವರ್ಣದ ಕುದುರೆಗಳು ಬಂದುವು. ರಾಜನು ನಿಂತುಕೊಂಡು ಆ ಸೇನೆಯೆಲ್ಲವನ್ನೂ, ತನ್ನ ಐಶ್ವರ್ಯವನ್ನೂ ಗುರುಗಳಿಗೆ ತೋರಿಸಿದನು. ಆಗ ಗುರುವು ರಾಜನೇ, ನೀನು ಕುದುರೆಯನ್ನು ಹತ್ತು. ನಗರವು ದೂರದಲ್ಲಿದೆ. ನಮ್ಮ ಸುಜ್ಞೆಯನ್ನು ತಿರಸ್ಕರಿಸಬೇಡ, ಎಂದರು. ಆಗ ಆತನು ಗುರು ಗಳ ಶಿಷ್ಯರೆಲ್ಲರಿಗೂ ಕುದುರೆಗಳನ್ನು ಕೊಟ್ಟು, ತಾನೂ ಕುದುರೆ ಯನ್ನು ಹತ್ತಿ ಗುರುದರ್ಶನವಾಯಿತೆಂದು ಹಿಗ್ಗಿದನು. ಶ್ರೀಗುರುವು ಅಯ್ಯಾ ರಾಜನೇ, ನಿನ್ನನ್ನು ನೋಡಿ ಸಂತೋಷವಾಯಿತು. ನೀನು ಒಳ್ಳೇ ಭಕ್ತನಾಗಿ ಸುಗುಣಿಯಾಗಿದ್ದೀಯೆ. ನಾವು ಯತಿಗಳು.

ನಿತ್ಯವೂ ಸಂಧ್ಯಾದಿಕರ್ಮಗಳನ್ನು ಮಾಡಬೇಕು. ನಿನ್ನೊಡನೆ ನಾವು ಬಂದರೆ ದಾರಿಯಲ್ಲಿ ನಿತ್ಯಕರ್ಮಕ್ಕೆ ಲೋಪ ಬರುವುದು. ಇದಕ್ಕೊಂದುಪಾಯವನ್ನು ಕೇಳು. ಇದಕ್ಕೊಪ್ಪಿಕೊ. ನಾವು ಮುಂದೆ ಹೋಗುವೆವು. ನೀವು ಸಾವಕಾಶದಿಂದ ಬನ್ನಿರಿ. ಪಾಪವಿನಾಶಿನೀ ತೀರ್ಥದಲ್ಲಿ ನಿನಗೆ ನಮ್ಮ ದರ್ಶನವಾಗುವುದು, ಎಂದು ಹೇಳಿ ಶಿಷ್ಯರೊಡನೆ ಗುರುಗಳು ಅದೃಶ್ಯರಾದರು. ಗುರುಗಳು ಮನೋವೇಗದಿಂದ ಪಾಪವಿನಾಶಿನಿಗೆ ಬಂದರು. ರಾಜನು ವೈದುರಾನಗರಕ್ಕೆ ಬಂದನು. ಗುರುದರ್ಶನಕ್ಕೆ ಅನೇಕರು ಬರುತ್ತಿದ್ದರು. ಸಾಖರೇ ಸಾಯಂದೇವನ ಮಗನಾದ ನಾಗನಾಥನು ಗುರುದರ್ಶನಕ್ಕೆ ಬಂದು ನಾನಾ ವಿಧದಿಂದ ಗುರುಗಳನ್ನರ್ಚಿಸಿ ಸಮಾರಾಧನೆಮಾಡಲು ಆರಂಭಿಸಿದನು. ಗುರುಗಳಿಗೆ ಷೋಡಶೋಪಚಾರ ಪೂಜೆಮಾಡಿ ಸಾವಿರ ಆರತಿಗಳನ್ನೆತ್ತಿದನು. ಇಷ್ಟು ಹೊತ್ತಿಗೆ ರಾತ್ರಿಯಾಯಿತು. ಆಗ ಗುರುಗಳು ಅಯ್ಯಾ ನಾಗನಾಥನೇ, ನೃಸಿಂಹನಿಗೆ ಪಾಪವಿನಾಶಿನಿಯಲ್ಲಿ ದರ್ಶನಕೊಡುವೆವೆಂದು ಹೇಳಿದ್ದೆವು. ನಾವು ಅಲ್ಲಿಗೆ ಹೋಗುವೆವು. ಆ ಸ್ಥಳಕ್ಕೆ ರಾಜನು ಬರುವನು. ವಿಪ್ರರಿಗೆ ಉಪದ್ರವವಾದೀತು. ವಿಪ್ರಗೃಹಗಳಿಗೆ ನೃಸಿಂಹರು ಬರುವರು, ಎಂದು ಹೇಳಿ ತಾವು ಅಲ್ಲಿಗೆ ಹೋಗಿ ಶುಭಾಸನದಲ್ಲಿ ಕುಳಿತು ಅನುಷ್ಠಾನಮಾಡುತ್ತಿದ್ದರು. ಇಷ್ಟರಲ್ಲಿಯೇ ರಾಜನು ಗುರುಗಳು ಕಾಣುವುದಿಲ್ಲ. ಸೇನೆಯು ಬಹಳವಾಗಿದೆ, ಎಂದು ಚಿಂತಿಸಿ, ಆಹಾ! ಗುರುನಾಥರು ನನ್ನನ್ನುಪೇಕ್ಷಿಸಿದರು. ಸೇವೆಯಲ್ಲಿ ಮನೋಲೋಪವಾಯಿತು. ಆದುದರಿಂದ ಇಲ್ಲಿಂದ ಹೊರಟುಹೋದರು. ಮುಂದೆ ಪಾಪವಿನಾಶಿನೀ ತೀರ್ಥದಲ್ಲಿ ದರ್ಶನಕೊಡುವೆವು, ಎಂದರು. ಗುರುಮಹಿಮೆಯ ರೀತಿಯು ತಿಳಿಯದು. ಅವರ ಮನೋಗತವನ್ನು ಯಾರು ಬಲ್ಲರು? ನಮ್ಮ ಅದೃಷ್ಟವಿಶೇಷದಿಂದ ಗುರುಚರಣ ದರ್ಶನವಾಯಿತು. ನನಗೆ ಅರಸುತನವು ಬಂದುದರಿಂದ ದಯಾನಿಧಿಗಳಾದ ಗುರುಗಳ ದರ್ಶನವಾಯಿತು. ಗುರುಗಳು ಮುಂದೆ ಹೋಗಿರುವುದು ನಿಜವು, ಎಂದು ಯೋಚಿಸಿ ದಿವ್ಯಾಶ್ವವನ್ನು ಹತ್ತಿ ರಾಜನು ಹೊರಟನು. ೪೪ ಹರದಾರಿಯು ದೂರವನ್ನು ಒಂದೇ ದಿನದಲ್ಲಿ ಪಯಣಮಾಡಿ

ಪಾಪವಿನಾಶಿನಿಗೆ ಹೋಗಿ ಗುರುಗಳನ್ನು ನೋಡಿದವನಾಗಿ ಚರಣಂಗಳಿಗೆ ವಂದಿಸಿ ಭಕ್ತಿಯಿಂದ ಮನೆಗೆ ದಯಮಾಡಿಸಿರಿ, ಎಂದು ಬೇಡಿದನು. ನಗರವನ್ನು ಅಲಂಕರಿಸಿದನು. ಹವಳ ಮುತ್ತುಗಳ ತೋರಣವನ್ನು ಹಾಕಿಸಿ, ಮಕರತೋರಣ ಕಟ್ಟಿಸಿದನು. ಸಂಭ್ರಮದಿಂದ ಗುರುಗಳನ್ನು ಪಾಲಕಿಯಲ್ಲಿ ಕುಳ್ಳಿರಿಸಿ, ನವರತ್ನಗಳನ್ನೆರಚುತ್ತಾ, ಕಾಲ್ನಡಿಗೆಯಿಂದ ಹೋಗುತ್ತಿದ್ದನು. ಜನರು ಆರತಿ ಎತ್ತುತ್ತಿದ್ದರು. ಈ ರೀತಿ ಸಂಭ್ರಮದಿಂದ ರಾಜನು ಗುರುಗಳನ್ನು ಕರೆದೊಯ್ದನು. ಜನರು ವಿಸ್ಮಿತರಾಗಿ, ರಾಜನು ವಿಪ್ರರನ್ನು ಪೂಜಿಸುವನು. ಅನಾಚಾರಿಯಾಗಿ ಯವನಧರ್ಮವನ್ನು ಬಿಟ್ಟನು. ವಿಪ್ರರ ಮುಖವನ್ನು ನೋಡಲೇಬಾರದು. ಆದರೂ ಅವರನ್ನು ಸೇವಿಸುವನು, ಎಂದು ಹೇಳುತ್ತಿದ್ದರು. ವಿಪ್ರರು, ಈ ರಾಜನು ವಿಪ್ರರ ಸೇವಕನಾದನು. ರಾಜ್ಯಕ್ಕೆ ಒಳ್ಳೇದಾಯಿತು. ಈ ರಾಜನು ನಮ್ಮನ್ನು ದ್ವೇಷಿಸದೇ ಜ್ಞಾನಿಯಾಗಿದ್ದಾನೆ, ಎಂದು ಹೇಳುತ್ತಾ ವಿಸ್ಮಿತರಾದರು. ನಾಗರಿಕರೆಲ್ಲರೂ ಗುರುಗಳನ್ನು ನೋಡಿ ವಂದಿಸಿದರು. ರಾಜನು ಕಾಲುನಡಿಗೆಯಲ್ಲಿ ಬರುತ್ತಿರಲು ಜನರು ವಿಸ್ಮಿತರಾದರು. ಈ ರಾಜನು ಈ ಯತಿಯನ್ನು ದೇವನೆಂದು ತಿಳಿದು ಸೇವಿಸುವನು. ಇದು ನವೀನವೆನ್ನುತ್ತಿದ್ದರು. ಅನೇಕ ವಾದ್ಯಗಳು ಭೋರ್ಗರೆಯುತ್ತಿರಲು, ವಂದಿಗಳು ಹೊಗಳುತ್ತಿರಲು, ರಾಜನು ಹರ್ಷಿತನಾಗಿ ಗುರುಗಳನ್ನು ಕರೆದೊಯ್ಯುತ್ತಾ, ಭಿಕ್ಷುಕರಿಗೆ ವಸ್ತ್ರ, ಧನಾದಿಗಳನ್ನು ಕೊಡುತ್ತಾ ಹೋಗುತ್ತಿದ್ದನು. ಭಿಕ್ಷುಕರು ತುಷ್ಟರಾದರು. ರಾಜನು ಈ ರೀತಿ ಸಂಭ್ರಮದಿಂದ ರಾಜಮಂದಿರವಂ ಸೇರಿದನು. ಅಲ್ಲಿ ನೆಲದಲ್ಲಿ ದಿವ್ಯಾಂಬರಗಳನ್ನು ಹಾಸಿದ್ದರು. ವಾದ್ಯಗಳು ಭೋರ್ಗರೆಯುತ್ತಿದ್ದುವು. ಮಹಾ ಸಿಂಹಾಸನವು ಸಿಂಗರಿಸಲ್ಪಟ್ಟಿತ್ತು. ಇದರಲ್ಲಿ ಗುರುಗಳನ್ನು ಕುಳ್ಳಿರಿಸಿದನು. ರಾಜಸ್ತ್ರೀಯರು ಬಂದು ಆರತಿಗಳನ್ನೆತ್ತಿದರು. ಗುರುಗಳು ಶಿಷ್ಯರನ್ನು ಹೊರಗೆ ಬಿಟ್ಟು, ನಾಲ್ವರು ಶಿಷ್ಯರೊಡನೆ ಅರಮನೆಯೊಳಕ್ಕೆ ಹೋದರು. ರಾಜನು ತನ್ನ ಕುಲಸ್ತ್ರೀಯರನ್ನೂ, ಪುತ್ರಪೌತ್ರರನ್ನೂ, ಸಹೋದರರನ್ನೂ ಗುರುಗಳಿಗೆ ತೋರಿಸಿ ಸಾಷ್ಟಾಂಗ ನಮಸ್ಕಾರಮಾಡಿದನು. ಸ್ವಾಮಿಾ, ತಮ್ಮ

ದಯೆಯಿಂದಲೂ, ಚರಣದರ್ಶನದ ಪುಣ್ಯದಿಂದಲೂ ಸರ್ವಸುಖದಿಂದ ಕೂಡಿರುವೆನು, ಎಂದು ಬಿನ್ನವಿಸಿದನು. ಶ್ರೀಗುರುವು ಸಂತೋಷಿಸಿ ಆಶೀರ್ವಾದಮಾಡಿ ರಾಜ್ಯದ ವಾರ್ತೆಯನ್ನೂ, ಗೃಹವಾರ್ತೆಯನ್ನೂ ಕೇಳಿ, ಇನ್ನು ನಿನ್ನ ಮನಕ್ಕೆ ಸಂತೋಷವಾಯಿತೇ? ಎಂದು ಕೇಳಿದರು. ರಾಜನು ಸ್ವಾಮಿ, ನಾನು ಬಹುಕಾಲ ರಾಜ್ಯವಾಳಿದೆನು. ಇನ್ನು ನಿಮ್ಮ ಚರಣಸೇವೆಯನ್ನು ದಯಪಾಲಿಸಿರಿ, ಎಂದು ವಿಜ್ಞಾಪಿಸಿದನು. ಗುರುಗಳು ಇದನ್ನು ಕೇಳಿ ರಾಜನೇ, ಶ್ರೀಪರ್ವತದಲ್ಲಿ ನಿನಗೆ ನಿನ್ನ ಪುತ್ರಪೌತ್ರರೊಂದಿಗೆ ನಮ್ಮ ದರ್ಶನವಾದೀತು. ಅಲ್ಲಿಗೆ ಬಾ, ಎಂದು ನಿರೂಪಿಸಿ ಅಲ್ಲಿಂದ ಹೊರಟರು. ಆಗ ರಾಜನು ಗುರುಚರಣಗಳನ್ನು ಹಿಡಿದು ಸ್ವಾಮಿ, ನನಗೆ ಜ್ಞಾನೋದಯವಾಗಬೇಕೆಂದು ಪ್ರಾರ್ಥಿಸಿದನು. ಗುರುಗಳು ದಯೆಯಿಂದ ನಿನಗೆ ಜ್ಞಾನವುಂಟಾಗಲಿ, ಎಂದು ಹೇಳಿ ಗೌತಮಿಾತೀರಕ್ಕೆ ಹೊರಟುಹೋದರು. ಅಲ್ಲಿ ಸ್ನಾನಮಾಡಿ ಗಾಣಗಾಪುರಕ್ಕೆ ಬಂದರು. ಗುರುದರ್ಶನದಿಂದ ಎಲ್ಲರೂ ಹರ್ಷಿತರಾಗಿ ವಂದಿಸಿ ಸಾವಿರ ಆರತಿಗಳನ್ನೆತ್ತಿದರು. ಶ್ರೀಗುರುಗಳು ಶಿಷ್ಯರನ್ನು ಕರೆದು ನಾವು ಇಲ್ಲಿರುವುದು ಪ್ರಸಿದ್ಧವಾಗಿರುವುದು. ಶ್ರೀಪರ್ವತ ಯಾತ್ರೆಗೋಸ್ಕರ ಹೊರಟು ಗುಪ್ತವಾಗಿರುವೆವು, ಎಂದರು. ಗುರುಗಳು ಗಾಣಗಾಪುರದಲ್ಲಿ ಸದಾ ಇರುವರು. ಈ ಕಲಿಯುಗ ಧರ್ಮವು ಕಠಿಣವಾಗಿದೆ. ಕ್ರೂರಕರ್ಮಿಯಾದ ಯವನರಾಜನು ಬಂದನೆಂದು ಯವನರೆಲ್ಲರೂ ಇಷ್ಟಾರ್ಥಪೂರ್ತಿಗಾಗಿ ಬರುವರು. ಮುಂದೆ ದುರ್ದಿನವು ಬಂದೀತು. ಎಲ್ಲರೂ ನಮ್ಮ ಭಜನೆಗೆ ಬರುವರು, ಎಂದು ಹೇಳಿ ಶ್ರೀಪರ್ವತಕ್ಕೆ ಹೊರಟರು. ನಾಮಧಾರಕನೇ, ಗುರುಚರಿತ್ರೆಯು ಈ ರೀತಿಯಾಗಿದೆ, ಎಂದು ಸಿದ್ಧರು ಹೇಳಿದರು. ಶ್ರೀಗುರುನಾಥನು ಗಾಣಗಾಪುರಿಯಲ್ಲಿ ಪ್ರತ್ಯಕ್ಷನಾಗಿರುವನು. ಭಕ್ತರೆಲ್ಲರೂ ಭಕ್ತಿಯಿಂದ ಭಜಿಸುವರು. ಅವರ ಇಷ್ಟಾರ್ಥವು ಪೂರ್ಣವಾಗುವುದು. ಇದರಲ್ಲಿ ಸಂದೇಹವಿಲ್ಲ. ಬೇಗನೆ ಇಷ್ಟಸಿದ್ಧಿಯಾಗುವುದು. ಕಲ್ಪವೃಕ್ಷಸದೃಶರಾದ ಗುರುವನ್ನು ಭಜಿಸಿದರೆ ಇಷ್ಟಸಿದ್ಧಿಯಾಗುವುದು. ಕಲ್ಪವೃಕ್ಷವು ಕೋರಿದ ಫಲಕೊಡುವಂತೆ ಬಹು ಧನಧಾನ್ಯಗಳೂ, ಪುತ್ರಪೌತ್ರಾಭಿವೃದ್ಧಿಯೂ ಬೇಗ

ಸಿದ್ಧಿಸುವುದು, ಎಂದು ಬಿನ್ನವಿಸಿದನು. ಇದನ್ನು ಭಕ್ತಿಯಿಂದ ಓದಲು ಇಷ್ಟಸಿದ್ಧಿಯುಂಟಾಗುವುದು, ಎಂಬಲ್ಲಿಗೆ ಗುರುಚರಿತ್ರಾಮೃತದಲ್ಲಿ ಸಾರ್ವಭೌಮ ಸ್ಫೋಟನಿವಾರಣವೆಂಬ ಐವತ್ತನೇ ಅಧ್ಯಾಯವು ಮುಗಿದುದು.

## ೫೧ ನೇ ಅಧ್ಯಾಯ.

ಸಿದ್ಧರು ನಾಮಧಾರಕನಿಗೆ ಮುಂಗಥೆಯನ್ನು ಹೇಳುವರು. ಶಿಷ್ಯನೇ, ಕೇಳು. ಗುರುಗಳು ಈ ಯವನ ನಗರಿಯಿಂದ ಹೊರಟು ಗಾಣಗಾಪುರಿಗೆ ಬಂದರು. ಅವರು ಆಗ ಶಿಷ್ಯರನ್ನು ಕುರಿತು ಶಿಷ್ಯರಿರಾ, ಕೇಳಿರಿ. ಇನ್ನು ನಾವು ಇಲ್ಲಿರುವುದು ಸರಿಯಲ್ಲ. ಯವನ ರಾಜನು ನಮ್ಮ ದರ್ಶನಕ್ಕೆ ಬಂದುದರಿಂದ ಮ್ಲೇಂಛರೆಲ್ಲರಿಗೂ ಭಕ್ತಿಯುಂಟಾಗಿದೆ. ನಾನಾ ಜಾತಿಯವರು ನಮ್ಮ ದರ್ಶನಕ್ಕೆ ಬರುವರು. ನಾವು ಇಲ್ಲಿರುವುದು ಪ್ರಸಿದ್ಧವಾಗಿದೆ. ಇನ್ನು ಶ್ರೀಪರ್ವತ ಯಾತ್ರೆಗೆ ಹೋಗಬೇಕೆಂದು ಹೇಳಿದರು. ಆಗ ಭಕ್ತರು ಚಿಂತಿಸಿ ಸ್ವಾಮಿಾ ಗುರುರಾಜರೇ, ನಮ್ಮನ್ನು ಬಿಟ್ಟು ಏಕೆ ಹೋಗುವಿರಿ? ನೀವು ನಮ್ಮ ಕಾಮಧೇನುವಾಗಿರುವಿರಿ. ಅಜ್ಞಾನಿಗಳಾದ ನಮ್ಮನ್ನು ಬಿಟ್ಟು ಹೊರಡುವಿರೇಕೆ? ನಿತ್ಯವೂ ನಿಮ್ಮ ದರ್ಶನಮಾಡುವುದರಿಂದ ನಮ್ಮ ದುರಿತಗಳೆಲ್ಲವೂ ಹೋಗಿ ತ್ವರಿತದಿಂದ ಇಷ್ಟಸಿದ್ಧಿಯಾಗುವುದು. ಪ್ರೀತಿಯುಳ್ಳ ಮಾತೆಯು ತಮ್ಮ ಸುತರನ್ನು ಬಿಟ್ಟು ಹೋಗುವಳೇ? ನೀವೇ ನಮಗೆ ತಾಯಿಯಂತಿರುವಿರಿ, ಎಂದರಿಕೆಗೈದರು. ಇದನ್ನು ಕೇಳಿ ಗುರುವು ನಕ್ಕು, ಅತಿ ಪ್ರೀತಿಯಿಂದ ಸಮಾಧಾನಮಾಡಿ, ನೀವು ಚಿಂತಿಸದಿರಿ. ನಾವು ಈ ಗ್ರಾಮದ ಅಮರಜಾ ಸಂಗಮದಲ್ಲಿ ಸ್ನಾನಮಾಡುತ್ತಾ, ಮಧ್ಯಾಹ್ನಕಾಲದಲ್ಲ ಮಠದಲ್ಲಿ ಗುಪ್ತರಾಗಿರುವೆವು. ನಮ್ಮ ಪ್ರೇಮದ ಭಕ್ತರಿಗೆ ಪ್ರೀತಿಯಿಂದ ಪ್ರತ್ಯಕ್ಷರಾಗಿ ಕಾಣಿಸುವೆವು. ಲೌಕಿಕಕ್ಕಾಗಿ ಅವಿದ್ಯಾಧರ್ಮದಿಂದ ಶ್ರೀಶೈಲಕ್ಕೆ ಹೊರಡುವೆವು. ನಿತ್ಯವೂ ಪ್ರಾತಃಕಾಲದಲ್ಲಿ ಈ ಸಂಗಮದಲ್ಲಿ ಸ್ನಾನ ಮಾಡಿ ಬಂದು ಮಠದಲ್ಲಿ ನಿಮ್ಮ ಪೂಜೆಯನ್ನು ಸ್ವೀಕರಿಸುವೆವು.

ಸಂದೇಹವು ಬೇಡ. ಗಾಣಗಾಪುರದಲ್ಲಿ ಹಗಲು ರಾತ್ರಿಗಳಲ್ಲೂ ನಾವು ವಾಸವಾಗಿರುವೆವು. ಭಕ್ತಿಯಿದ್ದವರಲ್ಲಿ ನಮಗೆ ಪ್ರೀತಿಯುಂಟು. ಇವರ ಇಷ್ಟವು ಸಿದ್ಧಿಸುವುದು. ಇದೇ ನಮ್ಮ ಸಿದ್ಧವಾಕ್ಯವು. ಈ ಸಂಗಮದಲ್ಲಿರುವ ಅಶ್ವತ್ಥವೃಕ್ಷವು ಕಲ್ಪವೃಕ್ಷದಂತಿರುವುದು. ಇದನ್ನು ಪೂಜಿಸಿದರೆ ಇಷ್ಟಾರ್ಥವು ಬೇಗ ಸಿದ್ಧಿಸುವುದು. ಈ ಕಲ್ಪತರುವನ್ನರ್ಚಿಸಿ ನಮ್ಮ ಮಠದಲ್ಲಿರುವ ಪಾದುಕೆಗಳನ್ನು ಅರ್ಚಿಸಿರಿ. ಈ ಪಾದುಕೆಗಳು ಚಿಂತಾಮಣಿಯಂತಿರುವುವು. ಇವನ್ನು ಭಕ್ತಿಯಿಂದ ಅರ್ಚಿಸಿದರೆ ನಿಮ್ಮ ಇಷ್ಟಸಿದ್ಧಿಯಾಗುವುದು. ಅಷ್ಟತೀರ್ಥದಲ್ಲಿರುವ ವಿನಾಯಕನನ್ನು ಭಕ್ತಿಯಿಂದರ್ಚಿಸಬೇಕು. ತ್ರಿಕಾಲದಲ್ಲಿಯೂ ನಮಗೆ ಆನಂದಕರವಾದ ಆರತಿಗಳನ್ನೆತ್ತಬೇಕು. ಹೀಗೆ ಮಾಡಿದ ಭಕ್ತರ ಕೋರಿಕೆಗಳು ಬೇಗ ಸಿದ್ಧಿಸುವುವು, ಎಂದು ನಿರೂಪಿಸಿ ಗುರುಗಳು ಹೊರಟರು. ಆಗ ಭಕ್ತರು ಗುರುಗಳನ್ನು ಸಾಗಕಳುಹಿಸಿ ಹಿಂದಿರುಗಿ ಮಠಕ್ಕೆ ಬಂದು ನೋಡಲಾಗಿ ಅಲ್ಲಿ ಶ್ರೀಗುರುಗಳು ಕಾಣಿಸಿದರು. ಜನರು ಇದನ್ನು ನೋಡಿ ಗುರುಗಳು ತ್ರಿಮೂರ್ತಿಗಳ ಅಂಶೀಭೂತರೆಂದು ವಿಸ್ಮಿತರಾದರು. ಇವರನ್ನು ನರರೆಂದರಿತವರು ನರಕವನ್ನು ಹೊಂದುವರು. ನಮಗೆ ಈ ಗುರುಗಳ ಮಹಿಮೆಯು ತಿಳಿಯುವುದಿಲ್ಲ, ಎಂದರು. ಗುರುಗಳು ಎಲ್ಲರ ಕಣ್ಣುಗಳಿಗೂ ಕಾಣಿಸದೇ ಪ್ರೇಮವುಳ್ಳ ಭಕ್ತರ ಕಣ್ಣುಗಳಿಗೆ ಮಾತ್ರ ಕಾಣಿಸುತ್ತಾ ಗೋಪ್ಯವಾಗಿದ್ದರು. ಗುರುಗಳು ಶ್ರೀಪರ್ವತದ ಹತ್ತಿರ ಇರುವ ಪಾತಾಳಗಂಗಾತೀರಕ್ಕೆ ಹೋಗಿ ನಿಂತರು. ಅಲ್ಲಿ ಶಿಷ್ಯರನ್ನು ಕುರಿತು ಶಿಷ್ಯರಿರಾ, ಒಂದು ಪುಷ್ಪಾಸನವನ್ನು ಶೀಘ್ರವಾಗಿ ನಿರ್ಮಿಸಿರಿ. ಈ ನದಿಯನ್ನು ದಾಟಿ ಹೋಗಿ ಮಲ್ಲಿಕಾರ್ಜುನನಲ್ಲಿ ಐಕ್ಯವಾಗುವೆವು, ಎಂದು ನಿರೂಪಿಸಿದರು. ಆಗ ಶಿಷ್ಯರು ಸೇವಂತಿಗೆ, ಕುಮುದ, ಕಲ್ಹಾರ, ಮಾಲತೀ ಪುಷ್ಪಗಳನ್ನು ಬಾಳೆಯ ಎಲೆಯಲ್ಲಿ ಸುತ್ತಿ ತಂದು ವಿಚಿತ್ರವಾಗಿ ಪುಷ್ಪಾಸನವನ್ನು ನಿರ್ಮಿಸಿ ಗಂಗೆಯಲ್ಲಿ ಹಾಕಿದರು. ಆಗ ವೇಗವಕ್ತ್ರನೆಂಬ ಶಿಷ್ಯನನ್ನು ಕುರಿತು ಗುರುಗಳು ಶಿಷ್ಯರಿರಾ ನೀವೆಲ್ಲರೂ ಮನೆಗೆ ಹೋಗಿರಿ. ಗಾಣಗಾಪುರದಲ್ಲಿ ನಾವು ಇರುವೆವು. ಬಹಿರಂಗವಾಗಿ ನಾವು ಇಲ್ಲಿ ಐಕ್ಯವಾಗುವೆವು, ಎಂದು ನಿರೂಪಿಸಿ

ಪುಷ್ಪಾಸನದಲ್ಲಿ ಕುಳಿತರು. ಬಹುಧಾನ್ಯ ಸಂವತ್ಸರದಲ್ಲಿ ಬೃಹಸ್ಪತಿಯು ಕನ್ಯಾರಾಶಿಗತನಾಗಿರಲು, ಸೂರ್ಯನು ಉತ್ತರದಿಕ್ಕಿನಲ್ಲಿ ಕಾಣಿಸಲು, ಕುಂಭಸಂಕ್ರಮಣದ ಶಿಶಿರಋತುವಿನ ಮಾಘ ಬಹುಳ ಪಾಡ್ಯವು ಶುಕ್ರವಾರದ ದಿನ ಶ್ರೀಗುರುಗಳು ಶಿಷ್ಯರಂ ಕುರಿತು ನೀವು ಮಠಕ್ಕೆ ಹೋಗಿರಿ. ನಾವೂ ಮಠಕ್ಕೆ ಬರುವೆವು. ಗುರ್ತಿಗಾಗಿ ನಮ್ಮ ಪ್ರಸಾದಪುಷ್ಪವನ್ನು ಕಳುಹಿಸುವೆವು. ಸೇವಂತಿಗೆಯ ಪುಷ್ಪಗಳು ಬರುತ್ತವೆ. ಅದನ್ನು ಭಕ್ತಿಯಿಂದ ತೆಗೆದುಕೊಂಡು ಹೋಗಿ ಅರ್ಚಿಸಿರಿ. ನಿಮ್ಮ ಗೃಹದಲ್ಲಿ ಅಖಂಡೈಶ್ವರ್ಯವುಂಟಾಗುವುದು. ಇನ್ನೊಂದು ಗುರ್ತು ಹೇಳುವೆವು, ಕೇಳಿರಿ. ಯಾರ ಮನೆಯಲ್ಲಿ ನಮ್ಮನ್ನು ಕುರಿತು ಗಾನಮಾಡುವರೋ ಅವರು ನಮಗೆ ಪ್ರೀತಿ ಪಾತ್ರರು. ಅವರ ಮನೆಯಲ್ಲಿ ನಾವು ಸ್ಥಿರವಾಗಿರುವೆವು. ಅವರ ಮನೆಯಲ್ಲಿ ರೋಗಭಯವಿಲ್ಲ. ಬಡತನವು ದೂರವಾಗುವುದು. ಪುತ್ರಪೌತ್ರರು ಶತಾಯುವಾಗುವರು. ನಮ್ಮ ಚರಿತ್ರೆಯನ್ನು ಯಾರು ಕೇಳುವರೋ, ಯಾರು ಓದುವರೋ ಅವರ ಮನೆಯಲ್ಲಿ ಲಕ್ಷ್ಮಿಯು ಸ್ಥಿರವಾಗಿರುವಳು. ಇದರಲ್ಲಿ ಸಂದೇಹವಿಲ್ಲ, ಎಂದು ಹೇಳಿ ಗುರುಗಳು ಅದೃಶ್ಯರಾದರು. ಬಳಿಕ ಶಿಷ್ಯರು ಚಿಂತಿಸುತ್ತಿರಲು, ಆಗ ಬಂದ ನಾವಿಕರು ಈ ಶಿಷ್ಯರನ್ನು ಕುರಿತು ಅಯ್ಯಾ, ನದಿಯ ಆಚೆಯ ದಡದಲ್ಲಿ ಗುರುಗಳನ್ನು ನೋಡಿದೆವು. ಅವರು ಯತಿಗಳಾಗಿ ದಂಡವನ್ನು ಧರಿಸಿದ್ದರು. ಅವರ ಹೆಸರು ನೃಸಿಂಹಸರಸ್ವತಿಗಳು. ಅವರು ನಿಮಗೆ ಈ ಸಂಗತಿಗಳನ್ನು ಹೇಳಿರೆಂದು ನಮಗೆ ಆಜ್ಞಾಪಿಸಿರುವರು. ಗಾಣಗಾಪುರದ ಬಾಳೇತೋಟದಲ್ಲಿರುವೆವೆಂದು ಹೇಳಿದರು. ಭ್ರಾಂತಿಯಿಂದ ದುಃಖಿಸದಿರಿ. ಶ್ರೀಗುರುಗಳು ಸುವರ್ಣ ಪಾದುಕೆಗಳನ್ನು ಮೆಟ್ಟಿದ್ದರು. ಇದೇ ಗುರುತಾಗಿದೆ. ನಿಮ್ಮ ಸ್ಥಳಕ್ಕೆ ಹೋಗಿ ನಮ್ಮ ಭಕ್ತರಾಗಿ ಸುಖದಿಂದಿರಿ ಎಂದೂ, ಪ್ರಸಾದ ಪುಷ್ಪಗಳು ಬರುವುವು, ಅವನ್ನು ತೆಗೆದುಕೊಂಡು ಹೋಗಿರಿ ಎಂದೂ ನಿಮಗೆ ಹೇಳೆಂದು ಗುರುಗಳು ಹೇಳಿ ಹೊರಟುಹೋದರು, ಎಂದು ನಾವಿಕರು ಹೇಳಿದರು. ಆಗ ಭಕ್ತರು ಸ್ಥಿರಮನಸ್ಸಿನಿಂದ ಹರ್ಷಿತರಾದರು. ಇಷ್ಟರಲ್ಲಿ ಪ್ರಸಾದಪುಷ್ಪಗಳು ಬಂದುವು. ಮುಖ್ಯ

ರಾದ ನಾಲ್ವರು ಶಿಷ್ಯರು ಅದನ್ನು ಪ್ರೀತಿಯಿಂದ ತೆಗೆದುಕೊಂಡರು, ಎಂದು ಸಿದ್ಧರು ಹೇಳಲು, ನಾಮಧಾರಕನು ಸ್ವಾಮಿಾ, ಮುಖ್ಯ ಶಿಷ್ಯರು ಯಾರು? ಯಾರಿಗೆ ಪ್ರಸಾದಪುಷ್ಪಗಳು ಸಿಕ್ಕಿದುವು? ಎಂದು ಕೇಳಿದನು. ಆಗ ಸಿದ್ಧರು ಹೇಳುವರು. ಶಿಷ್ಯನೇ, ಕೇಳು. ಗುರು ಗಳಿಗೆ ಅನೇಕ ಶಿಷ್ಯರಿದ್ದರು. ಬಾಲಕೃಷ್ಣಸರಸ್ವತಿ, ಉಪೇಂದ್ರ ಮಾಧವಸರಸ್ವತಿ ಎಂಬ ಇಬ್ಬರು ಶಿಷ್ಯರು ಸನ್ಯಾಸಹೊಂದಿದವರಾಗಿದ್ದರು. ಗೃಹಸ್ಥಾಶ್ರಮದ ಶಿಷ್ಯರು ಅನೇಕರಿದ್ದರು. ಇವರು ತಮ್ಮ ಮನೆಗಳಲ್ಲಿ ಸುಖವಾಗಿದ್ದರು. ಶ್ರೀಪರ್ವತವನ್ನು ಕುರಿತು ಮೂವರು ಶಿಷ್ಯರು ಬಂದಿದ್ದರು. ನಾಲ್ಕನೆಯವನೇ ನಾನು. ಸಾಖರೇ ಸಾಯಂದೇವನೆಂಬವನೂ, ನಂದಿ ಎಂಬವನೂ, ಈ ನಾಲ್ವರಿಗೆ ಪ್ರಸಾದ ಪುಷ್ಪಗಳು ಸಿಕ್ಕಿದುವು. ಬಳಿಕ ನಮ್ಮ ಸ್ಥಳಗಳಿಗೆ ಎಲ್ಲರೂ ಹಿಂದಿರುಗಿದೆವು. ಆ ಪ್ರಸಾದಪುಷ್ಪವೇ ನನಗೆ ಪೂಜ್ಯವಸ್ತುವಾಗಿದೆ, ಎಂದು ಆ ಪ್ರಸಾದಪುಷ್ಪವನ್ನು ತೋರಿಸಿ, ಶಿಷ್ಯನೇ, ಕೇಳು. ಗುರುಮಹಿಮೆಯು ಅಪಾರವಾಗಿದೆ. ಇದನ್ನು ನಿನಗೆ ಸ್ವಲ್ಪ ಮಾತ್ರ ಹೇಳಿದೆನು. ಗುರು ಚರಿತ್ರೆಯು ಕಾಮಧೇನುವಾಗಿರುವುದು. ಇದನ್ನು ನಿನಗೆ ವಿಸ್ತಾರವಾಗಿ ಹೇಳಿದೆನು. ಇದನ್ನು ಕೇಳಲು ದುಃಖದಾರಿದ್ರಗಳು ತೊಲಗುವುವು, ಎಂದು ತಿಳಿ. ಗುರುಚರಿತ್ರೆಯು ಶ್ರವಣವೂ, ಕೀರ್ತನವೂ, ಸುಖವನ್ನೂ, ಪುತ್ರಪೌತ್ರರನ್ನೂ, ಧನವನ್ನೂ ಕೊಡುವುದು. ಚತುರ್ವಿಧ ಪುರುಷಾರ್ಥಗಳು ಸಿದ್ಧಿಸುವುದು. ಈ ಪುಸ್ತಕವನ್ನು ಬರೆದರೆ ಸರ್ವಸಿದ್ಧಿಯಾಗುವುದು, ಎಂದು ಹೇಳಿದರು. ನಾಮಧಾರಕನು ಹರ್ಷಿತನಾಗಿ ಆಗಲೇ ಸಕಲೇಷ್ಟಗಳನ್ನೂ ಹೊಂದಿದನು, ಎಂದು ಸರಸ್ವತೀಗಂಗಾಧರನು ಈ ಗುರುಚರಿತ್ರೆಯನ್ನು ಹೇಳಿದನು. ಇದನ್ನು ಕೇಳಲು ಈ ಸಂಸಾರಸಾಗರವನ್ನು ದಾಟುವನು. ಸರ್ವೇಷ್ಟಗಳು ಸಿದ್ಧಿಸುವುವು. ಪುತ್ರಪೌತ್ರರೂ, ಅಖಂಡೈಶ್ವರ್ಯವೂ, ಪುರುಷಾರ್ಥಗಳೂ ಉಂಟಾಗುವುವು. ಗುರುನಾಥನಾದ ಶ್ರೀ ನೃಸಿಂಹ ಸರಸ್ವತಿಯು ಶ್ರೋತೃಗಳ ಕುಲವನ್ನೆಲ್ಲಾ ರಕ್ಷಿಸುವನು, ಎಂದು ಸರಸ್ವತೀಗಂಗಾಧರನು ಶ್ರೋತೃಗಳಿಗೆ ವಂದಿಸಿ, ಈ ಕಥಾಮೃತವನ್ನು ಎಲ್ಲರೂ ಕೇಳಿರಿ. ಸಕಲೇಷ್ಟಗಳುಂಟಾಗುವುವು. ಇದನ್ನು ಶ್ರವಣ,

ಪಠನ, ನಿಜಧ್ಯಾನ, ಮನನಗಳನ್ನು ಪ್ರೇಮದಿಂದ ಸಾಧಿಸಬೇಕು. ಗುರುಚರಣಗಳಲ್ಲಿ ಪೂರ್ಣ ವಿಶ್ವಾಸವಿಡಬೇಕು. ಗುರುದಯೆಯಿಂದಲೇ ಜನರೆಲ್ಲರೂ ಸುಖವಾಗಿರುವರು. ಈ ಗ್ರಂಥವನ್ನು ಶುದ್ಧಸ್ಥಾನದಲ್ಲಿಟ್ಟು, ಶುದ್ಧವಸ್ತ್ರವನ್ನು ಧರಿಸಿ, ಶುದ್ಧಚಿತ್ತದಿಂದ ನಿತ್ಯವೂ ಅರ್ಚಿಸಬೇಕು, ಎಂದನು, ಎಂಬಲ್ಲಿಗೆ ಗುರುಕಥಾಕಲ್ಪತರುವಿನಲ್ಲಿ ಶ್ರೀಗುರು ಸಮಾಧಿಗಮನವೆಂಬ ೫೧ನೇ ಅಧ್ಯಾಯವು ಪೂರ್ಣವಾದುದು.

|| ಶ್ರೀ ದತ್ತಾತ್ರೇಯಾರ್ಪಣಮಸ್ತು ||

## ೫೨ ನೇ ಅಧ್ಯಾಯ.

ನಾಮಧಾರಕನು ಸಿದ್ಧರನ್ನು ಕುರಿತು ಸ್ವಾಮಿಾ, ಗುರುಗಳು ಶ್ರೀಶೈಲಪರ್ವತಕ್ಕೆ ಹೋದರಷ್ಟೆ? ಮುಂದೇನಾಯಿತು? ಇದನ್ನು ವಿಸ್ತಾರವಾಗಿ ನಿರೂಪಿಸಬೇಕೆಂದು ಪ್ರಾರ್ಥಿಸಿದನು. ಸಿದ್ಧರು ಶಿಷ್ಯನೇ, ಕೇಳೆಂದು ಹೇಳುವರು. ಸದ್ಗುರು ಮಹಿಮೆಯನ್ನು ಎಷ್ಟೆಂದು ಹೇಳಲಿ? ಶ್ರೀಗುರುಗಳು ಶ್ರೀಶೈಲಕ್ಕೆ ಹೊರಡಲು ಸಿದ್ಧರಾದರು. ಈ ವಿಷಯವು ನಗರದವರಿಗೆ ತಿಳಿದು ನರನಾರಿಯರೆಲ್ಲರೂ ಗುರುಗಳ ಬಳಿಗೆ ಓಡಿ ಬಂದರು. ಗುರುವರ್ಯರೇ, ಶ್ರೀಶೈಲಕ್ಕೇಕೆ ಹೋಗುವಿರಿ? ನೀವು ನಮಗೆ ಕಾಣಿಸದೆ ಇನ್ನು ಅವತಾರ ಸಮಾಪ್ತಿ ಮಾಡುವಂತೆ ಕಾಣಿಸುವುದು. ನಿಮ್ಮ ಚರಣದರ್ಶನದಿಂದ ನಮ್ಮ ಪಾಪಗಳು ನಾಶವಾಗುವುವು. ಈಗ ನಾವು ಏನು ಮಾಡೋಣ? ನಮಗೆ ಗತಿಯೇನು? ನಾವು ಈ ಭವಸಾಗರವನ್ನು ದಾಟುವುದೆಂತು? ಸ್ವಾಮಿಯ ಚರಣವೆಂಬ ನಾವೆಯು ಇದುವರೆಗೆ ನಮಗೆ ದೊರಕಿತ್ತು. ಭಕ್ತರಿಗೆ ಕಾಮಧೇನುವಾಗಿದ್ದೀರಿ. ಇಷ್ಟಾರ್ಥವು ಪೂರ್ಣವಾಗುತ್ತಿತ್ತು. ಇದರಿಂದ ನಾವು ಇದುವರೆಗೆ ಜೀವಿಸಿದ್ದೆವು. ಇನ್ನು ಮುಂದೇನು ಮಾಡೋಣ? ತಮ್ಮಿಂದೀ ಗಾಣಗಾಪುರಿಯು ವೈಕುಂಠವಾಗಿತ್ತು. ಇನ್ನು ಇದು ದೀಪವಿಲ್ಲದ ಮನೆಯಾಗುವುದು. ತಾಯಿಯಿಲ್ಲದ ಮಗನೂ, ದೇವರಿಲ್ಲದ ಗುಡಿಯೂ, ನೀರಿಲ್ಲದ ತಾವರೆಯೂ ಹೇಗೆ ಶೋಭಿಸದೋ ಹಾಗೆ ನೀವಿಲ್ಲದಿರಲು ಈ ನಗರವು ಪ್ರಕಾಶಿಸದು.

ನಮಗೆ ತಾಯಿತಂದೆ, ಇಷ್ಟಮಿತ್ರರು, ಕುಲದೈವವು ಎಲ್ಲವೂ ನೀವೇ ಆಗಿದ್ದೀರಿ. ನಿಮ್ಮಿಂದ ನಾವು ಕಾಲಕಳೆಯುತ್ತಿದ್ದೆವು. ಬಾಲಕನನ್ನು ಬಿಟ್ಟು ತಾಯಿಯು ಹೋಗುವಂತೆ ನಮ್ಮನ್ನು ಬಿಟ್ಟು ಹೇಗೆ ಹೋಗುವಿರಿ, ಎಂದು ಕಣ್ಣುಗಳಿಂದ ನೀರನ್ನು ಸುರಿಸುತ್ತಾ ಕಳವಳಿಸುತ್ತಿದ್ದರು. ಆಗ ಶ್ರೀಗುರುವು ಸಕಲ ಭಕ್ತರಿರಾ, ನಾವು ಈ ಗ್ರಾಮದಲ್ಲಿಯೇ ಗೋಪ್ಯವಾಗಿದ್ದು, ಈ ಅಮರುಜಾ ಸಂಗಮದಲ್ಲಿ ಸ್ನಾನ ಮಾಡುತ್ತಿರುವೆವು. ಚಿಂತಿಸದಿರಿ. ರಾಜ್ಯವೆಲ್ಲವೂ ಮ್ಲೇಂಛಾಕ್ರಾಂತವಾಯಿತು. ನಮ್ಮ ಹೆಸರು ಪ್ರಸಿದ್ಧವಾಗಿ ನಮ್ಮ ದರ್ಶನಕ್ಕೆ ಬಹು ಜನರು ಇಲ್ಲಿಗೆ ಬರುವರು. ಇದರಿಂದ ಜನರಿಗೆ ಉಪದ್ರವವಾದೀತು. ಇದಕ್ಕಾಗಿ ನಾವು ಅದೃಶ್ಯರಾಗುವೆವು. ದೃಢಭಕ್ತಿಯಿದ್ದವರಿಗೆ ನಾವು ಕಾಣಿಸುವೆವು. ಲೋಕದ ಜನರಿಗೆ ತಿಳಿಯುವುದಕ್ಕಾಗಿ ನಾವು ಶ್ರೀಪರ್ವತಕ್ಕೆ ಹೋಗುವೆವು. ಚಿಂತಿಸದಿರಿ. ಮಠದಲ್ಲಿ ನಮ್ಮ ಪಾದುಕೆಗಳನ್ನಿಡುವೆವು. ಕಲ್ಪತರುವಿಗೆ ಸಮವಾದ ಅಶ್ವತ್ಥವೃಕ್ಷವು ಸಂಗಮದಲ್ಲಿದೆ. ಇದನ್ನು ಸೇವಿಸಿದರೆ ಇಷ್ಟಾರ್ಥಗಳು ಸಿದ್ಧಿಸುವುವು. ಇದು ಸತ್ಯವು. ಸಂಗಮದಲ್ಲಿ ಸ್ನಾನಮಾಡಿ, ಅಶ್ವತ್ಥನಂ ಅರ್ಚಿಸಿ, ಪಾದುಕೆಗಳನ್ನು ಪೂಜಿಸಿರಿ. ಕೋರಿಕೆಗಳು ಸಿದ್ಧಿಸುವುವು. ತೀರ್ಥದಲ್ಲಿರುವ ವಿನಾಯಕನನ್ನು ಅರ್ಚಿಸಿರಿ. ತ್ರಿಕಾಲದಲ್ಲೂ ಆರತಿಯನ್ನೆತ್ತಿರಿ. ನಾವು ಮಠದಲ್ಲಿರುವೆವು, ಎಂದು ಸಮಾಧಾನಮಾಡಿ ಗುರುರಾಜರು ಹೊರಟರು. ಹಿಂಬಾಲಿಸಿದ ಜನರನ್ನು ಸಮಾಧಾನಮಾಡಿ ಶಿಷ್ಯರೊಡನೆ ಹೊರಟರು. ಜನರು ಹಿಂದಿರುಗಿ ಮಠಕ್ಕೆ ಬಂದು ಅಲ್ಲಿ ಶ್ರೀಗುರುವು ಸುಖಾಸನದಲ್ಲಿ ಕುಳಿತಿರುವುದನ್ನು ನೋಡಿ ವಿಸ್ಮಿತರಾದರು. ನಾವು ಈಗ ಗುರುಗಳನ್ನು ಕಳುಹಿಸಿ ಬಂದೆವು. ಆದರೂ ಈ ಮಠದಲ್ಲಿ ಕಾಣಿಸುವರು. ಗುರುಗಳು ತ್ರಿಮೂರ್ತಿಗಳ ಅಂಶೀಭೂತರಾಗಿರುವರು. ಶ್ರೀಗುರುವು ಚರಾಚರಗಳಲ್ಲಿ ವ್ಯಾಪ್ತರಾಗಿರುವರು. ಭಕ್ತರಿಗಾಗಿ ರೂಪವನ್ನು ಧರಿಸಿರುವರು. ಈ ರೀತಿಯಿಂದ ದೃಷ್ಟಾಂತ ತೋರಿಸಿ ಗುರುಗಳು ಶ್ರೀಶೈಲಕ್ಕೆ ಹೋದರು. ಆ ದಿನ ಅಲ್ಲಿ ಪಾತಾಳಗಂಗೆಯಲ್ಲಿದ್ದರು. ಶ್ರೀಗುರುವು ಶಿಷ್ಯರಂ ಕುರಿತು ನಾವು ಮಲ್ಲಿಕಾರ್ಜುನನಲ್ಲಿಗೆ ಬೇಗ ಹೋಗಬೇಕು. ಪುಷ್ಪಾಸನವನ್ನು

ಮಾಡಿ ತನ್ನಿರಿ, ಎಂದಾಜ್ಞಾಪಿಸಿದರು. ಶಿಷ್ಯರು ಅತಿ ಶೀಘ್ರವಾಗಿ ಪುನ್ನಾಗ, ಕುಂದ, ಕಲ್ಹಾರ, ಕರವೀರ, ಪಗಡೆ, ಸಂಪಿಗೆ, ಮಂದಾರ ಮುಂತಾದ ಪುಷ್ಪಗಳನ್ನು ಅಪಾರವಾಗಿ ತಂದು ದಿವ್ಯಾಸನವಂ ನಿರ್ಮಿಸಿ ಗಂಗೆಯಲ್ಲಿ ಬಿಟ್ಟರು. ಆಗ ಶ್ರೀಗುರುವು ಆನಂದದಿಂದ ಅದರಲ್ಲಿ ಕುಳಿತರು. ಬಹುಧಾನ್ಯ ಸಂವತ್ಸರದ ಮಾಘ ಬಹುಳ ಪಾಡ್ಯದಲ್ಲಿ ಸಿಂಹರಾಶಿಯಲ್ಲಿ ಬೃಹಸ್ಪತಿಯು ಇರಲು, ಸೂರ್ಯನು ಉತ್ತರದಿಕ್ಕಿನಲ್ಲಿರಲು, ಆ ಶಿಶಿರಋತುವಿನ ಕುಂಭಸಂಕ್ರಮಣದ ಸುಲಗ್ನದಲ್ಲಿ, ಶುಭಮುಹೂರ್ತದಲ್ಲಿ ಆನಂದದಿಂದ ಗುರುಗಳು ಪಯಣ ಮಾಡಿದರು. ಪುಷ್ಪಾಸನದಲ್ಲಿ ಕುಳಿತು ಶಿಷ್ಯರಿರಾ, ನಮ್ಮ ವಿಯೋಗ ದಿಂದ ದುಃಖಿಸದಿರಿ. ನಾವು ಗಾಣಗಾಪುರದಲ್ಲಿರುವೆವು. ಚಿತ್ತದಲ್ಲಿ ದೃಢಭಕ್ತಿಯನ್ನಿಡಿರಿ. ಅಲ್ಲಿ ದೃಷ್ಟಾಂತವು ತೋರುವುದು. ಆನಂದ ಸ್ಥಾನಕ್ಕೆ ಹೋಗುವೆವು. ಅಲ್ಲಿ ಸೇರಿದೊಡನೆಯೇ ಗುರುತಿಗಾಗಿ ನಾನಾ ವಿಧಗಳಾದ ಪುಷ್ಪಗಳು ತೇಲಿ ಬರುವುವು. ಆ ಪ್ರಸಾದ ಪುಷ್ಪಗಳನ್ನು ನೀವು ಅರ್ಚಿಸಿದರೆ ದೇವರು ಪ್ರಸನ್ನನಾಗುವನು. ಆ ಹೂವುಗಳನ್ನು ಪ್ರಾಣಸಮವೆಂದು ತಿಳಿದು ಜೋಕೆಯಾಗಿಡಿರಿ. ಯಾರು ನಮ್ಮ ಚರಿತ್ರೆಯನ್ನು ಹಾಡಿ ಪ್ರೀತಿಯಿಂದ ನಾಮ ಸಂಕೀರ್ತನಮಾಡುವರೋ ಅವರು ನಮಗೆ ಪ್ರಿಯತಮರಾಗುವರು. ನಮ್ಮ ಮುಂದೆ ನಾನಾ ರಾಗಗಳಿಂದ ಭಕ್ತಿಯಿಂದಲೂ, ಆನಂದ ದಿಂದಲೂ ಗಾನಮಾಡಿದರೆ ಅವರು ನಮಗೆ ಪರಮ ಭಕ್ತರು. ಅವರ ಮನೆಯಲ್ಲಿ ಶ್ರೀಪತಿಯು ಪ್ರೀತಿಯಿಂದ ಸ್ಥಿರವಾಗಿರುವನು. ನಮ್ಮ ಚರಿತ್ರೆಯನ್ನು ಪಠಿಸಿದವರಿಗೆ ಪುರುಷಾರ್ಥಗಳು ಲಭಿಸುವುವು. ಸಿದ್ಧಿಯು ಅವರ ಮನೆಯ ಬಾಗಿಲಲ್ಲಿ ದಾಸನಂತೆ ಕಾದಿರುವುದು. ಅವರಿಗೆ ಯಮಭಯವಿಲ್ಲ. ಅಷ್ಟೈಶ್ವರ್ಯವನ್ನು ಹೊಂದುವರು. ಇದನ್ನು ಅಪ್ರಮಾಣವೆಂದೆಣಿಸಿದವರು ದಾರುಣವಾದ ನರಕವನ್ನು ಹೊಂದುವರು. ಅವರು ಗುರುದ್ರೋಹಿಗಳಾಗಿ ಜನ್ಮಮರಣ ದುಃಖ ಗಳ ಬಿಡುಗಡೆ ಹೊಂದಲಾರರು. ನಮ್ಮನ್ನು ನಂಬಿದರೆ ಸುಖಿಸುವಿರಿ, ಎಂದು ನಿರೂಪಿಸಿ ಗುರುಗಳು ಅದೃಶ್ಯರಾದರು. ಶಿಷ್ಯರು ಗಂಗೆಯಲ್ಲಿ ನೋಡಿದರು. ಗುರುಗಳು ದೃಷ್ಟಿಗೆ ಕಾಣಿಸಲಿಲ್ಲ. ಚಿಂತಿಸುತ್ತಾ

ನಿಂತಿದ್ದರು. ಇಷ್ಟರಲ್ಲಿಯೇ ಅಲ್ಲಿಗೆ ಕೆಲವು ನಾವಿಕರು ಬಂದರು. ಆ ನಾವಿಕರು ಈ ಶಿಷ್ಯರನ್ನು ಕುರಿತು ಅಯ್ಯಾ, ಗಂಗೆಯ ಪೂರ್ವದಡದಲ್ಲಿ ಗುರುನಾಥರು ಹೋಗುವುದನ್ನು ನೋಡಿದೆವು. ಅವರು ಸನ್ಯಾಸಿವೇಷದಿಂದ ದಂಡಧಾರಿಗಳಾಗಿ ಕಾಷಾಯಾಂಬರವನ್ನು ಧರಿಸಿ, ಸುವರ್ಣಪಾದುಕೆಗಳನ್ನು ಮೆಟ್ಟಿದ್ದರು. ಅವುಗಳ ಕಾಂತಿಯು ಶರೀರದಲ್ಲಿ ಬಿಂಬಿಸುತ್ತಿತ್ತು. ನಿಮಗೆ ಈ ಸಂಗತಿಗಳನ್ನು ತಿಳಿಸಿರೆಂದು ನಮಗೆ ಆಜ್ಞಾಪಿಸಿದರು. ಆ ಯತಿಗಳ ಹೆಸರು ನೃಸಿಂಹಸರಸ್ವತಿಗಳೆಂದು ಹೇಳಿದರು. ಕಲಿಗಾಲವಾದುದರಿಂದ ಗುಪ್ತರಾದರೂ ಗಾಣಗಾಪುರದಲ್ಲಿರುವೆವು. ಅಲ್ಲಿ ನೀವು ನಮ್ಮ ಭಜನೆಯನ್ನು ಮಾಡಿರಿ. ನದಿಯಲ್ಲಿ ಪ್ರಸಾದಪುಷ್ಪಗಳು ತೇಲಿ ಬರುವುವು. ಅವನ್ನು ತೆಗೆದುಕೊಂಡು ಹೋಗಿರಿ, ಎಂದು ಹೇಳಬೇಕೆಂದು ನಮಗಾಜ್ಞಾಪಿಸಿದರು, ಎಂದು ನಾವಿಕರು ಹೇಳಿದರು. ಇದನ್ನು ಕೇಳಿ ಶಿಷ್ಯರು ಸಂತೋಷಿಸಿದರು. ಇಷ್ಟರಲ್ಲಿಯೇ ಪ್ರಸಾದಪುಷ್ಪಗಳು ತೇಲಿ ಬಂದುವು. ಅವನ್ನು ಆ ಶಿಷ್ಯರು ತೆಗೆದುಕೊಂಡು ಗುರುಧ್ಯಾನ ಮಾಡುತ್ತಾ ಆನಂದದಿಂದ ಹಿಂದಿರುಗಿದರು, ಎಂದರು. ಆಗ ನಾಮಧಾರಕನು ಸ್ವಾಮಿ, ನದಿಯಲ್ಲಿ ಎಷ್ಟು ಹೂವುಗಳು ಬಂದುವು? ಎಷ್ಟು ಜನ ಶಿಷ್ಯರಿದ್ದರು? ಎಂದು ಕೇಳಿದನು. ಆಗ ಸಿದ್ಧರು ಅಯ್ಯಾ, ನೀನು ಒಳ್ಳೆಯ ಸಂದೇಹವನ್ನು ಕೇಳಿದೆ. ನಿನ್ನ ವಿವೇಕವು ಧನ್ಯವಾದುದು. ನೀನು ಸಾಧಕಸಮರ್ಥನು. ಇವರ ಗುರುತನ್ನು ಹೇಳುವೆನು, ಕೇಳು. ಗುರುಗಳು ಗಾಣಗಾಪುರದಲ್ಲಿರಲು ಅಸಂಖ್ಯಾಕ ಶಿಷ್ಯರಿದ್ದರು. ಇವರಲ್ಲಿ ಸನ್ಯಾಸಹೊಂದಿದ ಶಿಷ್ಯರೂ ಇದ್ದರು. ಇವರು ತೀರ್ಥಯಾತ್ರೆ ಮಾಡುತ್ತಿದ್ದರು. ಇವರಲ್ಲಿ ಕೃಷ್ಣಬಾಲಸರಸ್ವತಿಯು ಮುಖ್ಯನು. ಗೃಹಸ್ಥರಾದ ಶಿಷ್ಯರೂ ಗುರುಭಕ್ತರಾಗಿದ್ದರು. ಗುರುಕೃಪೆಯಿಂದಿವರು ಸಂಸಾರವನ್ನು ದಾಟಿದರು. ಗುರುಗಳೊಡನೆ ನಾಲ್ವರು ಶಿಷ್ಯರಿದ್ದರು. ಇವರಲ್ಲಿ ಸಾಯಂದೇವನೂ, ನಂದಿಯೂ, ನರಹರಿಯೂ, ನಾನೂ ಇದ್ದೆವು. ಈ ನಾಲ್ವರೂ ಗುರುಗಳನ್ನು ಸೇವಿಸುತ್ತಿದ್ದರು. ಪ್ರಸಾದಪುಷ್ಪಗಳನ್ನು ಈ ನಾಲ್ವರೂ ಸ್ವೀಕರಿಸಿ ಇವನ್ನು ಶಿರಸಾ ವಂದಿಸಿದೆವು. ಇಗೋ, ಈ

ಪ್ರಸಾದಪುಷ್ಪಗಳನ್ನು ನೋಡು, ಎಂದು ನಾಮಧಾರಕನಿಗೆ ಕೊಟ್ಟರು. ನಾಮಧಾರಕನಿಗೆ ಗುರುಪ್ರಸಾದವು ದೃಷ್ಟಿಗೆ ಬಿದ್ದಿತು. ಹರ್ಷಿತನಾದನು, ಎಂಬಲ್ಲಿಗೆ ಶ್ರೀಗುರುಕಥಾಮೃತದಲ್ಲಿ ಪ್ರಸಾದಪ್ರಾಪ್ತಿಯೆಂಬ ೫೧ನೇ ಅಧ್ಯಾಯವು ಮುಗಿದುದು.

|| ಶ್ರೀ ದತ್ತಾತ್ರೇಯಾರ್ಪಣಮಸ್ತು ||

ಶ್ರೋತೃಗಳಿರಾ, ಸಾವಧಾನದಿಂದ ಕೇಳಿರಿ. ಈ ರೀತಿಯಿಂದ ಗುರುಕಥಾಮೃತದ ಐವತ್ತೆರಡು ಅಧ್ಯಾಯಗಳನ್ನು ಕೇಳಿ ನಾಮಧಾರಕನು ಬ್ರಹ್ಮಾನಂದದಲ್ಲಿ ಮಗ್ನನಾಗಿ, ತಟಸ್ಥನಾಗಿ, ಬೆವರಿನಿಂದ ಕೂಡಿದ ಅಂಗವುಳ್ಳವನಾಗಿ, ರೋಮಾಂಚವುಳ್ಳವನಾಗಿ, ಸದ್ಗದಿತ ಕಂಠನಾದನು. ದೇಹವು ಕಂಪಿಸಿತು. ನೇತ್ರಗಳು ಪ್ರಕಾಶಿಸಿದುವು. ಸಮಾಧಿಸ್ಥನಾದನು. ದೇಹವು ಅಣುಮಾತ್ರವೂ ಚಲಿಸಲಿಲ್ಲ. ಸಿದ್ಧರು ಸಮಾಧಿಸ್ಥನಾದ ಈತನನ್ನು ಲೋಕೋಪಕಾರಕ್ಕಾಗಿ ಹಸ್ತದಿಂದ ಸವರಿ ಪ್ರೇಮದಿಂದ ಆಲಿಂಗಿಸಿ ಶಿಷ್ಯನೇ, ಎಚ್ಚರಹೊಂದು. ಶಿಷ್ಯೋತ್ತಮನೇ, ನೀನು ಭವಸಾಗರವಂ ದಾಟಿದೆ. ಹೀಗೆ ಸಮಾಧಿಸ್ಥನಾದರೆ ಜ್ಞಾನವು ನಿನ್ನ ಉದರದಲ್ಲಿಯೇ ನಿಂತೀತು. ಜನರು ಭವಸಾಗರವನ್ನು ದಾಟುವುದೆಂತು? ಆದುದರಿಂದ ದೃಢಚಿತ್ತನಾಗಿ ದೇಹಯಾತ್ರೆಯನ್ನು ಶಾಸ್ತ್ರಾಧಾರದಂತೆ ಅನುಸರಿಸು. ನೀನು ಕೇಳಿದುದರಿಂದ ಈ ಚರಿತ್ರೆಯನ್ನು ಸ್ಮರಿಸಿ ನಿನಗೆ ಹೇಳಿದೆವು. ಇದರಿಂದ ತಾಪತ್ರಯವು ನಾಶವಾಯಿತು. ನಿನಗೋಸುಗ ನಮಗೆ ಚರಿತ್ರೆಯು ನೆನಪಾಯಿತು. ನೀನು ಒಳ್ಳೇದನ್ನು ಮಾಡಿದೆ. ಏಕಾಗ್ರತೆಯಿಂದ ಚರಿತ್ರೆಯನ್ನು ಕೇಳಿದೆ. ಇದನ್ನು ವಿಸ್ತರಿಸುವನಾಗು, ಎಂದರು. ಬಳಿಕ ನಾಮಧಾರಕನು ಕಣ್ದೆರೆದು ಕೈಗಳನ್ನು ಜೋಡಿಸಿ ಎದ್ದು ನಿಂತು ಸ್ವಾಮಿಾ ಕೃಪಾನಿಧಿಗಳೇ, ನೀವು ವಿಶ್ವಾಸಪಾತ್ರರೂ, ಭವಸಾಗರತಾರಕರೂ ಆಗಿದ್ದೀರಿ, ಎಂದು ಸಿದ್ಧರ ಚರಣಂಗಳಿಗೆರಗಿ ಸ್ವಾಮಿಾ, ಈ ಗುರುಚರಿತ್ರಾಮೃತವು ಪರಮಾಮೃತವಾಗಿದೆ. ಭಕ್ತರ ಮನೋವೃತ್ತಿಯು ಇದರಲ್ಲಿ ಲೀನವಾಗಿದೆ.


ಇದರಲ್ಲಿ ನನಗೆ ಇನ್ನೂ ತೃಪ್ತಿಯಿಲ್ಲ. ಈ ಕಥೆಯನ್ನು ಪುನಃ ಸೂಚಿಸಿ, ಅಕ್ಷಯಾಮೃತವನ್ನು ಕುಡಿಸಿ, ನನ್ನನ್ನು ಆನಂದಸಾಗರದಲ್ಲಿಡಿರಿ. ಬಹು ಔಷಧಗಳನ್ನು ಸೇರಿಸಿ ತ್ರೈಲೋಕ್ಯಚಿಂತಾಮಣೀ ರಸಾಯನವನ್ನು ಮಾಡುವಂತೆ ಈ ಚರಿತ್ರಸಾರವನ್ನು ಸಂಗ್ರಹವಾಗಿ ನಿರೂಪಿಸಿರಿ, ಎಂದು ಪ್ರಾರ್ಥಿಸಿದನು. ಶಿಷ್ಯವಚನವನ್ನು ಕೇಳಿ ಸಿದ್ಧಮುನಿಯು ಹರ್ಷಿತನಾಗಿ ಶಿಷ್ಯನೇ, ನಿನ್ನ ವಾಸನೆಯು ಶ್ರೀಗುರುಚರಿತ್ರೆಯಲ್ಲಿ ಅಖಂಡವಾಗಿರಲಿ. ಗುರುಚರಿತ್ರೆಯ ಅವತರಣಿಕೆಯನ್ನು ಕೇಳು, ಎಂದು ಐವತ್ತೆರಡು ಅಧ್ಯಾಯಗಳ ಕಥೆಗಳ ಅವತರಣಿಕೆಯನ್ನು ಹೇಳಿದರು. ಈ ರೀತಿಯಾಗಿ ಗುರುಚರಿತ್ರೆಯು ಅಪಾರವಾಗಿ ಪರಮಪವಿತ್ರವಾದ ಕಥೆಗಳನ್ನೊಳಗೊಂಡಿದೆ. ಈ ಐವತ್ತೆರಡನೇ ಅಧ್ಯಾಯವನ್ನು ನಿನಗೋಸ್ಕರ ಹೇಳಿದೆನು. ಶ್ರೀಗುರುಗಳು ಗಾಣಗಾಪುರದಲ್ಲಿ ಗೋಪ್ಯವಾಗಿರುವರು. ಕಲಿಯುಗದಲ್ಲಿ ಅಧರ್ಮವು ವೃದ್ಧಿಯಾಯಿತು, ಎಂದು ಗುರುಗಳು ಗುಪ್ತರಾದರು. ಭಕ್ತರಿಗೆ ಮಾತ್ರ ದರ್ಶನಕೊಡುವರು. ಈ ಚರಿತ್ರೆಯ ಮೊದಲನೇ ಭಾಗದಲ್ಲಿ ಹೇಳಿದಂತೆ ಆ ಅವತರಣಿಕೆ ಎಂಬ ಸಿದ್ಧಮಣಿಮಾಲೆಯನ್ನು ಯಾರು ಜಪಿಸುವರೋ ಅವರ ಕಾರ್ಯವು ಸಿದ್ಧಿಯಾಗುವುದು. ನಾಮಧಾರಕನೇ, ನೀನು ಒಳ್ಳೆಯ ಶಿಷ್ಯನು. ಈ ಅವತರಣಿಕೆಯನ್ನು ಕೇಳಿದುದರಿಂದ ಗುರುಚರಿತ್ರೆಯ ಸಾರಾಂಶವನ್ನು ಮತ್ತೆ ಹೇಳುವೆನು. ನೀನು ಮೊದಲು ಕೇಳಿದ ಗುರುಚರಿತ್ರೆಯು ನೆನಪಾಗುವುದು. ಅವತರಣಿಕೆಯನ್ನು ನಿನಗೆ ಹೇಳಿದೆನು. ಇದನ್ನು ಸದಾ ಧ್ಯಾನಿಸಿದರೆ ಕಥೆಯೆಲ್ಲವೂ ನೆನಪಾಗುವುದು, ಎಂದು ಸಿದ್ಧರು ಹೇಳಿದರು. ನಾಮಧಾರಕನು ಸಿದ್ಧರ ಚರಣಂಗಳಿಗೆ ವಂದಿಸಿ, ಕರಗಳಂ ಜೋಡಿಸಿ ಸ್ವಾಮೀ ಸಿದ್ಧಮುನಿವರರೇ, ನಿಮ್ಮ ವಚನವೇ ಸರ್ವಸಿದ್ಧಿಕರವಾಗಿದೆ. ಈ ಚರಿತ್ರೆಯ ಸಪ್ತಾಹಪಾರಾಯಣ ಕ್ರಮವು ಹೇಗೆ? ಎಂಬುದನ್ನು ನಿರೂಪಿಸಿರಿ, ಎಂದು ಕೇಳಿದನು. ಆಗ ಸಿದ್ಧರು ಶಿಷ್ಯನೇ, ನೀನು ಕೇಳಿದುದು ಲೋಕೋಪಕಾರವಾದಂತಾಯಿತು. ಅಂತಃಕರಣವು ಪವಿತ್ರವಾಗಿರಲು ಸದಾ ಗುರುಚರಿತ್ರೆಯನ್ನು ಓದಬೇಕು. ಸಪ್ತಾಹಕ್ರಮವನ್ನು ಕೇಳು. ಶುಚಿರ್ಭೂತನಾಗಿ ಶಾಸ್ತ್ರರೀತಿಯಾಗಿ ಸಪ್ತಾಹ

ಪಾರಾಯಣಮಾಡಲು ಬಹು ಪುಣ್ಯವುಂಟು. ಶುಭದಿವಸದಲ್ಲಿ ಸ್ನಾನ ಸಂಧ್ಯಾದಿಗಳನ್ನು ಮಾಡಿ ಪಾರಾಯಣಮಾಡುವ ಸ್ಥಳವನ್ನು ರಂಗವಲ್ಯಾದಿಗಳಿಂದಲಂಕರಿಸಿ ಸಂಕಲ್ಪಮಾಡಿ ಪುಸ್ತಕರೂಪಿಯಾದ ಶ್ರೀಗುರುವನ್ನು ಒಂದು ಸ್ಥಳದಲ್ಲಿಟ್ಟು ಮೌನವಂ ಧರಿಸಿ ಇಂದ್ರಿಯನಿಗ್ರಹ ಮಾಡಿ ದೀಪವನ್ನು ಇಟ್ಟು ಪೂರ್ವಮುಖವಾಗಿ ಕುಳಿತು ಪಾರಾಯಣವನ್ನು ಪ್ರಾರಂಭಿಸಬೇಕು. ಒಂದನೇ ದಿನ ೯ ಅಧ್ಯಾಯಗಳನ್ನೂ, ೨ನೇ ದಿನ ೨೧ನೇ ಅಧ್ಯಾಯಗಳನ್ನೂ, ಮೂರನೇ ದಿನ ೨೯ ಅಧ್ಯಾಯಗಳನ್ನೂ, ೪ನೇ ದಿನ ೩೪ ಅಧ್ಯಾಯಗಳನ್ನೂ, ೫ನೇ ದಿನ ೩೮ ಅಧ್ಯಾಯಗಳನ್ನೂ, ೬ನೇ ದಿನ ೪೩ ಅಧ್ಯಾಯಗಳನ್ನೂ, ೭ನೇ ದಿನ ೫೨ ಅಧ್ಯಾಯಗಳನ್ನೂ, ಅವತರಣಿಕೆಯನ್ನೂ ಪಾರಾಯಣಮಾಡಬೇಕು. ನಿತ್ಯವೂ ಪಾರಾಯಣಮಾಡಿ ಉತ್ತರಪೂಜೆ ಮಾಡಬೇಕು. ಶ್ರೀಗುರುವನ್ನು ವಂದಿಸಿ ಉಪಹಾರ ತೆಗೆದುಕೊಳ್ಳಬೇಕು. ಈ ರೀತಿಯಾಗಿ ಏಳು ದಿನಗಳು ರಾತ್ರಿ ಭೂಶಯನಮಾಡಿ ಶುಚಿಯಾಗಿರಬೇಕು. ಬಳಿಕ ಬ್ರಾಹ್ಮಣ ಸುವಾಸಿನಿಯರಿಗೆ ಭೋಜನ ಮಾಡಿಸಬೇಕು. ಯಥಾಶಕ್ತಿ ದಕ್ಷಿಣೆಯನ್ನಿತ್ತು ಸಂತೋಷಪಡಿಸಬೇಕು. ಹೀಗೆ ಮಾಡಲು ಶ್ರೀಗುರುವಿನ ದರ್ಶನವಾಗುವುದು, ಎಂದರು. ಇದನ್ನು ಕೇಳಿ ನಾಮಧಾರಕನು ಸಿದ್ಧರ ಚರಣಂಗಳಿಗೆ ವಂದಿಸಿ ಸ್ವಾಮಿಾ, ನನ್ನ ಇಷ್ಟವನ್ನು ಪೂರ್ಣಮಾಡಿ ಕೃತಕೃತ್ಯನನ್ನಾಗಿ ಮಾಡಿದಿರಿ. ಬಾಲಕನಿಗೆ ತಾಯಿಯು ಅಮೃತವನ್ನು ಕುಡಿಸಿದಂತೆ ಗುರುಚರಿತ್ರಾಮೃತವನ್ನು ನನಗೆ ಕುಡಿಸಿದಿರಿ, ಎಂದನು. ಅಧ್ಯಾಯಗಳ ಪಙ್ಕ್ತಿಗಳೆಂಬ ರತ್ನಮಾಲೆಯನ್ನು ಮನಸ್ಸೆಂಬ ಕಂಠದಲ್ಲಿ ಧರಿಸಿದರೆ ಇಷ್ಟಾರ್ಥಗಳು ಸಿದ್ಧಿಸುವುವು. ಸಿದ್ಧರ ವಚನವೆಂಬ ರತ್ನಗಣಿಯಿಂದ ನಾಮಧಾರಕನು ೫೨ ರತ್ನಗಳನ್ನು ತೆಗೆದು ತಂದು ಕಡಾಯಿಯಲ್ಲಿ ತುಂಬಿ ಭಕ್ತರನ್ನು ಆನಂದಪಡಿಸಿದನು. ಸಿದ್ಧರು **ಗುರುಚರಿತ್ರೆ** ಎಂಬ ಕಲ್ಪತರುವನ್ನು ಪರೋಪಕಾರಕ್ಕಾಗಿ ನಾಮಧಾರಕನಲ್ಲಿ ಹರಡಿದರು. ಅಥವಾ ಸಿದ್ಧರೆಂಬ ಮೇಘವು, ನಾಮಧಾರಕನೆಂಬ ಚಾತಕವು ಒಂದೊಂದು ಬಿಂದುವನ್ನು ಕುಡಿಯುವಂತೆ ವರ್ಷಿಸಿತು. ಭಕ್ತರಿಗೆ ಗುರುಚರಿತ್ರಾಮೃತದ ಶ್ರವಣಲಾಭವುಂಟಾಯಿತು. ದುರ್ಜನರ ಮನಸ್ಸಿಗೆ ಬಳಲಿರು

ವಾಗ ಕಲ್ಲು ಬಿದ್ದಂತಾಯಿತು. ನಾಮಧಾರಕನು ಗುರುಚರಣವಂ ನೆನೆದು ಸಿದ್ಧರನ್ನು ವಂದಿಸಿದನು. ಗುರುರೂಪನಾದ ನಾರಾಯಣನು ದೀನರಕ್ಷಕನಾಗಿ ತನ್ನಿಷ್ಟಕ್ಕೆ ತಾನೇ ಗುರು ಶಿಷ್ಯರೂಪದಿಂದ ಕ್ರೀಡಿಸುವನು, ಎಂಬಲ್ಲಿಗೆ ಶ್ರೀಗುರುಚರಿತ್ರಾಮೃತದಲ್ಲಿ ಶ್ರೀ ನರಸಿಂಹ ಸರಸ್ವತ್ಯುಪಾಖ್ಯಾನದಲ್ಲಿ ಸಿದ್ಧ–ನಾಮಧಾರಕ ಸಂವಾದರೂಪವಾದ ಚರಿತ್ರೆಯು ಸಮಾಪ್ತವಾದುದು.

**|| ಶ್ರೀ ದತ್ತಾತ್ರೇಯಾಯ ನಮಃ ||**

|| ಶ್ರೀರಸ್ತು ||



# ಶೇಷಸಂಗ್ರಹ.

## ದತ್ತಭಜನಾವಳಿ.

ಜಯ ಜಯ ದತ್ತಾತ್ರೇಯ ಗುರೋ । ಜಯ ಜಯ ಸನ್ಮತಿ ದಾತ ಗುರೋ ॥ ೧ ॥ ಜಯ ದತ್ತಾತ್ರಯ ಪರಮ ಗುರೋ । ಜಯ ಜಯ ಗುರುವರ ವಂದ್ಯ ಗುರೋ ॥ ೨ ॥ ಅತ್ರಿಋಷೀಶ್ವರ ಪುತ್ರ ಗುರೋ । ಮತ್ತ ವಿಪ್ರಯುಗ ಶಿಕ್ಷ ಗುರೋ ॥ ೩ ॥ ಔದುಂಬರ ತರುವಾಸ ಗುರೋ । ಔಪಾಸಿತ ನೃಹರೀಶ ಗುರೋ ॥ ೪ ॥ ಸಿದ್ಧ ರೂಪಧರ ಬೋಧ ಗುರೋ । ಶುದ್ಧ ಚಿದಾನಂದಾತ್ಮ ಗುರೋ ॥ ೫ ॥ ವರ ಗಾಣಗಪುರವಾಸ ಗುರೋ । ವರ ಮತಿದಾತ ಶ್ರೀಪಾದ ಗುರೋ ॥ ೬ ॥ ನರಹರಿ ಭಾರತಿ ದೇವ ಗುರೋ । ನರಹರಿ ಸನ್ಮತಿ ದಾತ ಗುರೋ ॥ ೭ ॥ ಅನಸೂಯಾ ವರ ಪುತ್ರ ಗುರೋ । ಅನಿಮಿಷ ನಿಕರಾದ್ವಂದ್ಯ ಗುರೋ ॥ ೮ ॥ ಜ್ಞಾನ ಮಾನ ಧನದಾತ ಗುರೋ । ಮಾನಸಪೂಜಿತ ನೃಹರಿ ಗುರೋ ॥ ೯ ॥ ಕರವೀರ ಪುರಾಧೀಶ ಗುರೋ । ಪರಮಾನಂದಾದ್ವೈತ ಗುರೋ ॥ ೧೦ ॥ ಶುಷ್ಕಕಾಷ್ಠ ಪಲ್ಲವಿತ ಗುರೋ । ಪುಷ್ಕಳ ಪಾಪವಿನಾಶ ಗುರೋ ॥ ೧೧ ॥ ಭೂಸುರ ಕಷ್ಟವಿನಾಶ ಗುರೋ । ಆಶಾಪಾಶಂ ಶಮಯ ಗುರೋ ॥ ೧೨ ॥ ರಜಕ ಶಿಷ್ಯವರದಾತ ಗುರೋ । ಭಜಕಾಭೀಷ್ಟಂ ದೇಹಿ ಗುರೋ ॥ ೧೩ ॥ ಯವನರಾಜ ಸುಪ್ರೀತ ಗುರೋ । ಯವನ ಗರ್ವ ಪರಿಹಾರ ಗುರೋ ॥ ೧೪ ॥ ಚೋರನಿಕರ ಸಂಹಾರ ಗುರೋ । ಭೂರಿ ಪಾಪ ಪರಿಹಾರ ಗುರೋ ॥ ೧೫ ॥ ಕವಿವರ ಸನ್ನುತ ವರದ ಗುರೋ । ಕವಿಜನರಕ್ಷಣ ದಕ್ಷ ಗುರೋ ॥ ೧೬ ॥ ಕೃಷೀವಲಾಭಯದಾತ ಗುರೋ । ಹೃಷೀಕೇಶ ಸಮರೂಪ ಗುರೋ ॥ ೧೭ ॥ ವಂಧ್ಯಾ ಮಹಿಷೀದೋಗ್ಧ ಗುರೋ । ಬೃಂದಾರಕನುತಪಾದ ಗುರೋ ॥ ೧೮ ॥ ಬ್ರಹ್ಮರಾಕ್ಷಸಾ ಭಯದ ಗುರೋ । ಬ್ರಹ್ಮಜ್ಞಾನಂ ದೇಹಿ ಗುರೋ ॥ ೧೯ ॥ ಭುಕ್ತಿ ಮುಕ್ತಿ ವರದಾತ ಗುರೋ । ಭಕ್ತಜನಾನತ ವರದ ಗುರೋ ॥ ೨೦ ॥ ವಿಶ್ವರೂಪಧರ ದೇವ ಗುರೋ । ವಿಶ್ವವಂದ್ಯ

ಪರಮೇಶ ಗುರೋ ॥ ೨೧ ॥ ತ್ರಿವಿಕ್ರಮ ಯತಿವಂದ್ಯ ಗುರೋ । ತ್ರಿವಿಕ್ರಮ ಮದಹಾರಿ ಗುರೋ ॥ ೨೨ ॥ ಭಜಕಾಭೀಷ್ಟಪ್ರದಾತ ಗುರೋ । ಭಜಕವೃಂದ ಪರಿಪಾಲ ಗುರೋ ॥ ೨೩ ॥ ಸಜ್ಜನರಕ್ಷಣ ದಕ್ಷ ಗುರೋ । ದುರ್ಜನಸಂಕುಲ ಶಿಕ್ಷ ಗುರೋ ॥ ೨೪ ॥ ಯತಿತತಿ ವಂದಿತ ಪಾದ ಗುರೋ । ಶ್ರುತಿತತಿ ಬೋಧನ ನಿಪುಣ ಗುರೋ ॥ ೨೫ ॥ ಪಾಪಾಪಹ ಪರಮೇಶ ಗುರೋ । ತಾಪತ್ರಯ ಪರಿಹಾರ ಗುರೋ ॥ ೨೬ ॥ ರತ್ನಾಯೀಸುತ ದೇವ ಗುರೋ । ರತ್ನಾಯೀ ಹಿತಕಾರಿ ಗುರೋ ॥ ೨೭ ॥ ಜನನೀ ಹಿತಕರವರ್ಯ ಗುರೋ । ಜನಸಂಸೇವಿತ ಧನ್ಯ ಗುರೋ ॥ ೨೮ ಆಢಕವಲ್ಲೀನಾಶ ಗುರೋ । ಮೂಷಪುತ್ರ ಪರಿಪಾಲ ಗುರೋ ॥ ೨೯ ॥ ಭವಸಾಗರ ಪರಿಹಾರ ಗುರೋ । ಭುವನಾಧೀಶ್ವರ ಸೇವ್ಯ ಗುರೋ ॥ ೩೦ ॥ ಸಾಯುಂದೇವ ಪ್ರೀತ ಗುರೋ । ಸಾಯುಂದೇವ ಸ್ತುತ್ಯ ಗುರೋ ॥ ೩೧ ॥ ಭಾಸ್ಕರ ಭೂಸುರವಂದ್ಯ ಗುರೋ । ಭಾಸ್ಕರ ಸನ್ನಿಭಕಾಯ ಗುರೋ ॥ ೩೨ ॥ ಪರ ಪೀಠಾಪುರ ವಾಸ ಗುರೋ । ಪರಮಾನಂದಂ ದೇಹಿ ಗುರೋ ॥ ೩೩ ॥ ಯುವನ ಸ್ಫೋಟಕನಾಶ ಗುರೋ । ಯುವನಜನಾವಳಿ ವಂದ್ಯ ಗುರೋ ॥ ೩೪ ॥ ಕೃಷೀವಲಫಲಥೇಡ ಗುರೋ । ಕೃಷೀವಲ ಸುಪ್ರೀತ ಗುರೋ ॥ ೩೫ ॥ ಮಾನಸಪೂಜಾ ಪ್ರೀತ ಗುರೋ । ಮಾನಸಪಾಪಂ ಶಮಯ ಗುರೋ ॥ ೩೬ ॥ ನರಕೇಸರಿ ಕಪಿ ಸ್ತುತ್ಯ ಗುರೋ । ನರಕೇಸರಿ ವರದಾತ ಗುರೋ ॥ ೩೭ ॥ ಯೋಗೀ ತಾಪವಿನಾಶ ಗುರೋ । ಯೋಗಮಾರ್ಗ ಸಂಚಾರ ಗುರೋ ॥ ೩೮ ॥ ತಂತುಕ ಶಿಷ್ಯ ಪ್ರೀತ ಗುರೋ । ತಂತುಕ ಸಂತತ ಸ್ತುತ್ಯ ಗುರೋ ॥ ೩೯ ॥ ಶಿಷ್ಯಜನಾವಳಿ ವಂದ್ಯ ಗುರೋ । ಶಿಷ್ಯವರ್ಗ ಪರಿಪಾಲ ಗುರೋ ॥ ೪೦ ॥ ಭುವನಮನೋಹರ ಭವ್ಯ ಗುರೋ । ಭವಭಯನಾಶಕ ವರದ ಗುರೋ ॥ ೪೧ ॥ ಇಂದು ಸಹೋದರ ದೇವ ಗುರೋ । ಸುಂದರರೂಪ ಸುರೇಶ ಗುರೋ ॥ ೪೨ ॥ ಸೃಷ್ಟಿ ಸ್ಥಿತಿ ಲಯಕಾರಿ ಗುರೋ । ಶ್ರೀಷ್ಠಾಭೀಷ್ಟಂ ದೇಹಿ ಗುರೋ ॥ ೪೩ ॥ ಅಗಣಿತ ಗುಣಯುತ ದೇವ ಗುರೋ । ನಿಗಮಮಾರ್ಗ ಸುಜ್ಞಾತ ಗುರೋ ॥ ೪೪ ॥ ದುರಿತನಿಕರ ಪರಿಹಾರ ಗುರೋ । ಪರಮದಯಾನ್ವಿತಹೃದಯ ಗುರೋ ॥ ೪೫ ॥ ಕಲಿದೋಷಾಳಿವಿನಾಶ

ಗುರೋ । ಸುಲಲಿತ ತನುಯುತ ದೇವ ಗುರೋ ॥ ೪೬ ॥ ಮಂಗಳ ರೂಪ ಮನೋಜ್ಞ ಗುರೋ । ಮಂಗಳಕರ ಮಹನೀಯ ಗುರೋ ॥ ೪೭ ॥ ಕುರವಪುರಸ್ಥಿತ ದೇವ ಗುರೋ । ಕರುಣಾಕರ ಕಮನೀಯ ಗುರೋ ॥ ೪೮ ॥ ಭೀಮಾತೀರನಿವಾಸ ಗುರೋ । ಸೋಮಾನನ ಸುಮನೋಜ್ಞ ಗುರೋ ॥ ೪೯ ॥ ಸಕಲ ಜನಾವಳಿ ರಕ್ಷ ಗುರೋ । ಸಕಲಾಭೀಷ್ಟಂ ದೇಹಿ ಗುರೋ ॥ ೫೦ ॥ ಕಲಿಭಯನಿಕರ ಸಂಹಾರ ಗುರೋ । ಕಲ್ಮಷನಿಕರವಿನಾಶ ಗುರೋ ॥ ೫೧ ॥ ಸುಲಲಿತ ಸುಂದರ ಪಾದ ಗುರೋ । ಸುಲಲಿತ ಸುಂದರ ದೇಹ ಗುರೋ ॥ ೫೨ ॥ ನೃಸಿಂಹವಾಡೀ ನಿಲಯ ಗುರೋ । ನೃಸಿಂಹ ಮಂತ್ರೋಪಾಸ್ಯ ಗುರೋ ॥ ೫೩ ॥ ಜಯ ಜಯ ಮಂಗಳರೂಪ ಗುರೋ । ಜಯ ದತ್ತಾತ್ರೇಯ ವರದ ಗುರೋ ॥ ೫೪ ॥

## ಸಂಗೀತ ಕೀರ್ತನೆಗಳು.

ರಾಗ—ಕಾನಡಾ.

ಪೊರೆಯೈ ಗುರುದೇವನೆ ॥ ಪಲ್ಲ ॥ ಇಂದು ವಂದಿಪೆ ನಿನ್ನ । ಚಂದದ ಪಾದಕೆ । ಮಂದಮತಿಯ ಪೊರೆ । ಚಂದಿರ ಸೋದರ ॥ ೧ ॥ ಅತ್ರಿಯ ಪುತ್ರನೆ । ದತ್ತಾತ್ರೇಯನೆ । ಸತ್ಯಸ್ವರೂಪನೆ । ನಿತ್ಯ ಸುಖ ದಾತನೆ ॥ ೨ ॥ ವರ ಶ್ರೀಪಾದ ನರಹರಿ ಭಾರತಿಯ । ಮರೆಯದೆ ಪೊರೆಯೈ ವರ ಗುರುದೇವನೆ ॥ ೩ ॥

ಕಮಲಾಕ್ಷ ನಾಂ ಧನ್ಯನಾದೆ ಎಂಬಂತೆ.

ಗುರುವರಾ ಪೊರೆಯೊ ನೀ ಯೆನ್ನ । ಕರುಣಾಕರ–ಕರುಣಿಸೌ ॥ ಪಲ್ಲ ॥ ಸೃಷ್ಟಿಯೊಳ್ಗಾಣಗ ಪಟ್ಟಣವಾಸ । ಇಷ್ಟವ ನೀ ನೀಯುತ್ತ ॥ ೧ ॥ ವರ ಶ್ರೀಪಾದನೆ ನರಹರಿ ಭಾರತಿಯ । ಮರೆಯದೆ ನಾನೆರಗುವೆನೈ ॥ ೨ ॥ ಮಾನನಿಧಿಯೆ ಸುಜ್ಞಾನವನೀಯುತ । ಮಾನದಿಂದ ಪಾಲಿಸಲೈ ॥ ೩ ॥

ತ್ರಿಭುವನ ಪಾವನ ಧುರೀಣ ತೋಯೆ ಎಂಬಂತೆ—ನೋಟ್.

ಗುರುವರ ಕರುಣದಿ ಪೊರೆಯ್ಯೆ ಎನ್ನಂ । ಪರಿಪರಿ ನುತಿಸುತ ಲೆರಗುವೆನಾಂ । ಗುರು ದತ್ತಾತ್ರೇಯನೇ–ನೀಂ–ವರ ಸುಜ್ಞಾನವ ನೀಯುತ್ತ ॥ ಪಲ್ಲ ॥ ಧರೆಯೊಳು ಗಾಣಗಪುರದೊಳು ನೆಲಸುತ । ಮರೆಯದೆ ಸುಜನರ ರಕ್ಷಿಸುವಾ । ನರಹರಿ ಶ್ರೀ ಭಾರತಿಯೇ–ನಿರುತಂ ಪಾಲಿಸು ಗುರುರಾಜ ॥ ೧ ॥ ಔದುಂಬರತರು ಮೂಲನಿವಾಸನೆ । ಪಾಲಿಸು ಸಂತತ ಮೌನೀಶ । ನರಹರಿ ಶ್ರೀ ಭಾರತಿಯೇ–ವರ ಸುಜ್ಞಾನವನೀಯುತ್ತ ॥ ೨ ॥ ಆ ಅನಸೂಯೆಯ ತನಯ ನೀನಾಗಿ। ಅನುನಯದಿಂದಲೆ ಮೆರೆಯುವನೇ । ಚಿನುಮಯನೇ–ಸನ್ಮತಿಯಂ । ನನಗತಿ ಬೇಗನೆ ನೀನೀಯ್ಯೆ ॥ ೩ ॥ ರಕ್ಷಿಪೆ ಸುಜನರ ಜ್ಞಾನವ ನೀಯುತ । ಶಿಕ್ಷಿಪೆ ಕುಜನರ ನಯದಿಂದಂ । ಸುಕ್ಷೇತ್ರಂಗಳ ಚರಿಪೆ। ಲಕ್ಷ್ಮೀಶನ ನೀಂ ರಕ್ಷಿಸುತ ॥ ೪ ॥

---

ಚಿತ್ತಜನ್ಮಯನ ಚಿಂತಿಸು ಮನವೇ ಎಂಬಂತೆ.

ಗುರು ದತ್ತಾತ್ರೇಯ ನಿಮ್ಮ । ಚರಣಕ್ಕೆ ಎರಗುವೆ । ಪರಮ ದಯಾಳುವೆ । ಪೊರೆಯ್ಯೆಯ್ಯ ದೇವ ॥ ಪಲ್ಲ ॥ ವರ ಪೀಠಾಪುರದಿ । ಆ ಪಳನೆಂಬ ಭೂಸುರನ । ನಾರಿ ಸುಮತಿಯು ಭಿಕ್ಷೆ ಹಾಕಲಾಗಿ । ವರ ಸುತ ನೀನಾಗೆಂದು ವರವ ಕೇಳೆ । ವರ ಶ್ರೀಪಾದನು ಆಗಿ । ಅವತರಿಸಿದೆಯ್ಯೆ ॥ ೧ ॥ ಅಂಬಾ ಭವಾನಿಯ । ಇಂಬಾದ ಉದರದಿ । ತುಂಬಿದ ಕಳೆಹೊಂದಿ । ಅಂದದಿಂದ । ಅಂಬುಜಾಕ್ಷ ನರಸಿಂಹ ಭಾರತಿ ಯಾಗಿ । ಕಂಬುಕಂಠನೆ ನೀನವತರಿಸಿದೆಯ್ಯೆ ॥ ೨ ॥ ಶಿಷ್ಟರಾದ ಜನ ರಿಷ್ಟವ ಕೊಡುತಲಿ । ಸೃಷ್ಟಿಯೊಳ್ಗಾಣಗಪುರದಿ ನಿಂತು । ದುಷ್ಟ ವಿಪ್ರರ ಗರ್ವಹರಿಸಿ ಭಕ್ತರ ಪೊರೆದೆ । ತುಷ್ಟಿ ಪುಷ್ಟಿಯನಿತ್ತು ಲಕ್ಷ್ಮೀಶನಂ ಪೊರೆ ॥ ೩ ॥

## ೪೨ನೇ ಅಧ್ಯಾಯದಲ್ಲಿ ಹೇಳಿದ ಸ್ತೋತ್ರಕ್ಕೆ ಬದಲಾಗಿ

# ಶ್ರೀ ದತ್ತಾತ್ರೇಯ ಸ್ತೋತ್ರ.

ಆದಾವಂಡಜಮೇಕಮೇವ ಜಗತಾಂ ವೇದಾತ್ಮಮೂರ್ತಿಂ ವಿಭೋ । ಪಶ್ಚಾತ್ಕ್ಷೋಣಿತಲೇ ವಿನಾಶಿದಿತಿಜೇ ಕೃತ್ವಾವತಾರಂ ಪ್ರಭೋ ॥ ಹತ್ವಾದೈತ್ಯಮನೇಕಧರ್ಮರಚಿತಂ ಭೂತ್ವಾತ್ಮಜೋ ತ್ರೇರ್ಗೃಹೇ । ವಂದೇಹಂ ನರಕೇಸರೀ ಸರಸತೀ ಶ್ರೀಪಾದ ಯುಗ್ಮಾಂಬುಜಂ ॥ ೧ ॥

ಶ್ರೀಲಕ್ಷ್ಮೀವಿಲಸತ್ಕಟಾಕ್ಷಲಹರೀ ವಿಭ್ರಾಜಿತ ಶ್ರೀಪದಂ । ಯೇತ್ವನ್ಯೇನ್ಯಜಿಘೃಕ್ಷಯಾಹಿಗುರವೋ ರಕ್ಷಾಭರಂ ಸಿರ್ಭರಂ । ನಿತ್ಯೋಲ್ಲಾಸ ಸುಖಪ್ರದಂ ಭವಹರಂ ನೀಲಾಂಬುದಶ್ಯಾಮಲಂ । ವಂದೇಹಂ ನರಕೇಸರೀ ಸರಸತೀ ಶ್ರೀಪಾದಯುಗ್ಮಾಂಬುಜಂ ॥ ೨ ॥

ಸಾಮೋಪಾಯಮನೂನ ಭಕ್ತಿವಿಜಯಂ ಸೌಭಾಗ್ಯವೃದ್ಧಿ ಪ್ರದಂ । ವಿತ್ತಜ್ಞಾನಸುಖಾಯುರಾದಿ ಗುಣದಂ ವಿದ್ಯಾದಿರಧೋರ್ದಿತಂ ॥ ಯೋಗಾಭ್ಯಾಸರತಂ ಪ್ರಸನ್ನಮನಸಂ ಜ್ಯೋತಿಸ್ಸ್ವರೂಪಂ ಸದಾ । ವಂದೇಹಂ ನರಕೇಸರೀ ಸಪಸತೀ ಶ್ರೀಪಾದಯುಗ್ಮಾಂಬುಜಂ ॥ ೩ ॥

ವೈಚಿತ್ರ್ಯಂ ಚರಿತಂ ಚ ಕೀರ್ತಿಮತುಲಂ ವ್ಯಾಕೀರ್ಣ ಭೂಮಂಡಲೇ । ಶೋಭಾರಂಜಿತ ಪಾದಪದ್ಮಯುಗಳಂ ಸೂರ್ಯಾಯುತಾಭೋವಿಭುಂ ॥ ಲೀಲಾರ್ಥಂ ಚ ಪರಾಪರಾತ್ಮಕತನುಷ್ವ ವ್ಯಾಪ್ತವಿಶ್ವೋದರಂ । ವಂದೇಹಂ ನರಕೇಸರೀ ಸರಸತೀ ಶ್ರೀಪಾದ ಯುಗ್ಮಾಂಬುಜಂ ॥ ೪ ॥

ದೌರಾತ್ಮ್ಯಂ ದುರಿತಂ ದರಿದ್ರಹರಣಂ ತ್ರೈಲೋಕ್ಯಮೋಹಾಪಹಂ । ಸ್ಪರ್ಧೇನ್ನಾಪಸ್ಸುರಪಾದಪೇನ ಜನಿತಂ ವಾಂಛಾಪ್ತಿ

ಸಂಪೂರಣಂ ॥ ಭಕ್ತಾನಾಮುಭಯಪ್ರದಂ ಸುಮನಸಾಂ ಸಂಪತ್ಪ್ರದಂ ಸರ್ವದಾ । ವಂದೇಹಂ ನರಕೇಸರೀ ಸರಸತೀ ಶ್ರೀಪಾದಯುಗ್ಮಾಂಬುಜಂ ॥ ೫ ॥

ತ್ರೀಮೂರ್ತೇಶ್ಚರಣಾರವಿಂದಮಧುನಾ ಧ್ಯಾನೇನ ಸಿದ್ಧಿಪ್ರದಂ। ಗೀರ್ವಾಣಾಮೃತಪಾರವಾರ ತಿಮಿತಂ ಶೋಭಾಂ ಚ ಸಂದಾಯಕಂ। ನಿತ್ಯಂ ಸಂಚಲಿತಂ ಮುಖಾದಿಫಲದಂ ಸಪ್ಯೈಕ್ಫಲಂ ಪೂರಣಂ । ವಂದೇಹಂ ನರಕೇಸರೀ ಸರಸತೀ ಶ್ರೀಪಾದಯುಗ್ಮಾಂಬುಜಂ ॥ ೬ ॥

ನೋಶಕ್ಯಂ ತವನಾಮ ಮಂಗಲನುತಿರ್ವೇದಾಗಮಾಗೋಚರಂ। ಚಾರಿತ್ರ್ಯಂ ಪರಿವರ್ತಿತಂ ಚ ಗುಣಿಭಿಃ ಶಿಷ್ಟಂ ನ ಕಿಂಚಿದ್ಗುರೋ ॥ ಭಕ್ತ್ಯಾ ತಾವಕಸನ್ನಿಧೌವಯಮಿಮಾ ಸಂಪ್ರಾರ್ಥಯಾಮೋಭೃಶಂ। ವಂದೇಹಂ ನರಕೇಸರೀ ಸರಸತೀ ಶ್ರೀಪಾದಯುಗ್ಮಾಂಬುಜಂ ॥ ೭ ॥

ವೇದೋಕ್ತಂ ಸುವಿಹಾರಿ ಮಾಧವದಯಾಂ ಪಾತ್ರೇಷುದತ್ತಂ ಸದಾ । ಪೂರ್ವಾಚಾರಪರಂಪರಾಗತಜನೇಷ್ವಾಸಕ್ತಬದ್ಧಾದರಂ ॥ ಸ್ತುತ್ವಾ ಭಕ್ತಿಪುರಸ್ಸರಂ ಗುರುಪದಂ ಕಲ್ಯಾಣಮುಲ್ಪೇತರಂ । ವಂದೇಹಂ ನರಕೇಸರೀ ಸರಸತೀ ಶ್ರೀಪಾದಯುಗ್ಮಾಂಬುಜಂ ॥ ೮ ॥

ಏವಂ ಶ್ರೀಗುರುಪುಂಗವಾಷ್ಟಕಮಿದಂ ಸ್ತೋತ್ರಂ ಪಠೇನ್ನಿತ್ಯಶಃ । ತೇಜೋ ರೂಪ ಬಲೋನ್ನತಿ ಶ್ರಿಯಕರಂ ತತ್ವಾದಿ ಸಂದಾಯಕಂ ॥ ಧ್ಯಾನಂ ತ್ವದ್ಗತಮೇವಚಾಸ್ತು ಸತತಂ ದೀರ್ಘಾಯುರಾರೋಗ್ಯದಂ । ವಂದೇಹಂ ನರಕೇಸರೀ ಸರಸತೀ ಶ್ರೀಪಾದಯುಗ್ಮಾಂಬುಜಂ ॥ ೯ ॥

# ಪ್ರಕಟಣೆ.

## ಈ ಗ್ರಂಥಕರ್ತರಿಂದ ರಚಿತವಾದ

## ಪುಸ್ತಕಗಳು.

ಗುರುಕಥಾಕಲ್ಪತರು ಪೂರ್ವಾರ್ಧ ಸಚಿತ್ರ

ಬೆಲೆ ರೂ. 2—0—0

ಚಿತ್ತೂರು ಜೋಹರ್ I (ಪಟ್ರುಸಿ) ,, 1—4—0

ಗ್ರಂಥಕರ್ತ :—

**ಕೆ. ಲಕ್ಷ್ಮೀನಾರಾಯಣ ಭಟ್ಟ,**

ರಿಟೈರ್ಡ್ ಸ್ಕೂಲ್ ಮಾಸ್ತರ್, ತೀರ್ಥಹಳ್ಳಿ,

ಶಿವಮೊಗ್ಗ ಡಿಸ್ಟ್ರಿಕ್ಟ್.

**ಶಂಕರ ಕರ್ನಾಟಕ ಪುಸ್ತಕಭಂಡಾರ.**

ವ್ಯವಸ್ಥಾಪಕರು.—

**ಶ್ರೀಪಾದ ರಾಮಚಂದ್ರ ದೇಶಪಾಂಡೆ,**

B. S. C. ಧಾರವಾಡ.

ಇವರಲ್ಲಿ ಅಪೂರ್ವವಾದ ಕರ್ನಾಟಕ ಪುಸ್ತಕಗಳೂ, ಕಾದಂಬರಿಗಳೂ ಬೆಲೆಗೆ ಸಿಕ್ಕುತ್ತವೆ. ವಾಚಕರು ತರಿಸಿ ನೋಡಬಹುದು.

# ವ್ರತರತ್ನಾಂಕುರ

ನೂರಾರು ಅನುಷ್ಠಾನಗಳು ಇವೆ. ಬೆಲೆ ೫೪ ರೂಪಾಯಿ.

ಗ್ರಂಥಕರ್ತ:—**M. ಸುಬ್ರಹ್ಮಣ್ಯ ಭಟ್ಟ,**

**ಮುಳಬಾಗಿಲು,** ತೀರ್ಥಹಳ್ಳಿ ತಾಲ್ಲೋಕು.